# ಕರಿಮಾಯಿ

## ನನ್ನ ಮಾತು

ಕರಿಮಾಯಿ’ ಕಾದಂಬರಿ ಇದೀಗ ನಾಲ್ಕನೆಯ ಮುದ್ರಣ ಕಾಣುತ್ತಿದೆ. ಮೊದಲಿಗೆ ಇದು ೧೯೭೦ರ ದಶಕದಲ್ಲಿ ಕರ್ಮವೀರ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಅನಂತರ ಚಲನಚಿತ್ರವೂ ಆಯಿತು. ಕಾದಂಬರಿ ಪುಸ್ತಕ ರೂಪದಲ್ಲಿಯೂ ಹೊರಬಂದಿತು. ಆದರೆ ಚಲನಚಿತ್ರ ಮಾತ್ರ ಬಿಡುಗಡೆಯಾಗಲೇ ಇಲ್ಲ.

ಈ ಕಾದಂಬರಿಯನ್ನು ನನ್ನಿಂದ ಬರೆಯಿಸಿ, ಕರ್ಮವೀರ ವಾರಪತ್ರಿಕೆಯಲ್ಲಿ ಪ್ರಕಟಿಸಿದ ಶ್ರೀ ಪ್ರಹ್ಲಾದ ಕುಳಲಿ ಅವರಿಗೆ ಮತ್ತು ಸಂಯುಕ್ತ ಕರ್ನಾಟಕ ಬಳಗಕ್ಕೆ ಹೃತ್ಪೂರ್ವಕ ವಂದನೆಗಳು.

ಮುಖಪುಟ ವಿನ್ಯಾಸ ಮಾಡಿದ ಶ್ರೀ ಕೆ.ಕೆ. ಮಕಾಳಿ ಅವರಿಗೆ, ಮುನ್ನುಡಿ ಬರೆದಿರುವ ಶ್ರೀ ಟಿ.ಪಿ ಅಶೋಕ ಅವರಿಗೆ;

ನಾಲ್ಕನೆಯ ಮುದ್ರಣವನ್ನು ಪ್ರಕಟಿಸುತ್ತಿರುವ ಪ್ರಕಾಶ್ ಕಂಬತ್ತಳ್ಳಿ ದಂಪತಿಗಳಿಗೆ;

ಮುದ್ರಿಸಿದ ಸ್ವ್ಯಾನ್ ಪ್ರಿಂಟರ್ಸ್ ಅವರಿಗೆ;

ನನ್ನ ವಂದನೆಗಳು ಸಲ್ಲುತ್ತವೆ.

ದೀಪಾವಳಿ ೨೦೧೧

**ಚಂದ್ರಶೇಖರ ಕಂಬಾರ**

## ಕರಿಮಾಯಿ : ಮರು ಓದು (ಮೊದಲ ಮುದ್ರಣಕ್ಕೆ ಬರೆದದ್ದು)

ಚಂದ್ರಶೇಖರ ಕಂಬಾರರು ‘*ಹೇಳತೇನ ಕೇಳ*’ದಿಂದ ಪ್ರಾರಂಭಿಸಿ ಈವರೆಗೆ ಶಿವಾಪುರಕ್ಕೆ ಸಂಬಂಧಿಸಿದ ಮೂಲ ಕಥೆಯೊಂದನ್ನು ಬೇರೆಬೇರೆ ವಿಧಾನಗಳಲ್ಲಿ ಹೇಳುತ್ತಾ ಬಂದಿದ್ದಾರೆ. ಇಂಥದೊಂದು ನಿರಂತರ ಕಥನ ಕಂಬಾರರ ಮೂರು ದಶಕದ ಬರವಣಿಗೆಗೆ ಸಾತತ್ಯವೊಂದನ್ನು ಕಟ್ಟಿಕೊಟ್ಟಿರುವ ಜತೆಜತೆಗೇ ಆ ಮೂಲಕಥೆಯ ಸಾಧ್ಯತೆಗಳ ವಿಸ್ತಾರವನ್ನೂ ಸೂಚಿಸಿದೆ. ಶಿವಾಪುರದ ಕಾಲ ದೇಶಗಳನ್ನು ಪುರಾಣದಿಂದ ಚರಿತ್ರೆಗೆ ವಿಸ್ತರಿಸುತ್ತ, ರೂಪಾಂತರಿಸುತ್ತ, ಒಂದನ್ನು ಮತ್ತೊಂದರೊಳಗೆ ಇಡುತ್ತ ಕಂಬಾರರು ಕಾಲ ದೇಶಗಳ ಹಲವು ಆಯಾಮಗಳನ್ನು ಒಟ್ಟಿಗೇ ಅಖಂಡವಾಗಿ ಒಳಗೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇವರ ಕೃತಿಗಳನ್ನು ಬಿಡಿಬಿಡಿಯಾಗಿ ನೋಡಿದಾಗ ಒತ್ತು ಕೊಂಚ ಬೇರೆ ಬೇರೆಯಾಗಿದೆ ಎನಿಸಿದರೂ, ಒಟ್ಟಾರೆಯಾಗಿ ನೋಡಿದಾಗ ಶಿವಾಪುರದ ಸ್ಥಿತಿ, ಸಾಧ್ಯತೆಗಳ ಇಡಿಯಾದ ಗ್ರಹಿಕೆಗಾಗಿ ಲೇಖಕರ ಸೃಜನಶೀಲ ಚಡಪಡಿಕೆ ವೇದ್ಯವಾಗುತ್ತದೆ. ಅಂದರೆ ಶಿವಾಪುರವೆನ್ನುವುದು ಒಂದು ಸರಳ, ನಿಶ್ಚಲ, ಏಕಸ್ಥಿತಿಯಲ್ಲ, ‘ಹೇಳತೇನ ಕೇಳ’, ‘ಗಂಗಾಮಾಯಿ’,

‘ನವಿಲೇ ನವಿಲೇ’, ‘ಜೋಕುಮಾರಸ್ವಾಮಿ’, ‘ಮಂದಾರ ಮರ’, ‘ತುಕ್ರನ ಕನಸು’, ‘ಕರಿಮಾಯಿ’ – ಇಂಥ ಹಲವು ಹತ್ತು ಕೃತಿಗಳಲ್ಲಿ ಕಂಡುಬರುವ ಶಿವಾಪುರಗಳ ಸಮುಚ್ಚಯ ಸ್ಥಿತಿ ಅದು, ಸಾಧ್ಯತೆಗಳ ಮಾತೂ ಹೀಗೆಯೇ, ಆದ್ದರಿಂದಲೇ ಕಂಬಾರರ ಬಿಡಿ ಕೃತಿಗಳ ಓದಿನ ಸಂದರ್ಭದಲ್ಲೂ ಇತರ ಕೃತಿಗಳ ನೆನಪನ್ನು ಓದುಗ ಸಂಪೂರ್ಣವಾಗಿ ಬಿಟ್ಟುಕೊಡುವಂತಿಲ್ಲ.

೧

ಹಾಗಾದರೆ ಈ ಸ್ಥಿತಿಯ ಸಂಗ್ರಹ ಸ್ವರೂಪವೇನು? ಸರಳವಾಗಿ ಹೇಳಬಹುದಾದರೆ ಅದು ಕೇವಲ ಒಂದು ಭೌಗೋಳಿಕ ಸ್ಥಿತಿಯಲ್ಲ, ಅದೊಂದು ಪ್ರಜ್ಞೆ. ಶಿವಾಪುರ ಎನ್ನುವುದು ಒಂದು ಸಮುದಾಯ. ಈ ಸಮುದಾಯಕ್ಕೆ ತನ್ನದೇ ಆದ ಸ್ಮೃತಿಗಳಿವೆ. ಆ ಸ್ಮೃತಿಗಳನ್ನು ಕಥನವಾಗಿಸಿ ತನ್ನ ಪುರಾಣಚರಿತ್ರೆಗಳನ್ನು ಧ್ಯಾನಿಸುವ ಜನಪದ ಇದೆ. ಈ ಜನಪದವು ಒಂದು ಗ್ರಾಮಸಮುದಾಯವಾಗಿ ಒಟ್ಟಿಗೇ ಗ್ರಹಿಸುವುದು ಕಂಬಾರರ ವೈಶಿಷ್ಟ್ಯ. ಈ ಸಮುದಾಯ ಹಲವಾರು ಜಾತಿ, ವರ್ಗಗಳಲ್ಲಿ ಒಡೆದುಕೊಂಡಿದ್ದರೂ, ತನ್ಮೂಲಕ ಪರಸ್ಪರ ಭಿನ್ನವೆನ್ನಿಸುವ ಆಶೋತ್ತರಗಳನ್ನು ತನ್ನ ಒಡಲಾಳದಲ್ಲಿ ಹುದುಗಿಸಿಕೊಂಡಿದ್ದರೂ ಒಂದು ಅವಿಚ್ಛಿನ್ನ ಪ್ರಜ್ಞೆ ಈ ಸಮುದಾಯವನ್ನು ಬೆಸೆದಿದೆ. ‘ಕರಿಮಾಯಿ’ ಕಾದಂಬರಿಯಲ್ಲೇ, ಕಾಣಬಹುದಾದಂತೆ ಗೌಡ, ದತ್ತಪ್ಪ, ಲಗುಮವ್ವ ಇವರೆಲ್ಲ ಬೇರೆಬೇರೆ ಜಾತಿ – ವರ್ಗಗಳಿಗೆ ಸೇರಿದವರಾದರೂ ಕರಿಮಾಯಿಯ ಪುರಾಣ ಇವರನ್ನೆಲ್ಲ ಒಂದು ಸಮುದಾಯವಾಗಿ ಬೆಸೆದಿದೆ. ಇದೊಂದು ಜೀವಂತ ಸಮುದಾಯ ಎನ್ನುವುದು ಮುಖ್ಯ. ತನ್ನ ಭೂತವನ್ನು ಕಥನವಾಗಿಸಿ ಹಾಡುವಂತೆ ಕಥನ ಪ್ರಕ್ರಿಯೆಯಲ್ಲಿ ತಾವೂ ಆ ಕಥನದ ಪಾತ್ರಧಾರಿಗಳಾಗಿ ಈ ಜನರು ಒಟ್ಟಿಗೇ ಹಲವು ಕಾಲದಲ್ಲಿ ಬದುಕುತ್ತಾರೆ, ಶಿವಾಪುರದ ಪುರಾಣವನ್ನು ಹೇಳುತ್ತಿದ್ದಾರೆ ಅಂದುಕೊಳ್ಳುತ್ತಿದ್ದಾಗ ಚರಿತ್ರೆಯ ವಿವರಗಳನ್ನು ತಂದು, ಚರಿತ್ರೆ ಹೇಳುತ್ತಿದ್ದಾರೆ ಅಂದುಕೊಳ್ಳುವಾಗ ಅದನ್ನು ಪುರಾಣವೆಂಬಂತೆ ಹೇಳಿ ಕಂಬಾರರು ಕಾಲ ದೇಶಗಳ ಎರಡು ಬೇರೆಬೇರೆ ಎಂಬಂಥ ಸ್ಥಿತಿಗಳನ್ನು ಒಟ್ಟಿಗೆ ಸೂಚಿಸಿಬಿಡುತ್ತಾರೆ. ‘ಅಂಡಾಂಡ ಪಿಂಡಾಂಡದಿಂದ ಸುರುವಾಗುವ ಲಗುಮವ್ವನ ಹಾಡಿನಲ್ಲೂ ಶಿವಾಪುರವಿದೆ.’ ಹಾಗೆಯೇ ‘ತಮ್ಮ ಊರಿನ ಸುತ್ತಮುತ್ತ ಯಾವ್ಯಾವ ಊರಿದೆಯೆಂಬುದು ಅಥವಾ ಯಾವ್ಯಾವ ಊರಿನ ಮಧ್ಯೆ ತಮ್ಮ ಊರಿದೆ ಎನ್ನುವುದು ಅವರಿಗೂ ಗೊತ್ತಿದೆ.’ ಪುರಾಣ ಕಾಲದ ಸ್ಮೃತಿಯಿಟ್ಟುಕೊಂಡ ಈ ಸಮುದಾಯ ಇಪ್ಪತ್ತನೆಯ ಶತಮಾನದವರೆಗೂ ಬದುಕಿ ಬಾಳಿಕೊಂಡು ಬಂದಿದೆ. ಈ ಹೊಸಕಾಲದಲ್ಲಿ ಬೆಳಗಾವಿ ಜಿಲ್ಲೆಯ ಒಂದು ಗ್ರಾಮವೆಂದು ಗುರುತಿಸಿಕೊಂಡಿದೆ. ಈ ಗ್ರಾಮದ ದೇವತೆಯಾದ ಕರಿಮಾಯಿಗೆ ಒಂದು ಪುರಾಣ, ಚರಿತ್ರೆಯಿರುವಂತೆ ಗೌಡ, ದತ್ತಪ್ಪರಿಗೂ ಅವರವೇ ಆದ ವಂಶಾವಳಿಗಳಿವೆ. ಶಿವಾಪುರದ ಒಳಗೇ ವರ್ಗ ಸಂಘರ್ಷ *‘ಜೋಕುಮಾರಸ್ವಾಮಿ’, ‘ಜೈಸಿದನಾಯ್ಕ’* ಮುಂತಾದ ನಾಟಕಗಳಲ್ಲಿ ಸೂಚಿತವಾದರೆ *‘ಹೇಳತೇನ ಕೇಳ’*ದಂಥ ಕಾವ್ಯಗಳಲ್ಲಿ ಸಮುದಾಯದ ಪ್ರಜ್ಞೆಯ ಪಲ್ಲಟಗಳು ಹೊರಶಕ್ತಿಯ ಆಗಮನದೊಂದಿಗೆ ಸೂಚಿತವಾಗುತ್ತವೆ. *‘ನವಿಲೇ ನವಿಲೇ’*, ಕವಿತೆಯಲ್ಲಿ ಶಿವಾಪುರವನ್ನು ಕವಿದ ಬರದ ಸ್ಥಿತಿ ಮತ್ತು ಆ ಸ್ಥಿತಿ ನೀಗುವ ಸಾಧ್ಯತೆ ಮೇಲಿನ ಕೃತಿಗಳಲ್ಲಿ ಸೂಚಿತವಾದ ನುಡಿಗಟ್ಟಿಗಿಂತ ಭಿನ್ನವಾದ ಇನ್ನೊಂದು ಬಗೆಯಲ್ಲಿ ಮೂಡಿಬರುತ್ತವೆ. *‘ಹೇಳತೇನ ಕೇಳ’*ದಲ್ಲಿ ರಾಕ್ಷಸನ ಆಗಮನದಿಂದ ಪಲ್ಲಟ ಪ್ರಾರಂಭವಾಗುತ್ತದೆ.

ಊರಿನ ಹುಡುಗೋರು ದೊಡ್ಡಾಟ ಬಿಟಕೊಟ್ಟು
ನಾಟಕವಾಡ್ಯಾರು ಪಟ್ಟಪೈಲೇಕ

ಆದ್ಯತೆ, ಆಶೋತ್ತರಗಳು ಬದಲಾಗುವ ಇನ್ನೊಂದು ಪರಿಯೆಂದರೆ,

ಹಸಮಕ್ಕ ಸಲುವಾಗಿ ಗರಡೀಯ ಮನಿಕೆಡವಿ
ಹೊಸ ಸಾಲಿ ಕಟ್ಟಿಸೋಣ, – ಬಲೆ ಶೋಭಾ

‘ಕರಿಮಾಯಿ’ ಕಾದಂಬರಿಯಲ್ಲೂ ಶಿವಾಪುರದ ಪ್ರಜೆಗಳಿಗೆ ಗೌಡ ಆಡಿಸುವ ಪಾರಿಜಾತಕ್ಕಿಂತ, ಗುಡಸೀಕರ ಆಡಿಸುವ ನಾಟಕವೇ ಆಕರ್ಷಕವಾಗುವ ಒಂದು ಪ್ರಸಂಗವಿದೆ. ಹಾಗೆಯೇ ಲಗುಮವ್ವನ ಹಾಡಿಗಿಂತ ಬಸವರಾಜನ ರೇಡಿಯೋ ಹೆಚ್ಚಿನ ಕುತೂಹಲ ಹುಟ್ಟಿಸುತ್ತದೆ. ಇಲ್ಲಿ ರಾಕ್ಷಸ ಬರುವುದಿಲ್ಲ, ಬೆಳಗಾವಿ ತನ್ನ ‘ಪ್ರಗತಿ’ಯಿಂದ ಶಿವಾಪುರವನ್ನು ಕಂಗೆಡಿಸುತ್ತದೆ. ಶಿವಾಪುರಕ್ಕೆ ಈಗ ತಾನೂ ಬೆಳಗಾವಿ ಆಗಬೇಕೆಂಬ ಆಸೆ. ಶಿವಾಪುರದವನೇ ಆದ ಗುಡಸ್ಯಾಗೋಳ ಬೆಳಗಾವಿಗೆ ಹೋಗಿ ಜಿ.ಎಚ್. ಗುಡಸೀಕರ ಬಿ.ಎ, ಎಲ್‌ಎಲ್.ಬಿ., ಆಗಿ ಮರಳುತ್ತಾನೆ. ಗೌಡ ದತ್ತಪ್ಪರ ಪರಂಪರಾಗತ ಆಳ್ವಿಕೆ ಮುಗಿದು ಸರಕಾರದ ಸೂಚನೆಯಂತೆ ಗ್ರಾಮಪಂಚಾಯಿತಿ ಹೊಸದಾಗಿ ಆಸ್ತಿತ್ವಕ್ಕೆ ಬರುತ್ತದೆ. ಇದರ ಪರಿಣಾಮಗಳ ಕಥನವೇ ಕರಿಮಾಯಿ ಕಾದಂಬರಿಯ ಪ್ರಧಾನ ಆಶಯ.

೩

ಈ ಹೊಸ ಕಥನ ಲಗುಮವ್ವಳ ಹಳೆಯ ಕಥನದ ಮುಂದುವರಿಕೆಯಾಗಿ ಮೂಡಿಬರುವುದು ಮಹತ್ವದ ಸಂಗತಿ. ಅಂದರೆ ಶಿವಾಪುರದ ಜನಪದ ತನ್ನ ಮೂಲಕಥೆಗೆ ಕಾಲದಿಂದ ಕಾಲಕ್ಕೆ ಹೊಸಹೊಸ ಆಖ್ಯಾನಗಳನ್ನು ಸೇರಿಸಿಕೊಂಡು ತನ್ನ ವಿಕಾಸವನ್ನು ದಾಖಲಿಸಿಕೊಳ್ಳುತ್ತ ಬಂದಿದೆಯಷ್ಟೆ. ಗುಡಸೀಕರ ಪಂಚಾಯಿತ ಛೇರ್ಮನ್ ಆದ ನಂತರದ ಘಟನಾವಳಿಗಳೂ ಹೀಗೆ ಒಟ್ಟಾರೆ ಶಿವಾಪುರ ಸಮುದಾಯದ ಕಥನದ ಮುಂದಿನ ಭಾಗಗಳೆಂಬಂತೆ ಬೆಳೆದು ಬರುತ್ತವೆ. ಅಂದರೆ ಈ ಸಮುದಾಯದ ದೃಷ್ಟಿಕೋನದಿಂದಲೇ ಎಲ್ಲವನ್ನು ನೋಡಲಾಗಿದೆ. ಕರಿಮಾಯಿಯ ಪುರಾಣವನ್ನು ಹಾಡುವ ಲಗುವಮವ್ವನಂತೆ ‘ಕರಿಮಾಯಿ’ ಕಥೆಯ ನಿರೂಪಕ ಹೀಗೆ ಸೂಚಿಸಿಬಿಡುತ್ತಾನೆ. “ಇಂಥಾ ಬಂಗಾರದ ತಾಯಿ ಆದಿಗೆ ಆದಿಯ ಹಡೆದವ್ವ, ಕಡೆಯ ಕಡೆ ಗೊತ್ತಿರದವ್ವ, ಇದಿಮಾಯಿ, ಘೋಡಗೇರಿಯ ಕಂಬಾರ ಬಸವಣ್ಣೆಪ್ಪನ ಮಗ, ಭೂಸನೂರುಮಠದ ಸಂಗಯ್ಯನ ಶಿಷ್ಯ, ಸಾವಳಿಗೆ ಶಿವಲಿಂಗೇಶ್ವರ ಮಠದ ಸಿದ್ಧರಾಮ ಸ್ವಾಮಿಗಳ ಭಕ್ತ – ಚಂದ್ರಶೇಖರನಿಗೆ ಬರೆಯುವ ಬುದ್ಧಿಕೊಟ್ಟಳು, ಹಾಗೆಯೇ ಓದುಗರಿಗೆ ತೂಗು ತೊಟ್ಟಿಲ, ಬೆಳ್ಳಿಬಟ್ಟಲದ ಭಾಗ್ಯ, ಫಲಪುತ್ರ ಸಂತಾನದ ಸೌಭಾಗ್ಯ ಕೊಡಲಿ.”

‘ಹೇಳತೇನ ಕೇಳ’, ‘ಕುದರೀ ಸಿದ್ಧ’ ಮೊದಲಾದ ಕವಿತೆಗಳ ಈ ಬಗೆಯ ಸಾಲುಗಳನ್ನು ಗಮನಿಸಿ:

ಮೊದಲೀಗೆ ಅಲ್ಲಮ ಪ್ರಭುವಿಗೆ ಶರಣಾರ್ಥಿ
ಕೂಡಿ ಕುಂತ ಜನಕೆಲ್ಲ ನಮ್ಮ ನಮನಾ

ಕಲಿಯುಗದೊಳಗಿನ ಕಥೆಯ ವಿಸ್ತಾರವ
ತಿಳಿಸಿ ಹೇಳುವೆ ಕೇಳಬೇಕ್ರಿ ಜನಾ
(ಹೇಳತೇನ ಕೇಳ)

ಘೋಡಗೇರಿ ಬಸ್ಸಪ್ಪ ಅವರ ಮಗ ಚಂದ್ರಪ್ಪ
ಪದಾಮಾಡಿದಾರ ಭಾಳನಿವಳಾ
(ಹೇಳತೇನ ಕೇಳ)

ಕತಿ | ಹೇಳತೇನ್ರಿ ಮುಂದಿಂದಾ
ಆಗ | ಧಾಂಗ ಒಂದು ಸಹ ಕುಂದಾ
ಇರು | ಗುರುವೆ ನಾಲಗೆಯ ಹಿಂದಾ

ನಾ | ನಿಮ್ಮ ಕರುಣದ ಕಂದಾ
(ಹೇಳತೇನ ಕೇಳ)

ಕೇಳೀರೇನರಿ ಕತಿಯ ಕೇಳೀರೇನು |
ಕುದರೀ ಸಿದ್ಧನ ಕತಿಯ ಕೇಳೀರೇನು||
(ಕದರೀ ಸಿದ್ಧ)

ಕುದರಿ ಸಿದ್ಧರ ಜೋಡಿ ತುಳಿದಾಡಿ ಹೋಯ್ತೆಂದು
ಮಾತಾಡಿಕೊಳ್ಳುವರು ಮಂದಿ
ಕಾಡಿsಗೆ ಎಡಿಮಾಡಿ ನೈವೇದ್ಯ ನೀಡುವರು
ಕುದರೀ ಸಿದ್ಧರ ಕತಿಯ ಹಾಡಿ||
(ಕುದರೀ ಸಿದ್ಧ)

ಇನ್ನು ಕಂಬಾರರ ಹಲವು ನಾಟಕಗಳಲ್ಲಿ ಕಂಡುಬರುವ ಭಾಗವತರು, ಸೂತ್ರಧಾರರು, ನಿರ್ದೇಶಕರು, ಮೇಳಗಳು ಇವುಗಳನ್ನು ಗಮನಿಸಿದಾಗ ಕೂಡ ಕಥನದ ಬೇರೆ ಬೇರೆ ಮಾದರಿಗಳು ನಮ್ಮ ಅರಿವಿಗೆ ಬರುತ್ತವೆ. 'ಕರಿಮಾಯಿ' ಒಂದು ಕಾದಂಬರಿಯಾಗಿದ್ದರೂ, ಆಧುನಿಕ ಸಮಾಜದ ಕಥೆಯನ್ನೇ ಹೇಳಿದರೂ ಕಂಬಾರರು ತಮ್ಮ ಯಾವತ್ತೂ ಕಥನಕ್ರಮವನ್ನು ಬಿಟ್ಟುಕೊಟ್ಟಿಲ್ಲ ಎಂಬುದು ಗಮನಾರ್ಹ. 'ಕರೀಮಾಯಿ' ಒಂದು ದೀರ್ಘ ಜಾನಪದ ಕಥೆಯೂ ಅಲ್ಲ; ಅಥವಾ ಟಿಪಿಕಲ್ ವಾಸ್ತವವಾದೀ ಇಲ್ಲವೆ ನವ್ಯ ಕಾದಂಬರಿಯ ನಮೂನೆಯದೂ ಅಲ್ಲ; ದೇಶಿಯ ಕಥನ ಪ್ರಕಾರವೊಂದಕ್ಕೆ ಆಧುನಿಕ, ಸಮಕಾಲೀನ, ಸಾಮಾಜಿಕ ಅನುಭವಗಳನ್ನು ಹೇಗೆ ಒಗ್ಗಿಸಿಕೊಳ್ಳುವುದು ಎಂಬುದೇ ಇಲ್ಲಿನ ಸೃಜನಶೀಲ ತುರ್ತು. ಇಂಥದೊಂದು ಪ್ರಯತ್ನ ಎಂ.ಎಸ್. ಪುಟ್ಟಣ್ಣನವರ ಕಾದಂಬರಿಗಳಲ್ಲಿ – ಅಂದರೆ ಕನ್ನಡ ಕಾದಂಬರಿಯ ಪ್ರಾರಂಭಾವಸ್ಥೆಯಲ್ಲಿ ಕಂಡಿತ್ತು. ಯಾಕೋ ಏನೋ ಈ ಪ್ರಯತ್ನ ಮುಂದಿನ ದಿನದಲ್ಲಿ ಕಾಣೆಯಾಯಿತು. ಮತ್ತೆ ಇಂಥ ಪ್ರಯತ್ನ ಕಾಣುವುದು ದೇವನೂರ ಮಹಾದೇವರ 'ಕುಸುಮಬಾಲೆ'ಯಲ್ಲೇ. ಅಂದರೆ ಕಂಬಾರರು 'ಕರಿಮಾಯಿ' ಕಾದಂಬರಿ ರಚನೆಯಲ್ಲಿ ದೇಶೀಯ ಮಾದರಿಯೊಂದನ್ನು ಕಂಡುಕೊಳ್ಳಲು ಪ್ರಯತ್ನಿಸಿದರು. ಕುತೂಹಲದ ಸಂಗತಿ ಎಂದರೆ ನಾಟಕಗಳಲ್ಲಿ ಅವರ ಇಂಥ ಪ್ರಯತ್ನಗಳು ಮುಂದುವರಿದ ಹಾಗೆ ಕಂಡರೂ ಸ್ವತಃ ತಮ್ಮ ಮುಂದಿನ ಕಾದಂಬರಿಗಳಲ್ಲಿ – 'ಸಿಂಗಾರೆವ್ವ ಮತ್ತು ಅರಮನೆ', 'ಜಿ.ಕೆ. ಮಾಸ್ತರರ ಪ್ರಣಯ ಪ್ರಸಂಗ' – ರಚನೆಯ ದೃಷ್ಟಿಯಿಂದ ಇಂಥ ಶೋಧಕ್ಕೆ ಮುಂದಾಗಲಿಲ್ಲ. ಕಂಬಾರರು ಈಗ ಕಾವ್ಯ ರೂಪದ ಕಾದಂಬರಿಯೊಂದನ್ನು ಬರೆಯುತ್ತಿದ್ದಾರೆ. ತನ್ಮೂಲಕ ಕಾದಂಬರಿ ಪ್ರಕಾರದಲ್ಲೇ ಹೊಸದೊಂದು ಮಾದರಿಗಾಗಿ ಪ್ರಯತ್ನಿಸುತ್ತಿದ್ದಾರೆ. ಲಂಕೇಶರು 'ಬಿರುಕು' ಮಾದರಿಯನ್ನು ಬಿಟ್ಟುಕೊಟ್ಟು 'ಮುಸ್ಸಂಜೆ...'ಯಲ್ಲಿ ದೇಶೀಯ ಮಾದರಿಯೊಂದಕ್ಕಾಗಿ ಪ್ರಯತ್ನಪಟ್ಟರು. ('ಮುಸ್ಸಂಜೆ..'ಮತ್ತು ಕರಿಮಾಯಿ' ಒಂದೇ ವರ್ಷ ಪ್ರಕಟವಾದದ್ದು ಕುತೂಹಲದ ಸಂಗತಿ) ಅಂದರೆ ಭಾರತೀಯ ಲೇಖಕ ಕಾದಂಬರಿ ರಚನೆಯಲ್ಲಿ ತನ್ನದೇ ಆದ ದಾರಿಯನ್ನು ಕಂಡುಕೊಳ್ಳಲು ಯತ್ನಿಸಿದ್ದಾನೆ. ಈ ದೃಷ್ಟಿಯಿಂದ ಕೂಡ ಕಂಬಾರರ 'ಕರಿಮಾಯಿ' ಅಧ್ಯಯನ ಯೋಗ್ಯ. ಪಾತ್ರಕಲ್ಪನೆ, ಕಥಾ ಸಂವಿಧಾನದ ಸ್ವರೂಪ, ನಿರೂಪಕನ ಮಧ್ಯಪ್ರವೇಶಗಳು ಮುಂತಾದ ಅನೇಕ ನೆಲೆಗಳಲ್ಲಿ ಕಂಬಾರರು ತಮ್ಮ ಪರಂಪರೆಗೆ ಋಣಿಯಾಗಿರುವುದು ಸ್ಪಷ್ಟವಾಗಿಯೇ ಇದೆ.

೪

'ಕರಿಮಾಯಿ' ಕಾದಂಬರಿಯಲ್ಲಿ ಹಲವು ಅಧ್ಯಾಯಗಳಿವೆಯಷ್ಟೆ. (ಈ ಅಧ್ಯಾಯಗಳಿಗೆ ಪ್ರತ್ಯೇಕ ಶೀರ್ಷಿಕೆಯೂ ಉಂಟು.) ಈ ಅಧ್ಯಾಯಗಳನ್ನು ಸ್ವತಂತ್ರ ಘಟಕಗಳೆಂಬಂತೆಯೂ ಓದಿ ಆನಂದಿಸಬಹುದು. ಅಂದರೆ ಕಾದಂಬರಿ ಸರಳ ರೇಖಾತ್ಮಕ ತರ್ಕವನ್ನು

ಬಹುಮಟ್ಟಿಗೆ ಬಿಟ್ಟುಕೊಟ್ಟು ಹಲವು ಪ್ರಸಂಗಗಳ ಸಂಯೋಜನೆಯಂತಿದೆ. ಒಂದು ಮುಖ್ಯ ಪ್ರಸಂಗಕ್ಕೆ ಅನೇಕ ಉಪಪ್ರಸಂಗಗಳಿವೆ. ಇವುಗಳನ್ನು ಒಂದುಗೂಡಿಸುವ ಸ್ಥೂಲ ಎಳೆಯೊಂದು ಕಥೆಯಲ್ಲಿ ಇದ್ದರೂ ಉಪಾಖ್ಯಾನಗಳೇ ಹೆಚ್ಚು ಸ್ವಾರಸ್ಯಪೂರ್ಣವಾಗಿವೆ. ಪ್ರತಿಯೊಂದು ಪಾತ್ರಕ್ಕೂ ತನ್ನದೇ ಆದ ಇತಿಹಾಸವಿದೆ. ಪುರಾಣವೂ ಇದೆ. ಮುಖ್ಯ ಕಥೆಯನ್ನು ಹೇಳಿ ಮುಗಿಸಬೇಕೆಂಬ ಆತುರವಿಲ್ಲದೆ ನಿರೂಪಕ ಎಲ್ಲವನ್ನು ವಿವರವಾಗಿ ಸಾವಧಾನದಿಂದ ನಿರೂಪಿಸುತ್ತಾ ಹೋಗುತ್ತಾನೆ. ಮುಖ್ಯಕಥೆಯ ದೃಷ್ಟಿಯಿಂದ ಮೇಲುನೋಟಕ್ಕೆ ಮುನಿಯೆಲ್ಯಾನು ನಾಯೆಲ್ಯಾ, ಅಂಗೀಯೆಲ್ಯಾ ಆದ ಉಪಕಥೆ, ಪ್ರಶ್ನೋತ್ತರ ಮಾಸ್ತರ, ನಿಂಗೂ ಮುಂತಾದವರ ವೈಯಕ್ತಿಕ ಚರಿತ್ರೆಗಳು ಮುಖ್ಯವೆನಿಸದಿದ್ದರೂ ನಿರೂಪಕ ಅವುಗಳಿಗೂ ಅಷ್ಟೇ ಪ್ರಾಮುಖ್ಯ ಕೊಟ್ಟು ವರ್ಣಿಸುತ್ತಾನೆ. ವಿಶ್ಲೇಷಣೆಗಿಂತ ವರ್ಣನೆ ಮುಖ್ಯವಾಗುತ್ತದೆ. ಹಾಗಾಗಿ ವಿವರಗಳು, ಘಟನೆಗಳು ಒಂದಕ್ಕೆ ಒಂದರ ಸಮೀಕರಣದಲ್ಲಿ ನೇರವಾಗಿ ಕಥೆಯ ಕೇಂದ್ರಕ್ಕೆ ದುಡಿಯದೆ ಹರಡಿಕೊಂಡಿವೆ ಎನಿಸಿದರೂ ಇದರಿಂದಾಗಿ ಬಂಧ ಶಿಥಿಲವಾಗಿದೆ ಎನಿಸಿದರೂ ಅದು ಕಾದಂಬರಿಯ ದೋಷವೆಂದು ಅನ್ನಿಸುವುದಿಲ್ಲ. ಅಂದರೆ ಸಾಂಪ್ರಾದಾಯಿಕ ವಾಸ್ತವವಾದೀ ಇಲ್ಲವೆ ನವ್ಯ ಕಾದಂಬರಿಯಿಂದ ನಾವು ಸಾಮಾನ್ಯವಾಗಿ ನಿರೀಕ್ಷಿಸುವುದಕ್ಕಿಂತ ಭಿನ್ನವಾದುದೊಂದಕ್ಕೆ ಓದುಗನನ್ನು ಒಪ್ಪಿಸಿಕೊಳ್ಳುವುದರಲ್ಲಿ ಲೇಖಕರು ಯಶಸ್ವಿಯಾಗುತ್ತಾರೆ. ಅಷ್ಟೇ ಅಲ್ಲ ವಾಸ್ತವೇತರ ಎಂಬ ವಿಷಯಗಳನ್ನು ವಾಸ್ತವ ವಿವರಗಳ ಜೊತೆ ಸಹಜವೆಂಬಂತೆ ಇಡಲು ಲೇಖಕರು ಏನೂ ಸಂಕೋಚಪಟ್ಟುಕೊಂಡಿಲ್ಲ ಅಥವಾ ಅವುಗಳಿಗೆ ತಾರ್ಕಿಕ ಸಮಾಧಾನ ಸೂಚಿಸುವ ಗೋಜಿಗೂ ಹೋಗಿಲ್ಲ. ಹೀಗೆ ವಸ್ತು, ತಂತ್ರ ಎರಡೂ ನೆಲೆಯಲ್ಲಿ ಲೇಖಕರು ವಾಸ್ತವತೆಗೆ ಕಟ್ಟುಬೀಳದೆ ಅದಕ್ಕೆ ಹೊರತಾದ ಆಯಾಮಗಳನ್ನು ಆರಾಮವಾಗಿ ಒಳಗೊಂಡಿದ್ದಾರೆ ಕರಿಮಾಯಿ ಮೈದುಂಬುವ ದೇವರೇಸಿ ಪಾತ್ರ ಚಿತ್ರಣದಲ್ಲಿ ಈ ಅಂಶ ತುಂಬ ಚೆನ್ನಾಗಿ ವ್ಯಕ್ತವಾಗುತ್ತದೆ. ಎಲ್ಲವನ್ನೂ 'ಮಿಥ್' ಮಾಡುವ ಪರಿ ಕಾದಂಬರಿಯ ಒಟ್ಟು ಸ್ವರೂಪಕ್ಕೆ ಅನುಗುಣವಾಗಿಯೇ ಇದೆ. ವಾಸ್ತವತೆಯ ಭ್ರಮೆಯನ್ನು ಹುಟ್ಟಿಸುವ ಯಾವ ಸೋಗನ್ನೂ ನಿರೂಪಕ ಹಾಕುವುದಿಲ್ಲ. ನಾವು ಅವನ ಕಥೆಯನ್ನು ಯಾವತ್ತೂ ಕೇಳುತ್ತಿದ್ದೇವೆ ಎಂಬುದನ್ನು ಮತ್ತೆಮತ್ತೆ ನೆನಪು ಮಾಡಿಕೊಡುವಂತೆ ಕಥೆಯಲ್ಲಿ ಮಧ್ಯಪ್ರದೇಶ ಮಾಡುತ್ತಲೇ ಇರುತ್ತಾನೆ. 'ಮಿಥ್'ಅನ್ನು ಸೃಷ್ಟಿಸುತ್ತ, ಅದನ್ನು ಒಡೆಯುತ್ತ, ಭೂತ – ವರ್ತಮಾನಗಳಲ್ಲಿ ಓಡಾಡುತ್ತ, ಘಟನೆಗಳಿಗೆ ಏಕಕಾಲದಲ್ಲಿ ಸಾಕ್ಷಿಯೂ, ವ್ಯಖ್ಯಾನಕಾರನೂ ಆಗಿರುತ್ತಾನೆ: "ನಮ್ಮ ಕಥೆಯಲ್ಲಿ ಕಾಲಿಟ್ಟ ಹೊಸ ನಾಯಕಿಯನ್ನು ಕರಿಮಾಯಿಗೆ ಕೈಮುಗಿದು ಸ್ವಾಗತಿಸೋಣ. ಊರಿನಲ್ಲಿ ಹೊಸಗಾಳಿ ಸುಳಿಯಲೆಂದು, ಕೂಸುಗಳ ಆರೋಗ್ಯ ಕೆಡದಿರಲೆಂದು, ಹಚ್ಚಿದ ದೀಪ ಕಳೆಯದಿರಲೆಂದು ಹಾರೈಸೋಣ."

೩

ಹಾಗೆಂದು 'ಕರಿಮಾಯಿ' ಕೇವಲ ತನ್ನ ಕಥನ ಸ್ವರೂಪದಲ್ಲಿ ಆಧುನಿಕ ಓದುಗರನ್ನು ಮೆಚ್ಚಿಸಬಯಸುವ ಕೃತಿಯಲ್ಲ. ಅದು ಅನೇಕ ಮುಖ್ಯ ಸಂಗತಿಗಳನ್ನು ತನ್ನ ಮೈಮೇಲೆ ಹಾಕಿಕೊಂಡಿರುವ ಮಹತ್ವಾಕಾಂಕ್ಷಿ ರಚನೆ. ಹೊಸ ಮೌಲ್ಯಗಳ ಪ್ರವೇಶದಿಂದ ಒಂದು ನಂಬಿಕೆಗಳ ಲೋಕ ಕಂಪಿಸುವ, ಸಮುದಾಯ ಪ್ರಜ್ಞೆ ಆಘಾತಕ್ಕೆ ಒಳಗಾಗುವ, ಹೊಸದೊಂದು ಆರ್ಥಿಕ, ಸಾಮಾಜಿಕ ಜೀವನಕ್ರಮದ ಮುನ್ಸೂಚನೆ ಕಾಣಿಸುವ ಚಿತ್ರಗಳನ್ನು ಅದು ದಟ್ಟವಾಗಿ ಆದರೆ ತನಗೇ ಅನನ್ಯವೆನ್ನಿಸುವ ಕಾಮಿಕ್ ಧಾಟಿಯಲ್ಲಿ ಕಟ್ಟಿಕೊಡುತ್ತದೆ. (ಈ ಕಾಮಿಕ್ ಧಾಟಿ ಹಳೆಯದನ್ನು ಕುರಿತು ಹಳಹಳಿಕೆಯನ್ನು ಒಂದು ಮಟ್ಟದಲ್ಲಿ ನಿರೋಧಿಸುತ್ತದೆ). 'ಕರಿಮಾಯಿ'ಯ ಮಿಥ್ ಒಡೆಯುವುದಕ್ಕೂ, ಶಿವಾಪುರದ ಜನರ ಸಮುದಾಯ ಪ್ರಜ್ಞೆ ಅಳ್ಳಕಗೊಳ್ಳುವುದಕ್ಕೂ ಸಂಬಂಧ ಇದ್ದೇ ಇದೆ. ಹೊಸ ಮೌಲ್ಯಗಳು ಕೇವಲ ಗ್ರಾಮಪಂಚಾಯಿತಿ ಮೂಲಕ ಬರುವುದಿಲ್ಲ. ಅವು ಬೆಳಗಾವಿ ಸೃಷ್ಟಿಸುವ ಹೊಸ ಕನಸುಗಳ ರೂಪದಲ್ಲಿಯೂ ಬರುತ್ತವೆ. ಗುಡಸೀಕರ ಶಿವಾಪುರಕ್ಕೆ ತರುವ ವಿದೇಶೀ ಬ್ರಾಂದಿ, ಸಿಗರೇಟು ಮುಂತಾದ ಅನೇಕ ಭೌತಿಕ ವಸ್ತುಗಳ ರೂಪದಲ್ಲಿ ಕಾಣಿಸಿಕೊಳ್ಳುವಂತೆ, ಪೊಲೀಸ್ ಸ್ಟೇಷನ್, ಕೋರ್ಟ್ ಮುಂತಾದ ವಸಾಹತುಶಾಹಿ ಸಂಸ್ಥೆಗಳ ರೂಪದಲ್ಲಿಯೂ ವ್ಯಕ್ತವಾಗುತ್ತವೆ. ಫೌಜುದಾರರು, ವಕೀಲರು, ಸರಕಾರಿ ಅಧಿಕಾರಿಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಒಂದು ಕಡೆ ಬ್ರಿಟಿಷ್ ಸರಕಾರ: ಇನ್ನೊಂದು ಕಡೆ ಗಾಂಧಿ ನೇತೃತ್ವದ ಸ್ವಾತಂತ್ರ್ಯ ಚಳುವಳಿ. ಒಂದು ಪರಂಪರಾಗತ ಜಮೀನ್ದಾರಿ ವ್ಯವಸ್ಥೆಗೆ ಒಗ್ಗಿಹೋದ ಜನಪದಕ್ಕೆ ಈ ಎರಡೂ ಹೊಸವು: ಅನ್ಯ. ಸ್ವಾರಸ್ಯದ ಸಂಗತಿ ಎಂದರೆ ಹಳೆಯ ವ್ಯವಸ್ಥೆಯ ಪ್ರತಿನಿಧಿಯಾದ ಗೌಡ, ಹೊಸ ವ್ಯವಸ್ಥೆಯ ಪ್ರತಿನಿಧಿಯಾದ ಗುಡಸೀಕರ ಇಬ್ಬರೂ ಗಾಂಧಿಯನ್ನು ನೆನಸುತ್ತಾರೆ! ಕಾದಂಬರಿಯು ವಸಾಹತುಶಾಹಿ ಕ್ರೌರ್ಯವನ್ನೂ,

ಸ್ವರಾಜ್ಯದ ಹಂಬಲಿಕೆಯನ್ನೂ ಸೂಕ್ಷ್ಮವಾಗಿ ಧ್ವನಿಸುತ್ತದೆ. ತಮ್ಮ ಊರು ಬೆಳಗಾವಿಯ ಹಾಗೆ ಆಗಬೇಕೆಂದು ಆಸೆಪಡುವವರೂ ಬೆಳಗಾವಿ ಪೊಲೀಸರಿಗೆ, ಕೋರ್ಟಿಗೆ, ಸರಕಾರಕ್ಕೆ ಭಯಪಡುತ್ತಾರೆ! ಈ ಆಸೆ, ಈ ಭಯ, ಸ್ವರಾಜ್ಯ ಸಂಪಾದನೆಯ ಮುನ್ಸೂಚನೆ ಇವೆಲ್ಲ ಒಟ್ಟಿಗೇ ಆಕ್ರಮಿಸಿ ಶಿವಾಪುರಸ ಜನಪದವನ್ನು ತಬ್ಬಿಬ್ಬು ಮಾಡಿದಂತಿದೆ. ಹಳತು – ಹೊಸತರ ಒಂದು ತೀರಾ ಮೂರ್ತವಾದ, ನಿರ್ಣಾಯಕ ಪ್ರಸಂಗ ನಿಂಗೂ ತನ್ನ ಹೆಂಡತಿಯನ್ನು – ಆಕೆಯ ಜೊತೆ ಲೈಂಗಿಕ ಸಂಬಂಧವಿಟ್ಟುಕೊಂಡಿದ್ದ ತನ್ನ ಅಪ್ಪನನ್ನೂ ಕೊಲೆ ಮಾಡಿದಾಗ ಏರ್ಪಡುತ್ತದೆ. ದೇಶೀ ನ್ಯಾಯಪದ್ಧತಿಗೂ ಏರ್ಪಡುವ ಒಂದು ಮೌಲಿಕ ಸಂಘರ್ಷವಾಗಿ ಇಡೀ ಪ್ರಸಂಗವನ್ನು ಚರ್ಚಿಸಲು ಸಾಧ್ಯವಿದೆ. ಹಾಗೆಯೇ ಹಳ್ಳಿಯ ಪಂಚರು ನಡುಸುತ್ತಿದ್ದ ಸಭೆಗಳಿಗೂ ಗುಡಸೀಕರ ನಡೆಸುವ 'ಮೀಟಿಂಗ್'ಗಳಿಗೂ ವೈದೃಶ್ಯ ಹೊಳೆಯಿಸುವ ಲೇಖಕರು ಒಂದು ಹೊಸ ಸಾಮಾಜಿಕ ಪ್ರಕ್ರಿಯೆಯನ್ನೇ ಓದುಗರಿಗೆ ಕಾಣಿಸಿಬಿಡುತ್ತಾರೆ. ಪಂಚಾಯಿತಿಗೆ ಚುನಾವಣೆಗಳು ನಡೆದಾಗ ಗೌಡನ ಪಕ್ಷದವರು ಕರಿಮಾಯಿಯ ಭಂಡಾರ ಹಂಚಿದರೆ, ಗುಡಸೀಕರನ ಪಾರ್ಟಿಯವರು ಮಹಿಳಾ ಮತದಾರರನ್ನು ಓಲೈಸಲು ಬೆಳಗಾವಿಯಿಂದ ಬ್ರಾಗಳನ್ನು ತರಿಸಿ ಹಂಚುತ್ತಾರೆ! ಹಳೆಯ ವ್ಯವಸ್ಥೆ ಅದೆಷ್ಟೇ ಸುಂದರವಾಗಿ ತೋರುತ್ತಿರಲಿ ಅಥವಾ ನಿರೂಪಕನಿಗೆ ಅದರ ಬಗ್ಗೆ ಭಾವಪಕ್ಷಪಾತವಿರಲಿ, ಹೊಸ ವ್ಯವಸ್ಥೆ ಎಷ್ಟೇ ಭಯಾನಕವಾಗಿ ಕಾಣಿಸುತ್ತಿರಲಿ ಅಥವಾ ಅದರ ಬಗ್ಗೆ ವಿರೋಧವಿರಲಿ ಚಲನೆ ಅನಿವಾರ್ಯವೆಂಬ ಸತ್ಯವನ್ನು ಒಂದು ನಿರ್ಣಾಯಕ ಐತಿಹಾಸಿಕ ಸಂದರ್ಭದ ಹಿನ್ನಲೆಯಲ್ಲಿ ಕಾದಂಬರಿ ಧ್ವನಿಸುತ್ತದೆ. ಆದ್ದರಿಂದಲೇ ನಿರೂಪಕ ಇಲ್ಲೀಗೆ ನಮ್ಮ ಕತಿ ಸಂಪೂರ್ಣವಾಯ್ತು ಎಂದು ಸಾಂಪ್ರದಾಯಿಕ ಮುಕ್ತಾಯ ಹಾಡಿದರೂ ಅದು ಪರ್ಯಾಯವಾಗಿ ಹೊಸ ಕಥೆಯ, ಅಂದರೆ ಹೊಸ ಸಮಾಜದ ಆರಂಭವನ್ನಷ್ಟೇ ಸೂಚಿಸುತ್ತದೆ.

೬

ಕಾದಂಬರಿಯಲ್ಲಿ ಕೆಲವು ಸಮಸ್ಯೆಗಳಿವೆ, ಮೇಲುನೋಟಕ್ಕೇ ಎದ್ದುಕಾಣುವ ಸಮಸ್ಯೆ ಎಂದರೆ: ಗೌಡ – ದತ್ತಪ್ಪರು ಪ್ರತಿನಿಧಿಸುವ ವ್ಯವಸ್ಥೆಗೂ ಗುಡಸೀಕರ ಪ್ರತಿನಿಧಿಸುವ ವ್ಯವಸ್ಥೆಗೂ ತಿಕ್ಕಾಟ ಸ್ಪಷ್ಟವಾಗಿಯೇ ಇದೆ. ಆದರೆ ಹಳೆಯ ವ್ಯಸ್ಥೆಯೊಳಗಣ ಸಂಘರ್ಷ, ಹೊಸ ವ್ಯವಸ್ಥೆ ತರಬಹುದಾದ ಇತ್ಯಾತ್ಮಕ ಬದಲಾವಣೆಯ ಸಾಧ್ಯತೆಗಳು ನಿರೂಪಣೆಯಲ್ಲಿ ಗೌಣವಾಗುತ್ತವೆ. ಅಂದರೆ ಹಳತು – ಹೊಸತು ಅವುಗಳ ಎಲ್ಲ ಗುಣಾವಗುಣಗಳ ಸಮೇತ ಸಂಘರ್ಷಕ್ಕೆ ಒಳಗಾಗುವುದಿಲ್ಲ. ಹೊಸದರ ವಿಕೃತಿಯೇ ಹೆಚ್ಚಾಗಿ ವಿಜೃಂಭಿಸುತ್ತದೆ. "ಗೌಡ ದತ್ತಪ್ಪನ ಆಳಿಕೆಯಲ್ಲಿ ಜನ ಅನ್ಯಾಯವಾಯಿತು ಅನ್ನಲಿಲ್ಲ, ಕಾಲ ಬದಲಾಯಿತು ಅನ್ನಲಿಲ್ಲ, ಕಲಿಕಾಲ ಕಾಲಿಟ್ಟಿತು ಅನ್ನಲಿಲ್ಲ, ಹಾಗಿದ್ದರು" ಎಂದು ನಿರೂಪಕ ದಾಖಲಿಸುವಾಗ ಗುಡಸೀಕರನ ಎಲ್ಲ ಚಟುವಟಿಕೆಗಳೂ ಲೇವಡಿಗೆ ಒಳಗಾಗುವಾಗ ಕಾದಂಬರಿಯ ಸಹಾನುಭೂತಿ ಹಳೆಯದರ ಕಡೆಗೆ ವಾಲಿರುವುದು ಸ್ಪಷ್ಟವಾಗುತ್ತದೆ. ದತ್ತಪ್ಪ, ಲಗುಮವ್ವ ಕೆಲವೊಮ್ಮೆ ತಮಾಷೆಗೆ ಒಳಗಾದರೂ ಗೌಡನ ಪಾತ್ರ ಒಂದೇ ಆಯಾಮದ್ದು ಅನ್ನಿಸುತ್ತದೆ. ಕಂಬಾರರ ಬಹಳಷ್ಟು ಕೃತಿಗಳಲ್ಲಿ ಗೌಡ ಕೆಡುಕಿನ ಪ್ರತಿರೂಪದ ಏಕ ಆಯಾಮದ ಪಾತ್ರವಾಗಿ ಮೂಡುವಂತೆ 'ಕರಿಮಾಯಿ'ಯ ಗೌಡ ಒಳಿತಿನ ಪ್ರತಿರೂಪವೆಂಬಂತೆ ಚಿತ್ರಿತವಾಗಿದ್ದಾನೆ. ಗೌಡನ ಮಗ ಶಿವನಿಂಗನ ಪಾತ್ರ ತುಂಬಾ ಅಸ್ಪಷ್ಟವಾಗಿದೆ, ಕಾದಂಬರಿಯಲ್ಲಿ ಅವನ ಪಾತ್ರ ಸ್ಪಷ್ಟವಾಗುವುದಿಲ್ಲ. ಅವನು ಗೌಡನ ಮುಂದಿನ ಪೀಳಿಗೆಯನ್ನು ಸೂಚಿಸುವ ಪಾತ್ರವಾದರೂ ಕಾದಂಬರಿ ದಾಖಲಿಸುವ ಬದಲಾವಣೆಯ ಪ್ರಕ್ರಿಯೆಯಲ್ಲಿ ಅವನಿಗೊಂದು ನಿರ್ಣಾಯಕ ಪಾತ್ರವಿದೆ ಅನ್ನಿಸುವುದಿಲ್ಲ. ಹೀಗಾಗಿ ನಿರೂಪಕನ ನೋಟದಲ್ಲೇ ಒಂದು ಬಗೆಯ ಪ್ರತಿಗಾಮಿತ್ವ ಸೂಚಿತವಾಗುತ್ತದೆ. ಆದರೆ ಕಾದಂಬರಿ ತನ್ನ ನಿರೂಪಕನನ್ನೂ ಮೀರಿ ಬಿಡುತ್ತದೆ. ನಿರೂಪಕ ಬದಲಾವಣೆಯ ಪರ ಇಲ್ಲ ಎನಿಸಿದರೂ, ಬದಲಾವಣೆಯನ್ನು ಕುರಿತ ಅವನ ವ್ಯಾಖ್ಯಾನಗಳು ಪಕ್ಷಪಾತದಿಂದ ಕೂಡಿವೆ ಎನಸಿದರೂ ಬದುಕು ನಿಷ್ಠುರವಾಗಿ ಚಲಿಸುವ ಸತ್ಯವನ್ನು ಕಾದಂಬರಿ ದಾಖಲಿಸಿಬಿಡುತ್ತದೆ. ಹೊಸದನ್ನು ಸ್ವಾಗತಿಸುವಲ್ಲಿ ಅಸಹನೆ, ವಿರೋಧ ಕಂಡುಬಂದರೂ ಅದರ ಆಗಮನದ ಸತ್ಯ ನಿರಾಕೃತವಾಗುದಿಲ್ಲ. ಇಂಥ ಪರಿಸ್ಥಿತಿ 'ಕರಿಮಾಯಿ' ಕಾದಂಬರಿಗೆ ಸಂಬಂಧಿಸಿದ್ದು ಎಂದೇನೂ ಅಲ್ಲ, ಬದಲಾವಣೇಯೇ ಪ್ರಧಾನ ಸತ್ಯಜಿತ್‌ರಾಯ್ ಅವರ ಶ್ರೇಷ್ಠ ಚಲನಚಿತ್ರ ಕೃತಿಗಳಲ್ಲಿ ಒಂದಾದ 'ಜಲಸಾ ಘರ'ದ ಕೇಂದ್ರ ಸಮಸ್ಯೆಯೂ ಇದೇ ಬಗೆಯದೇ. ಅಂದರೆ ನಮ್ಮ ಸಾಹಿತಿ ಕಲಾವಿದರು ಬದಲಾವಣೆಯ ಪ್ರಕ್ರಿಯೆಯನ್ನು ದಾಖಲಿಸುವ ಆದರೆ ಆ ಬದಲಾವಣೆಯ ದಿಕ್ಕುದೆಸೆಗಳ ಬಗ್ಗೆ ಸ್ವತಃ ಇಟ್ಟುಕೊಂಡಿರುವ ಧೋರಣೆ – ಇವುಗಳ ಆಂತರಿಕ ಸಂಘರ್ಷ ಅಂತಿಮವಾಗಿ ಸೃಷ್ಟಿಸುವ ಆಕೃತಿಗಳ ಸ್ವರೂಪ ಸಾಹಿತ್ಯ ವಿಮರ್ಶೆಗೆ

ಕೆಲವೊಂದು ಮಹತ್ವದ ಸವಾಲುಗಳನ್ನು ಒಡ್ಡುತ್ತದೆ. ಈ ಪ್ರಶ್ನೆಗೆ ಮುಖಾಮುಖಿಯಾಗದೆ ಕಲಾಕೃತಿಗಳನ್ನು ಸರಳವಾಗಿ ಪ್ರತಿಗಾಮಿ – ಪ್ರಗತಿಗಾಮಿ ಎಂದು ವಿಂಗಡಿಸುವುದು ಅಷ್ಟೇನೂ ಅಪೇಕ್ಷಣೀಯವಾದ ಕೆಲಸವಲ್ಲ. ಅದು ಸಾಹಿತ್ಯ ವಿಮರ್ಶೆಯನ್ನು ತೀರಾ ಹಗುರ ಮಾಡಿಬಿಡುತ್ತೆ.

೬

ನಾನು 'ಕರಿಮಾಯಿ' ಕಾದಂಬರಿಯನ್ನು ಮೊದಲು ಓದಿದ್ದು ೧೯೭೬ರಲ್ಲಿ. "ಹೊಸ ಮೌಲ್ಯಗಳನ್ನು ಹಳೆಯ ಮೌಲ್ಯಗಳ ಹಿನ್ನೆಲೆಯಲ್ಲಿ ಸಮರ್ಥವಾಗಿ ವಿಶ್ಲೇಷಿಸದೆ, ಇಲ್ಲವೆ ಹೊಸ ಮೌಲ್ಯಗಳನ್ನು ಮುಂದಿಟ್ಟುಕೊಂಡು ಹಳೆಯ ಮೌಲ್ಯಗಳನ್ನು ಪುನರ್ವಿಮರ್ಶಿಸದೆ ಕಂಬಾರರು ಇರುವುದನ್ನೇ ಶ್ರೇಷ್ಠವೆಂದು ಭಾವಿಸುತ್ತ ಪ್ರತಿಗಾಮಿಗಳಾಗಿ ಬಿಡುತ್ತಾರೆ" ಎಂಬುದು ನನ್ನ ಅಂದಿನ ನಿಲುವಾಗಿತ್ತು. ಈಗಲೂ ಈ ನಿಲುವಿನಲ್ಲಿ ಮೂಲಭೂತವಾದ ಬದಲಾವಣೆಯೇನೂ ಆಗಿಲ್ಲ, ಆದರೆ ಕೇವಲ ಇಂಥ ನಿಲುವಿನಿಂದಲೇ ಕೃತಿಯನ್ನು ಪ್ರವೇಶಿಸಿದರೆ ಅದು ಒಂದು ಕಣ್ಣುಪಟ್ಟಿಯಾಗಿ ಕೃತಿಯ ಇನ್ನಿತರ ಮಹತ್ವದ ಸಂಗತಿಗಳು ಗೋಚರಿಸದೇ ಹೋಗಬಹುದು ಎನ್ನಿಸಿತು. ವಿಮರ್ಶೆಯ ಮಾರ್ಗ ಯಾವುದೇ ಇರಲಿ, ಅದು ಒಂದು ಕೃತಿಯಿಂದ ಪಡೆಯಬಹುದಾದಷ್ಟನ್ನೂ ಪಡೆಯಲು ಅಡ್ಡಿಯಾಗಬಾರದು. ಒಂದು ಬಗೆಯ ಓದು ಇಂಥ ಅಡ್ಡಿಗಳನ್ನು ಒಡ್ಡಿದರೆ ಓದಿನ ಕ್ರಮವನ್ನು ಬದಲಾಯಿಸಿಕೊಳ್ಳಬೇಕಾದ್ದು ವಿಮರ್ಶಕನ ಕರ್ತವ್ಯ. ಕಲಾಕೃತಿಯನ್ನು ಒಂದೇ ದೃಷ್ಟಿಕೋನ, ಪ್ರಜ್ಞೆ ಇಲ್ಲವೇ ನೆಲೆಯಿಂದ ನೋಡಿ ಬೆಲೆ ಕಟ್ಟಬೇಕು ಎಂಬ ಹಠವನ್ನು ವಿಮರ್ಶಕ ಬಿಟ್ಟುಕೊಟ್ಟು ಅದರ ಬಹುಮುಖಗಳನ್ನು ಕಾಣುವ ಎಚ್ಚರವನ್ನು ಉಳಿಸಿಕೊಳ್ಳಬೇಕು.

ಕಳೆದ ಹದಿನೈದು ವರ್ಷಗಳಲ್ಲಿ 'ಕರಿಮಾಯಿ' ಕಾದಂಬರಿಯನ್ನು ಮತ್ತೆಮತ್ತೆ ಓದಿದಾಗ, ಕಂಬಾರರ ಸಾಹಿತ್ಯದ ಅಧ್ಯಯನದಲ್ಲಿ ತೊಡಗಿಕೊಂಡಾಗ ವಿಷಯಗಳು ನಾನು ಅಂದು ಭಾವಿಸಿದ್ದಷ್ಟು ಸರಳವಲ್ಲ ಅನ್ನಿಸತೊಡಗಿತು. (ನೋಡಿ: ಹೊಸ ಹೆಜ್ಜೆ ಹೊಸ ಹಾದಿ, ಅಕ್ಷರ ಪ್ರಕಾಶನ, ೧೯೮೧, ಪುಟಗಳು ೮೪ – ೯೦) ಹಾಗಾಗಿ ಈ ಮರು ಓದು.

ಸಾಹಿತ್ಯ ಪರಂಪರೆಯೊಂದರಲ್ಲಿ ಹೊಸ ಕೃತಿಗಳು ಬರುತ್ತಿದ್ದ ಹಾಗೆ ಅವು ಹಳೆಯ ಕೃತಿಗಳ ಹೊಸ ಓದನ್ನು ಒತ್ತಾಯಿಸುತ್ತಿರುತ್ತವೆ. ನವ್ಯ ಕಾವ್ಯಮಯ ಹನ್ನೆರಡನೆಯ ಶತಮಾನದ ವಚನಕಾರರನ್ನು ಹೊಸದಾಗಿ ಬೇರೆ ರೀತಿಯಲ್ಲಿ ಓದಲು ಪ್ರೇರಣೆಗಳನ್ನು ಕೊಟ್ಟಿತು. ತೇಜಸ್ವಿಯವರ 'ಕರ್ವಾಲೋ' ಕುವೆಂಪು ಕಾದಂಬರಿಗಳ ಹೊಸ ಓದಿಗೆ ದಾರಿ ಮಾಡಿಕೊಟ್ಟಿತು. ಹಾಗೆಯೇ ದೇವನೂರ ಮಹಾದೇವ ಅವರ 'ಕುಸುಮ ಬಾಲೆ' ಬಂದ ಮೇಲೆ ಕಂಬಾರರ ಸಾಹಿತ್ಯದ ಪುನರ್ವಿಮರ್ಶೆ, ಮರು ಓದು ಅಗತ್ಯ ಎನ್ನಿಸಿದೆ. ಒಂದು ಜನ ಸಮುದಾಯದ ಸ್ಮೃತಿ, ನಂಬಿಕೆ, ಆಚರಣೆ, ಆಶೋತ್ತರಗಳನ್ನು ಸಾರಾಸಗಟಾಗಿ ಅವೈಜ್ಞಾನಿಕವೆಂದೋ, ಅವೈಚಾರಿಕವೆಂದೋ, ಮೂಢನಂಬಿಕೆಗಳೆಂದೋ ನಿರಾಕರಿಸಿಬಿಡುವುದು ಸುಲಭ. ಆದರೆ ಒಬ್ಬ ಸೃಜನಶೀಲ ಬರಹಗಾರ ಒಂದು ಬಹುಸಂಖ್ಯಾತ ಜನವರ್ಗದ ಸ್ಮೃತಿಗಳಿಗೂ, ನಂಬಿಕೆಗಳಿಗೂ ಎದುರಾದಾಗ ಅವನ ಸೃಜನಶೀಲತೆ, ಕೆಲಸ ಮಾಡುವ ಬಗೆಯನ್ನು ಪರಿಶೀಲಿಸಿಬೇಕಾದ್ದು ಮುಖ್ಯ. 'ಕುಸುಮ ಬಾಲೆ' ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಹುಟ್ಟುಹಾಕಿರುವ ಹೊಸ ವಾಗ್ವಾದಗಳು ಇಂಥ ಕೃತಿಗಳನ್ನು ಕುರಿತ ಹೊಸ ಓದಿಗೆ, ಮರು ಓದಿಗೆ ಒತ್ತಾಯಿಸುತ್ತಿವೆ. ಈ ಹಿನ್ನೆಲೆಯಲ್ಲಿ 'ಕರಿಮಾಯಿ' ಕಾದಂಬರಿಯ ಮರು ಓದು ಅವಶ್ಯಕವಾಗಿದೆ.

**ಟಿ.ಪಿ. ಅಶೋಕ**

# ಒಂದನೆಯ ಸಭೆ

ಬಹುಶಃ ಇದು ನಿಜವೋ ಏನೋ. ಯಾಕೆಂದರೆ ಪಂಚಾಯ್ತಿ ಆಗಿ ಒಂದೆರಡು ತಿಂಗಳಾಗಿರಬೇಕು – ತನ್ನ ಕನಸನ್ನು ನನಸಾಗಿಸುವ, ತನ್ನ ಹಳ್ಳಿಯನ್ನು ಬೆಳಗಾವಿಯಾಗಿಸುವ ಪ್ರಥಮ ಹೆಜ್ಜೆ – ಊರನ್ನು ಸ್ವಚ್ಛವಾಗಿಡುವ ಯೋಚನೆ ಹೊಳೆಯಿತು. ಅದಕ್ಕಾಗಿ ರಾತ್ರಿ ಕರಿಮಾಯಿಯ ಗುಡಿಯಲ್ಲಿ ಒಂದು ಸಭೆ ಕರೆಯಲಾಯಿತು.

ಊರವರು ಬಂದರೆ ಕಂಡದ್ದೇನು? ಸಾಲೆಯ ಟೇಬಲ್ ಇಲ್ಲಿಗೆ ಬಂದಿದೆ. ಅದರ ಹಿಂದೆ ಮಾಸ್ತರ ಕೂರುತ್ತಿದ್ದ ಕುರ್ಚಿಯಿದೆ. ಊರಲ್ಲಿದ್ದುದು ಅದೊಂದೇ ಕುರ್ಚಿ. ಅದರ ಹಿಂದೆ ಗೌಡರ ಮನೆಯ ಕಾಳಿನ ಚೀಲ ಇಡುವ ಗಡಂಚಿಯಿದೆ. ಅದರ ಪಕ್ಕದಲ್ಲಿ ಗುಡಸೀಕರನ ಮನೆಯ ಗಡಂಚಿಯಿದೆ. ಪ್ರಶ್ನೋತ್ತರ ಮಾಸ್ತರ ಟೇಬಲ್ಲಿನ ಮುಂದೆ ನಿಂತು ಬಂದವರನ್ನೆಲ್ಲ "ಬರ್ರಿ, ಬರ್ರಿ" ಎಂದು ಸ್ವಾಗತಿಸುತ್ತಿದ್ದ. ಕೆಲವರು ಹೊಯ್ಕಿಗೆ ಬಂದರೆ ಕೆಲವರು ಕಾಳಜಿಯಿಂದ ಬಂದರು. ಅಂತೂ ದತ್ತಪ್ಪ, ಬಸೆಟ್ಟಿ, ಬಾಳೂ ಪೂಜಾರಿಯಿಂದ ಮೊದಲುಗೊಂಡು ನಿಂಗೂ, ಹಜಾಮರ ಲಗಮನವರೆಗೆ ೫೦ – ೬೦ ಜನ ಬಂದರು. ಅಲ್ಲಿಯರೆಗೆ ನಗಾರಿಖಾನೆ ಯಾ ಪಂಚಾಯ್ತಿ ಆಫೀಸಿನಲ್ಲಿದ್ದ ಗುಡಸೀಕರ ಹಾಗೂ ಅವನ ಮೆಂಬರರು ಸಾಲಾಗಿ ಬಂದು, ಮುಂದಿನ ಕುರ್ಚಿಯಲ್ಲಿ ಗುಡಸೀಕರನೂ ಹಿಂದಿನ ಗಡಂಚಿಗಳ ಮೇಲೆ ಒಂದರ ಮೇಲೆ ಇಬ್ಬಿಬ್ಬರಂತೆ ಮೆಂಬರರೂ ಕೂತರು.

ಕೆಲವರಿಗಾಗಲೇ ಅಸಮಾಧಾನವಾಯ್ತು. ಅದು ಪಾಪ, ಮಾಸ್ತರ ಕೂರೋ ಕುರ್ಚಿ; ಅದರ ಮೇಲೆ ಸ್ವತಃ ಗೌಡ ಕೂತಿರಲಿಲ್ಲ. ಗುಡಸೀಕರ ಅದರ ಮೇಲೆ ಕೂತಿದ್ದು ತಪ್ಪು ಎಂದು ದತ್ತಪ್ಪ ಒಳಗೊಳಗೇ ಅಸಮಾಧಾನಗೊಂಡ. ಅಷ್ಟರಲ್ಲಿ ಗುಡಸೀಕರ ಎದ್ದು "ಈಗ ಪ್ರಾರ್ಥನೆ: ಶಿವಾಪುರ ಕನ್ನಡ ಗಂಡುಮಕ್ಕಳ ಶಾಲೆಯ ಮಕ್ಕಳಿಂದ" ಎಂದು ಹೇಳಿ ಕೂತ. ನಾಕೈದು ಅರಿಯದ ಹಸುಳೆಗಳು ಬಂದು ಸಾಲಾಗಿ ಕೂತವರತ್ತ ಮುಖ ಮಾಡಿ ನಿಂತು, ಕೈ ಮುಗಿದು –

ಜಯವೆಂದು ಬೆಳಗೂವೆ ಗುಡಸೀಕರ ರೀಗೆ
ಗುಡಸೀಕರ ರೀಗೆ ಜನನಾಯ ಕರಿಗೆ
ಜಯವೆಂದು ಬೆಳಗುವೆ ||

ಎಂದು ಬೆದರಿದ ಅಪಸ್ವರದಲ್ಲಿ ಕಿರುಚಿದವು. ಆಮೇಲೆ ಸ್ವಾಗತ ಭಾಷಣ ಪ್ರಶ್ನೋತ್ತರ ಮಾಸ್ತರರಿಂದ, ಅದು ಮುಗಿದೊಡನೆ ಮಾಸ್ತರ ಹೋಗಿ ಒಂದು ದೊಡ್ಡ ಮಾಲೆ ತಂದು ಗುಡಸೀಕರನಿಗೆ ಹಾಕಿದ. ಅದಾದ ಮೇಲೆ ಸ್ವಲ್ಪ ಸಣ್ಣಸಣ್ಣ ಮಾಲೆಗಳನ್ನು ತಂದು ನಾಲ್ಕು ಜನ ಮೆಂಬರರಿಗೆ ಹಾಕಿದ. ಗುಡಸೀಕರನೇನೋ ಬೆಳಗಾವಿಯ ಸಭೆಗಳನ್ನು ನೋಡಿದವನಾದ್ದರಿಂದ ಮಾಲೆ ತೆಗೆದು ಮೇಜಿನ ಮೇಲಿಟ್ಟ. ಮೆಂಬರರು ಮಾತ್ರ ಹಾಕಿಕೊಂಡೇ ಕೂತರು, ಸಾಲಾಗಿ.

ಜನ ತಬ್ಬಿಬ್ಬಾದರು. ತಾವೇನು ನೋಡುತ್ತಿದ್ದೇವೆ, ಎಲ್ಲಿದ್ದೇವೆಂಬುದೇ ಕೆಲವರಿಗೆ ಮರೆತುಹೋಯ್ತು. ದತ್ತಪ್ಪನಿಗೆ ಹಿಡಿಸಲಾಗದ ನಗು. ಎಲ್ಲರಿಗೂ ಮಾಲೆ ಹಾಕಿ ಪ್ರಶ್ನೋತ್ತರ ಮಾಸ್ತರ ಕೆಳಗೆ ಕುಳಿತಿದ್ದು ನಿಂಗೂನಿಗೆ ಸರಿಬರಲಿಲ್ಲ. ಅದನ್ನು ಜೋರಿನಿಂದ ಹೇಳಿಯೂ ಬಿಟ್ಟ.

"ಮಾಸ್ತರ, ಪಾಪ ಎಲ್ಲರಿಗೂ ಮಾಲೀ ಹಾಕಿ ನಿಮಗs ಇಲ್ಲಂದರ ಹೆಂಗರೀs? ನೀವೂ ಒಂದು ಹಾಕ್ಕೊಂಡ ಗಡಂಚೀ ಮ್ಯಾಲ ಕುಂದರಬಾರದ?" ಎಂದ.

ದತ್ತಪ್ಪ ನಗುತ್ತ,

“ಛೇ ಛೇ ಅದ್ಹೆಂಗಾದೀತಪಾ? ಅವರು ಪಂಚಾಯ್ತಿ ಮೆಂಬರರು” ಅಂದ. ನಿಂಗೂನಿಗೆ ಸಮಾಧಾನವಾಗಲಿಲ್ಲ.

“ಆದರೇನಾತರೀ? ಆ ಕುರ್ಚಿ ಮಾಸ್ತರನ ಸಾಲ್ಯಾಗಿಂದಲ್ಲ?” ಎಂದ. ಇದು ಹೀಗೇ ಮುಂದುವರಿದರೆ ಕಷ್ಟವೆಂದು ಗುಡಸೀಕರ ಭಾಷಣಕ್ಕೆ ಎದ್ದುನಿಂತು ಇರರ್ಗಳವಾಗಿ, ಓತಪ್ರೋತವಾಗಿ ಒಂದೂವರೆ ತಾಸು ಮಾತಾಡಿದ. ಹಜಾಮರ ಲಗಮ ನಡುವೇ ತಡೆಯದಿದ್ದರೆ ಭಾಷಣ ಇನ್ನೂ ಎಷ್ಟು ಹೊತ್ತು ಸಾಗುತ್ತಿತ್ತೊ? ಈವರೆಗಿನ ಭಾಷಣದ ಸಾರಾಂಶ ಇಷ್ಟು:

“ಇಂಡಿಯಾ ಹಳ್ಳಿಗಳ ದೇಶ. ಈ ದೇಶದಲ್ಲಿ ಏಳು ಲಕ್ಷ ಹಳ್ಳಿಗಳಿವೆ. ಪಟ್ಟಣ, ಶಹರಗಳು ಬೆರಳೆಣಿಕೆಯಷ್ಟು ಮಾತ್ರ. ಬ್ರಿಟೀಷರು ನಮ್ಮ ದೇಶವನ್ನು ಆಳಿ ಹೊಲಗೆಡಿಸುತ್ತಿದ್ದಾರೆ. ಅವರು ನೀಚರು. ಪರಕೀಯರು, ಅವರನ್ನು ಹೊಡೆದೋಡಿಸಲೇಬೇಕು. ಪ್ರತಿಯೊಂದು ಹಳ್ಳಿಯೂ ಶಹರವಾಗಬೇಕು. ಅಂದರೇ ಈ ದೇಶದ ಉದ್ಧಾರ ಸಾಧ್ಯ. ಶಹರವಾಗಬೇಕಾದರೆ ಏನು ಮಾಡಬೇಕು? ಹಳ್ಳಿಯನ್ನು ಸ್ವಚ್ಛವಾಗಿಡಬೇಕು. ಬೆಳಗಾವಿಯನ್ನು ನೋಡಿರಿ. ಅಲ್ಲಿನ ರಸ್ತೆಯ ಮೇಲೆ ತುಪ್ಪ ಬಿದ್ದರೂ ಬಳಿದುಕೊಂಡು ತಿನ್ನಬೇಕು. ಅಷ್ಟು ಸ್ವಚ್ಛ….

ಹಜಾಮರ ಲಗಮ ಭಾಷಣಕ್ಕೆ ಅಡ್ಡಿಮಾಡಿದ್ದೇ ಈ ಭಾಗದಲ್ಲಿ. ಅವನಿಗಾಗಲೇ ಸಭಿಕರು ಸುಮ್ಮನೆ ಕೂತಿದ್ದಕ್ಕೆ ಆಶ್ಚರ್ಯವಾಗಿತ್ತು.
ತಡೆಯದೇ ಎದ್ದುನಿಂತು…

“ಅಲ್ಲಪಾ ಗುಡಸೀಕರ, ಬೆಳಗಾಂವಿ ಮಂದಿಗೇನೂ ಸಾಕಷ್ಟು ತುಪ್ಪ ಸಿಗತ್ಯೆತಿ, ರಸ್ತಾದ ಮ್ಯಾಲ ಚೆಲ್ಲಿ ನೆಕ್ಕಿ ತಿಂತಿದ್ದಾರು. ನಮಗೆ ತಿನ್ನಾಕs ತುಪ್ಪಿಲ್ಲ. ಇನ್ನ ರಸ್ತಾದ ಮ್ಯಾಲ ಯಕ ಚೆಲ್ಲೋಣು?” ಅಂದ. ಇಂಥ ಅಜ್ಞಾನಕ್ಕೆ ಏನು ಹೇಳಬೇಕು?

“ಅಲ್ಲಲೇ, ಬೇಳಗಾಂವ್ಯಾಗಿನ ರಸ್ತಾ ಎಷ್ಟು ಹಸನ ಇರ್ತಾವಂತ ಹೇಳಾಕ ಹೇಳಿದೆ” ಎಂದ ಗುಡಸೀಕರ.

“ಹೌಂದಪಾ ತುಪ್ಪಾ ಚೆಲ್ಲಿ ಚೆಲ್ಲಿ ನೆಕ್ಕತಾರ: ಅದಕ್ಕs ರಸ್ತಾ ಹಸನ ಇರ್ತಾವ. ನಾವ್ಯಾಕ ಹಾಂಗ ಮಾಡಬೇಕು?”

“ಏ ಲಗಮಾ, ಬಾಯಿ ಮುಚ್ಚಿಕೊಂಡ ಕುಂದರಲೇ?”

– ಎಂದು ಹೇಳಿ ಮತ್ತೆ ಭಾಷಣ ಸುರುಮಾಡಿದ. ಮುಂದೆ ಏನೇನು ಹೇಳಿದನೋ! ದತ್ತಪ್ಪ ಒಳಗೊಳಗೇ ನಗುತ್ತಿದ್ದ. ಆದರೆ ಉಳಿದ ಮಂದಿ ಲಗಮ ಹೇಳಿದ್ದೇ ಬರೋಬ್ಬರಿ ಎಂದರು. ರಸ್ತೆಯ ಮೇಲೆ ತುಪ್ಪ ಚೆಲ್ಲಿ ನೆಕ್ಕುವದೆಂದರೇನು? ಯಾವುದೋ ಒಂದು ಜಾತಿಯವರು ಹಾಗೆ ಮಾಡುತ್ತಿದ್ದಾರು. ಅದು ದೇವರ ಹರಕೆ ಇದ್ದೀತು. ಕುಲದ ಪದ್ಧತಿ ಇದ್ದೀತು. ಅದು ನಮ್ಮ ಕುಲದ ಪದ್ಧತಿಯಲ್ಲಿಲ್ಲ. ಎಂದಮೇಲೆ ನಾವ್ಯಾಕೆ ನೆಕ್ಕಬೇಕು? ಇವರ ವಿಚಾರಧಾರೆ ನಿಂತದ್ದು ಗುಡಸೀಕರನ “ನಮ್ರ ಸೂಚನೆ” ಕೇಳಿ ಬಂದಾಗ:

“ಈ ಊರನ್ನ ನಾವು ಬೆಳಗಾವಿಯಂತೆ ಸ್ವಚ್ಛವಾಗಿಡಬೇಕು. ಆದ್ದರಿಂದ ನಾವೀಗ ದಿನಾಲು ಊರು ಗುಡಿಸುವವರನ್ನು ನೇಮಿಸಿಕೊಳ್ಳುತ್ತೇವೆ. ಅದಕ್ಕಾಗಿ ಮನೆಗೆ ಒಂದೊಂದು ರೂಪಾಯಿ ತೆರಿಗೆ ಕೊಡಬೇಕು.

ತೆರಿಗೆ ಮಾತು ಬಂತೋ ಇಲ್ಲವೋ? – ಒಬ್ಬೊಬ್ಬರೇ ಎದ್ದು ಕುಂಡಿ ಜಾಡಿಸಿಕೊಳ್ಳುತ್ತ ಹೊರಟರು. ಗುಡಸೀಕರ ಒಬ್ಬಿಬ್ಬರ ಹೆಸರು ಹಿಡಿದು ಕೂಗಿ ಕೂರಿಸಲೆತ್ನಿಸಿದ. “ಇಕ್ಕಾ ಬರ್ತೀನಿ” ಎಂದು ಹೇಳುತ್ತ ಹೊರಟು. ಇದ್ದವರನ್ನಾದರೂ ಕೂರಿಸಬೇಕಾದರೆ ದತ್ತಪ್ಪ ಏಳಬೇಕಾಯಿತು.

“ಅಲ್ಲಪಾ ಗುಡಸೀಕರ, ಮನೀಗೊಂದೊಂದ ರೂಪಾಯಿ ಕೊಡೋ ಬದಲು, ಎಲ್ಲಾರೂ ತಮ್ಮತಮ್ಮ ಮನೀ ಅಂಗಳಾ ತಪ್ಪದ
ಗುಡಿಸಿಕೊಂಡರೆ ಹೆಂಗ?”

– ಎಂದ. ಕೂತವರೆಲ್ಲ, “ಹೌದೆಂಬೋ ಮಾತಿದು” ಎಂದು ಕೂಡಲೇ ಮೆಚ್ಚುಗೆ ಸೂಚಿಸಿದರು. ಗುಡಸೀಕರನಿಗೆ ಅವಮಾನವಾಯ್ತು.

“ಅಲ್ಲರೀ ಪಂಚಾಯ್ತಿ ಆಫೀಸಂದರ ಅದಕ್ಕೊಬ್ಬ ಸಿಪಾಯಿ ಬೇಕು. ವಾರಕ್ಕೆರಡು ಬಾರಿ ಮೀಟಿಂಗ್ ಇರ್ತಾವ. ಅದರ ಲೆಕ್ಕಪತ್ರ ಬರ್ಯಾಕ ಒಬ್ಬ ಕಾರಕೂನ ಬೇಕು ಅದೆಲ್ಲಾ ಖರ್ಚು ಎಲ್ಲಿಂದ ತರಬೇಕು?” – ಎಂದ. ಜನ ಹುಚ್ಚರೋ? “ಓಹೋ ಇವರು ದಿನಾಲೂ ಮೀಟಿಂಗ್ (ಇಸ್ಪೀಟಾಟ) ಮಾಡ್ತಾರಲ್ಲಾ; ಆ ಲೆಕ್ಕ ಬರಕೊಳ್ಳಾಕ ಒಬ್ಬ ಕಾರಕೂನ, ಚಾ ಮಾಡಿಕೊಡಾಕ ಒಬ್ಬ ಸಿಪಾಯಿ ಬೇಕಂತ. ಹೋ ಹೊ ಹೊ” ಎನ್ನುತ್ತ ಉಳಿದವರೂ ಹೋಗಿಬಿಟ್ಟರು.

ಸಭಿಕರ ಪೈಕಿ ಈಗ ಉಳಿದವರೆಂದರೆ ಪ್ರಾರ್ಥನಾ ಪದ್ಯ ಹೇಳಿದ ಹುಡುಗರು; ಪಾಪ. ಎದ್ದುಹೋದರೆ ಮಾಸ್ತರ ಹೊಡೆಯುತ್ತಾನೆಂದು ಅವು ಎರಡು ಘಂಟೆಯಿಂದ ಕೈ ಕಟ್ಟಿಕೊಂಡು ಹೆದರಿ ಕಣ್ಣು ಕಿಸಿದುಕೊಂಡೇ ಕೂತಿದ್ದವು. ಇನ್ನೊಬ್ಬ ಪ್ರಶ್ನೋತ್ತರ ಮಾಸ್ತರ. ಗುಡಸೀಕರನಿಗೆ ಅವಮಾನವಾಗಿರಬಹುದು. ಆದರೆ ಹಿಂದಿನ ಸಾಲಿನಲ್ಲಿ ಮಾಲೆ ಹಾಕಿಕೊಂಡು ಕೂತ ಕಳ್ಳ ಸಿದ್ಧರಾಮನಿಗೆ ಮಾತ್ರ ನಿರಾಸೆಯಾಯಿತು. ಯಾಕೆಂದರೆ ಅವನೇ ಕೊನೆಗೆ ವಂದನಾರ್ಪಣೆ ಮಾಡಬೇಕಾದ್ದು. ಮಾಸ್ತರರಿಂದ ಬರಸಿಕೊಂಡು ಈಗ ೧೫ ದಿನಗಳಿಂದ ಬಾಯಿಪಾಠ ಮಾಡಿದ್ದ. ಅದು ಹತ್ತು ಪುಟದಷ್ಟಿತ್ತು. ಮೊದಲಿನ ಐದು ಪುಟಗಳಲ್ಲಿ ಗುಡಸೀಕರನ ವರ್ಣನೆಯೂ, ಆರನೇ ಪುಟದಲ್ಲಿ “ನಮ್ಮ ಜನನಾಯಕನಾದ ಗುಡಸೀಕರ ಸಾಹೇಬರಿಗೆ ಅಪಾರ ಬೆಂಬಲ ಸೂಚಿಸಿದ್ದಕ್ಕೆ ಜನಗಳಿಗೆ ವಂದನಾರ್ಪಣೆಯೂ” ಇತ್ತು.

## ಎರಡನೆಯ ಸಭೆ

ಪಂಚಾಯ್ತಿ ಆಗಿ ಆರು ತಿಂಗಳಾಗಿತ್ತು ಅಥವಾ ಅಂದಾಜು ಅದರ ಎಡಬಲ ಇದ್ದೀತು. ಆಗೊಂದು ಘಟನೆ ನಡೆಯಿತು. ಗುಡಸೀಕರನಿಗೆ ಗೌಡನ ಬಗ್ಗೆಯೂ ಅಸಮಾಧಾನವಾಯ್ತು.

ಬೆಳಗಾವಿಯಿಂದ ಕ| ಗಂ| ಸಾಲೆಗೆ ಇನ್‌ಸ್ಪೆಕ್ಟರೊಬ್ಬರು ಬಂದಿದ್ದರು, ರಾತ್ರಿ ಸಾಲೆ ಸುರು ಮಾಡಲಿಕ್ಕೆ. ಬಂದವರು ಗುಡಸೀಕರನ ಮನೆಯಲ್ಲೇ ಇಳಿದುಕೊಂಡರು. ಹಳ್ಳಿಯ ಹುಂಬರಿಗೆ ಈ ಮೂಲಕ ಒಂದಿಷ್ಟು ಒಳ್ಳೆಯದಾಗುತ್ತಲ್ಲಾ, ಅದೂ ತನ್ನಿಂದ – ಎಂದು ಗುಡಸೀಕರನೂ ಹಿರಿಹಿರಿ ಹಿಗ್ಗಿಬಿಟ್ಟ. ಆ ದಿನ ರಾತ್ರಿ ಸಭೆ ಕರೆಯಲಾಯಿತು. ಈ ಸಭೆಗೆ ಗೌಡನೂ ಬಂದಿದ್ದ.

ಈ ಸಲದ ಸಭೆ ಕ| ಗಂ| ಸಾಲೆಯಲ್ಲಿತ್ತು. ಟೇಬಲ್ಲಿನ ಹಿಂದೆ ಒಂದು ಕುರ್ಚಿ, ಒಂದು ಗಡಂಚಿ ಮಾತ್ರವಿತ್ತು. ಗೌಡ ದತ್ತಪ್ಪ ಹಿರಿಯರು ಹೋಗಿ ಕೆಳಗೆ ಹಾಸಿದ ಗುಡಾರದ ಮೇಲೆ ಕೂತರು. ಊರಿಗಿದ್ದದ್ದು ಇದೊಂದೇ ಕುರ್ಚಿ ಎಂಬ ವಿಚಾರ ನಿಮಗೆ ಗೊತ್ತಿದೆ. ಜನ ಸೇರಿಯಾದ ಮೇಲೆ ಗುಡಸೀಕರ ಹಾಗೂ ಇನ್‌ಸ್ಪೆಕ್ಟರ್ ಬಂದರು. ಗುಡಸೀಕರ ಮುಂದೆ ಬಂದು ಕುರ್ಚಿಯ ಮೇಲೆ ಕೂತ. ಇನ್‌ಸ್ಪೆಕ್ಟರರಿಗೆ ಗಡಂಚಿ ಬಿಟ್ಟ. ಈ ಹೊಸ ಬಗೆಯ ಪೀಠ ನೋಡಿ, ಅದರ ಆದ್ರವಾದ ಮೂರೇ ಕಾಲು ನೋಡಿ ಇನ್‌ಸ್ಪೆಕ್ಟರರಿಗೆ ಗಾಬರಿಯಯಿತೋ ಏನೋ, ಅದನ್ನು ಬಿಟ್ಟು ಅವರು ಜನಗಳೊಡನೆ ಕೆಳಗೆ ಕೂರಲು ಬಂದುಬಿಟ್ಟರು. ಇದನ್ನು ನೋಡಿ ಗೌಡರಿಗೆ ಸಹಿಸುವದಾಗಲಿಲ್ಲ. ಗುಡಸೀಕರನಿಗೆ “ಏ ತಮ್ಮಾ ಅವರೆಷ್ಟಂದರೂ ನಮ್ಮೂರಿಗೆ ಬಂದವರು. ಅವರು ಕುರ್ಚಿ ಮ್ಯಾಲೆ ಕುಂದರಲಿ ನೀ ಬೇಕಾದರ ಗಡಂಚಿಮ್ಯಾಲೆ ಕುಂದರು” ಎಂದು. ಈ ಮಾತು ಕೇಳಿ ಗುಡಸೀಕರ ಸುಟ್ಟು ಹುರುಪಳಿಸಿದ ಅರಳಿನಂತಾದ. ಬಂದವರ ಮುಂದೆ ಈ ರೀತಿ ಅವಮಾನವೇ? ತಾನು ಕಲಿತದ್ದೆಷ್ಟು? ಈ ಇನ್‌ಸ್ಪೆಕ್ಟರ್ ಕಲಿತದ್ದೆಷ್ಟು? ಈ ಹುಂಬರಿಗೆ ಇದೆಲ್ಲ ತಿಳಿಯಬಾರದೆ? ಎಲ್ಲಾ ಒಂದೇ ಊರಿನವರೆಂದ ಮೇಲೆ ತಮ್ಮವನನ್ನು ಮೇಲೆತ್ತಬೇಕೊ? ಹೀಗೆ ಅವಮಾನಿಸಿ ಮೇಲೆ ಹೋಗುವವನನ್ನು ಕೆಳಕ್ಕೆ ತಳ್ಳಬೇಕೊ? ಏನೇ ಬುದ್ಧಿ, ರೀತಿ ಹೇಳಲಿ, ಬಂದವನ ಮುಂದೆ ಹೀಗೆ ಹೇಳುವದೇ? ಹೀಗೆ ಅಲೋಚನೆ ಮಾಡಿದಷ್ಟೂ ಕೋಪ ಬಂತು. ಕೋಪ ಮಾಡುತ್ತ ಕೂರುವ ಸಮಯವಲ್ಲ. ಕೆಳಗೆ ಕುಳಿತ ಇನ್‌ಸ್ಪೆಕ್ಟರರಿಗೆ “ಬರ್ರಿಬರ್ರಿ ಮ್ಯಾಲ ಬರ್ರಿ” ಎಂದು ಕೂತಲ್ಲಿಂದಲೇ ಹೇಳುತ್ತ ಕೂತ, ತಾನು ಗೌಡನ ಮಾತಿಗೆ ಸೊಪ್ಪು ಹಾಕದವನಂತೆ.

ಜನಗಳಿಗಾದರೆ ಗೌಡನ ಮಾತು ಸರಿ ಅನ್ನಿಸಿತು. ಊರಿಗೆ ಬಂದವರೆಂದ ಮೇಲೆ ಎಲ್ಲರೂ ಗೌರವ ಕೊಡಬೇಕಾದ್ದೇ. ನಾಳೆಯಿಂದ ಕೂರಬಹುದಲ್ಲ? ಕುರ್ಚಿಯೆನು ಓಡಿ ಹೋಗುತ್ತದೆಯೇ? ಅಥವಾ ಕೂತವನೇನು ತನ್ನೊಂದಿಗೆ ಕುರ್ಚಿ ಒಯ್ಯುತ್ತಾನೆಯೇ? ಅದೂ ಅಲ್ಲದೆ ಬಂದವರಿಗೆ ಪಾಪ, ಆಗಲೇ ಗುಡಸೀಕರನ ಅಪ್ಪನಷ್ಟು ವಯಸ್ಸಾಗಿದೆ. ವಯಸ್ಸಿಗಾದರೂ ಕಿಮ್ಮತ್ತು ಕೊಡಬೇಕಲ್ಲ? ಅಷ್ಟರಲ್ಲಿ ದತ್ತಪ್ಪ ಎದ್ದು ನೇರ ಹೋಗಿ ಇನ್ಸ್‌ಪೆಕ್ಟರ್ ಬಗಲಲ್ಲಿ ಕೈ ಹಾಕಿ "ಬರ್ರಿ ಸಾಹೇಬರ, ನೀವು ಇಲ್ಲಿ ಕೂತರ ಹೆಂಗ? ಗುಡಸೀಕರ ಎಷ್ಟಂದರೂ ನಮ್ಮ ಹುಡುಗ ಬರ್ರಿ" ಎಂದು ಎಬ್ಬಿಸಿ ಟೇಬಲಿನತ್ತ ಕರೆದೊಯ್ದ. ಈಗ ಗುಡಸೀಕರ ಎದ್ದು ಗಡಂಚಿಯ ಮೇಲೆ ಕೂರಲೇ ಬೇಕಾಯಿತು.

ಯಥಾಪ್ರಕಾರ ಪ್ರಶ್ನೋತ್ತರ ಮಾಸ್ತರರನ – ಇವನಿಗೆ ಪ್ರಶ್ನೋತ್ರರ ಮಾಸ್ತರನೆಂದು ಹೆಸರು ಹ್ಯಾಗೆ ಬಂತೆಂಬುದನ್ನು ಆಮೇಲೆ ಸಂದರ್ಭಾನುಸಾರ ಹೇಳೋಣ – ಸ್ವಾಗತ ಭಾಷಣವಾದ ಮೇಲೆ ಅಧ್ಯಕ್ಷರ ಅಂದರೆ ಗುಡಸೀಕರನ ಅಪ್ಪಣೆಮೇರೆಗೆ ಇನ್ಸ್‌ಪೆಕ್ಟರ್‌ರು ಅನಕ್ಷರಸ್ಥ ರೈತರಿಗೆ ರಾತ್ರಿ ಸಾಲೆ ಕಲಿಸುವ ಸರ್ಕಾರಿ ಯೋಜನೆಯ ಬಗ್ಗೆ ಮಾತಾಡಿದರು. ಇದಕ್ಕೆ ನೀವೆಲ್ಲ ಮುಂದಾಗಬೇಕೆಂದರು. ಗುಡಸೀಕರನಂಥ ಮೇಧಾವಿಗಳು ನೇತಾರರಾಗಿರುವ ಈ ಊರು ಬೇರೆ ಊರುಗಳಿಗಿಂತ ಹಿಂದೆ ಬೀಳಬಾರದು ಎಂದರು. ಇಂದಿನಿಂದಲೇ ಇಲ್ಲೇ ನಿಮ್ಮ ಹೆಸರು ದಾಖಲು ಮಾಡಿಕೊಳ್ಳುತ್ತೇನೆ. "ಲೋ ಮುದುಕಪ್ಪಾ, ನಿನ್ನ ಹೆಸರೇನು, ಹೇಳು" ಎಂದು ಗೌಡನನ್ನೇ ಕೇಳಿಬಿಟ್ಟರು.

ಕೂತ ಮಂದಿಗೇನು ಗುಡಸೀಕರನಿಗೂ ಕಸಿವಿಸಿಯಾಯ್ತು. ಸುಮ್ಮನೇ ಕೂತರೆ ಗದ್ದಲವಾಗುತ್ತಿತ್ತೋ ಏನೊ. ಗೌಡ ಚೌಕಾಶಿ ಮಾಡದೇ "ಪರಗೌಡ" ಎಂದುಬಿಟ್ಟ. ಇದರಿಂದ ಇನ್ಸ್‌ಪೆಕ್ಟರರಿಗೆ ಭಾರೀ ಸ್ಫೂರ್ತಿ ಬಂತು "ಏ ಅಜ್ಜಾ ನಿನ್ನ ಹೆಸರ್ಹೇಳು" ಎಂದು ದತ್ತಪ್ಪನನ್ನು ಕೇಳಿದ. ದತ್ತಪ್ಪ ಸುಮ್ಮನೇ ತನ್ನ ಹೆಸರು ಹೇಳಿದ. ಇಬ್ಬರೂ ಓದುಬರಹ ಬಲ್ಲವರೇ ಆದರೂ ಹೆಸರು ಕೊಡುವುದೆಂದರೇ? "ಅವರಿಗೆ ಓದಬರ್ಯಾಕೆ ಬರತೈತಿರಿ" ಎಂದು ಗುಡಸೀಕರ ಹೇಳಿದ. ಇನ್ಸ್‌ಪೆಕ್ಟರಿಗಾಗಲೆ ಅನುಮಾನ ಬಂತು. ಕೂಡಲೇ ಗುಡಸೀಕರನ ಕೈಗೆ ಪೆನ್ನುಕೊಟ್ಟು "ನೀವs ಬರದು ಬಿಡ್ರಿ" ಎಂದ. ಗುಡಸೀಕರ ಅಲ್ಲಿ ಕೂಡಿದ ಅನೇಕರ ಹೆಸರು ಬರೆದು ಅಧ್ಯಕ್ಷ ಭಾಷಣಕ್ಕೆ ಎದ್ದ.

"ಇಂಡಿಯಾ ದೇಶ, ಹಳ್ಳಿಗಳ ದೇಶ"ದಿಂದ ಸುರುವಾಗಿ ಬೆಳಗಾವಿಗೆ ಬಂತು ಈ ಸಲ ತುಪ್ಪದ ಉದಾಹರಣೆ ಮಾತ್ರ ಬರಲಿಲ್ಲ. ಒಟ್ಟು ಸಭೆಯ ಕಾರ್ಯಕಲಾಪದಿಂದ ಗೌಡನಿಗೆ ಅಸಮಾಧಾನವೇನೂ ಆಗಲಿಲ್ಲ. ಆದರೆ ಗುಡಸೀಕರನ ಮನಸ್ಸಿನಲ್ಲಿ ಅದು ಗಟ್ಟಿಗೊಂಡು ಕೂತುಬಿಟ್ಟಿತು. ಕೊನೆಯ ವಂದನಾರ್ಪಣೆ ಮಾಸ್ತರನೇ ಮಾಡಿದ. ಅದರಲ್ಲಿ ಗುಡಸೀಕರನ ಬಗ್ಗೆ ಹೇಳುತ್ತ "ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ" ಇತ್ಯಾದಿ ಹೇಳಿ ಹಳ್ಳಿಯ ಉದ್ಧಾರಕ್ಕೆ ಬಂದ ಅವತಾರ ಪುರಷನೇ ಗುಡಸೀಕರ ಎಂದೂ ಹೇಳಿಬಿಟ್ಟ. ಈ ಸಭೆಗಳಿಂದಾದ ಅಸಮಾಧಾನ ನಿಂಗೂನ ಕೇಸಿನಲ್ಲಿ ಸ್ಫೋಟಗೊಂಡಿತು.

## ಕರಿಮಾಯಿಯ ಆಣೆಗೂ ಸುಳ್ಳು ಬಿದ್ದ

ಆ ದಿನವೇ ಅಂಗೀಯೆಲ್ಯಾನನ್ನು ಕರೆಸಿ ಗೌಡ ಗದರಿಕೊಂಡ. ಇನ್ನು ಮೇಲೆ ಭಿರಂಡಿ ಕುಡಿಯಬಾರದೆಂದು ಕರಿಮಾಯಿ ಭಂಡಾರ ಮುಟ್ಟಿಸಿ ಆಣೆ ಮಾಡಿಸಿದ. ಆದರೆ ಅಂಗೀಯೆಲ್ಯಾನಿಗೆ ನಾಯೆಲ್ಯಾ ಎಂದು ಹೆಸರಿಲ್ಲವೆ? ನಾಯಿ ಬಾಲದಂತೆ ಮತ್ತೆ ವಂಕಾದ. ಕರಿಮಾಯಿ ಆಣೆಗೂ ಸುಳ್ಳು ಬಿದ್ದ. ಅದು ಹೀಗಾಯಿತು:

ಗುಡಸೀಕರ ನಾಯೆಲ್ಯಾನಿಗೊಂದು ಕುರಿ ಕೊಟ್ಟನಲ್ಲ, ಹಳೇ ಜನ ಏನಾದರೂ ಅಂದುಕೊಳ್ಳಲಿ, ಚತುಷ್ಟಯರ ಕಣ್ಣಲ್ಲಿ ಮಾತ್ರ ಬಹಳ ದೊಡ್ಡ ಕುಳವಾದ. 'ಎಂಥಾ ದಿಲ್‌ದಾರ್ ಆಸಾಮಿ,' ಎಂದುಕೊಂಡರು. ನಾಯೆಲ್ಯಾನ ಬಗ್ಗೆ ಗುಡಸೀಕರನಿಗೆ ನಿಜವಾಗಿ ಅನುಕಂಪ ಮೂಡಿತು. ಹೇಗೂ ದಂಡದ ಕುರಿಹಬ್ಬ ಮಾಡುತ್ತಾರಲ್ಲಾ. ಆ ದಿನ ಅವನಿಗೆ ನೀರಿನ ಬದಲು ನಿಜವಾದ ಬ್ರಾಂದಿ ಕೊಡಬೇಕೆಂದು ಅಂತಃಕರಣ ಪೂರ್ವಕ ಅಂದುಕೊಂಡ.

ಆದರೆ ನಾಯೆಲ್ಯಾನನ್ನು ನೆನೆದು ಎಲ್ಲರೂ ನಕ್ಕರು; ಬರೀ ನೀರು ಕುಡಿದೇ ಮಗ ಎಂಥಾ ಅವತಾರ ಮಾಡಿದನಲ್ಲ – ಎಂದರು. ನಡೆದ ಘಟನೆಯನ್ನು ಕಲ್ಪಿಸಿ ಅಭಿನಯಿಸಿ ನಕ್ಕರು. ಒಂದಕ್ಕೆ ಒಂಬತ್ತು ಒಗ್ಗರಣೆ ಹಾಕಿ ನಕ್ಕರು. ನಿಜ ಹೇಳಬೇಕೆಂದರೆ ಬಿದ್ದು ಬಿದ್ದು ನಕ್ಕರು.

ಹಾಗೆ ಬಿದ್ದು ಬಿದ್ದು ನಗುವುದಕ್ಕೆ ಚತುಷ್ಟಯರಿಗೆ ಅಡ್ಡಖುಶಿಯ ಇನ್ನೊಂದು ಕಾರಣವೂ ಇತ್ತು. ಪ್ರಶ್ನೋತ್ತರ ಮಾಸ್ತರ ತಮಗೆ ಹೆದರುತ್ತಾನೆಂದು ತಿಳಿದೊಡನೆ ಚತುಷ್ಟಯರ ದಿನಚರಿಯಲ್ಲಿ ಒಂದಂಶ ಹೆಚ್ಚಾಗಿ ಸೇರಿಕೊಂಡಿತು. ಮೊನ್ನೆ ಮಾಸ್ತರನನ್ನು ಪೀಡಿಸಿದರಲ್ಲ, ಅದರ ಮಾರನೇ ದಿನ ಕಳ್ಳ ಬೇಕೆಂದೇ ಮಾಸ್ತರನಿಗೆ ಭೇಟಿಯಾಗಿ "ಏನ್ರೀ ಮಾಸ್ತರ" ಅಂದ. ಪಾಪ, ಮಾಸ್ತರ 'ನಮಸ್ಕಾರರೀ ಸಾಹೇಬರ' ಎಂದು ಹಲ್ಲು ಕಿಸಿದ. ತನಗೆ ಹಾಗು ಗುಡಸೀಕರನಿಗೆ ಮಾತ್ರ ಈ ಮಾಸ್ತರ 'ಸಾಹೇಬರ' ಎನ್ನುತ್ತಾನೆಂದು ಕಳ್ಳನ ಖುಶಿ. ಇದ ಕೇಳಿ ಮೆರೆಮಿಂಡ ನೆಟ್ಟಗೆ ಕ|| ಗಂ|| ಸಾಲೆಗೇ ಹೋದ. ಮಾಸ್ತರ ಇವನಿಗೂ ಸಾಹೇಬರ ಎಂದು ಹಲ್ಲು ಗಿಂಜಿದ. ಮೆರೆಮಿಂಡನಿಗೆ ಸಂಕೋಚವಾಗಿರಬೇಕು.

"ಸರಪಂಚ ಸಾಹೇಬರಿಗೆ ನಮಸ್ಕಾರ ಮಾಡಿದಿರಿಲ್ಲೋ?"

– ಅಂದ.

"ಸರಪಂಚರಿಗಿ ನಮಸ್ಕಾರ? ದಿನಾ ಮಾಡತೀನಲ್ಲರಿ"

– ಎಂದ ಮಾಸ್ತರ.

"ಗೌಡ್ರು ಭೇಟಿ ಆಗಿದ್ದರೇನ್ರಿ?"

"ಗೌಡ್ರ ಭೇಟಿ? ಆಗಿದ್ದರಲ್ಲ, ನಮಸ್ಕಾರ ಮಾಡಲಿಲ್ಲರಿ"

ಮೆರೆಮಿಂಡ ಮನಸ್ಸಿನಲ್ಲೇ ಪಾಪ ಅಂದುಕೊಂಡ. ತಪ್ಪು ತಿಳಿದಾರೆಂದೋ ನಮಸ್ಕಾರ ಮಾಡಿಸಿಕೊಳ್ಳಲಿಕ್ಕೇ ಬಂದಾನೆಂದೋ ಭಾವಿಸಬಾರದಲ್ಲ.

"ಹುಡ್ರಿಗೆ ಇತಿಹಾಸ, ಭೂಗೋಳ ಚೆಂದಾಗಿ ಕಲಸ್ರಿ" – ಎಂದು ಉಪದೇಶ ಮಾಡಿ ಹೋದ. ಅನಂತರ ಆ ನಾಲ್ವರಲ್ಲಿ ಯಾರು ಭೇಟಿಯಾದರೂ ಮಾಸ್ತರ ಕೂಡಲೇ "ನಮಸ್ಕಾರರೀ ಸಹೇಬರ, ಗೌಡ್ರಿಗಿ ನಮಸ್ಕಾರ ಮಾಡಲಿಲ್ಲರಿ" – ಎಂದು ಹೇಳುತ್ತಿದ್ದ ಚತುಷ್ಟಯರಿಗೆ ಒಂದು ಕಡೆ ಹೆಮ್ಮೆ; ಯಾಕೆಂದರೆ ಕಲಿಸಿದ ಗುರುವಿನಿಂದಲೇ ನಮಸ್ಕರಿಸಿಕೊಳ್ಳುವ ಭಾಗ್ಯ ಬಂದದ್ದಕ್ಕೆ; ಗುರುವಿನ ತಲೆಮೇಲೆ ಕೈಯಿಟ್ಟ ಶಿಷ್ಯರು ತಾವಾದದ್ದಕ್ಕೆ. ಇನ್ನೊಂದು ಕಡೆ ಕೆಡುಕೆನಿಸುತ್ತಿತ್ತು. ಎಷ್ಟೆಂದರೂ ಹಳೇ ಶಿಷ್ಯರಲ್ಲವೆ? – ಪಾಪ ಎನಿಸುತ್ತಿತ್ತು. ಸೈ, ಅಂದಿನಿಂದ ಅವನಿಗೆ ಪ್ರಶ್ನೋತ್ತರ ಮಾಸ್ತರ ಎಂಬ ಹೆಸರು ಹೋಗಿ "ಪಾಪ ಮಾಸ್ತರ" ಎಂದು ಹೆಸರು ಬಂತು. ಒಂದು ದಿನ ಅಷ್ಟೂ ಚತುಷ್ಟಯರು ಒಂದೆಡೆ ಸೇರಿ ಸಾಲೆಗೆ ಹೋದರು. ಇವರಿಗೆ ಆಶ್ಚರ್ಯ ಕಾದಿತ್ತು. ಹೋದೊಡನೆ ಪಾಪ ಮಾಸ್ತರನಷ್ಟೇ ಅಲ್ಲ ಹುಡುಗರೆಲ್ಲ ಕೈಮುಗಿದು ಎದ್ದು ನಿಂತರು. ತಾವು ಚಿಕ್ಕಂದಿನಲ್ಲಿ ಸಾಲೆಯಲ್ಲಿದ್ದಾಗಲೂ ಯಾರಾದರೂ ಇನ್ಸ್‌ಪೆಕ್ಟರ ಬಂದರೆ ಗೌಡ, ದತ್ತಪ್ಪ ಬಂದರೆ ಹೀಗೆ ಎದ್ದು ನಿಲ್ಲುತ್ತಿದ್ದರು. ಈಗ ಹುಡುಗರು ಎದ್ದು ನಿಂತುದ್ದನ್ನು 'ನೋಡಿ ಅವರಿಗೆ ಎಷ್ಟು ಸಂತೋಷವಾಗಿತ್ತೆಂದರೆ ಅಂದಿನಿಂದ ವಿನಾಕಾರಣ ನಗತೊಡಗಿದ್ದರು.

ಗುಡಸೀಕರ ಕುರಿ ಅಂದರೆ ಕುರಿ ಕೊಳ್ಳಲು ದುಡ್ಡು ಕೊಟ್ಟಿದ್ದನಲ್ಲ ಮಾರನೇ ದಿನವೇ ಮಾದಿಗರು ಆ ಕುರಿಹಬ್ಬ ಇಟ್ಟುಕೊಂಡಿದ್ದರು. ನಾಯೆಲ್ಯಾ ಹಬ್ಬದ ಸಡಗರದಲ್ಲಿದ್ದರೆ ಗುಡಸೀಕರ ಚಡಪಡಿಕೆಯಲ್ಲಿದ್ದ. ಪಕ್ಕದ ಹಳ್ಳಿ ಹುಡುಗರು ಕಾರ ಹುಣ್ಣಿಮೆಯಂದು ಗೌಡನ ಮುಂದೆ ಆಡುವುದಕ್ಕಾಗಿ ಒಂದು ಆಟ ಕಲಿಯುತ್ತಿದ್ದರು. ಈ ಸುದ್ದಿ ಕೇಳಿ ಇವನ ಮನಸ್ಸು ಅವಿಶ್ರಾಂತವಾಯಿತು.

ಪಂಚಯ್ತಿ ಆಫೀಸಿಗೆ ಪಾಪ ಮಾಸ್ತರನನ್ನು ಕರೆಸಿದ. ಚತುಷ್ಟಯರೂ ಹಾಜರಾದರು. 'ಕಾರ ಹುಣ್ಣಿಮೀ ದಿನ ಆಡಾಕ ಒಂದ ಆಟ ಕಲಸರಿ' ಎಂದು ಕಣ್ಣಂಚಿನಲ್ಲಿ ಕನಸು ತುಳುಕುತ್ತ ಆಜ್ಞೆ ಮಾಡಿದ. ಪಾಪ ಮಾಸ್ತರ ಎಂದೂ ನಾಟಕ ಮಾಡಿದವನಲ್ಲ, ಮಾಡಿಸಿದವನಲ್ಲ, ಬಹಳವಾದರೆ ತನ್ನ ಜೀವಮಾನದಲ್ಲಿ ನಾಕೈದು ನಾಟಕ ನೋಡಿದ್ದನಷ್ಟೆ. ಅಲ್ಲದೆ ಅವನ ವಯಸ್ಸೂ ಇಂಥ ಖುಶಿ ಮೋಜಿಗೆ ಮೀರಿದ್ದಾಗಿತ್ತು. “ಅದೆಂಗಾದೀತರಿ? ಆಗೋಣಿಲ್ಲ” ಅಂದ. ತನಗೆಂಥ ನಾಟಕ ಬಂದೀತು? ಬರೋಣಿಲ್ಲವೆಂದ. ಪರಿಪರಿಯಾಗಿ ಹೇಳಿದ, ಅಂಗಲಾಚಿದ. ಆದರೆ ಮಾಸ್ತರ ಆಗೋಣಿಲ್ಲ ಎಂದರೆ ನಾಟಕವಾಡುವ ತಮ್ಮ ಅವಕಾಶ ತಪ್ಪುವುದಲ್ಲಾ ಎಂದು ಚತುಷ್ಟಯರ ತವಕ. ಅವರೂ ಒತ್ತಾಯ ಮಾಡಿದರು. ಬೇಡಿದರು. ಕೊನೆಗೆ ಉಪಾಯ ಗೊತ್ತೇ ಇದೆ – 'ಸ್ವಥಾ ಸರಪಂಚ ಸಾಹೇಬರ ಕೇಳತಾರಂದರ ಕಿಮ್ಮತ್ತಿಲ್ಲೇನು? ಇಂದು ಮ್ಯಾಲಿನವರಿಗೆ ಬರದ ಹಾಕಿದರ ನಿಮ್ಮ ಗತಿ ಏನಾದೀತು?” ಏನಾಗುತ್ತಿತ್ತೋ, ಪಾಪ ಮಾಸ್ತರನಂತೂ ಹೆದರಿದ.

ಅವರನ್ನು ಕೂರಿಸಿಕೊಂಡೇ 'ಸೀತಾಪಹರಣ' ನಾಟಕವಾಡುವುದೆಂದು ತೀರ್ಮಾನಿಸಿದರು. ಬೆಳಗಾವಿಯಿಂದ ವಿದ್ಯುದ್ದೀಪ, ಅಲಂಕಾರ, ವೇಷಭೂಷಣಗಳನ್ನು ಬಾಡಿಗೆ ತರಿಸುವುದೆಂದು ಮಾತಾಯ್ತು. ರಾವಣನ ಆಸ್ಥಾನದಲ್ಲಿ ಒಂದು 'ಡ್ಯಾನ್ಸು ಹಾಕಿ, ಅದಕ್ಕಾಗಿ ಬೆಳಗಾವಿಯಿಂದ ಚಿಮಣಾಳನ್ನು ತರಿಸುವುದೆಂದಾಯಿತು. ಸ್ಥೂಲವಾಗಿ ಪಾತ್ರಗಳ ಹಂಚಿಕೆಯೂ ಆಯ್ತು. ಗುಡಸೀಕರ ಯಾವ ಪಾತ್ರವನ್ನೂ ವಹಿಸಲಿಲ್ಲ. ರಾವಣನ ಪಾತ್ರಕ್ಕೆ ಕಳ್ಳನನ್ನು ಬಿಟ್ಟು ಯಾರಿದ್ದಾರೆ? ರಾವಣ ಪಾತ್ರ ತನಗೆ ಖಚಿತವಾದ ಕೂಡಲೇ ಕಳ್ಳ ಸೀತೆಯ ಪಾತ್ರಕ್ಕೆ ನಿಂಗೂನನ್ನು ಶಿಫಾರಸು ಮಾಡಿದ. ಗುಡಸೀಕರ ಒಪ್ಪಲಿಲ್ಲ. ರಮೇಶನೇ ಸೀತೆಯಾದ. ನಾರದ ಹಾಗೂ ಹನುಮಂತ – ಈ ಎರಡೂ ಪಾತ್ರಗಳನ್ನು ಮೆರೆಮಿಂಡ ವಹಿಸಿಕೊಂಡ ಸಾತೀರ ಶಿವನಾದ. ಉಳಿದ ರಾಮ ಲಕ್ಷ್ಮಣ ಇತ್ಯಾದಿ ಪಾತ್ರಗಳನ್ನು ಊರಲ್ಲಿಯ ತಮಗೆ ಅನುಕೂಲದ ಹುಡುಗರಿಗೆ ಹಂಚಿದರು. ಪಾಪ ಮಾಸ್ತರನಿಗೂ ಒಂದು ಪಾತ್ರ ಕೊಡಬೇಕೆಂದು ಸೂಚನೆ ಬಂತು. ತಕ್ಷಣವೇ ಆತ ಎದ್ದು ಕೈಮುಗಿದು ಬೇಡವೆಂದ. ಬಿಟ್ಟರು. ಹೀಗೆ ನಾಟಕದ ವಿಚಾರ ಒಂದು ಗಟ್ಟಿಮುಟ್ಟ ಹಂತಕ್ಕೆ ಬಂದಾಗ ನಾಯೆಲ್ಯಾ ಬಂದ.

ಗುಡಸೀಕರನ ದಯದಿಂದ ನಾಯೆಲ್ಯಾ – ಒಂದು ಕುರಿ ದಂಡಕೊಟ್ಟನಲ್ಲ, ಮಾದಿಗರು ಇಂದೇ ಅದರ ಹಬ್ಬ ಇಟ್ಟುಕೊಂಡಿದ್ದರು. ಅದು ಕುಲದವರ ಹಬ್ಬವಾದುದರಿಂದ ಗುಡಸೀಕರ ಅಲ್ಲಗೆ ಹೋಗಬೇಕಾದ ಅಗತ್ಯವಿರಲಿಲ್ಲ. ಆದರೆ ಕುರಿ ಕೊಟ್ಟವನು ತಾನೆಂದು, ಅದೂ ಗೌಡನ ಆಳು ಮನುಷ್ಯನಿಗೆ ಕೊಟ್ಟವನೆಂದೂ ಕೂಡಿದ ಮಂದಿ ಔದಾರ್ಯದ ಕಟ್ಟಿನಲ್ಲಿ ತನ್ನ ರೂಪ ನೋಡಲೆಂದೂ ತಾನೂ ಬರುವುದಾಗಿ ಹೇಳಿದ. ನಾಯೆಲ್ಯಾ ದಂಡ ತೆತ್ತನಾದ್ದರಿಂದ ಮಾಂಸದಲ್ಲಿ ಅವನಿಗೂ ಒಂದು ಪಾಲು ಸಿಕ್ಕುವುದಿತ್ತು. ಮಂದಿ ಹಬ್ಬ ಮಾಡಿದರೇ ಕಾಲು ನೋಯುವ ಹಾಗೆ ಕುಣೊಯುವವನು. ಇನ್ನು ಈಗ ಕೇಳಬೇಕೆ? ಬಹಳ ಉತ್ಸಾಹದಿಂದಲೇ ಕರೆಯಬಂದ. ಓಡೋಡಿ ಬಂದಿದ್ದನೆಂದು ತೋರುತ್ತದೆ. ತೇಗಿತ್ತ,

“ಸಾಬರ, ಎಲ್ಲಾ ತಯಾರಾಗೇತಿ ಬರಬೇಕ್ರಿ”

ಅಂದ. ಅವನನ್ನು ನೋಡಿದೊಡನೆ ಚತುಷ್ಟಯರಿಗೆ ಮತ್ತೆ ನಗೆ ಬಂತು, ಸಾತೀರ ನಗುತ್ತ – “ನಾಯೆಲ್ಯಾ ಮನ್ನಿ ಫಾರಿನ್ ಭಿರಂಡಿ ಕುಡದೆಲ್ಲ ಮಗನ, ಹೆಂಗ್ಹೆಂಗ ಆತೊ?”

– ಅಂದ. ಆ ಘಟನೆ ನೆನಪಿಸಿಕೊಳ್ಳುವುದೂ ಬೇಡವಾಗಿತ್ತು. ಅವಮಾನಿತನಂತೆ ನಾಚಿಕೊಂಡು,

“ಎಲ್ಲಾ ಹುದಲಾ ಬಿದ್ದಾಂಗಿತ್ತ ಬಿಡರಿ”

“ಇನ್ನ ಮ್ಯಾಲ ಭಿರಂಡಿ ಕುಡಿಯಾಣಿಲ್ಲಂತ ಕರಿಮಾಯಿ ಆಣಿ ಮಾಡಿದೀಯಂತಲ್ಲ. ಹೌಂದೇನ?”

– ಅಂದ ಮೆರೆಮಿಂಡ.

“ಹೌಂದ್ರಿ ಗೌಡ್ರು ಆಣಿ ಮಾಡಿಸ್ಯಾರ”

“ಯಾರ ಕೊಟ್ಟರೂ ಕುಡಿಯಾಣಿಲ್ಲಾ?”

“ಒಟ್ಟ ಆ ಭಿರಂಡಿ ಸುದ್ದಿ ಎತ್ತಬ್ಯಾಡ್ರಿ ನನ್ನ ಮುಂದ.”

– ಅಂದ. ಗುಡಸೀಕರ ಮೆಲ್ಲಗೆ ನಾಯೆಲ್ಯಾನಿಗಾಗಿಯೇ ತೆಗೆದಿರಿಸಿದ್ದ ಬ್ರಾಂದಿ ಬಾಟ್ಲಿ ತೆಗೆದು, ಎತ್ತಿ ಮುಖದ ಮುಂದೆ ತೂಗುತ್ತ –

“ನೋಡ್ಲೆ ಮಗನ”

– ಅಂದ. ಪಾಪ ಮಾಸ್ತರನಿಗೆ ಅದೆಲ್ಲಿಂದ ವಾಸನೆ ಬಂತೋ, ಕೂಡಲೇ ಧೋತರದಿಂದ ಮೂಗು ಮುಚ್ಚಿಕೊಂಡ. ನಾಯೆಲ್ಯಾನ ಮನಸ್ಸು ಆಗಲೇ ಕರಗಿ ಬಾಟ್ಲಿಯ ಭಿರಂಡಿಯಷ್ಟೇ ತೆಳ್ಳಗಾಗಿತ್ತು. ಆದರೆ ಬಾಯಿಬಿಟ್ಟು ಹೇಳಲಾರೆ. ಮನಸ್ಸು ನಿಯಂತ್ರಿಸಿಕೊಳ್ಳುವವನಂತೆ, ಕಣ್ಣುಮುಚ್ಚಿ ತಂತಾನೇ ಮಾತಾಡಿಕೊಂಡವನಂತೆ ಗೋಣು ಹಾಕಿ “ಛೇಛೇ ಶಕ್ಯೆ ಇಲ್ಲ ತಗೀರಿ” ಅಂದ. ಗುಡಸೀಕರ ಸುಮ್ಮನಾಗಬಹುದಿತ್ತು. ಆದರೆ ಗೌಡನ ಎದುರಿನಲ್ಲಿ ಆಣೆ ಮಾಡಿದ್ದನಲ್ಲ, ಅದು ಅವನ ಹೊಟ್ಟೆಯೊಳಗೆ ಚಿಮಣಿಯೆಣ್ಣೆ ಸುರಿದಂತಾಯ್ತು. ನೊಂದುಕೊಂಡ ಕೂಡ. ಅಷ್ಟರಲ್ಲಿ ಪಾಪಮಾಸ್ತರ ಬಾಯಿಹಾಕಿದ –

“ಅಧೆಂಗ ಕುಡೀತಾನ್ರಿ? ಗೌಡ್ರ ಮುಂದ ಆಣೀ ಪ್ರಮಾಣ ಮಾಡ್ಯಾನಂತಲ್ಲ, ಬಿಟ್ಟಿದ್ದ ಪಾಡ ಆಗಲಿಲ್ಲ? ಆಗದೇನು? ಬಡವ, ಹೇಂತಿ ಮಕ್ಕಳದಾವಲ್ಲ? ಹೌಂದು. ಅದಕ್ಕೆ ಕುಡೀಬ್ಯಾಡಪಾ.”

– ಅಂದ, ನಾಯೆಲ್ಯಾ ಗುಡಸೀಕರ ಇಬ್ಬರನ್ನೂ ಟಕಮಕ ನೋಡುತ್ತ.

“ಛೇ, ಆ ಮಗ್ಗ ಎಂಥಾ ಆಣಿ ತಗೀರಿ” – ಅಂದ ಕಳ್ಳ.

“ನೀವs ಕೊಡಾಕ ನಿಂತರ ಗೌಡರ ಆಣಿ ಯಾಕ ತಡದೀತ? ಗೌಡರೇನ ಇಲ್ಲಿ ನೋಡಾಕ ಬರತಾರ? ಯಾರ ನಶೀಬ ಯಾರ ಕಂಡಾರ? ಕುಡಿಕುಡಿಯೋ ಮಗನs” – ಅಂದ ಕಳ್ಳ, ಆ ಭಾಗ್ಯ ತನಗಿಲ್ಲವಲ್ಲಾ ಎಂದು ಕೊರಗುತ್ತ, ಪಾಪ ಮಾಸ್ತರನಿಗೆ ಸಹಿಸುವುದಾಗಲಿಲ್ಲ.

“ನ್ಯಾಯೆಲ್ಯಾ ಏನಂತಾನ? ಒಲ್ಲೆ ಅಂತಾನ, ಮತ್ತ ಜೋರ ಯಾಕ ಮಾಡತೀರಿ? ಬ್ಯಾಡ ಬಿಡಿರಿ”

ಗುಡಸೀಕರ ಛಟ್ಟನೆ ಮೇಲೆದ್ದು –

“ಮಾಸ್ತರ, ಈಗ ನ್ಯಾಯೆಲ್ಯಾ ಕುಡದರ ಏನ ಜಿದ್ದ ಕಟ್ಟತೀರಿ”

ಹೇಳಿದ. ಮಾಸ್ತರ ದಂಗಾದ. "ಏನ ಕೊಟ್ಟೇನು? ಏನೂ ಇಲ್ಲರಿ" ಎಂದುಕೊಂಡು ಸುಮ್ಮನಾದ.

ಗುಡಸೀಕರ ಬಾಟ್ಲಿ ತೆಗೆದು ಪಾಪ ಮಾಸ್ತರನ ಕಡೆ ನಡೆದ. "ನಾ ಇನ್ನ ಹೋಗಲೇನ್ರಿ? ಹೋಗತೇನ್ರಿ" ಎಂದು ಕೈಮುಗಿದು ಎದ್ದು ನಿಂತ. ಗುಡಸೀಕರ "ನಿಲ್ಲರಿ" ಎಂದು ಚೀರಿ ಮಾಸ್ತರನ ಸಮೀಪ ಹೋದ. ಮಾಸ್ತರ ಮತ್ತೆ ಮೂಗು ಮುಚ್ಚಿಕೊಂಡ. "ಕೈ ಬಿಡಿರಿ" ಎಂದು ಗದರಿ ಹಿಡೀರೆಂದು ಒತ್ತಾಯದಿಂದ ಬಾಟ್ಲಿ ಅವರ ಕೈಗಿಟ್ಟ. ಮಾಸ್ತರ ಗಡಗಡ ನಡುಗತೊಡಗಿದ್ದ. 'ನಾ ನಿಮಗ ಕಲಿಸಿದ ಮಾಸ್ತರ ಅಲ್ಲರೆ? ಬ್ಯಾಡ್ರಿ' ಎಂದು ಬೆಬೆಬೆ ಹೇಳುತ್ತಿರುವಷ್ಟರಲ್ಲಿ ಗುಡಸೀಕರ ಮತ್ತೆ ಗದರಿದ.

"ನಿಮಗಲ್ಲ, ಹೋಗಿ ನ್ಯಾಯೆಲ್ಯಾಗ ಹಣಸರಿ. ಕುಡೀತಾನ. ನ್ಯಾಯೆಲ್ಯಾ ಬಗಸೀ ಒಡ್ಡಿ ಕುಡಿಯೋ ಮಗನ, ಇದೊಂದ ದಿನಾ" ಎಂದ. ನ್ಯಾಯೆಲ್ಯಾ ಧರ್ಮಸಂಕಟದಿಂದಲೆಂಬಂತೆ – ಅಥವಾ ಹೆಂಗೊ ಸಿಕ್ಕೇ ಸಿಗುತ್ತಾದ್ದರಿಂದ ಇನ್ನಷ್ಟು ಒತ್ತಾಯ ಮಾಡಿಸಿಕೊಂಡರೆ ಇನ್ನಷ್ಟು ಹೆಚ್ಚು ದಕ್ಕೀತೆಂಬ ಉದ್ದೇಶದಿಂದಲೋ, ಆದರೆ ಎರಡನೇ ಉದ್ದೇಶವೇ ಗುಡಸೀಕರನಿಗೆ ಖಾತ್ರಿಯಾಗುವಂತೆ ಅಭಿನಯಿಸುತ್ತ "ಬ್ಯಾಡ್ರೀಯೆಪ" ಎಂದು ಹಲ್ಲುಕಿರಿದ. ಗುಡಸೀಕರ ನ್ಯಾಯೆಲ್ಯಾನ ಬಗ್ಗೆ ಬಹಳ ಮಿದುವಾಗಿದ್ದಂತೆ ಕಂಡಿತು –

"ನ್ಯಾಯೆಲ್ಯಾ, ಮಗನೇ, ನನ್ನ ಮಾನ ದೊಡ್ಡದೋ ನಿನ್ನ ಆಣೆ ದೊಡ್ಡದೊ? ಕುರಿ ಕೊಟ್ಟ ಉಪಕಾರ ಮರತೀದಿ ಏನೊ?" – ಎಂದ. 'ನನ್ನ ಮಾನ ಎನ್ನುವಾಗ ಒಂದೆರಡು ಬಾರಿ ಎದೆಯನ್ನು ದಂದಂ ಗುದ್ದಿಕೊಂಡ. ಕೂಡಲೇ ನ್ಯಾಯೆಲ್ಯಾ – "ಬಿಡರೀಯೆಪ, ನೀವ್ಯಾಕಪ್ಪ ಮನಸಿಗಿ ಹಚ್ಚಕೋತೀರಿ? ತತರ್ರಿ" ಎಂದು ಬೊಗಸೆಯೊಡ್ಡಿದ. ಮಾಸ್ತರ ಗುಡಸೀಕರನ್ನೊಮ್ಮೆ, ನ್ಯಾಯೆಲ್ಯಾನನ್ನೊಮ್ಮೆ ನೋಡುತ್ತ ಭೂತ ಕಂಡ ಮಕ್ಕಳಂತೆ ಪಿಳಿಪಿಳಿ ಕಣ್ಣು ಬಿಡುತ್ತ ನಿಂತಿದ್ದ. "ಹೂಂ ಮಾಸ್ತರ ಹನಸಿರಿ" ಎಂದು ರಮೇಶ ಆಜ್ಞೆಮಾಡಿದ. ಮಾಸ್ತರ ಇನ್ನೂ ತನ್ನ ಕರ್ಮ ಹಳಿದುಕೊಳ್ಳುತ್ತಾ ನಿಂತಾಗ ಗುಡಸೀಕರ "ಹೇಳಿದ್ದ ಕೇಳಿಸಲಿಲ್ಲೇನ್ರಿ?" ಅಂದ, ಪಾಪ ಮಾಸ್ತರ ಧಡಪಡಿಸಿ ಓಡಿಹೋಗಿ ಗಡಗಡ ನಡುಗುತ್ತ ಹನಿಸತೊಡಗಿದ. ಬಾಟ್ಲಿ ನಡುಗಿ ನ್ಯಾಯೆಲ್ಯಾನ ಅಂಗಿಯ ಮೇಲೆ ಬಿದ್ದಿತು. ನ್ಯಾಯೆಲ್ಯಾ ಅಂಗಿಯನ್ನೇ ನೆಕ್ಕಿಕೊಂಡ. ಏನು ರುಚಿ! ಆತ ಹಾಗೆ ಮುಂಗೈ, ಅಂಗಿ ನೆಕ್ಕಿಕೊಂಡುದನ್ನು ನೋಡಿ ಗುಡಸೀಕರನಿಗೆ ಎಷ್ಟು ಆನಂದವಾಯಿತೆಂದರೆ ಓಡಿಹೋಗಿ ಮಾಸ್ತರನ ಕೈಯಲ್ಲಿಯ ಬಾಟ್ಲಿ ತಾನೇ ಕಸಿದುಕೊಂಡು "ಆs ಅನ್ನಲೇ" ಅಂದ. ನ್ಯಾಯೆಲ್ಯಾ ಮುಖ ಮೇಲೆ ಮಾಡಿ ಬಾಯಿ ತೆರೆದ. ಚತುಷ್ಟಯರು ಜೊಲ್ಲು ಸುರಿಸುತ್ತಿರಲಾಗಿ, ಗುಡಸೀಕರ ದಿಗ್ವಿಜಯದಿಂದೆಂಬಂತೆ ಖೊಖ್ಖೊಖ್ಖೊಕ್ ನಗುತ್ತಾ ನ್ಯಾಯೆಲ್ಯಾನ ಬಾಯಲ್ಲಿ, ಮುಖದಲ್ಲಿ, ಮೈಮೇಲೆ ಅಂಗಿಯ ಮೇಲೆ ಹನಿಸಿದ. ನ್ಯಾಯೆಲ್ಯಾನ ಹಸೀ ಹಸೀ ಭಿರಂಡಿಯನ್ನು ಹಾಗೇ ಕರುಳು ಚುರ್ರೆನ್ನುವಂತೆ ಕುಡಿದ. ಮೈಮೇಲಿನ ಅಂಗಿ ಒದ್ದೆಯಾಗಿತ್ತು. ಅದನ್ನೂ ನೆಕ್ಕಿಕೊಂಡ. ನೆಲಕ್ಕೆ ಬಿದ್ದಿತ್ತು. ಅಂಗೈಯಿಂದ ಸವರಿ ನೆಕ್ಕಿಕೊಂಡ. ಅವನು ಆ ಥರ ನೆಕ್ಕುತ್ತಿರುವುದನ್ನು ನೋಡಿ ನ್ಯಾಯೆಲ್ಯಾ ಇಲ್ಲಿಬಿದ್ದsತೆs ನೆಕ್ಕಲೇ ಎಂದು ಗುಡಸೀಕರ ತನ್ನ ಪಾದ ಒಡ್ಡಿದ. ನ್ಯಾಯೆಲ್ಯಾ ಅದನ್ನೂ ನೆಕ್ಕಿದ. ಉಳಿದವರೆಲ್ಲ ನಗುತ್ತಿದ್ದರು. ಕಳ್ಳ ರಾವಣನಂತೆ ನಗುವುದನ್ನು ಈಗಿನಿಂದಲೇ ತಾಲೀಮು ನಡೆಸಿದ. ಒಬ್ಬರಿಗಿಂತ ಒಬ್ಬರು ಹುಚ್ಚುಚ್ಚಾಗಿ ನಗುತ್ತಿರುವುದನ್ನು ನೋಡಿ ಮಾಸ್ತರರಿಗೆ ಗಾಬರಿಯಾಗಿ ಯಾರಿಗೂ ಗೊತ್ತಾಗದಂತೆ ಓಡಿಹೋದ. ಗೌಡನ ಮುಂದೆ ಆಣೆಮಾಡಿದ್ದು ನೆನಪಾಗಿ ಅದನ್ನು ಮರೆಯಲೆಂದೋ, ಗಾಬರಿಯಿಂದಲೇ ನ್ಯಾಯೆಲ್ಯಾ ತಾನೂ ಎಲ್ಲರ ಜೊತೆ ನಗತೊಡಗಿದ. ಮೆರಮಿಂಡನಿಗೆ ಅದೇನು ಹುರುಪು ಬಂತೋ, ಎದ್ದು ನಿಂತು ವೀರಾವೇಶದಿಂದ:

"ಗುಡಸೀಕರರಿಗೆ ಜಯವಾಗಲಿ, ಜೈಹಿಂದ್!" ಅಂದ. ಉಳಿದ ಮೂವರೂ ಜೈಹಿಂದ್ ಅಂದರು. ನ್ಯಾಯೆಲ್ಯಾ 'ಕರೀಮಾಯಿ' ಅಂದ
ಗುಡಸೀಕರ "ಈಗಿಂದೀಗ ಬರತೀವು, ಮುಂದ ನಡಿ ಮಗನs" ಅಂದ. ನ್ಯಾಯೆಲ್ಯಾ ಓಡಿದ.

ತೋಟದ ಗುಡಿಸಲ ಮುಂದಿನ ಚಕ್ಕಡಿಯಲ್ಲಿ ಗೌಡ ಕಂಬಳಿ ಚೆಲ್ಲಿಕೊಂಡು ಅಂಗಾತವಾಗಿ, ಎರಡೂ ಕೈ ತಲೆಗಿಂಬು ಮಾಡಿಕೊಂಡು ಮಲಗಿದ್ದ. ಶಿವಸಾನಿ ಕಾಲು ತಿಕ್ಕುತ್ತಿದ್ದಳು. ಭೂಮಿ ನಿಟ್ಟುಸಿರುಬಿಟ್ಟಂತೆ ಬೇಸಿಗೆಯ ಗಾಳಿ ಬಿಸಿಯಾಗಿತ್ತು. ಚಿಕ್ಕಿಯ ಮಂದ ಬೆಳಕಿನಲ್ಲಿ ಭೂಮಿ ನಿದ್ರಿಸಲಾರದೆ, ಎಚ್ಚರಿರಲಾರದೆ ಒದ್ದಾಡಿದಂತೆ ಗಿಡಮರ ಚಲಿಸುವ ಸದ್ದು ಆಗಾಗ ಕೇಳಿಸುತ್ತಿತ್ತು. ಅಷ್ಟರಲ್ಲಿ ಊರಿನಲ್ಲಿ

ಗಂಡುಹೆಣ್ಣುಗಳೆಲ್ಲ ಕಿಟಾರನೆ ಕಿರುಚಿದ ದನಿ ಕೇಳಿಸಿತು. ಗೌಡ ಕಣ್ಣು ತೆರೆದ. ನಿಜವೋ, ಸುಳ್ಳು ಎಂದು ಕಿವಿಗೊಟ್ಟು ಕೇಳಿದ. ಶಿವಸಾನಿಯೂ ಕೇಳಿದಳು. ಹೌದು ಯಾರೋ ಕಿರುಚುತ್ತಿದ್ದರು. ಥಟ್ಟನೆ ಎದ್ದು ಕಂಬಳಿ ಹೆಗಲಿಗೇರಿಸುತ್ತಲೇ ಓಡಿದ. ಸೀದಾ ಮಾದರ ಹಬ್ಬವಾಗುವಲ್ಲಿಯೇ ಹೋದ. ಅಂಗೀಯೆಲ್ಯಾನ ಮೈಮೇಲೆ ಮಣ್ಣು ಗೊಜ್ಜುತ್ತಿದ್ದರು. ಲಗಮವ್ವ ಗುಡಸೀಕರನ ವಂಶಾವಳಿ ಉದ್ಧರಿಸುತ್ತಿದ್ದಳು. ಆಗಲೇ ಯಾರೋ ದತ್ತಪ್ಪನ ಬಳಿಗೂ ಓಡಿಹೋಗಿದ್ದರು. ಅಂಗೀಯೆಲ್ಯಾನ ಮೈ ಸುಟ್ಟುಹೋಗಿ ಎಡಭಾಗದ ಮೈಚರ್ಮ ಸುಲಿದು ಬಿದ್ದಿತ್ತು. ಇಡೀ ಮೈ ಬೆಂದ ಮಾಂಸದ ಹಾಗೆ ಬಿದ್ದಿತ್ತು. ನ್ಯಾಯೆಲ್ಯಾ ಆಗಾಗ ಬಾಯಿ ಬಾಯಿ ಬಿಡುತ್ತಿದ್ದುದರಿಂದ ಮಾತ್ರ ಜೀವವಿದೆಯೆಂದು ತಿಳಿಯಬೇಕಷ್ಟೆ. ಅಷ್ಟರಲ್ಲಿ ದತ್ತಪ್ಪನೂ ಓಡಿಬಂದ. ಮೊದಲು ಅವನನ್ನು ಗುಡಸಲಿಗೆ ಸಾಗಿಸಲಿಕ್ಕೆ ಹೇಳಿದ. ಹುಡುಗರಿಬ್ಬರು ಮೆಲ್ಲಗೆ ನ್ಯಾಯೆಲ್ಯಾನನ್ನು ಎತ್ತಿ ಅವನ ಗುಡಿಸಲ ಕಡೆ ನಡೆದರು. ಗೌಡನೂ ಬೆನ್ನಹತ್ತಿಹೋದ. ಅವರಿವರಿಂದ ವಿಷಯ ತಿಳಿಯಿತು.

ನ್ಯಾಯೆಲ್ಯಾ ಇಂದು ವಿಪರೀತ ಕುಡಿದಿದ್ದನೆಂದು, ಸರಪಂಚ ಹಾಗೂ ಮೆಂಬರರು ಕುರಿಹಬ್ಬ ನೋಡಲು ಬಂದಾಗ ತಾನೇ ಹಲಗೆ ಬಾರಿಸುವುದಾಗಿ ಕಸಿದುಕೊಂಡು ತೂರಾಡುತ್ತಾ ಬಾರಿಸತೊಡಗಿದನೆಂದೂ, ಗುಡಸೀಕರ ನಾಕಾಣೆ ಎಸೆದಾಗ, ಬಾರಿಸುತ್ತ ಅದನ್ನು ಹಣೆಗಂಟಿಸಿಕೊಳ್ಳಲು ಹೋದಾಗ ಅಲ್ಲೇ ಪಕ್ಕದಲ್ಲೇ ಇದ್ದ ಬೆಂಕಿಯಲ್ಲಿ ಬಿದ್ದನೆಂದೂ, ಎಷ್ಟೇ ಅವಸರದಲ್ಲಿ ಹೊರತೆಗೆದರೂ ಅಂಗಿ ಸೆರೆಯಲ್ಲಿ ತೊಯ್ದಿದ್ದರಿಂದ ಬೇಗನೇ ಆರಿಸಲಾಗಲಿಲ್ಲವೆಂದೂ ಹೇಳಿದರು. ಅವರವರ ಕರ್ಮ; ಗೌಡ ಸುಮ್ಮನೇ ಕೂತ.

ದತ್ತಪ್ಪ ಮಾಡುವ ಔಷಧಿಯನ್ನೆಲ್ಲ ಪೂರೈಸಿದ ಮೇಲೆ ಹೊರಗೆ ಬಂದ. ಮಾತಿಲ್ಲದೆ ಮುಂದೆ ಮುಂದೆ ನಡೆದ. ಗೌಡ ಹಿಂದಿನಿಂದ ಬಂದ. ದತ್ತಪ್ಪ ಏನಾದರೂ ಹೇಳುತ್ತಾನೆಂದು ಗೌಡನ ನಿರೀಕ್ಷೆ. ಹೊರಳುದಾರಿ ಬಂದೊಡನೆ ಗೌಡನಿಗೆ ನಿರಾಸೆಯಾಯ್ತು. ಗೌಡ "ದತ್ತೂ" ಅಂದ. ದತ್ತಪ್ಪ ತಿರುಗಿನಿಂತ. ಪಕ್ಕದಲ್ಲಿದ್ದ ಒಂದು ಬಂಡೆಯ ಮೇಲೆ ದತ್ತಪ್ಪ ಹೋಗಿ ಕೂತ. ಗೌಡನೂ ಕಂಬಳಿ ಚೆಲ್ಲಿಕೊಂಡು ಮೊಳಕಾಲಿಗೆ ಕೈಸುತ್ತಿ ಕೂತ. ಅವನೇ ಮಾತಾಡಲೆಂದು ದತ್ತಪ್ಪ ಕೂತ. ಏನು ಮಾತಾಡುವುದೆಂದು ಗೌಡ ಕೂತ. ಬಹಳ ಹೊತ್ತಿನ ತನಕ ಇಬ್ಬರೂ ಸುಮ್ಮನೇ ಕೂತರು. ಆ ಸಮಯದಲ್ಲಿ ಯಾರಾದರೂ ಹೆಂಗಸರು ಹೊರಗೆ ಬಂದು ಇವರನ್ನು ಕಂಡಿದ್ದರೆ ಭೂತಗಳೆಂದು ಖಂಡಿತ ಹೆದರುತ್ತಿದ್ದರು. ಅಷ್ಟೇ ಯಾಕೆ ಕಂಡವರು ಯಾರಾದರೂ ನಿನ್ನೆ ರಾತ್ರಿ ಈ ಬಂಡೇ ಮೇಲೆ ಗೌಡ, ದತ್ತಪ್ಪ ಕೂತಿದ್ದರೆಂದು ಹೇಳಿದರೆ ಯಾರೂ ನಂಬುತ್ತಿರಲಿಲ್ಲ.

ಬಹಳ ಹೊತ್ತಾದ ಬಳಿಕ ದತ್ತಪ್ಪ ಬಾಯಿಬಿಟ್ಟ.

"ಗೌಡಾ, ಊರಾಗ ಮಾರಿ ಹೊಕ್ಕsದಲ್ಲೋ."

ಗೌಡ ಸುಮ್ಮನಾದ.

"ನಾಳಿ ಮುಂಜಾನೆ ಅವನ ಮನೀಗೆ ಹೋಗಿ, ಪಂಚಾಯ್ತಿಗೆ ರಾಜೀನಾಮೆ ಕೊಡಂತ ಹೇಳಿಬರ್ತಿನಿ."

– ಅಂದ. ಗೌಡ ಇನ್ನೂ ಸುಮ್ಮನಿದ್ದ.

"ಏನಾರ ಮಾತಾಡೊ"

ಗೌಡ ನಿಧಾನವಾಗಿ ತುಟಿಬಿಚ್ಚಿದ:

"ಜರಾ ವಿಚಾರಮಾಡೊ ದತ್ತೂ. ಅವನ ಕೈಯಿಂದ ಪಂಚಾಯ್ತಿ ತಗೊಂಡರೇನ ಬಂತು? ತಗೊಳ್ಳಾಕ ಅದೆಲ್ಲಿ ಐತಿ? ಒಂದು ವೇಳೆ ಕಸಗೊಂಡಿ ಅಂತ ತಿಳಿ; ಅವರೈದೂ ಮಂದಿ ಕೂಡತಾರ, ಮನ್ಯಾಗ ಕುಡೀತಾರ, ತಾವೂ ಕೆಡತಾರ, ಊರನ್ನೂ ಕೆಡಸ್ತಾರ. ಊರಾಗ ಪಂಚಾಯ್ತಿ ಇಲ್ಲಪಾ. ಗುಡಸ್ಯಾಗ ದುಡ್ಡ ಐತಿ, ಮದ ಐತಿ, ಆ ಹುಡುಗನ್ನ ಹಾದಿಗೆ ತರಾಕ ಏನಾರ ಹಾದಿ ಹುಡುಕು."

ಗೌಡನ ಮಾತೂ ನಿಜವೇ. ನಿಜ ಹೇಳೋದಾದರೆ ಪಂಚಾಯ್ತಿ ಎಂಬುವುದೆಲ್ಲಿದೆ? ಜನ ಆ ಬಗ್ಗೆ ಗಂಭೀರವಾಗಿ ಯೋಚಿಸಿದವರೇ ಅಲ್ಲ. ನ್ಯಾಯೆಲ್ಯಾನಂಥವರು ಕುಡಿಯಲಿಕ್ಕೆ ಹೋಗಿ ಹುದಲಾ ಬೀಳುತ್ತಾರೆ. ಎದ್ದುಬರಲು ತಾಕತ್ತಿಲ್ಲದೆ ಒದ್ದಾಡುತ್ತಾರೆ; ಒಂದು ದಿನ ಸಾಯುತ್ತಾರೆ.

ಇಬ್ಬರಿಗೂ ಯಾವ ಹಾದಿ ಕಾಣಿಸಲಿಲ್ಲ. ಯಾರಿಗ್ಗೊತ್ತು? ಪಂಚಾಯ್ತಿ ಕಸಿದುಕಂಡರೆ ಅವನ ಹುಳ ತಗ್ಗಬಹುದು. ಅವಮಾನವಾಗಿ ಹಾದಿಗೆ ಬರಬಹುದು ಅಥವಾ ಏನಿಲ್ಲೆಂದರೂ ಈಗುಳಿದ ಹಾದಿಯಂತೂ ಅದೊಂದೇ. ತಾವಿಬ್ಬರೂ ಸತ್ತಮೇಲೆ ಏನೋ, ಎಂತೋ, ಅಂತೂ ಜೀವಂತವಿದ್ದಾಗಲಾದರೂ ಊರು ಹಾಳುಗೆಡವಬಾರದೆಂದುಕೊಂಡರು. ಎದ್ದರು. ಅಷ್ಟರಲ್ಲಿ ಹೊಲಗೇರಿಯಿಂದ ಮತ್ತೆ ಕಿರುಚಾಟ ಕೇಳಿಸಿತು. ನ್ಯಾಯೆಲ್ಯಾ ಸತ್ತಿದ್ದ!

ಮುನಿಯೆಲ್ಯಾ, ಮಾರಾಯ, ಕುಡಿದ, ತಿಂದ, ಬದುಕನ್ನು ಬಳಿದುಂಡ, ಕರಿಮಾಯಿಯನ್ನು ಕಂಡ, ಭೂತಗಳನ್ನು ಕಂಡ. ಕಂಡದ್ದನ್ನು ಕಥೆಮಾಡಿದ. ತಾನೇ ಕಥೆಯಾಗಿ ಊರವರ ನೆನಪಿಗೊಂದು ನೋವಾದ. ಮಾಯದ ಗಾಯವಾದ. ಕರಿಮಾಯಿಗೆ ಹೆಸರಿಟ್ಟ, ಹೆಂಡತಿಗೆ ಹೆಸರಿಟ್ಟ, ಸ್ವಯಂ ಮೂರು ಹೆಸರಿನಿಂದ ಹೆಸರುವಾಸಿಯಾದ. ಕರಿಮಾಯಿಯ ಆಣೆ ತಪ್ಪಿದರೆ ಏನಾಗುವುದೆಂಬುದಕ್ಕೆ ಉದಾಹರಣೆಯಾದ. ಅವನಿಗೆ ಗಣಪದವಿ ದಯಪಾಲಿಸಲೆಂದು ಕರಿಮಾಯಿಗೆ ಶರಣೆನ್ನೋಣ.

## ಸಾವಿರದ ಶರಣವ್ವ ಕರಿಮಾಯಿ ತಾಯಿ

ಶಿವಾಪುರ ದೊಡ್ಡ ಊರೇನಲ್ಲ. ಬೆಳಗಾವಿ ಜಿಲ್ಲೆಯ ನಕಾಶದಲ್ಲಿ ಕೂಡ ಆ ಹೆಸರಿನ ಊರು ಸಿಕ್ಕುವುದಿಲ್ಲ. ಆದರೆ ಪ್ರಾಥಮಿಕ ಶಾಲೆಯ ಒಂದು ಹಳೇ ಭೂಗೋಳದಲ್ಲಿ ಬೆಳಗಾವಿಯ ಉತ್ತರಕ್ಕೆ, ಮೂರಿಂಚಿನ ಮೇಲೆ ಆ ಹೆಸರಿನ ಒಂದು ಊರಿದೆ. ಅದನ್ನೊಮ್ಮೆ ಗುಡಸೀಕರ ರೈತಾಪಿ ಜನರಿಗೆ ತೋರಿಸಿ ಅಭಿಮಾನಪಡಿಸಿದ್ದ. ಹೀಗೆ ನಕಾಶದಲ್ಲಿ ತಮ್ಮ ಊರು ಗುರುತಿಸುವ ವಿದ್ಯೆಯನ್ನು ತಕ್ಷಣ ಗ್ರಹಿಸಿದವ ಗುಡಸೀಕರನ ಶಿಷ್ಯ ಕಳ್ಳ ಸಿದರಾಮ.

ಅದು ಅವನಿಗೆ ಬಹಳ ಸುಲಭವಾದ ವಿದ್ಯೆ, ಬೆಳಗಾವಿ ದೊಡ್ಡ ಶಹರವಾದುದರಿಂದ ಅದಂತೂ ಪ್ರತಿಯೊಂದು ನಕಾಶದಲ್ಲೂ ಇದ್ದೇ ಇರುತ್ತದೆ. ಅವನಿಗೆ ಇಂಗ್ಲಿಷಿನ "ಬಿ" ಅಕ್ಷರ ಗೊತ್ತಾಗಿತ್ತು. "ಬಿ" ಅಕ್ಷರದಿಂದ ಸುರುವಾಗೋದೋ ಬೆಳಗಾವಿ. ಸರಿ, ಸದರಿ ಬೆಳಗಾವಿಯಿಂದ ಮೂರಿಂಚು ಉತ್ತರಕ್ಕೆ ಸರಿದರೆ ಶಿವಾಪುರ ಸಿಕ್ಕಲೇಬೇಕೆಂಬುದು ಅವನ ಖಾತ್ರಿ ತರ್ಕ. ಹೀಗಾಗಿ ಅವನು ತೋರಿಸುವ ಶಿವಾಪುರ ಒಮ್ಮೊಮ್ಮೆ ದಿಲ್ಲಿಯೋ, ಕಲ್ಕತ್ತಾದ ಬಳಿಯ ಹಳ್ಳಿಯೋ ಅಥವಾ ಹಿಂದೂಸ್ಥಾನದ ಯಾವದೇ ಹಳ್ಳಿಯಾಗಿರುತ್ತಿತ್ತು. ಇದರಲ್ಲಿ ಆತ ಎಷ್ಟು ಪರಿಣತನಾಗಿದ್ದನೆಂದರೆ ಒಮ್ಮೊಮ್ಮೆ ಜಗತ್ತಿನ ನಕಾಶದಲ್ಲೂ ಆತ ಶಿವಾಪುರವನ್ನು ಗುರುತಿಸುತ್ತಿದ್ದ! ಏನು ಮಾಡುವುದು? ಶಹರದ ಸಂಬಂಧದಲ್ಲಿ ಗುರುತಿಸಲ್ಪಡುವ ಸಣ್ಣ ಹಳ್ಳಿಯ ಹಾಡೇ ಇಷ್ಟು.

ಊರ ಮಂದಿ ಕಳ್ಳ ಸಿದರಾಮನ ಮಾತನ್ನು ಮೊದಲೇಟಿಗೆ ನಂಬಲಿಲ್ಲ. ತಮ್ಮ ಊರಿನ ಸುತ್ತಮುತ್ತ ಯಾವ್ಯಾವ ಊರಿವೆಯೆಂಬುದು ಅಥವಾ ಯಾವ್ಯಾವ ಊರಿನ ಮಧ್ಯೆ ತಮ್ಮ ಊರಿದೆ ಎನ್ನುವುದು ಅವರಿಗೂ ಗೊತ್ತಿದೆ. ಆದರೆ ಜಂಜೂ ದ್ವೀಪದ ಶ್ರೀರಾಮ ಕ್ಷೇತ್ರದ ಮೇಲನಾಡಿನ

ಹಳ್ಳಿಯೇ ಶಿವಾಪುರವೆಂದು ಹೇಳುವ ಹೆಳವರ ಮಾತು ನಕಾಶದ ವಿವರಗಳಲ್ಲಿ ಬರುವುದಿಲ್ಲವಲ್ಲ? ಅಂಡಾಂಡ ಪಿಂಡಾಂಡದಿಂದ ಸುರುವಾಗುವ ಲಗಮವ್ವನ ಹಾಡಿನಲ್ಲೂ ಶಿವಾಪುರವಿದೆ. ಆದರೆ ಅದರಲ್ಲೂ ಜಂಜೂ ದ್ವೀಪವಿದೆಯಲ್ಲ? ಇವೆಲ್ಲ ಆದಿ ಗುರುತು ಹೇಗೆ ಸುಳ್ಳಾದಾವು? ಎಂದೂ ತಕರಾರು ತೆಗೆದರು. ಕಳ್ಳ ಸಿದರಾಮನ ವಿಶೇಷವಿರುವುದೇ ಇಲ್ಲಿ, ಬೇಕಾದರೆ ಇವೆಲ್ಲ ವಿವರಗಳನ್ನು ತಳಕು ಹಾಕಿ ನಕಾಶದಲ್ಲಿ ಶಿವಾಪುರ ತೋರಿಸಬಲ್ಲ. ಹೀಗಾಗಿ ನಂಬದವರೂ ಅವನ ಮಾತು ನಂಬುವಂತಾಯಿತು.

ಊರನ್ನು ದೂರದಿಂದ ನೋಡಿದರೆ ಕೆರೆ ಕಾಡುಗಳ ವಿಸ್ತಾರದಲ್ಲಿ, ಅವುಗಳ ದಟ್ಟ ಬಣ್ಣಗಳಲ್ಲಿ ಬಹಳ ಸಣ್ಣದಾಗಿ ಕಂಡೀತು. ರಾತ್ರಿಯಾಗಿದ್ದರೆ ಬರೀ ಒಂದು ಕೊಳ್ಳಿಯಾಗಿ, ಹಗಲಾದರೆ ಒಂದು ಕಪ್ಪು ಕಲೆಯಾಗಿ ಕಂಡೀತು. ಪಡುವಲ ದಿಕ್ಕಿಗೆ ಎತ್ತರವಾದ ದಟ್ಟ ಅಡವಿ ಬರುವುದರಿಂದ ಉಳಿದ ಊರುಗಳಿಗಿಂತ ಮುಂಚೆಯೇ ಇಲ್ಲಿ ಹೊತ್ತು ಮುಳುಗುತ್ತದೆ. ಕತ್ತಲೆ ಹೆಚ್ಚು ದಟ್ಟವಾಗಿ ಆವರಿಸುತ್ತದೆ. ಆದ್ದರಿಂದಲೇ ಬೆಳಕಿರುವಾಗಲೇ ಊರು ಸೇರುವದು ಒಳ್ಳೆಯದು. ಬೆಳಕಿದ್ದಾಗ ತಿಳಿದೀತೆಂದಲ್ಲ ಅಥವಾ ಕತ್ತಲಾದೊಡನೆ ಊರು ಮಲಗಿರುವದೆಂದೂ ಅಲ್ಲ. ತೆಂಕ ಹಾಗೂ ಮೂಡುದಿಕ್ಕಿಗೆ ಊರ ಹೊಲ ಮರಡಿಗಳಿವೆ. ಬಡಗಣಕ್ಕೊಂದು ಕೆರೆಯಿದೆ. ಅಡ್ಡ ಹಾದಿ ನೂರಾರಿದ್ದರೂ ಊರನ್ನು ಪ್ರವೇಶಿಸುವ ಮುಖ್ಯ ರಸ್ತೆ ಮೂಡಣ ದಿಕ್ಕಿಗೇ ಇದೆ. ಅದೊಂದು ಬಂಡೀ ಹಾದಿ. ಅಲ್ಲಿಂದಲೇ ಬೇಕಾದಲ್ಲಿಗೆ – ಬೆಳಗಾವಿಗೆ ಕೂಡ – ಹೋಗಬೇಕು, ಬರಬೇಕು. ಆ ರಸ್ತೆ ಮುಗಿದು ಊರು ಸುರುವಾಗುವ ಅಗಸಿ ಬಾಗಿಲ ಬಳಿಯೇ ಕರಿಮಾಯಿಯ ಗುಡಿಯಿದೆ. ಹೊರಗಿನಿಂದ ಬಂದವರು ಊರು ಹೋಗುವ ಮುನ್ನ, ಒಳಗಿದ್ದವರು ಅಗಸಿ ದಾಟುವ ಮುನ್ನ ಈ ದೇವಿಗೆ ಅಡ್ಡಬಿದ್ದೇ ಮುಂದುವರಿಯುವದರಿಂದ ನಮ್ಮ ಪುರವರ್ಣನೆ ಇಲ್ಲಿಂದಲೇ ಆರಂಭವಾಗುತ್ತದೆ.

*ಮದರಾಸದಿಂದ ಕಲ್ಲ ತರಸಿ*
*ಕಟ್ಟಿಸ್ಯಾರ ಈ ಊರ ಅಗಸಿ* ||

ಎಂದು ಲಗಮವ್ವನ ಹಾಡಿನಲ್ಲಿ ಇದರ ವರ್ಣನೆ ಇದೆ. ಅಲ್ಲಿಂದ ನೇರವಾಗಿ ಮುಂದೆ ಕಾಣಿಸುವದೇ ಕರಿಮಾಯಿ ಕರ್ರೆವ್ವನ ಅರ್ಥಾತ್ ಕರಿಮಾಯಿಯ ಗುಡಿ. ದೊಡ್ಡದಲ್ಲ. ಚೆಂದವೂ ಇಲ್ಲ. ಎದುರಿಗೊಂದು ಕಟ್ಟೆಯ ದೀಪಕಂಬವಿದೆ. ಅದರಾಚೆ ಗುಡಿಯ ಪೌಳಿ. ಅದರ ಮಧ್ಯಭಾಗದಲ್ಲಿ ಗುಡಿಯಿದೆ. ಗುಡಿಯಲ್ಲಿ ಮೂರು ಹೆಜ್ಜೇನಿನ ದೊಡ್ಡದೊಡ್ಡ ಹುಟ್ಟುಗಳಿರುವದೇ ಇದರ ವಿಶೇಷ. ಇದಕ್ಕಂಟಿ ಗರ್ಭಗುಡಿ. ಅದಕ್ಕೊಂದು ಚಿಕ್ಕ ಬಾಗಿಲು. ಬಾಗಿಯೇ ಒಳಕ್ಕೆ ಹೋಗಬೇಕು.

ಹಾಗೆ ಒಳಕ್ಕೆ ಹೋದರೆ ಹೋದೊಡನೇ ಕಣ್ಣಿಗೆ ಕತ್ತಲೆ, ಮೈಗೆ ಅಲ್ಲಿಯ ತಂಪು ತಕ್ಷಣ ಅಂಟುತ್ತದೆ. ಒಮ್ಮೆಲೆ ಕಣ್ಣು ಕಪ್ಪಡಿಗಳ ಕಿರುಚಾಟದಿಂದ ಒಂದೆರಡು ನಿಮಿಷ ಇಡೀ ಗುಡಿ ಕಿಟಾರನೇ ಕಿರುಚಿದಂತಾಗುಬಹುದು. ಒಳಹೊಕ್ಕವರು ಹೊಸಬರಾದರೆ ಸತ್ತೆನೋ, ಬದುಕಿದೆನೋ ಎಂದು ಹೊರಗಾದರೂ ಓಡಬಹುದು. ಇಲ್ಲವೇ ಅವರೂ ಕಿರುಚಬಹುದು. ಧೈರ್ಯದಿಂದ ಅಲ್ಲೇ ನಿಂತಿದ್ದರೆ ಸ್ವಲ್ಪ ಸಮಯದ ಬಳಿಕ ನಿಧನಿಧಾನವಾಗಿ, ಮೆಲ್ಲನೇ ಸದ್ದಿಲ್ಲದೇ ಮೊಗ್ಗು ಹೂವಾದ ಹಾಗೆ ಒಳಗಿನ ವಿವರಗಳು ಬಿಚ್ಚಿಕೊಳ್ಳತೊಡಗುತ್ತವೆ.

ನಾಲಗೆ ಹಿರಿದು ತೇಲುಗಣ್ಣಾಗಿ ಬಿದ್ದ ಕೋಣ, ಅದರ ಕತ್ತಿನಲ್ಲಿ ನೆಟ್ಟ ಕತ್ತಿ. ಸೀರೆಯ ನೆರಿಗೆಯನ್ನೊದ್ದು ಅರೆ ಕಾಣುವ ಪಾದ, ಜರಿಯಂಚಿನ ಸೀರೆಯ ತೆರೆತೆರೆ ನೆರಿಗೆಗಳು, ಎರಡು ಬಲ ಹಸ್ತಗಳು, ಒಂದರಲ್ಲಿ ಖಡ್ಗವಿದೆ, ಇನ್ನೊಂದು ಆಶೀರ್ವದಿಸುತ್ತಿದೆ; ಎಡಗಡೆಗೆ ಒಂದು ಕೈಯಲ್ಲಿ ದೈತ್ಯನ ತಲೆಯಿದೆ; ಇನ್ನೊಂದು ನರ್ತಿಸುವ ಭಂಗಿಯಲ್ಲಿದೆ. ಈ ಹಸ್ತಗಳು ಥೇಟ್ ಮನುಷ್ಯರ ಹಸ್ತಗಳಂತೇ ಸಹಜವಾಗಿರುವುದರಿಂದ ಒಮ್ಮೊಮ್ಮೆ ಹೆದರಿಕೆಯಾಗುವದೂ ಉಂಟು. ಮೇಲೆ ನೋಡಿದರೆ ಏಕದಂ ಎರಡು ಹೊಳೆಹೊಳೆಯುವ ದೊಡ್ಡ ದೊಡ್ಡ ಕಣ್ಣಕಟ್ಟುಗಳು, ಬೆಳ್ಳಿಯವು, ಮುಖ ತುಂಬಿ ಕಿವಿಯತನಕ ವ್ಯಾಪಿಸಿವೆ. ಅವಕ್ಕೆ ತಕ್ಕಂತೆ ಎಸಳು ಮೂಗು, ಬಹುಶಃ ಮುಗುಳುನಗುವ ತುಟಿ, ಹಣೆ ಗದ್ದ, ಮುಕುಟ – ಎಲ್ಲ ಎಲ್ಲಾ ಕಣ್ಣಿಗೊತ್ತಿ ತುಂಬಿಕೊಳ್ಳುವಂತಿರುವ ಹಡದವ್ವ, ಜಗದಂಬಿ ಮೂಲೋಕದ ತಾಯಿ, ಕರಿಮಾಯಿ ಕರ್ರೆವ್ವನ ಸಾಕ್ಷಾತ್ ಮೂರ್ತಿ ಈಗಲೋ ಆಗಲೋ ಎದ್ದು ಬರುವಂತಿದೆ.

ಕರಿಮಾಯಿಯ ಪ್ರಭಾವ ಈ ಊರಿನಲ್ಲಿ – ಅಷ್ಟಿಷ್ಟಲ್ಲ. ಅವರಿಗೇನು ಪಾಪ ಹಲವು ಹದಿನೆಂಟು ದೇವರಿಲ್ಲ. ಇದ್ದ ಸಣ್ಣಪುಟ್ಟ ದೇವರುಗಳೂ ಕೂಡ ಇವಳೊಂದಿಗೆ ಒಂದಿಲ್ಲೊಂದು ಸಂಬಂಧ ಹೇಳಿಕೊಂಡೇ ಬದುಕಬೇಕು. ಜನ ಬೆಳಿಗ್ಗೆ ಏಳುವಾಗ "ತಾಯೀ" ಎಂದು ಏಳುತ್ತಾರೆ. ಮಲಗುವಾಗ "ತಾಯೀ" ಎಂದು ಮಲಗುತ್ತಾರೆ ಎದ್ದಾಗ ತಾಯೀ, ಬಿದ್ದಾಗ ತಾಯೀ, ಕೂತಾಗ ತಾಯೀ, ನಿಂತಾಗ ತಾಯೀ, ಕೆಲಸದ ಮೊದಲು, ಕೊನೆ ತಾಯೀ, ಊಟಕ್ಕೆ ತಾಯೀ, ಕೂಟಕ್ಕೆ ತಾಯೀ, ಒಳ್ಳೆಯ ಕೆಲಸಕ್ಕೂ ತಾಯೀ, ಕೆಟ್ಟಕೆಲಸಕ್ಕೂ – ಅಂದರೆ ಹಾದರ, ಕಳ್ಳತನಗಳಿಗೂ ತಾಯೀ – ಹೀಗೆ ಯಾವುದರ ಸುರುವಿಗೂ, ಮುಗಿವಿಗೂ ಅವಳ ಸೊಲ್ಲು ಬೇಕೇ ಬೇಕು.

## ಸಣ್ಣ ಮಗನ ಮೇಲೆ ಕೈಮಾಡಿದ

ಗುಡಸೀಕರ ತಾನೇನು ಮಾಡುತ್ತಿದ್ದೇನೆಂದು ಅರಿವಿಲ್ಲದೆ ತನಗೆ ಬಣ್ಣ ಎರಚಬಂದ ಬಾಳೂನ ಸಣ್ ಮಗನನ್ನು ಹಿಂದುಮುಂದು ನೋಡದೆ ದನ ಬಡೆದಂತೆ ಬಡಿದ. ಅದು ನಡೆದದ್ದು ಹೀಗೆ –

ಲಗಮವ್ವನ ಹಾಡು ಕೇಳಿ, ಅಲ್ಲಿ ಕೂರಲಾರದೆ ಎದ್ದು ಬಂದನಲ್ಲ, ಸೀದಾ ಮನಹೊಕ್ಕ. ಹೊಕ್ಕವನೇ ದಡ ದಡ ಜಿನಯೇರಿ ಮಹಡಿ ಹತ್ತಿದ. ಹತ್ತಿದವನೇ ಅತ್ತಿತ್ತ ಅಲೆದಾಡಿದ. ಸಿಗರೇಟು ಹೊತ್ತಿಸಿದ. ಅಲ್ಲೆ ಇದ್ದ ಪಲ್ಲಂಗದ ಮೇಲೆ ಕುಕ್ಕರಿಸಿದ. ಕೂತಿರಲಾರದೆ ನಿಂತ. ನಿಂತಿರಲಾರದೆ ಅಡ್ಡಾಡಿದ. ಮತತೆ ಕೂತ. ಮತ್ತೆ ನಿಂತ ಸೇದಿದ. ಎಸೆದ, ನಿಂತ, ಕೂತ.

ಮೆಂಬರರು, ಅದೇ ಹಿಂಬಾಲಕರು, ಸಪ್ಪಳ ಮಾಡದೆ, ಮುದುಡಿ ಇಷ್ಟಿದ್ದವರು, ಇಷ್ಟಿಷ್ಟೇ ಆಗಿ, ಚಲಿಸದೆ ಕಲ್ಲಿನ ಗೊಂಬೆಗಳ ಹಾಗೆ ಕೂತರು. ಗುಡಸೀಕರ ಬಹಳ ಹೊತ್ತಿನ ತಕ ಇವರನ್ನು ಗಮನಿಸದಂತೆ ಅಡ್ಡಾಡಿದ. ಕೂತು ಸಿಗರೇಟು ಹೊತ್ತಿಸುವಾಗ ಥಟ್ಟನೇ ತನ್ನ ಕಾಲಿಗೂ ನಮಸ್ಕರಿಸಿದ ದುರ್ಗಿಯ ನೆನಪಾಯಿತು. ಕಿಸೆಯಿಂದ ಐದರ ಎರಡು ನೋಟು ತೆಗೆದು ಕಳ್ಳನ ಕೈಗಿಡುತ್ತ "ಹೋಗು, ಸರಪಂಚ ಸಾಹೇಬರ ಕೊಟ್ಟಾರಂತ ಹೇಳಿ ದುರ್ಗಿಗಿ ಕೊಟ್ಟ ಬಾರಲೇ" ಎಂದ. ಸಿದ್ದರಾಮ ಓಡಿಹೋಗಿ ಹತ್ತು ರೂಪಾಯಿ ತಗೊಂಡು ಹೊರಟ, ಅವನು ಇನ್ನೂ ಇಪ್ಪತ್ತು ಹೆಜ್ಜೆ ಹೋಗಿರಲಾರ ಅಂಡೂರಾಮೂ ಉರ್ಫ್ ರಮೇಶ ಎದ್ದು "ಅವ ಮೊದಲs ಕಳ. ಕೊಡತಾನೋ ಇಲ್ಲೋ ನೋಡಿ ಬರತೇನ್ರೀ" ಎಂದು ಹೇಳುತ್ತ ಹೋಗಿಬಿಟ್ಟ. ಜಿಗಸು ಸಾತೀರ ಎದ್ದು "ಛೇ, ಛೇ, ಅವ ಮೊದಲ ಕುಡುಕs ಏನ ಮಾಡತಾನೋ ನೋಡತೇನ್ರಿ" ಎಂದು ಅವನೂ ಹೋದ. ಕೊನೆಯವ ಆಯೀಮೆರೆ ಮಿಂಡ ಏನೂ ಹೇಳದೆ, ಯಾಕೆಂದರೆ ಏನು ಹೊಳೆಯದೆ ಕಳಚಿಕೊಂಡ.

ಗುಡಸೀಕರನಿಗೆ ಇವರು ಬೇಕೂ ಆಗಿರಲಿಲ್ಲ. ಹೇಗೆ ಸೇಡು ತೀರಿಸಿಕೊಳ್ಳಬೇಕೆಂದು ದಾರಿ ತೋಚದೆ ಒಂದೇ ಸಮನೆ ಒದ್ದಾಡುತ್ತಿದ್ದ. ಹೊಯ್ಕೊಂಡ ಎಲ್ಲರ ನಾಲಿಗೆ ಸೀದು ಹೋಗುವ ಹಾಗೆ ಮಾಡುವ ಮಾಂತ್ರಿಕ ತಾನಾಗಿದ್ದರೆ, ಗೌಡ, ದತ್ತಪ್ಪ, ಲಗಮಿಯರನ್ನು ಜೇಲಿಗೆ ಕಳಿಸುವ ಅಧಿಕಾರಿ ತಾನಾಗಿದ್ದರೆ – ಅಂದುಕೊಂಡ. ತಕ್ಷಣ ಇನ್ನೊಂದು ಹೊಳೆಯಿತು: ಅರರೇ, ದುರ್ಗಿಗೆ ಈಗಷ್ಟೇ ಕೊಟ್ಟುಕಳಿಸಿದ ದುಡ್ಡನ್ನು ತುಂಬಿದ ಸಭೆಯಲ್ಲಿ ಆಗಲೇ ಕೊಟ್ಟಿದದರೆ ಈ ಮಕ್ಕಳು ಕೊಡುವ ನಾಕಾಣೀ, ಎಂಟಾಣೆಗಿಂತ ಆ ಹತ್ತು ರೂಪಾಯಿ ಎಲ್ಲರ ಕಣ್ಣಲ್ಲಿ ಹೊಳೆಯುತ್ತಿತ್ತು. ಲಗಮವ್ವನಿಗೆ, ಗೌಡನಿಗೆ, ದತ್ತೂನಿಗೆ, ಹೊಯ್ಕೊಂಡ ಬಿಕನೇಸಿಗಳಿಗೆ ಎಲ್ಲರಿಗೂ ತನ್ನ ಬೆಲೆ ತಿಳಿಯುತ್ತಿತ್ತು. ಮಾತು ಮಿಂಚಿಹೋಗಿತ್ತು. ಅಷ್ಟರಲ್ಲಿ ತಂಗಿ ಗಿರಜವ್ವ ಊಟಕ್ಕೆ ಕರೆದಳು

ಇಳಿ ಹೊತ್ತಾಗಿತ್ತು. ಓಣಿಯಲ್ಲಿ ಎಳೇ ಹುಡುಗರು ಬಣ್ಣ ಎರಚುತ್ತ ಹೊಯ್ಕೊಳ್ಳುತ್ತ, ನಗಾಡುತ್ತ ಗದ್ದಲ ಮಾಡುತ್ತಿದ್ದವು. ಅದನ್ನು ಕೇಳಿ ಉಂಡು ಮಲಗಿದ್ದ ಗುಡಸೀಕರನಿಗೆ ಎಚ್ಚರವಯಿತು. ಗದ್ದಲ ಸಮ ಸಮೀಪ ಬಂದು ತನ್ನ ಮನೆಯ ಮುಂದೆಯೇ ನಡೆಯುತ್ತಿರುವುದು ಗೊತ್ತಾಯಿತು. ಕೂಡಲೇ ಧಡಫಡ ಕೆಳಗಿಳಿದು ಹೋದ.

ಗಿರಿಜವ್ವ ಬಾಗಿಲಲ್ಲಿ ನಿಂತುಕೊಂಡು ಹುಡುಗರ ಬಣ್ಣದಾಟ ನೋಡಿ, ಎಲ್ಲರಿಗೂ ಕೇಳಿಸುವಂತೆ ನಗುತ್ತಿದ್ದಳು "ನಾಚಿಕಿ ಬರಾಣೇಲ್ಲ? ಗಂಡ ಹುಡುಗೋರ್ನ ನೋಡಿಕೋತ ನಿಂತೀದಿ, ನಡಿ ಒಳಗೆ" ಎಂದು ಗದರಿಸಿ, ಒಳಗೆ ಕಳಿಸಿ ಆ ಸ್ಥಳದಲ್ಲಿ ತಾನು ನಿಂತುಕೊಂಡ. ಹುಡುಗರು ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಹೋಗಿ ಬಣ್ಣ ಗೊಜ್ಜುತ್ತಿದ್ದರು. ಒಬ್ಬ ಹುಡುಗ ಬಾಳೂನ ಸಣ್ಣ ಮಗ – ಗುಡಸೀಕರ ನಿಂತುದನ್ನು ನೋಡಿ, "ಸರಪಂಚ ಸಿಕಕಾನ ಬರ್‍ರ್ಯೋ" ಎಂದು ಹೊಯ್ಕೊಳ್ಳುತ್ತ ಬಣ್ಣ ಎರಚಿದ. ಉಳಿದವರೂ ಬಂದು ಎರಚಿದರು. ಗುಡಸೀಕರ ಕೆಂಡ ಕೆಂಡವಾದ, ತಾನೇನು ಮಾಡುತ್ತಿದ್ದೇನೆಂದು ಅರಿವು ಬಿಟ್ಟು ಓಡಿಹೋಗಿ ಆ ಎಳೀ ಹುಡುಗನ್ನ ಹಿಡಿದೆಳೆದು ಎಲ್ಲೆಂದರಲ್ಲಿ ಕೈ ಬಾಯಿ ಎನ್ನದೆ ದನ ಬಡಿದಂತೆ ಬಡಿಯತೊಡಿದ. ಹುಡುಗ ಕಿರಿಚಿ, ಕೂಗಿ ಒದರಿದರೂ ಬಿಡಲಿಲ್ಲ. ತಪ್ಪಿಸಿಕೊಂಡು ನಿಂತು ಎಳೆಯರ ಹಿಂಡಿನಲ್ಲಿ ಅಡಗಿದರೆ ಅಟ್ಟಿಸಿಕೊಂಡು ಓಡಿಹೋಗಿ ಹೊಡೆದ. ಕೈಸೋತು ಒದ್ದ. ಕಾಲು ಸೋತು ಹೊಡೆದ. ಹುಡುಗ "ಸತ್ತಿನ್ರೋ ಎಪ್ಪಾ" ಎಂದು ಆರ್ತನಾಗಿ ಕೂಗಿದ. ಉಳಿದ ಹುಡುಗರು ಗಾಬರಿಯಾಗಿ ಬಿಡಿಸಿಕೊಳ್ಳಲಾರದೆ, ಓಡಲಾರದೆ, ಕೂಗಲಾರದೆ ಒಂದರ ಹಿಂದೊಂದು, ಒಂದರ ಆಶ್ರಯದಲ್ಲಿನ್ನೊಂದು ಮುದುಡಿ ನಿಂತವು. ದೂರದಲ್ಲಿ ಹೊರಬಂದ ಹೆಂಗಸರ ಗುಂಪು ಬಂದು ಬಿಡಿಸಿಕೊಳ್ಳಲು ಧೈರ್ಯಸಾಲದೆ ಮರುಗುತ್ತಿದ್ದರು. ಸುದೈವದಿಂದ ನಿಂಗೂ ಓಡಿಬಂದು ಹುಡಗನ್ನ ಬಿಡಿಸಿಕೊಂಡ.

"ಎಳೀ ಹುಡುಗನ ಮ್ಯಲ ಕೈಮಾಡ್ತಿ, ಬುದ್ಧಿ ಎಲ್ಲಿಟ್ಟೀಯೋ ನಮ್ಮಪ್ಪಾ?" ಎಂದು. ತಾನು ಮಾಡಿದ್ದು ತಪ್ಪೆಂದು ಅರಿವಾಯ್ತೋ ಏನೊ/ ಗುಡಸೀಕರ ಸುಮ್ಮನೇ ಮನೆಯೊಳಕ್ಕೆ ನಡೆದ. ನಿಂಗೂ ಸುಮ್ಮನಾಗಲಿಲ್ಲ. "ಕನ್ನಡಿ ನೋಡಿಕೊಳ್ಳೋ ನಮ್ಮಪ್ಪಾ" ಅಂದ. ನಿಜ ಗುಡಸೀಕರ ಆವೇಶದಲ್ಲಿ ಕೂದಲು ಕೆದರಿಕೊಂಡು ಅಸಹ್ಯವಾಗಿದ್ದ. ನಿಂಗೂನ ಮಾತು ಕೇಳಿ ಹೋಗುತ್ತಿದ್ದವ ನಿಂತು:

"ಯಾಕಲೇ?" ಅಂದ.

"ಆ ಹುಡುಗನ ಮ್ಯಾಲ ಕೈ ಎತ್ತಿದಾಂಗ ನನ್ನ ಮ್ಯಾಲ ಎತ್ತಬಾರದ? ತೋರಸ್ತೀನಿ" ಎಂದು ನಿಂಗೂ ಸವಾಲು ಹಾಕಿದ. ಗುಡಸೀಕರನಿಗೆ ಅಷ್ಟು ಸಾಕಾಯ್ತು. ಏನೋ ಮಾಡಲು ಹೋಗಿ ಏನೋ ಮಾಡಿದ್ದ. ಯಾರದೋ ಮೇಲಿನ ಸಿಟ್ಟನ್ನು ಯಾರದೋ ಮೇಲೆ ಹಾಕಿದ್ದ. ಅದನ್ನು ನಿಂಗೂ ಗಮನಿಸಿದ್ದ, ಇವನಿಗೂ ಅದು ತಿಳಿಯಿತು. ಸಣ್ಣವನಾಗಿ, ತಿರುಗುತ್ತರ ಕೊಡದೆ ಒಳಕ್ಕೆ ಹೋದ. ಹುಡುಗನ ಮೈ ತುಂಬಾ ಬಾಸಳ ನೋಡಿ ಬಾಳೂ ವೀರಾವೇಶ ತಾಳಿದ. ದತ್ತಪ್ಪ ಬುದ್ಧಿ ಹೇಳಿ ಬಿಡಿಸಬೇಕಾದರೆ ಬೆವರು ಇಳಿಯಿತು. ಎಲ್ಲ ಕೇಳಿ "ಇವ ತನ್ನ ಗೋರಿ ತಾನs ತೋಡಿಕೊಳ್ಳಾಕ ಹತ್ಯಾನ" ಎಂದು ಗೌ ಹೇಳಿದರೆ "ಇಲ್ಲಾ ಊರ ಗೋರಿ ತೋಡಾಕಹತ್ಯಾನೆಂದು" ಬಾಳೂ ಸಿಟ್ಟಿನಲ್ಲಿ ಅಂದ.

## ಕರೀಬೇಟೆ

ಬೆಳಗಾಯಿತು. ಆದಿ ಊರವರು ದಿನಕ್ಕಿಂತ ಹೆಚ್ಚು ಖುಷಿಪಡಬೇಕಾಗಿತ್ತು. ಯಾಕೆಂದರೆ ಅದು ಕರಿಬೇಟೆಯ ದಿನ. ಕರಿಬೇಟೆ ಕ್ಷತ್ರಿಯ ನಾಯಕರ ಹಬ್ಬ. ಗೌಡನೂ ಅದೇ ಕುಲದವನು. ತರುಣ ನಾಯಕರೆಲ್ಲ ನಿನ್ನೆಯೇ ಬೇಟೆಯಾಡಲಿಕ್ಕೆ ಹೋಗಿದ್ದರಲ್ಲ. ಈ ಹೊತ್ತು ಅವರು ಬಂದೊಡನೆ ಬೇಟೆಯ ಮೆರವಣಿಗೆ ಮಾಡಿ ಗೌಡನಿಗೊಂದು ಪಾಲು ಕೊಟ್ಟು ಮನೆಗಳಿಗೆ ಹೋಗುತ್ತಾರೆ. ಇಂದು ರಾತ್ರಿ ನಾಯಕರ ಮನೆಗಳಲ್ಲೆಲ್ಲ ಮಾಂಸದ ಅಡಿಗೆ, ಊಟ ಮಾಡಿ ಎಲ್ಲರೂ ಕರಿಮಾಯಿ ಗುಡಿಯಲ್ಲಿ ಸೇರುತ್ತಾರೆ. ತಾಜಾ ಭಟ್ಟಿಸೆರೆ ಕುಡಿಯುತ್ತ ಸೂಳೆಯರ ಬೇಟೆ ಬೇರೆಯವರು ಕುಣಿಯುವುದಿಲ್ಲ. ಆದರೆ ಉಳಿದವರು ವಿನೋದ ನೋಡುವ ಅವಕಾಶ ತಪ್ಪಿಸಿಕೊಳ್ಳುವದಿಲ್ಲ.

ಹಾಡುಗಳ ತುಂಬ ಬೇಟೆಯ ಸಾಹಸದ ವರ್ಣನೆಗಳೇ, ಅವೆಲ್ಲ ಪದ್ಧತಿಯ ಹಾಡುಗಳು, ಹುಡುಗರು ಬೇಟೆಯಲ್ಲಾದ ಹಸಿಗಾಯಗಳುಳ್ಳ ಕರಿಯ ಬರಿ ಮೈಗಳನ್ನು ಉಬ್ಬುಬ್ಬಿಸಿ ತೋರುತ್ತ ಮದ ಉಕ್ಕುವ ಎಳೇ ಸೂಳೆಯರ ಸಂದಿಗೊಂದಿಗಳನ್ನು ಕಣ್ಣಿನಿಂದ ಬಗಿಯುತ್ತ, ಸೆರೆಯ ನಶೆಯಲ್ಲಿ ಸೊಂಟ ತೇಲಿಸುತ್ತ ಕುಣಿಯುತ್ತಿದ್ದರೆ ನೋಡುವ ಹೆಣ್ಣುಕಣ್ಣುಗಳೆಲ್ಲ ಕನಸುಗಳನ್ನು ಹಡೆಯುತ್ತವೆ. ಅಷ್ಟೊಂದು ಹಸಿದ ಕಣ್ಣುಗಳಿಗೆ ಗುರಿಯಾಗುವ ಅವಕಾಶವನ್ನು ಯಾವ ಮತಿವಂತ ಪರಿಪಾಠವೂ ಇದೆ. ಈ ಸಲ ಯಾರು ಬಂದಿದ್ದಾರೆ, ಹ್ಯಾಂಗಿದ್ದಾರೆ, ಎಂಬೆಲ್ಲ

ಕುತೂಹಲಗಳು ನೋಡುವವರಲ್ಲಿ ಇರುತ್ತಿದ್ದವು. ಅಷ್ಟೇ ಅಲ್ಲ, ಇನ್ನೂ ಹದಿನೈದು ದಿನ ಹಬ್ಬ ಇರುವಾಗಲೇ ನಾಯಕರ ಹುಡುಗರ ಭೇಟಿಯಾದರೆ "ಏನಪಾ ನಾಯಕಾ, ಈ ವರ್ಷ ಯಾ ಊರ ಸೂಳೇರ್ನ ಕರಸ್ತೀರೋ?" ಎಂದೆಲ್ಲ ಕೇಳುತ್ತಿದ್ದರು.

ಆದರೆ ಈ ದಿ ಕೊನೇ ಪಕ್ಷ ಸುದ್ದಿ ತಿಳಿದವರಿಗಂತೂ ಆ ಉತ್ಸಾಹ ಉಳಿದಿರಲಿಲ್ಲ. ಗೌಡ ಎಂದಿನಂತೆ ಬೆಳಿಗ್ಗೆದ್ದು ಕೆರೆಯಲಿ ಜಳಕ ಮಾಡಿ ಕರಿಮಾಯಿಗೆ ಕೈ ಮುಗಿದು ಮನೆಗೆ ಬಂದ. ನ್ಯಾರೆ ಮಾಡಿ ತೋಟದ ಕಡೆ ಹೊಂಟವನು ನಿಂಗೂನ ತೋಟಕ್ಕೆ ಹೋದ. ಹುಡುಗರ ಕೆಲಸ ನೋಡಿ 'ಭಲೆ' ಎಂದುಕೊಂಡು ಹಾಗೇ ತನ್ನ ತೋಟಕ್ಕೆ ಹೋದ. ಲಗಮವ್ವನನ್ನು ಕರೆಸಿದ. ಅವಳಿಂದ ಒಂದು ಕಾಯಿ ಸೆರೆ ತರಿಸಿ ಕುಡಿದು ಹೊರಸಿನ ಮೇಲೆ ಕೂತ. ಶಿವಸಾನಿ ಮಾತಾಡಿಸಿದ್ದು. ಅವನ ಗಮನಕ್ಕೆ ಬರಲಿಲ್ಲ.

ಹೊತ್ತು ಮೇಲೇರಿತು. ಮಧ್ಯಾಹ್ನವಾಗಿ ಇಳಿಹೊತ್ತಾಯಿತು. ಹೊತ್ತು ಹೆಚ್ಚಾದಂತೆ ಹೆಚ್ಚುಹೆಚ್ಚು ಮಂದಿಗೆ ಸುದ್ದಿ ಗೊತ್ತಾಯಿತು. ಕೆಲವರು ಕುತೂಹಲ ತಾಳದೇ ನಿಂಗೂನ ತೋಟದ ಕಡೆ ಹೋಗಿಬಂದರು. ನೀರು ತರುವ ಹೆಂಗಸರು ಕೆರೆಯಲ್ಲಿ ಗುಸುಗುಸು ಮಾತಾಡಿದರು. ಯಾರು ಸಿಕ್ಕರೂ "ಸುದ್ದಿ ಖರೆಯೇs? ಹೆಂಗಾತಂತ?" ಎಂದು ಕೇಳುವ, ಹೇಳುವ ಆತುರ ಇರುತ್ತಿತ್ತು. ಎಲ್ಲರಿಗೂ ಈ ದಿನ ಮಾತಾಡುವ ಚಪಲ. ಗೌಡನಿಗೂ, ಗುಡಸೀಕರನಿಗೂ ಮಾರಾಮಾರಿಯಾಯಿತೆಂದೂ ಕೈ ಕೈ ಹತ್ತಿತೆಂದೂ, ಗೌಡನನ್ನು, ದತ್ತಪ್ಪನನ್ನು ಜೇಲಿನಲ್ಲಿ ಇಡದಿದ್ದರೆ ತನ್ನ ಹೆಸರು ಗುಸೀಕರನೇ ಅಲ್ಲವೆಂದು ಗುಡಸೀಕರ ಕರಿಮಾಯಿಯ ಮೇಲೆ ಆಣೆ ಇಟ್ಟಿದ್ದಾನೆಂದೂ – ಹೀಗೆ ಯದ್ವಾತದ್ವಾ ಊಹೆಗಳಾಗಿ, ಊಹೆಗಳು ಕಥೆಯಾಗಿ, ಕಥೆಗಳೇ ನಿಜಘಟನೆಗಳಾಗಿ ಸಾಯಂಕಾಲವಾಗುವದರೊಳಗೆ ನಿಂಗೂ ಕಥಾನಾಯಕನಾಗಿ, ಅವನ ಸುತ್ತ ಕಥೆ ಹಬ್ಬಿ, ಆ ಕಥೆಯ ನೂರಾರು ಪಾಠಾಂತರಗಳು ನಾನಾ ನಮೂನೆಯ ಹೊಸಹೊಸ ವಿವರಗಳೊಂದಿಗೆ ಬಾಯಿಗೊಂದು ಬಣ್ಣ ತಳೆಯುತ್ತ ಹಬ್ಬತೊಡಗಿದವು.

ಆದರೆ ಹಬ್ಬ ನಿಲ್ಲಿಸಬೇಕೆಂದು ಕೆಲವರು ಅಂದುಕೊಂಡರು. ಈ ಗ ಹೇಳಿದ್ದರೆ ನಾಯಕರ ಹುಡುಗರು ಸಿದ್ಧರಗುತ್ತಿದ್ದರೊ ಇಲ್ಲವೋ. ಯಾಕೆಂದರೆ ಈ ದಿನ ಊರ ವತಿಯಿಂದ ದುರ್ಗಿ ಕುಣಿಯುವವಳಿದ್ದಳು. ಪಕ್ಕದ ಪಾಶ್ಚಾಪೂರದಿಂದ ಸುಂದರಿ ಬಂದಿದ್ದಳು. ಸತ್ತವರು ಯಾವ ದೊಡ್ಡ ಸಜ್ಜನರೆಂದು ಹಬ್ಬ ಇಲ್ಲಿಸಬೇಕು? ಅಲ್ಲದೇ ನಿಲ್ಲಿಸುವದಾಗಿದ್ದರೆ ಗೌಡ ಹೇಳುತ್ತಿದ್ದ. ಕರಿಮಾಯಿಯ ವಾಕ್ಯ ಆಗುತ್ತಿತ್ತು. ಹೀಗೆ ಅವರ ತಲೆಯಲ್ಲಿ ವಿಚಾರ ಹೊಳೆಯುತ್ತಿರುವಾಗಲೇ ಬೇಟೆಗಾರರು ಮೆರವಣಿಗೆಯಲ್ಲಿ ಬಂದರು.

ಉಂಡು ಮಲಗುವ ಹೊತ್ತಿಗೆ ಎಲ್ಲರೂ ಗುಡಿಯ ಪೌಳಿಯಲ್ಲಿ ಸೇರಿದರು. ಮುದಿ ನಾಯಕರಿಗೆ ಎಷ್ಟೂ ಉತ್ಸಾಹವಿರಲಿಲ್ಲ. ಹಿಂದಿನ ಹಬ್ಬಗಳಲ್ಲಾಗಿದ್ದರೆ ಸ್ವಥಾ ಲಗಮವ್ವ ಉಟ್ಟ ಸೀರೆಯ ನೆರಿಗೆಗಳನ್ನು ಮುಂಗೈಯಲ್ಲಾಡಿಸುತ್ತ ಬೇಟೆಯ ಪದ ಹಾಡತೊಡಗಿದರೆ, ರಂಗೇರಿದಂತೆ ಆಕೆಯು ಮೈಯ ಹಿಂದು ಮುಂದಿನ ಉಬ್ಬುಗಳನ್ನು ತುಳುಕುತ್ತ ಹೆಜ್ಜೆ ಹಾಕುತ್ತಿದ್ದರೆ, ಬಚ್ಚಬಾಯಿಯ ಮುದುಕರೂ ತೆರೆದ ಬಾಯಿ ತೆರೆದಂತೆಯೇ ಕುಣಿಯತೊಡಗುತ್ತಿದ್ದವು. ಮುದಿ ಮೈಗಳಲ್ಲೂ ಲಯ ತುಳುಕಿಸುತ್ತಿದ್ದಳು ಲಗಮವ್ವ ತನ್ನ ಹಾಡುಗಾರಿಕೆಯಿಂದ. ಆದರೆ ಇಂದು ಗೌಡನೇನೋ ಬಂದಿದ್ದ; ಸುಮ್ಮನೇ ಕೂತಿದ್ದನಷ್ಟೇ ಅವನ ನಗೆಯ ಮಜ ಮಾಯವಾಗಿತ್ತು. ಒಂದು ವಿಶೇಷವೆಂದರೆ ಸಾಮಾನ್ಯವಾಗಿ ಹಬ್ಬಕ್ಕೆ ದತ್ತಪ್ಪ ಬರುತ್ತಿರಲಿಲ್ಲ. ಇಂದು ಅವನೂ ಬಂದಿದ್ದ. ಇದರಿಂದಾಗಿ ವಾತಾವರಣದ ಗಾಂಭೀರ್ಯ ಉಸಿರುಗಟ್ಟುವಂತಾಗಿತ್ತು.

ದುರ್ಗಿಯ ಹಾಡುಗಾರಿಕೆ ಸುರುವಾಯ್ತು. ಬೆಳ್ದಿಂಗಳ ಸುಖದ ಮದ ಈಗಷ್ಟೇ ಹುಡುಗರ ಮೈಗೆ ತಾಗತೊಡಗಿತ್ತು. ಅಷ್ಟರಲ್ಲಿ ಗೌಡ, ದತ್ತಪ್ಪ ಮೊದಲೇ ನಿರೀಕ್ಷಿಸಿದ್ದಂತೆ ಪೊಲೀಸ್ ಜೀಪಿನ ಬೆಳಕು ಗುಂಪಿನ ಮೇಲೆ ಬಿತ್ತು. ಸ್ತಬ್ಧರಾಗಿ ಕೂತವರೆಲ್ಲ ಎದ್ದುನಿಂತರು. ಗೌಡನೂ ಅವನ ಹಿಂದಿನಿಂದ ದತ್ತಪ್ಪನೂ ಎದ್ದೂ ಮುಂದೆ ಬರವದರೊಳಗೆ ಜೀಪು ಗುಡಿಯ ಹತ್ತಿರವೇ ಬಂದು ನಿಂತಿತು.

ನಡುವಯಸ್ಸಿನ ಫೌಜುದಾರನೊಬ್ಬ ಇಬ್ಬರು ಪೊಲೀಸ್‌ರೊಂದಿಗೆ ಇಳಿದು ಬಂದ. ಜನ ಗಾಬರಿಯಾಗಿ ಮಿಕಿಮಿಕಿ ಇವರನ್ನೇ ನೋಡುತ್ತಿದ್ದರು. ಗೌಡ, ದತ್ತಪ್ಪ ಮುಂದೆ ಬಂದು ನಮಸ್ಕರಿಸಿದರು. ತಾವಿಬ್ಬರೂ, ಗೌಡ, ಕುಲಕರ್ಣಿ ಎಂದು ಪರಿಚಯ ಮಾಡಿಕೊಟ್ಟರು. ಇವರ ಮಾತು ನಿಲ್ಲಿಸಿ "ಈ ಮಂದಿ ಇಲ್ಯಾಕ ಸೇರ್ಯಾರ?" ಎಂದು ಫೌಜದಾರ ಕೇಳಿದ.

"ಇಂದ ಕರಿಬ್ಯಾಟಿ ಹಬ್ಲ; ಕುಣ್ಯಾಕ ಹತ್ಯಾರರಿ."

"ಹಬ್ಬ?"

"ಹೌಂದರಿ."

"ಇಂದೇನ ಹಬ್ಬ ಮಾಡೋ ಜರೂರಿಲ್ಲ."

ಇಷ್ಟು ಹೇಳಿ ಪೋಜದಾರರ ತಿರುಗಿದ, ಕೂಡಲೇ ದತ್ತಪ್ಪ ಸಣ್ಣದಾಗಿಸಿದ ಲಾಟೀನು ದೊಡ್ಡದು ಮಾಡಿ ಮುಂದೆ ಮುಂದೆ ಚಾವಡಿಯ ಕಡೆ ನಡೆದ. ಫೋಜುದಾರ, ಅವನ ಹಿಂದೆ ಪೊಲೀಸರು ನಡೆದರು.

ಗೌಡ ಒಂದಿಬ್ಬರನ್ನು ಕರೆದು ಇನ್ನೇನೋ ಹೇಳಿ ಮುಂದೆ ಹೋಗುತ್ತಿದ್ದ ಫೋಜುದಾರನನ್ನು ಕೂಡಿಕೊಂಡ.

ಶಿವಪೂಜೆಯಲ್ಲಿ ಕರಡಿ ಬಿಟ್ಟಂತಾಯ್ತು ನಾಯಕರ ಹುಡುಗರಿಗೆ. ಇನ್ನು ಕೆಲವರಿಗೆ ಇದು ಗುಡಸೀಕರನ ಕರಾಮತಿಯೆಂದು ಗೊತ್ತಾಯಿತು. ಗೌಡ, ದತ್ತಪ್ಪನನ್ನು ಜೇಲಿಗೆ ಒಯ್ಯುತ್ತಾರೆಂದು ಕೆಲವರೆಂದರು. "ಯಾಕೆ? ಊರಗೇನು ಗಂಡಸರಿಲ್ಲೇನ?" ಎಂದು ಹುಡುಗರೆಂದರು. ತಮತಮಗೆ ಗುಜುಗುಜು ಮಾತಾಡಿಕೊಳ್ಳತೊಡಗಿದರು.

ಚಾವಡಿಗೆ ಹೋದೊಡನೆ ಫೋಜುದಾರ ನಿಂಗೂನನ್ನು ಕರೆತರುವಂತೆ ಹೇಳಿದ. ಊರಿನಲ್ಲಿ ಖೂನಿ ಆಗಿದ್ದರೂ ಹಬ್ಬ ಮಾಡುತ್ತಿದ್ದುದಕ್ಕೆ ಛೀಮಾರಿ ಹಾಕಿದ. ಖೂನಿ ಗೀನಿ ಏನೂ ಆಗಿಲ್ಲವೆಂದು, ಆಗಿದ್ದರೆ ತಾನು ಸುಮ್ಮನಿರಲಿಕ್ಕಾಗುತ್ತಿತ್ತೆ? ಹಬ್ಬ ಮಾಡಲಿಕ್ಕಾಗುತ್ತಿತ್ತೆ? ಗೌರಿ ಗಟಿವಾಳಪ್ಪ ಸತ್ತು ಹದಿನೈದರ ದಿನವಾಯಿತೆಂದೂ, ಹೋರಿ ಗರ್ಭಕ್ಕೆ ಇರಿದು ಗೌರಿ ಸತ್ತಳೆಂದೂ ಒಂದೆರಡು ದಿನ ಜ್ವರ ಅಂತ ಮಲಗಿದವನು ಗಟಿವಾಳಪ್ಪ ಮೇಲೇಳಲೇ ಇಲ್ಲವೆಂದೂ ಗೌಡ ಹೇಳಿದ. ದತ್ತಪ್ಪ ಮಧ್ಯ ಮಧ್ಯ ಹೌದು ಹೌದೆಂದು ಸೇರಿಸಿ, ತನ್ನ ದಫ್ತರಿನಲ್ಲಿ ನಮೂದಿಸಿದ್ದಾಗಿ ಹೇಳಿದ.

ನಿಂಗೂ ಚಾವಡಿಗೆ ಬಂದಾಗ ಫೋಜುದಾರನಿಗೇನು, ಗೌಡ ದತ್ತಪ್ಪನಿಗೂ ದೂರ ನಿಂತಿದ್ದ ಜನಕ್ಕೂ ಹೊಯ್ಕಾಯಿತು. ಅವನಾಗಲೇ ಸೀರೆ ಉಟ್ಟು, ಕೈಬಳೆ ತೊಟ್ಟಿದ್ದ, ಅವನೂ ಬಂದು ಗೌಡ ಹೇಳಿದಂತೆ ಹೇಳಿದ. ಫೋಜದಾರ ಪೇಚಿನಲ್ಲಿ ಸಿಕ್ಕ. ಈ ನಪುಂಸಕ ಹುಡುಗ ಖೂನಿ ಮಾಡುವದು ಸಾಧ್ಯವಿಲ್ಲೆಂದು ಅವನ ಅನುಭವ ಸಾರಿ ಸಾರಿ ಹೇಳಿತು. ತನಗೆ ಬಂದ ಸುದ್ದಿಯಲ್ಲಿ ಏನೋ ಐಬಿದೆಯೆಂದು ಅನ್ನಿಸಿತು. ಅಷ್ಟರಲ್ಲಿ ನಾಯಕರ ಹಿರಿಯನೊಬ್ಬ ಹಬ್ಬ ಆಚರಿಸಲು ಪರವಾನಗಿ ಕೇಳಲು ಬಂದ. ಫೋಜುದಾರ ಅವನನ್ನೂ ಕೇಳಿದ. ಅವನು "ಛೇ ಛೇ ಖೂನಿ ಆಗಿದ್ದರೆ ಸೂತಕ ಆಗುತ್ತಿತ್ತು. ಸೂತಕದಲ್ಲಿ ಕರಿಬೇಟಿ ಹಬ್ಬ ಆಚರಿಸಲು ಬರುವದಿಲಲವೆಂದು, ಊರಲ್ಲಿ ಸೂತಕ ಇಟ್ಟುಕೊಂಡು ಕರಿಬೇಟೆಯ ನೈವೇದ್ಯವನ್ನು ಕರಿಮಾಯಿಗೆ ನೀಡಿದರೆ "ತಾಯಿ ಸುಮ್ಮನಿದ್ದಾಳೇನ್ರೀ ಸಾಹೇಬರs" ಎಂದೂ ಅಂದ. ಕರಿಮಾಯಿ ಬೆಂಕಿ ಕೆಂಡದಂಥವಳು. ಹೈಗ್ಯೆ ಆದರೆ ನಾವೂ ಇಲ್ಲ ನೀವೂ ಇಲ್ಲ ಅಂದ. ಅಷ್ಟರಲ್ಲಿ ಊಟದ ತಯಾರಿ ಆಗಿತ್ತು "ಏಳ್ರೀ ಸಾಹೇಬರs" ಎಂದು ಗೌಡ ಹೇಳಿದರೆ "ಈಗ ನಿಂಗೂನ ಗುಡಿಸಲು ನೋಡಬೇಕು" ಎಂದು ನಾಳೆ ಮುಂಜಾನೆ ಹೋಗೋಣವೆಂದು ಗೌಡ, ಈಗಲೇ ಹೋಗಬೇಕೆಂದು ಫೋಜುದಾರ ಎದ್ದ.

ರಾತ್ರಿಯೇ ತೋಟಕ್ಕೆ ಹೋದರು. ಹಿಂಡು ಜನ ಬೆನ್ನುಹತ್ತಿದರು. “ಬೆಂಕೀ ಹಚ್ಚಿದ ಗುಡಸಲೆಲ್ಲಿ” ಎಂದು ಫೋಜುದಾರ ಕೇಳಿದ. “ಎಲ್ಲೀ ಬೆಂಕಿ ಏನು ಕತೆ? ಇದೇ ನಿಂಗೂನ ತೋಟ, ಇದೇ ಗುಡಿಸಲು” ಎಂದು ಗೌಡ ಹೇಳಿದ. ಫೋಜದಾರನಿಗೆ ಇದ್ದದ್ದೂ ಹಣಗಲಾಯಿತು, ತಿರುಗಿ ಬಂದರು.

ಗೌಡನ ಮನೆಯಲ್ಲಿ ಊಟಕ್ಕೆ ಕೂತರು. ಹ್ಯಾಗೂ ಬೇಟೆಯ ಪಲ್ಯ ಇತ್ತು. ಅಸಲ ಸೆರೆಯಿತ್ತು. ಅದು ಒಳಕ್ಕೆ ಇಳಿಯಲಾರಂಭಿಸಿದಂತೆ ಫೋಜುದಾರನ ತಲೆ ತೂಗಲಾರಂಭಿಸಿತು. ಇತ್ತ ಹುಡುಗರ ಹಾಡು, ಕುಣಿತ ಸುರುವಾಯಿತು. ಬಹಶಃ ನಿರಾಸೆಯಿಂದಿರಬೇಕು. ಫೋಜುದಾರನ ತಲೆ ತಿರುಗಿತು. “ನಿಲ್ಲಸ್ರಿ ಅದನ್ನ” ಎಂದು ಊಟ ಮಾಡುತ್ತಲೇ ಕಿರುಚಿದ. ಗೌಡ ನಿಧಾನವಾಗಿಯೇ ಹೇಳಿದ.

“ಅದನ್ನ ನಿಲ್ಲಸಾಕ ನನಗಾಗಲಿ ನಿಮಗಾಗಲಿ ಹಕ್ಕಿಲ್ಲರೀ ಸಾಹೇಬರ.”

“ಏ ಗೌಡಾ, ನನಗ ಕಾಯ್ದೆ ಹೇಳಿಕೊಡ್ತಿ ಏನಲೇ? ಊರ ಗೌಡಾಗಿ, ಊರಾಗ ದೋ ಪಾರ್ಟಿ ಇಟಗೊಂಡು ಖೂನಿ ಮಾಡಿಸಿಕೊಂತ...”

“ಯಾವ ದೋ ಪಾರ್ಟಿ? ಎಲ್ಲಿ ಖೂನಿ? ಏನ ಸಾಹೇಬರ ಏನಂಬೋ ಮಾತಿದು?”

“ನನಗ್ಗೊತ್ತಲೇ ಚೇರ್ಮನ್ ಪಾರ್ಟಿ ಮಂದೀನ ಇಂದ ಹಬ್ಬದ ನೆವದಾಗ ನಾಯಕರ ಹುಡುಗರ ಕಡಿಂದ ಬಡಸಬೇಕಂತ...”

ಎಲ್ಲ ಅರೆಮಾತುಗಳಾಗಿದ್ದರಿಂದ ಗುಡಸೀಕರ ಏನೇನು ಹೇಳಿದ್ದಾನೋ ಎಂದು ಗೌಡಿನಿಗೂ ದಿಗಿಲಾಯಿತು. ಕ್ರಮಬದ್ಧವಾಗಿ ಫೋಜುದಾರನ ಜೊತೆ ಮಾತಾಡುವುದೂ ಸಾಧ್ಯವಿರಲಿಲ್ಲ. ಮತ್ತೆ ಫೋಜುದಾರನೇ ಬಾಯಿಬಿಟ್ಟ –

“ನೋಡ ಗೌಡಾ, ಊರಾಗ ಹೊಡದಾಟ ಆಗೋ ಛಾನ್ಸ್ ಇದ್ದಾಗ ಇಂತಾ ಹಬ್ಬಾ ಮಾಡಾಕ ಕೊಡಬಾರದಂತ ಗೊತ್ತಿಲ್ಲ ನಿನಗ? ನಿಲ್ಲಸ ಮೊದಲ...”

“ಸಾಹೇಬರ ಹೊಡದಾಟ ಬಡದಾಟ ಆದರ ಆ ಜವಾಬ್ದಾರೀ ನಂದು. ತಮ್ಮ ಪಾಡಿಗೆ ತಾವ ಹಡಿಕೊಂಡ ಕುಣೀತಾವ. ನೀವು ಆರಾಮ ನಿದ್ದೀ ಮಡರಿ.”

ಎಂದ ಗೌಡ. ಫೋಜದಾರನ ನೆತ್ತರು ಕುದಿಯಲಾರಂಭಿಸಿತು. ಒಳಗಿನ ದೇಸೀ ದೇವಿ ತುಳುಕಲಾರಂಭಿಸಿದಳು. ತನ್ನ ಮುಂದೆ ಈ ಹಳ್ಳೀ ಗೌಡನ ಸೊಕ್ಕೆಷ್ಟು ಅಂದ. ಕೈತೊಳೆದು ಎದ್ದವನೇ ತೂರಾಡುತ್ತ ಬಾಗಿಲು ತೆಗೆಯಹೋದ. ಹೊರಗಡೆಯಿಂದ ಚಿಲಕ ಹಾಕಿದ್ದರು. ಬಾಗಿಲು ಎಳೆದ, ಜಗ್ಗಿದ, ಒದ್ದ. ಕಾಲಿಗೆ ಪೆಟ್ಟುತಾಗಿ ತಿರುಗಿ ಬಂದು ಅಲ್ಲೇ ಇದ್ದ ಹಾಸಿಗೆಯ ಮೇಲೆ ಕೂತ. ‘ಬಾಗಲಾ ತಗಸಲೇ’ಎಂದು ಒಂದೆರಡು ಬಾರಿ ಕಿರಿಚಿದ. ಪೊಲೀಸರಿಬ್ಬರೂ ಅತ್ತಿತ್ತ ಅಲೆದಾಡಿ ಹೊರಕ್ಕೆ ಹೋಗಲು ದಾರಿಯಿದೆಯೆ ನೋಡಿದರು. ಯಾರಾದರೂ ಹಾದಾಡುತ್ತಿದ್ದರೆ ಕರೆಯಬೇಕೆಂದು ಕಿಟಕಿಯಿಂದ ಇಣಿಕುತ್ತ ಚಡಪಡಿಸಿದರು.

ಗೌಡ ಇವರ ಒದ್ದಾಟ ನೋಡದಾದ. ಇವನ ನೆಮ್ಮದಿ ನೋಡಿ ಫೋಜದಾರನ ನೆಮ್ಮದಿ ಹದಗೆಟ್ಟಿತು.

“ಏ ಗೌಡಾ, ನಾ ಇರೋವಾಗ, ಇವರು ಹೆಂಗ ಹಬ್ಬ ಮಾಡತಾರ ನೋಡತೀನಿ, ನಿನ್ನೂ ನೋಡಿಕೋತೀನಿ...”

ಗೌಡ ಅದೇ ಸಮಾಧಾನದಿಂದ ಹೇಳಿದ –

ಸಾಹೇಬರ, ಈ ಊರಿನ ನರ ನಿಮಗ್ಗೊತ್ತಿಲ್ಲರಿ.”

“ಏ, ಇದು ನನ್ನ ಆಳಿಕೆ ಊರೋ...”

“ಅಲ್ಲ ಸಾಹೇಬರ, ನನ್ನ ಆಳಿಕೀದು. ನಾವೇನಾದರೂ ತಪ್ಪು ಮಾಡಿದರ ನಿಮ್ಮ ಆಳಿಕಿ. ಈಗ ಹಂತಾ ತಪ್ಪೇನೂ ಆಗಿಲ್ಲ. ಅಷ್ಟೂ ಮೀರಿ ನಿಮ್ಮ ಆಳಿಕಿ ತೋರಸ್ತೇವಂದರ, ನೋಡ್ರೀ, ಮೊದಲ ಹೇಳಿರತೀನಿ. ಅವು ಮೊದಲ ಹರೇದ ಸೊಕ್ಕೇರಿದ ಹುಡುಗರು, ಕಾಡ ಅಡ್ಡಾಡಿ ಬ್ಯಾಟಿ ತಂದಾವ, ಕುಡದ್ದಾವ. ಊರ ಸೂಳೇರಾಗಿದ್ದರ ಹೆಂಗೋ ನಡೀತಿತ್ತು; ಪರವೂರ ಸೂಳೇರ ಬಂದಾರ, ಅವರ ಮುಂದ ಕುಣ್ಯಾಕ ಹತ್ಯಾವ. ಅವರನ್ನ ನೀವು ಹೋಗಿ ತಡವಿದರ, ಖರೇ ಹೇಳತೀನ್ರಿ – ಮುಂದಿನ ಹೋನಾರಕ್ಕ ನಾನಂತೂ ಜವಾಬ್ದಾರಲ್ಲ.”

– ಅಂದ. ಫೋಜದಾರನ ಬಾಯಿ ಬಂದಾಯಿತು. ಮಲಗಿದ. ಅಷ್ಟರಲ್ಲಿ ಫೋಜದಾರ ನಿದ್ದೆ ಮಾಡುವುದನ್ನು ನೋಡಿದ ಪೊಲೀಸರು ತಾವೂ ಮಲಗಿಕೊಂಡರು. ಗೌಡ ಅವರನ್ನು ನೋಡಿ ಒಳಗೊಳಗೇ ನಕ್ಕ. ಎದ್ದು ಬಂದು ಕಿಟಕಿಯಲ್ಲಿ ಹಣಿಕಿಹಾಕಿದ. ದೂರದಿಂದ ಲಗಮವ್ವನ ದನಿ ಹುಡಗರ ಹುಯ್ಲಿನೊಂದಿಗೆ ಕೇಳಿ ಬರುತ್ತಿತ್ತು;

ಬ್ಯಾಟಿ ಬ್ಯಾಟಿಯನಾಡಿದಾ |
ಬ್ಯಾಟರ ಹುಡುಗ
ಕಾಡ ಬ್ಯಾಟಿಯನಾಡಿದಾ ||

ಇಲ್ಲಿ ನಿಂತುಕೊಂಡೇ ಅವಳ ತುಳುಕಾಟ ಊಹಿಸಿದ, ಸೆರೆ ಸುರಿದ ಹಾಗೆ ಊರೆಲ್ಲ ಬೆಳ್ದಿಂಗಳಿಂದ ತೊಯ್ದು ಹೋಗಿತ್ತು. ಕೈಕಾಲು ಅಲುಗಿಸಲೂ ಆಗದಷ್ಟು ನಶೆಯೇರಿ ತೇಲುಗಣ್ಣ ಜೋಕಾಲಿಯಲ್ಲಿ ತೇಲುತ್ತ ಹಳ್ಳಿಗೆ ಹಳ್ಳಿಯೇ ಬಾಯಿಂದ ಸೆರೆ ಸಾಕಾಗಿ, ಈಗ ಕಿವಿಯಿಂದ ಹಾಡನ್ನು ಕೇಳುವಂತಿತ್ತು. ಫೋಜುದಾರ ಬಂದಾಗ ಊರು ಗಾಬರಿಯಾದದ್ದು ನಿಜ, ಬೆರಗಾದದ್ದು ನಿಜ. ಆದರೆ ಕುಡಿದ ಬೆಳ್ದಿಂಗಳು ಅಂಗಾಲಿ ತನಕ ಇಳಿದ ಮೇಲೆ ಮತ್ತೆ ಮೊದಲಿನ ತನ್ನ  ಸಹಜಸ್ಥಿತಿಗೆ ತಲುಪಿತು. ಬದುಕಿನ ಬಗೆಗಿನ ಅದೇ ಉತ್ಸಾಹ ಉಕ್ಕತೊಡಗಿತು. ಪೊಲೀಸರು ಈ ಹಳ್ಳಿಗೆ ಬಂದುದು ಇದೇ ಪ್ರಥಮ ಸಲವೂ ಅಲ್ಲ. ಹಿಂದೆ ಎರಡು ಮೂರು ಬಾರಿ ಸ್ವಾತಂತ್ರ್ಯ ಚಳವಳಿಗಾರರನ್ನು ಹುಡುಕುವ ನೆಪದಲ್ಲಿ ಬಂದಿದ್ದರು. ಹೇಗೆ ಬಂದರೂ ಹೊರಗಿನವರು ಹೊರಗೇ ಉಳಿದಿದ್ದರು.

ಫೋಜುದಾರನಿಗೆ, ಎಚ್ಚರಾದಾಗ ಮುಂಜಾನೆ ಬೆಳ್ಳಂಬೆಳಗಾಗಿತ್ತು. ಎದ್ದ, ಬಾಗಿಲು ತೆರೆದಿತ್ತು. ‘ಗೌಡ, ಕುಲಕರ್ಣಿ ಎಲ್ಲಿ?’ ಎಂದು ಹಳಬನನ್ನು ಕೇಳಿದ, ಚಾವಡಿಯಲ್ಲಿ ತಮಗಾಗಿ ಕಾಯುತ್ತಿದ್ದಾರೆ ಎಂದನವ. ಬೆಳಗಿನ ವಿಧಿಗಳನ್ನು ಪೂರೈಸಿ ಚಾವಡಿಗೆ ಹೋದ. ಆಗಲೇ ಗೌಡ ನಿನ್ನೆ ರಾತ್ರಿ ಮನೆಯಲ್ಲಿ ನಡೆದುದನ್ನು ದತ್ತಪ್ಪನಿಗೆ ಹೇಳಿ ನಗಾಡುತ್ತಿದ್ದರು. ಫೋಜುದಾರ ಬಂದವನೇ ಅವರನ್ನು ಕರೆದುಕೊಂಡು ಇನ್ನೊಮ್ಮೆ ನಿಂಗೂನ ತೋಟಕ್ಕೆ ಹೋದ. ಅದೇ ನಿಂಗೂನ ಗುಡಿಸಲು ಎಂದು ಖಾತ್ರಿ ಮಾಡಿಕೊಂಡ.

ಅದೇ ಗುಡಿಸಲು ಹಾಗೇ ಇತ್ತು. ಗುಡಸೀಕರ ಬೆಳಗಾಂವಿಗೆ ಹೋದೊಡನೆ ಗೌಡ ಗುಡಿಸಲನ್ನು ಸುಡಿಸದೆ ಹಾಗೇ ಇಟ್ಟಿದ್ದ. ಹೆಣ ಮಣ್ಣುಅ ಮಾಡಿಸಿದ್ದ. ಗುಡಿಸಲನ್ನು ಹಸನು ಮಾಡಿಸಿ ಯಥಾಸ್ಥಿತಿಗೆ ತಂದಿದ್ದ. ಅದೀಗ ಎಷ್ಟು ಸಹಜವಾಗಿದ್ದಿತೆಂದರೆ ಅಲ್ಲಿ ಖೂನಿಯಾಯಿತೆಂದು ಫೋಜುದರನಿಗೇನು, ಸ್ವತಃ ಆ ಊರಿನವರೂ ನಂಬಲಾಗುತ್ತಿರಲಿಲ್ಲ.

ತಿರುಗಿ ಚಾವಡಿಗೆ ಬಂದು ಗುಡಸೀಕರನಿಗೆ ಬುಲಾವ್ ಕಳಿಸಿದ. ಅವನು ಇಲ್ಲವೆಂದು ತಿಳಿಯುತ್ತಲೂ ನಿನ್ನೆಯ ಸಿಟ್ಟೆಲ್ಲ ಅವನ ಮೇಲೆ ತಿರುಗಿತು. ಅವನೇ ಬಂದು  ಊರಿನಲ್ಲಿ ದೋ ಪಾರ್ಟಿ ಉಂಟೆಂದೂ, ತನ್ನ ಪಾರ್ಟಿಯವನನ್ನು ಗೌಡನ ಪಾರ್ಟಿಯ ನಿಂಗೂ ಕೊಂದು ಗುಡಿಸಲಲ್ಲಿಟ್ಟು ಬೆಂಕೀ ಹಚ್ಚಿ ಸುಟ್ಟನೆಂದೂ ಇದಕ್ಕೆ ಗೌಡನ ಬೆಂಬಲವಿತ್ತೆಂದೂ, ಇಂದಿನ ಹಬ್ಬದ ದಿನ ಅನೇಕರ ಖೂನಿ ಆಗಲಿವೆಯೆಂದೂ

ವಕೀಲ ಓದಿದ್ದರೂ ದಡ್ಡತನದಿಂದ ಬಾಯಿಗೆ ಬಂದದ್ದನ್ನೆಲ್ಲ ಒದರಿ ಬರೆದುಕೊಟ್ಟಿದ್ದನಂತೆ. ಅದನ್ನೆಲ್ಲ ಹೇಳಿ ಫೋಜದಾರ, ಅವನೇನು ಕಮ್ಮಿ? – ಬಾಯಿಗೆ ಬಂದ ಹಾಗೆ ಬಯ್ದು ಹೊರಟ. ಹಾಲು ಕುಡಿದು ಹೋಗಬೇಕೆಂದು ಗೌಡ ವಿನಂತಿಸಿಕೊಂಡ. ನಾಲ್ಕೈದು ತತ್ತೀ ಒಡೆದು ತಿಂದು ಚರಿಗೆ ಹಾಲು ಕುಡಿದು ಫೋಜದಾರ ಜೀಪು ಹತ್ತಿದ. ಪೀಡೆ ಹೋಯಿತು. ಅವನ ಅತ್ತ ಹೋದೊಡನೇ ಸೀರೆ ಉಟ್ಟ ನಿಂಗೂನ್ನ ನೋಡಿ ಗೌಡ, ದತ್ತಪ್ಪ 'ಹೋ, ಹೋ'ಎಂದು ನಕ್ಕರು.

ನಿನ್ನೆ ನಿಂಗೂನ ಚಡಪಡಿಕೆ ನೋಡಲಾರದೆ ಲಗಮವ್ವ "ಕರಿಮಾಯಿಗೆ ಬೇಡಿಕೊ, ಪಾರ ಮಾಡತಾಳು" ಎಂದಿದ್ದಳಂತೆ, ನಿಂಗೂ ಅವಳು ಹೇಳಿದಂತೆಯೇ "ಹಡದವ್ವಾ, ಇದರಿಂದ ನನ್ನ ಪಾರು ಮಾಡು, ಸೀರೀ ಉಟ್ಟ ನಿನ ಮುಂದ ಕುಣೀತೀನು" ಎಂದು ಬೇಡಿಕೊಂಡನಂತೆ. ಹೀಗೆ ಹರಕೆ ಹೊತ್ತವನು ಕರಿಮಾಯಿ ಪಾರು ಮಾಡುವ ತನಕ ಕೂಡ ಕಾಯದೆ ಸೀರೆ ಉಟ್ಟುಬಿಟ್ಟಿದ್ದ. ಕರಿಮಾಯಿಯ ಮಹಿಮೆಗೆ ಏನೆನ್ನೋಣ! ಅದರಿಂದ ಅವನಿಗೆ ಲಾಭವೇ ಆಗಿತ್ತು.

ಹೊರಗಿನ ಪೀಡೆ ಹೋಯಿತೇನೋ ನಿಜ. ಆದರೆ ಗುಡಸೀಕರನ ಮನಸ್ಸಿನಲ್ಲಿ ಸೇಡುಳಿಯಿತು. ಆ ದಿನ ಫೋಜುದಾರನೊಂದಿಗೆ ಅವನೂ ಜೀಪಿನಲ್ಲಿ ಬಂದಿದ್ದ. ಆದರೆ ಜನಗಳನ್ನು ಎದುರಿಸಲಾರದೆ ದೂರದಲ್ಲೇ ಇಳಿದು ಕಳ್ಳದಾರಿಯಿಂದ ಮನೆಸೇರಿದ್ದ. ಇಲ್ಲವೆಂದು ತಂಗಿಯಿಂದ ಹೇಳಿಸಿದ್ದ. ಅಂದೇ ರಾತ್ರಿ ತಲೆಮರೆಸಿಕೊಂಡು ಬೆಳಗಾವಿಗೆ ಹೋಗಿ ಎಂಟು ದಿನ ಇದ್ದು ಊರಿಗೆ ಬಂದ. ಅವಮಾನದಿಂದ ವಿಕಾರಗೊಂಡ ಅವನ ಮುಖವನ್ನು ಗುರುತಿಸುವುದೇ ಕಷ್ಟವಾಗಿತ್ತು. ಬಂದ ಮೇಲೂ ತಾನೇನೂ ಮಾಡಿಲ್ಲದವನಂತೆ ಭಂಡತನದಿಂದಲೇ ಇದ್ದ. ಜನ ಅನ್ನುವಷ್ಟು ಅಂದು ಸುಮ್ಮನಾದರು.

ಗೌಡ ಗುಡಸೀಕರನ ಬಗ್ಗೆ ಯೋಚಿಸಲೇಬೇಕಾಗಿತ್ತು. ಹುಡುಗ ಯಾವುದನ್ನೂ ತನ್ನ ಮೂಗಿನ ನೇರದಿಂದಲೇ ನೋಡುತ್ತಿದ್ದ. ಹಾಗೆ ನೋಡಿದಾಗ ಎದುರಿಗೆ ಏನಿದ್ದರೂ, ಊರು ಸಹ ಎರಡಾಗಿ ಕಾಣಿಸುತ್ತಿತ್ತು. ನಂತರ ಬಂದ ಹೋಳಿ ಹಬ್ಬದಲ್ಲಿ ಇದು ಗೌಡನಿಗೂ ಖಾತ್ರಿಯಾಗಿಬಿಟ್ಟಿತು.

## ಹೋಳಿ ಹಬ್ಬ

ಶಿವಾಪುರದ ಪಾಲಿಗೆ ಗಂಡಸರ ಖರೇ ಹಬ್ಬವೆಂದರೆ ಇದೊಂದೇ. ಈ ಊರ ಹೋಳೀ ಹುಣ್ಣಿಮೆಯೆಂದರೆ ಸುತ್ತ ಹದಿನಾಲ್ಕು ಹಳ್ಳಿಗೆಲ್ಲ ಪ್ರಸಿದ್ಧವಾಗಿತ್ತು. ಗಂಡಸರು ಸಂಕೋಚವಿಲ್ಲದೆ ಹಿರಿನಿಂಗ ಕಿರಿನಿಂಗನ್ನೋ ಭೇದವಿಲ್ಲದೆ ಹಬ್ಬದಲ್ಲಿ ಭಾಗವಹಿಸುತ್ತಿದ್ದುದು ಇದಕ್ಕೆ ಕಾರಣವಾಗಿರಬಹುದು ಅಥವಾ ಊರಿನ ಮದುವೆಯಾಗದ ಉಡಾಳರಿಗೂ, ಸೂಳೆಯರ ತಂಡಕ್ಕೂ ಹಾಡಿನ ಜಿದ್ದಾಜಿದ್ದಿ ಸ್ಪರ್ಧೆಯಾಗುತ್ತದಲ್ಲ, ಅದಕ್ಕಿರಬಹುದು. ಅಥವಾ ಹೀಗೂ ಇರಬಹುದು; ಗೋಕಾವಿ ಕರದಂಟು, ತುಕೋಳ, ತಂಬಾಕು, ನಿಪ್ಪಾಣಿ ಬೀಡಿ – ಹೀಗೆ ಒಂದೊಂದೂರು ಒಂದೊಂದಕ್ಕೆ ಪ್ರಸಿದ್ಧವಾದಂತೆ ಶಿವಾಪುರದ ಸೂಳೆ ಎಂಬ ಮಾತೂ ಇರೋಣದರಿಂದ ಸಹಜವಾಗಿಯೇ ಇಲ್ಲಿಯ ಸೂಳೆಯರು ಚೆಲುವೆಯರು, ಅಷ್ಟೇ ಯಾಕೆ ಒಬ್ಬ ಜನಪದ ಕವಿಯ ಪ್ರಕಾರ –

ಇಡೀ ಜಗತಾದಾಗ ಎಲ್ಲೂ ಇಲ್ಲರಿ
ಇಂಥಾ ಮೋಜಿನ ಹುಡಿಗೇರಾ ||
ತುಂಬ ನಿತಂಬಾ ಹುಬ್ಬ ಕುಣಸತಾರ
ನಿಂತಲ್ಲೆ ಬೆವರ್ಯಾರ ಪೈಲ್ವಾನರಾ ||
ತೊಡಿಗೊಳ ಹುರಿಮಾಡಿ ಉಸರ ಹಾಕತಾರ
ಬಾಸಿಂಗ ಕಾಣದ ಹುಡುಗೋರಾ ||

ಏನಂತ ಹೇಳಲಿ ಶಿವಾಪೂರ ಸೂಳೇರ
ಅಸಲ ಸೊಂಟದ ಸಡಗರಾ ||

– ಎಂದು ಇರುವುದರಿಂದ ಇದೂ ಕಾಣವಾಗಿರಬಹುದು. ಅಥವಾ ಬೇರೆ ಕಾರಣಗಳೂ ಇರಬಹುದು. ಅಂತೂ ಈ ಊರ ಹೋಳೀ ಹಬ್ಬ ಪ್ರಸಿದ್ಧವೆಂಬುದಂತೂ ನಿಜ.

ಇದು ಈ ಊರವರಿಗೂ ತಿಳಿದದ್ದೆ. ಆದ್ದರಿಂದಲೇ ಹೋಳೀ ಹುಣ್ಣಿಮೆ ಇನ್ನೂ ಹತ್ತು ಹನ್ನೆರಡು ದಿನ ಇರುವಾಗಲೇ ಊರಿನ ಜನ ಮಾನಸಿಕ ಸಿದ್ಧತೆ ಮಾಡಿಕೊಳ್ಳುತ್ತಾರೆ. ತದಿಗೆಯ ಚಂದ್ರನನ್ನು ನೋಡಿದೊಡನೆ ಮಕ್ಕಳೆಲ್ಲ ಓಣಿಯಲ್ಲಿ ಸೇರಿ ಹೊಯ್ಕೋಳ್ಳತೊಡಗುತ್ತವೆ. ಒಂದೆರಡು ಗಂಟೆ "ಹೊಯ್ಕೊಳ್ಳುವ ಸೇವೆ" ಮಾಡಿ, ಮಂದಿ ಮಲಗಿದ ಮೇಲೆ ಪಕ್ಕದ ಹಿತ್ತಲಗಳಿಗೆ ಹಾರಿ ಕುಳ್ಳು(ಬೆರಣಿ) ಕಟ್ಟಿಗೆ ಕದ್ದು ಹಾಳು ಮನೆಯಲ್ಲಿ ಸಂಗ್ರಹಿಸಿ ಮಲಗಲಿಕ್ಕೆ ಹೋಗುತ್ತವೆ. ಹುಣ್ಣಿಮೆ ಬರುವವರಿಗೆ ಪ್ರತಿ ರಾತ್ರಿ ಈ ಕಾರ್ಯಕ್ರಮ ಚಾಚೂ ತಪ್ಪದೆ ನಡೆಯುತ್ತದೆ.

ವಯಸ್ಸಿನಲ್ಲಿ ಇವರಿಗಿಂತ ದೊಡ್ಡಹುಡುಗರು, ಆದರೆ ಮದುವೆಯಾಗದವರು, ಕರಿಮಾಯಿಯ ಗುಡಿಯಲ್ಲಿ ರಾತ್ರಿ ಸೇರಿ ಹಳೆಯ ಹೋಳೀ ಪದ ಜ್ಞಾಪಿಸಿಕೊಳ್ಳುತ್ತ, ಹೊಸ ಪದ ಹೊಸೆಯತೊಡಗುತ್ತಾರೆ. ಈ ಹಬ್ಬವನ್ನು ಒಟ್ಟು ಎರಡು ದಿನ ಆಚರಿಸುತ್ತಾರೆ. ಹುಣ್ಣಿಮೆಯ ದಿನ ಗೌಡನ ನೇತೃತ್ವದಲ್ಲಿ ಹಿರಿಯರು, ಪ<ಚರು ವಾದ್ಯ ಸಮೇತ ಕಾಡಿಗೆ ಹೋಗಿ ಎಸಳಾದ ಮರದ ಟೊಂಗೆಯೊಂದನ್ನು ಕಡಿದು ತಂದು ಕರಿಮಾಯಿಯ ಗುಡಿಯ ಮುಂದೆ ನಿಲ್ಲಿಸುತ್ತಾರೆ. ಮಕ್ಕಳು ಕದ್ದು ತಂದ ಕುಳ್ಳು ಕಟ್ಟಿಗೆಗಳನ್ನೆಲ್ಲ ತಂದು ಅದರ ಸುತ್ತ ಗುಂಪಿ ಹಾಕುತ್ತಾರೆ. ಆ ದಿನ ಮನೆಯಲ್ಲಿ ಹೋಳಿಗೆಯೂಟ, ರಾತ್ರಿ ಊರಿನ ಉತ್ಸಾಹಿಗಳು ತಯಾರು ಮಾಡಿದ ಆಟ, ಮೋಜು ಸೋಗು ನಡೆಯುತತವೆ.

ಮಾರನೇ ದಿನವೇ ಧೂಳವಾಡ, ಹೊತ್ತು ಹುಟ್ಟುವ ಮುಂಚೆಯೇ ಗೌಡನ ನೇತೃತ್ವದಲ್ಲಿ ಜನರೆಲ್ಲ ಕಾಮನನ್ನು, ಅರ್ಥಾತ್ ಮರದ ಟೊಂಗೆಯನ್ನು ನಿಲ್ಲಿಸಿದ ಸ್ಥಳಕ್ಕೆ ವಾದ್ಯ ಸಮೇತ ಬರುತ್ತಾರೆ. ಅವರೆಲ್ಲ ಕಾಮನ ಸುತ್ತ ಗಿಜಿಗಿಟ್ಟುತ್ತ ನಿಂತ ದೃಶ್ಯ ನೋಡಬೇಕು ಒಬ್ಬರು ಮೈಮೇಲೂ ಸರಿಯಾಗಿ ಬಟ್ಟೆ ಇರುವುದಿಲ್ಲ. ಒಬ್ಬೊಬ್ಬರೂ ಈ ಹಬ್ಬಕ್ಕೆಂದೇ ಇಟ್ಟ ಹಳೇ, ಹರಿದ ಚಿಂದಿ ಬಟ್ಟೆಗಳನ್ನು ಹೊರತೆಗೆದು ಹಾಕಿಕೊಂಡಿರುತ್ತಾರೆ. ಸೊಂಟದ ಸುತ್ತ ಚಿಂದಿ ಬಟ್ಟೆಯ ಹಿಂಡು ಹಿಂಡು ಗಂಡಸರು ಬಾಯ್ಗೆ ಕೈ ಒಯ್ಯುವ ಅವಸರದಲ್ಲಿರಲು, ಮುದುಕರು ಲಗಮವ್ವನ ನಿಂತಂಬಗಳನ್ನೇ ನೋಡುತ್ತ ಹಳೆಯ ಕಾಲ ನೆನಪಿಸಿಕೊಂಡು ಸಂಭ್ರಮದಲ್ಲಿರಲು, ನೋಟ ಕಾಣದೆ ಅವಕಾಶ ಸಿಕ್ಕಲ್ಲಿ ಉಸುಳುತ್ತ ಸಣ್ಣ ಮಕ್ಕಳು ಚಡಪಡಿಸುತ್ತಿರಲು ಗೌಡ ಕಾನ ಗುಂಪಿನ ಬೆಂಕಿ ಹಚ್ಚುತ್ತಾನೆ. ಕೂಡಲೇ ಎಲ್ಲರೂ ಅಕ್ಷರಶಃ ದನಿ ಮುಗಿಲು ಮುಟ್ಟುವ ಹಾಗೆ ಲಬೋಲಬೋ ಅಂತ ಹೊಯ್ಕೊಳ್ಳುತ್ತಾರೆ. ವಾದ್ಯದವರು ವಾದ್ಯ ಬಾರಿಸುತ್ತಾರೆ. ಅವರು ಹೊಯ್ಕೊಳ್ಳುವುದರ ಮೇಲಿಂದಲೇ ಬೆಕಾದರೆ ಅವರವರ ವಯಸ್ಸು ಹೇಳಿಬಿಡಬಹುದು. ಮುದುಕರು ಒಂದೆರಡು ಸಲ ಹೊಯ್ಕೊಂಡು ಸುಮ್ಮನಾದರೆ ನಡು ವಯಸ್ಸಿನವರು ಅವರಿಗಿಂತ ಹೆಚ್ಚು, ಮದುವೆಯಾಗದ ಹುಡುಗರು ಇನ್ನೂ ಹೆಚ್ಚು. ಮಕ್ಕಳು ಇಲ್ಲಿಸುವುದೇ ಇಲ್ಲ.

ಅದೆಲ್ಲ ಸುಟ್ಟು ಬೂದಿಯಾದ ಮೇಲೆ ಲಗಮವ್ವ ಒಂದು ಹರಿವಾಣದಲ್ಲಿ ಬೂದಿ ತುಂಬಿಕೊಂಡು ಊರ ಸೀಮೇಯಗುಂಟ ಸಿಂಪಡಿಸಿ ಬರುತ್ತಾಳೆ. ಅಂದರೆ ಸೀಮೆಯಾಚೆಯ ರೋಗ – ರುಜಿನಾದಿಗಳು ಊರಿಗೆ ಬರುವುದಿಲ್ಲವೆಂದೂ, ಆ ಭಾಗ ಧನ – ಧಾನ್ಯಗಳಿಂದ ತುಂಬಿ ತುಳುಕುವುವೆಂದೂ ನಂಬಿಕೆ, ಇಷ್ಟೊತ್ತಿಗಾಗಲೇ ಹೊತ್ತು ಮೂರು ಮಾರು ಏರಿರುತ್ತದೆ. ಸೀಮೆ ಕಟ್ಟಿದ ಲಗಮವ್ವ ಸೀದಾ ಹೋಗಿ ಸೂಳೆಯರನ್ನೆಲ್ಲ ಕಲೆಹಾಕಿ ಗುಡಿಗೆ ಹೊರಡುತ್ತಾಳೆ. ಹಾಡಿನ ಜಿದ್ದಾದ ಮೇಲೆ ಬಣ್ಣ ಗೊಜ್ಜಾಡಬೇಕಲ್ಲ, ಸೂಳೆಯರು ಸಾಮಾನ್ಯವಾಗಿ ಹರಕು ಸೀರೆ ಉಟ್ಟಿರುತ್ತಾರೆ. ಅವರ ಸೀರೆ ಎಷ್ಟೆಷ್ಟು ಹರಿದಿದ್ದರೆ ರಸಿಕರ ಬಾಯಿ ಅಷ್ಟಷ್ಟು ತೆರೆದಿರುತ್ತವೆ.

ಹಾಗೆ ಇವರ ತಂಡ ಗುಡಿಯ ಕಡೆ ಹೊರಟರಾಯಿತು. ಹುಡುಗರು ತಂಡತಂಡವಾಗಿ ಹೊಯ್ಕೊಳ್ಳುತ್ತ ಬೆನ್ನು ಹತ್ತುತ್ತಾರೆ. ಮಧ್ಯೆ ಮಧ್ಯೆ ಅವರಿಗೂ ಇವರಿಗೂ ಹ್ಯಾವದ ಮಾತು, ದೀಡೀ ದಿಕ್ಕಟ್ಟು, ಕುಚೇಷ್ಟೆಗಳ, ಕೊಡುಕೊಳೆ ನಡೆದಿರುತ್ತದೆ ಉದಾ: "ಏಳೂರ ನೀರು ಕುಡಿದಲ್ಲದ

ಈ ಮಣಕಿನ ಬೆದಿ ನಿಲ್ಲಾಣೆಲ್ಲಲೇ" ಎಂದು ಗಂಡು ಹಿಂಡಿನಿಂದ ಮಾತು ಬಂದರೆ "ಅಯ್ಯ, ತೊಯ್ಸಿಕೊಂಡ ಕಾಗೀ ಹಾಂಗ ಮಾರಿ ಮಾಡಿಕೊಂಡ ಎಷ್ಟ ಮಾತಾಡತೈತಿ ನೋಡs" ಎಂದು ಆ ಕಡೆಯಿಂದ ಬರುತ್ತದೆ. "ಹಿಡದ ಹಿಂಡಿದರ ಮೈಯಾಗ ತಟಕ ರಸ ಇಲ್ಲ; ಬಾಯಿ ನೋಡ ವಟ ವಟಾ" ಎಂದು ಈ ಕಡೆಯಿಂದ ಬಂದರೆ "ಸೀರೀ ಮರೀಗಿ ಸಿಂಬಳಾ ಒರಸತಾಳ, ಗಲ್ಲ ಕಡದರ ಗುಲ್ಲ ಮಾಡತಾಳ, ಯಾರಲೇ ಹುಡುಗಾ?" ಎಂದೊಂದು ಚಿಗುರು ದನಿ ಮೂಡಿದರೆ ಉಳಿದ ಹಿಂಡೆಲ್ಲ ಅವರಲ್ಲಿನ ಒಬ್ಬಳ ಹೆಸರು ಹೇಳಿ ಹೊಯ್ಕೊಳ್ಳತೊಡಗುತ್ತಾರೆ. ಹೀಗೆ ಸಭ್ಯತೆಯಿಂದ ಸುರುವಾದದ್ದು ಯಾವ ಕೊನೆ ತಲುಪೀತೆಂದು ಹೇಳಲಿಕ್ಕಾಗುವುದಿಲ್ಲ. ಗುಡಿಯ ತನಕ ಇಂಥ ಕೊಂಕು ಬಾಣಗಳ ಸುರಿಮಳೆ ಹಾಗೇ ಸಾಗೇ ಇರುತ್ತದೆ.

ಪ್ರತಿಯೊಬ್ಬ ಸೂಳೆಯ ಕೈಯಲ್ಲಿ ಈ ದಿನ ಆತ್ಮರಕ್ಷಣೆಗೆ ಒಂದೊಂದು ಮುಳ್ಳಿನ ಸಿಂದೀ ಝಳಿಕೆ ಇರುತ್ತದೆ. ಯಾಕೆಂದರೆ ಬಣ್ಣ ಗೊಜ್ಜುವಾಗ, ಹೇಳಿ ಕೇಳಿ ಶಿವಾಪುರದ ಹುಡುಗರಾದ್ದರಿಂದ ಸೊಂಟದ ವಿಷ ಇಳಿಯುವ ತನಕ ಅವಕ್ಕೆ ಮನುಷ್ಯರ ಮಾತೇ ತಿಳಿಯುವುದಿಲ್ಲವಾದ್ದರಿಂದ ಏನಾದೀತು, ಏನಾಗಲಿಕ್ಕಿಲ್ಲ ಎಂದು ಹೇಳಬರುವಂತಿಲ್ಲ, ಈ ಹೊತ್ತು ಯಾರೇನು ಮಾಡಿದರೂ, ಯಾರೂ, ಸ್ವತಃ ದೇವರೂ ಕೇಳಬಾರದು. ಮುದಿ ಸೂಳೆಯರಿಗಂತೂ ಕೈಕೊಟ್ಟ ಹಳೆ ಮಿಂಡರ ಸೇಡು ತೀರಿಸಿಕೊಳ್ಳುವುದಕ್ಕೆ ಇದು ಒಳ್ಳೇ ಸಂದರ್ಭ. ಜನಗಳಲ್ಲಿ ನುಗ್ಗಿನುಗ್ಗಿ ಮೈ ನೆತ್ತರಾಡುವ ಹಾಗೆ ಸಿಂದೀ ಝಳಕಿಯಿಂದ ಬಾರಿಸುತ್ತಾರೆ. ಅವರು ತಾಕತ್ತಿದ್ದರೆ ಎದುರಿಸುತ್ತಾರೆ; ಇಲ್ಲವೆ ಹುಡುಗರ ಹಿಂದೆ ಅಡಗಿ ಅಡಗಿ ಓಡಿಹೋಗುತ್ತಾರೆ. ಇದು ಅವರವರ ಪ್ರೀತಿ, ಸೊಕ್ಕು, ಧಿಮಾಕು, ದಿಗರಿಗೆ ಸೇರಿದ್ದು, ಯಾಕೆಂದರೆ ಏಟು ತಿಂದಷ್ಟೂ ಅದು ಹೆಮ್ಮೆ ಪಡುವ ವಿಷಯ – ಗಂಡಸರಿಗೆ.

ಗುಡಿಯ ಕಟ್ಟೆಗೆ ಬಂದಾಗ ಮೇಲೆ ಹಾಡುವ ಎರಡು ತಂಡಗಳೂ ಎದುರು ಬದುರು ನಿಲ್ಲುತ್ತವೆ. ಮಧ್ಯದಲ್ಲಿ ಹಲಗೆಯವರು ಅರೆ ನಗ್ನರಾದ ತೆರೆಬಾಯ ಗಂಡು ಹಿಂಡು ಸುತ್ತ ಸೇರುತ್ತದೆ, ಚಾವಡಿ ಕಟ್ಟೆಯ ಮೇಲೆ ಗೌಡ, ಅವನ ಸುತ್ತ ಹಕ್ಕಿನವರು, ಅಂದರೆ ಪಂಚರು, ಕುಲಕರ್ಣಿ – ಕೂರುತ್ತಾರೆ. ಗೌಡ ಹಾಡುಗಾರಿಕೆ ಸುರುವಾಗಲೆಂದು ಅಪ್ಪಣೆ ಕೊಟ್ಟಕೂಡಲೇ ಎರಡೂ ತಂಡದ ನೇತಾರರು ಗೌಡನಿಗೂ, ಪಂಚರಿಗೂ ನಮಸ್ಕರಿಸಿ ಸುರುಮಾಡುತ್ತಾರೆ.

ಅವರ ಮೇಲೆ ಇವರು, ಇವರ ಮೇಲೆ ಅವರು ವ್ಯಂಗ್ಯದ ಪದ ಹೇಳುತ್ತ ನಡು ನಡುವೆ ರಸಿಕರ ಕೇಕೆ, ವವ್ವಾ, ಬಲೆಗಳೊಂದಿಗೆ ಹಾಡಿನಂತ್ಯದ ಹುಡುಗರ ಹೊಯ್ಕೊಳ್ಳುವುದರೊಂದಿಗೆ ಹಾಡುಗಾರಿಕೆ ಒಂದೆರಡು ತಾಸು – ಹಾಗೆ ರಂಗೇರಿದರೆ ಇನ್ನೂ ಒಂದೆರಡು ತಾಸು ಮುಂದುವರಿಯುತ್ತದೆ. ಮುಗಿದಾದ ಮೇಲೆ ಗೌಡ ಇಬ್ಬರಿಗೂ ಖುಷಿಯಾಲಿ ಅಂದರೆ ಒಂದೊಂದು ರೂಪಾಯಿ ಕೊಡುತ್ತಾನೆ. ಪಂಚರೂ ಕೊಡುತ್ತಾರೆ. ಅಲ್ಲಿಗೆ ಹಿರಿಯರ ಭಾಗ ಮುಗಿಯಿತು. ಮುಂದೆ ಹುಡುಗರದೇ ಆಟ. ಸೂಳೆಯರಿಗೆ ಬಣ್ಣ ಗೊಜ್ಜುತ್ತ ಅವರಿಂದ ಸಿಂದೀ ಗರಿಯ ಏಟು ತಿನ್ನುತ್ತ ಆಟವಾಡುತ್ತಾರೆ. ಇದು ತಲೆತಲಾಂತರದಿಂದ ನಡೆದುಬಂದ ಪದ್ಧತಿ.

ಆದರೆ ಈ ಸಲ ಹಾಗಾಗಲಿಲ್ಲ. ಗೌಡನೊಬ್ಬನನ್ನು ಬಿಟ್ಟು ಉಳಿದವರೆಲ್ಲ ಬಂದಾಗಿತ್ತು. ಗುಡಿಯ ಕಟ್ಟೆಯ ಮೇಲೆ ಹಕ್ಕಿನವರು ಕುಳಿತುಕೊಂಡು ಗೌಡಿನಿಗಾಗಿ ಕಾಯುತ್ತಿದ್ದರು. ಹಾಡಿನ ತಂಡದವರು ತಂತಮ್ಮಲ್ಲೇ ಹಾಡಲಿರುವ ಪದಗಳ ಹೊಳಹು ಹಾಕುತ್ತ ಸೇರಿಸಬೇಕಾದ ವಿವರಗಳನ್ನು ಚರ್ಚಿಸುತ್ತ ಗುಂಪಿನ ಮೇಲೆ ಅದರಿಂದಾಗಬಹುದಾದ ಪರಿಣಾಮಗಳನ್ನು ಕಲ್ಪಿಸಿಕೊಳ್ಳುತ್ತ ಸಂತೋಷಿಸುತ್ತಿದ್ದರು. ನಾಯೆಲ್ಯಾ ಹಲಗೆ ಕಾಸಿ ಅದರ ನಾದ ಹದ ಮಾಡತೊಡಗಿದ್ದ. ಈ ವರ್ಷ ಸೂಳೆಯರ ತಂಡದಲ್ಲಿ ದುರ್ಗಿಯಿದ್ದುದೊಂದು ವಿಶೇಷ ಆಕರ್ಷಣೆಯಾಗಿತ್ತು. ಕೆಲವರು ಆಗಾಗ ದೀಡಿ ಮಾತು ಹೇಳಿ ದುರ್ಗಿಯ ಗಮನ ತಮ್ಮ ಕಡೆಗೆ ಸೆಳೆಯುತ್ತಲೂ, ಸೆಳೆದದ್ದಕ್ಕೆ ಹೆಮ್ಮೆಪಡುತ್ತಲೂ ಇದ್ದರು. ಮಾತು ಹೊಳೆಯದ ಮಂದಮತಿಗಳು ಎಲ್ಲರಿಗಿಂತ ಜೋರಾಗಿ ನಕ್ಕು, ಹಾಗೆ ನಕ್ಕಾದರೂ ದುರ್ಗಿಯ ಗಮನ ತಮ್ಮ ಕಡೆ ಹರಿಯುವಂತೆ ಮಾಡಲು ಖಟಪಟಿ ಮಾಡುತ್ತಿದ್ದರು. ತಡವಾದದ್ದಕ್ಕೆ ತಡೆಯದೆ ಒಂದೆರಡು ಎಳೇ ಹಸುಳೆಗಳು ತಮಗಾಗಿ ಕಾದಿರುವಂತೆ ಹೊಯ್ಕೊಳ್ಳಲಾರಂಭಿಸಿ ಹಿರಿಯರ "ಬಾಯ್ಮುಚ್ರೆಲೇ, ಛೀ ಥೂ" ಗಳಿಗೆ ಪಕ್ಕಾಗಿ ಸುಮ್ಮನಾದವು.

ಅಷ್ಟರಲ್ಲಿ ಗುಡಸೀಕರನ ಸವಾರಿ ಆಗಮಿಸಿತು, ಕಳ್ಳ ಸಿದ್ರಾಮ ಕೂತ, ನಿಂತ ಮಂದಿಯನ್ನು ಬದಿಗೆ ಸರಿಸಿ ಹಾದಿ ಮಾಡುತ್ತಾ ಮುಂದೆ ಮುಂದೆ ಬಂದ. ಹಿಂದೆ ಗುಡಸೀಕರನೂ, ಅವನ ಹಿಂದೆ ಮೆಂಬರರೂ ಬರುತ್ತಿದ್ದರು. ಬಂದವರು ಇವರೇ ಎಂದು ಗೊತ್ತಾಗಿ ಜನ ಮತ್ತೆ ಮೊದಲಿನಂತಾದರೂ. ಕಳ್ಳ ಸಿದ್ರಾಮನನ್ನೂ ದಾಟಿ ಗುಡಸೀಕರ ನೇರವಾಗಿ ಕಟ್ಟೆಯ ಕಡೆ ನಡೆದ. ಕಟ್ಟೆಯಾಗಲೇ ಹಕ್ಕಿನ ಕುಳಗಳಿಂದ ಭರ್ತಿಯಾಗಿತ್ತು. ಗೌಡನಿಗಾಗಿ ಜಮಖಾನೆಹಾಸಿ, ಹಿಂದೊಂದು ತೆಕ್ಕೆಯಿಟ್ಟು ಒಬ್ಬರು ಕೂರುವಷ್ಟು ಮಾತ್ರ ಜಾಗ ಖಾಲಿಬಟಿದ್ದರು. ಗುಡಸೀಕರ ನೆಟ್ಟಗೆ ಕಟ್ಟೆಯೇರಿ ಕುಳಿತ ಕುಳಗಳನ್ನು ದಾಟಿ ಗೌಡನ ಜಾಗದಲ್ಲೇ ಕೂತುಬಿಟ್ಟ!

ಕೂತ ನಿಂತವರೆಲ್ಲ ಒಮ್ಮೆಲೇ ಒಂದು ಕ್ಷಣ ಸ್ತಬ್ಧರಾಗಿ ಆ ಕಡೆ ನೋಡತೊಡಗಿದರು. ಮೆಲ್ಲಗೆ ತಮ್ಮ ತಮ್ಮಲ್ಲೇ ಗುಸುಗುಸು ಸುರುಮಾಡಿದರು. ಜನ ಇದನ್ನು ನಿರೀಕ್ಷಿಸಿರಲಿಲ್ಲ. ಆಗಬಾರದ್ದು ಆಗಿಹೋದಂತೆ ಹಿರಿಯರು ಕೈ ಕೈ ಹಿಸುಕಿಕೊಂಡರು, ನಾಯಿಲ್ಯಾ ಹಲಗೆ ಹದಮಾಡುವುದನ್ನು ಬಿಟ್ಟು ಕಾಲೆತ್ತರಿಸಿ ಗೌಡನ ಸ್ಥಳದಲ್ಲಿ ಕೂತ ಸರಪಂಚನನ್ನು ನೋಡಿದ. ದತ್ತಪ್ಪನ ಮುಖದ ಮೋಜು ಮಾಯವಾಯಿತು.

ಎಲ್ಲರ ಕಣ್ಣು ತನ್ನನ್ನೇ ಇರಿಯುತ್ತಿದ್ದುದು, ಎಲ್ಲರ ಪಿಸುನುಡಿಗೆ ತಾನೇ ವಸ್ತುವಾದದ್ದು ಸರಪಂಚನಿಗೂ ತಿಳಿಯಿತು. ತನ್ನ ಪಾಡಿಗೆ ತಾಉ ಏನನ್ನೂ ಗಮನಿಸಿಲ್ಲವೆಂಬಂತೆ ಸುಮ್ಮನಿರಲು ಉತ್ನಿಸಿದ. ಸಾಧ್ಯವಾಗಲಿಲ್ಲ. "ಎಲಡಿಕಿ ಚೀಲ ತಂದಿಯೇನಲೇ ನಿಂಗೂ?" ಎಂದು ಕಟ್ಟೆಯ ಹತ್ತಿರ ಕೈಕಟ್ಟಿ ನಿಂತ ನಿಂಗೂನನ್ನು ಕೇಳಿದ. ಅದನ್ನವನು ಸಾಮಾನ್ಯವೆಂಬಂತೆ ಹೇಳಿದರು ಅದು ಎಲ್ಲರಿಗೂ ಕೇಳಿಸುವಷ್ಟು, ಹೆದರಿದ ಹುಡುಗರು ಜೋರಾಗಿ ಮಾತಾಡುವಂತೆ ದನಿ ಎತ್ತರವಾಗಿತ್ತು. ತನ್ನ ಮಾತಿಗುತ್ತರವಾಗಿ ಯಾರಾದರೂ ಮಾತಾಡಬೇಕೆಂಬ ಆಸೆಯಿತ್ತು. ಅಲ್ಲಿ ಕೂರಬಾರದು, ಏಳಬಾರದು, ಕೂತರೆ ಎಲ್ಲರ ಕಣ್ಣು ಎದುರಿಸಬೇಕು, ಎದ್ದರೆ ಅವಮಾನ ಏನಾದರೂ ಮಾಡುತ್ತಾನೆಂದರೆ ನಿಂಗೂ ಏನೂ ಹೇಳಲಾರದೆ ಒಂದು ಬಾರಿ ಹಲ್ಲು ಕಿಸಿದು ಜನಗಳನ್ನು ನೋಡಿದ ಅಷ್ಟೆ.

ದತ್ತಪ್ಪನ ಚಡಪಡಿಕೆ ಸ್ಪಷ್ಟವಾಗಿತ್ತು. ಆದರೆ ಬಿಟ್ಟು ಹೇಳಲೊಲ್ಲ. ಇಷ್ಟರಲ್ಲೇ ಗೌಡ ಬರಬಹುದು. ಅವನನ್ನೆಲ್ಲಿ ಕೂರಿಸಬೇಕು? ಹಾಗೇ ಕೂತ, ನಿಂತವರ ಅಸಮಾಧಾನವೂ ಸ್ಪಷ್ಟವಾಗಿತ್ತು. ಪಂಚಾಯ್ತಿ ಮೆಂಬರರು, ತಾವೇ ತಪ್ಪುಮಾಡಿದಂತೆ. ಅದನ್ನು ತೋರಗೊಡದೆ ಹರಕಂಗಿಯ ಜೇಬುಗಳಲ್ಲಿ ಏನೋ ಹುಡುಕುತ್ತಿದ್ದಂತೆ, ಮರೆತವರು, ಏನೋ ಜ್ಞಾಪಿಸಿಕೊಳ್ಳುತ್ತಿದ್ದಂತೆ ಅಭಿನಯಿಸತೊಡಗಿದರು. ಕೊನೆಗೆ ಕಳ್ಳ ತನ್ನ ಅಭಿನಯ ಸಾಲದೆಂದು ಕಂಡುಕೊಂಡು ಎದುರಿಗಿದ್ದ ಬಾಳೂನಿಗೆ "ಏ ಬಾಳೂ, ಎಲಡಿಕೆ ಚಂಚಿ ತಂದೀಯೇನಲಾ" ಎಂದು ಕೇಳಿದ. ಕೊನೇ ಪಕ್ಷ ಅವನು ಇಲ್ಲವೆಂದಾದರೂ ಹೇಳಿಯಾನೆಂದು. ಬಾಳೂ, ಎಲಡಿಕಿ ತಿನ್ನುತ್ತಿದ್ದವನು ಚಂಚಿಯನ್ನು ಎಡಗೈಯಲ್ಲಿ ಹಿಸಿದುಕೊಂಡು ಬಲಗೈ ಬೆರಳುಗಳನ್ನು ತುಟಿಗಂಟಿಸಿ ಪಿಚಕ್ ಎಂದು ಎಲ್ಲರಿಗೂ ಕೇಳಿಸುವಂತೆ ಉಗುಳಿ ಇಲ್ಲವೆಂಬಂತೆ ಕೈಮಾಡಿದ. ಕಳ್ಳ, ಅವನು ತನ್ನ ಮೇಲೆ ಉಗುಳಿದ ಹಾಗೆ ಮುಖ ಸಿಂಡರಿಸಿಕೊಂಡು ಮಂದಿ ನೋಡಿದರೇನೋ ಎಂಬಂತೆ ಸುತ್ತ ನೋಡಿದ.

ಲಗಮವ್ವನಿಗೆ ಸುತ್ತ ಬಿಗಿದ ಮೌನ ತಡೆಯಲಾಗಲಿಲ್ಲ. "ಇಲ್ಲಿ ಯಾರೂ ಗಂಡಸರs ಇಲ್ಲೇನ್ರಿ?" ಎನ್ನುತ್ತ ಎದ್ದು ನಿಂತು ಏನೋ ಹೇಳಬೇಕೆಂದಿದ್ದಳು. ಅಷ್ಟರಲ್ಲಿ ಚೇರಮನ್ ಇಡೀ ಸಭಗೆ ತಾನೆ ಹಿರಿಯನೆಂಬಂತೆ ತನ್ನ ಅಪ್ಪಣೆಗಾಗಿ ಎಲ್ಲರೂ ಕಾಯುತ್ತಿದ್ದಂತೆ –

"ಹೂ ಲಗಮವ್ವಾ, ಇನ್ನ ಸುರಿಮಾಡಿರಿ" ಎಂದ. ನಿಂಗೂ ಈಗ ಸ್ವಲ್ಪ ಧೈರ್ಯತಾಳಿ –

"ಅದು ಗೌಡ್ರು ಕೂರೋ ಜಾಗ: ಅವರು ಬರೋ ಹೊತ್ತಾತು, ಆ ಜಾಗಾ ಬಿಟ್ಟ ಇಳೀತಿ?"

ಎಂದು ಹೇಳುತ್ತಿರುವಂತೆಯೇ –

"ಬರಲಿ ಬರಲಿ, ಅವರಿಗೂ ಇಲ್ಲೇ ಜಾಗ ಮಾಡಿ ಕೊಡೋಣ: ಅದಕ್ಯಾಕಿಷ್ಟ ತಲೀ ಕೆಡಿಸಿಕೊಳ್ತಿ?"

– ಎಂದು ನಿರ್ಲಕ್ಷ್ಯ ನಟಿಸುತ್ತಾ ಹೇಳಿ,

"ಹೂ ಲಗಮವ್ವಾ, ಸುರು ಮಾಡರಿನ್ನ"

– ಎಂದ. ಲಗಮವ್ವ ಇವನ ಕಡೆ ಬೆನ್ನು ತಿರುಗಿಸಿ ಕೂತಳಷ್ಟೆ. ಅಲ್ಲೇ ನಿಂತಿದ್ದ ರಮೇಶ, ಇವನೂ ಒಬ್ಬ ಮೆಂಬರನೇ, ಸಂದರ್ಭದ ಗಾಂಭೀರ್ಯ ಮುರಿಯುತ್ತ –

"ಸುರು ಮಾಡವಾ ಲಗಮವ್ವಾ, ಊರ ಚೇರ್ಮನ್ನರs ಹೇಳತಾರಂದರ ಇಮ್ಮತ್ತಿಲ್ಲೇನ? ಏ ನಾಯೆಲ್ಯಾ ಬಾರಿಸಲೇ ಹಲಗಿ"

– ಎಂದು ಚೇರ್ಮನ್ನರ ಅಭಿಮಾನದ ಪರವಾಗಿ ಮಾತಾಡಿದ. ತನ್ನನ್ನೇ ಕುರಿತು ರಮೇಶ ಹೇಳಿದ್ದರಿಂದ ಏನು ಮಾಡಲೂ ತೋಚದೆ ನಾಯೆಲ್ಯಾ ಎದ್ದು ನಿಲ್ಲುತ್ತಿದ್ದ; ಅಷ್ಟರಲ್ಲಿ ಲಗಮವ್ವ ಕೂತಲ್ಲಿಂದಲೇ –

"ನಮಗೇನೂ ಅವಸರಿಲ್ಲರೀ. ಗೌಡ ಬರಲಿ, ಸಾವಕಾಶ ಸುರುಮಾಡೂಣಂತ" ಎಂದಳು. ಇದನ್ನು ಕೇಳಿ ನಯೆಲ್ಯಾ ಕುಕ್ಕರಿಸಿದ. ಸರಪಂಚನ ಮುಖ ಇಷ್ಟಿದ್ದದ್ದು ಇಷ್ಟಾಯಿತು. ಈ ಒರಟುತನ ಅವನ ನಿರೀಕ್ಷೆಗೆ ಮೀರಿದ್ದು. ಹೇಗೆ ಎದುರಿಸಬೇಕೆಂದು ಗೊತ್ತಾಗದೆ ಚಡಪಡಿಸಿದ. ಅವನ ಮುಖದಲ್ಲಿ ಚಡಪಡಿಕೆ ಅವನ ಮೂಗಿನಷ್ಟೇ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಎಲ್ಲರ ಕಣ್ಣುಗಳು ತನ್ನನ್ನು ಇರಿಯುವಂತೆ ಅನ್ನಿಸಿತು. ಎಲ್ಲರ ಮನಸ್ಸುಗಳಲ್ಲಿ ತಾನು ರಾಡಿಯಲ್ಲಿ ಸಿಗಬಿದ್ದು ಒದ್ದಾಡುತ್ತಿರುವಂತೆ ಅನ್ನಿಸಿತು. ಎದುರಿಸಲಾರದೇ ಕಿಸೆಗೆ ಕೈಬಿಟ್ಟು ಸಿಗರೇಟು ತೆಗೆದು ಹೊತ್ತಿಸಿ ಪುಸ್‌ಪುಸ್ ಎಂದು ಹೊಗೆಬಿಟ್ಟ. ಬೇರೆ ಸಂದರ್ಭದಲ್ಲಾಗಿದ್ದರೆ ಜನ ಆ ಸಿಗರೇಟು, ಆ ಹೊಗೆ ಅದರ ವಾಸನೆಯೊಂದಿಗೆ ಆಟವಾಡಬಹುದಿತ್ತು.

ಆಶ್ಚರ್ಯವೆಂದರೆ ದತ್ತಪ್ಪ ಸುಮ್ಮನೇ ಕೂತಿದ್ದ. ತಾನು ತೋರಬೇಕಾದ ಪ್ರತಿಕ್ರಿಯೆ ಜನರೇ ತೋರುತ್ತಿದ್ದಾರೆಂದೋ, ಗೌಡ ಬರಲಿ, ನೋಡಿಕೊಳ್ಳೋಣವೆಂದೋ – ಅಂತೂ ಸುಮ್ಮನಿದ್ದ. ಪರಿಸ್ಥಿತಿಯನ್ನು ಗಮನಿಸಿ ಒಬ್ಬ ಎಳೆ ಬಾಲಕ ಲಬೊ ಲಬೊ ಹೊಯ್ಕೊಂಡ. ಎಲ್ಲರೂ ಹೊಯ್ಕೊಂಡರು. ಇದು ತನ್ನನ್ನು ಕುರಿತಾಗಿಯೇ ಎಂದು ಗಡಸೀಕರ ಬಲ್ಲ. ಅಷ್ಟರಲ್ಲಿ ಗುಂಪಿನಂಚಿನ ಒಬ್ಬ "ಗೌಡರು ಬಂದರು, ಬಂದರು" ಎಂದ. ಎಲ್ಲರೂ ಆ ಕಡೆ ಮುಖ ಹೊರಳಿಸಿದರು. ಗೌಡ ಅವಸರವಸರವಾಗಿ ಬರುತ್ತಿದ್ದ. ಇಂದಿನ ಹಾಡುಗಾರಿಕೆ ನಿರಂಬಳ ಸಾಗೀತೆಂದು ಯಾರಿಗೂ ಅನಿಸಲಿಲ್ಲ. ಗೌಡನಿಗೂ ಸರಪಂಚನಿಗೂ ಜಗಳವಾಗಬಹುದೆಂದೂ ಕೂಡ ಕೆಲವರು ಕಲ್ಪಿಸಿದರು. ಎಲ್ಲರ ಕಣ್ಣಲ್ಲಿ ವಿಚಿತ್ರ ಕುತೂಹಲ ಚಂಚಲಿಸಿತು.

ಜನ ಎದ್ದು ಗೌಡನಿಗೆ ಹಾದೀ ಮಾಡಿಕೊಟ್ಟರು. ಕೆಲವರು "ಶರಣ್ರೀಯೆಪ" ಎಂದರು ಗೌಡ ಪ್ರತಿ ನಮಸ್ಕರಿಸುತ್ತ ನಡೆದ. ತನ್ನ ಸ್ಥಳದಲ್ಲಿ ತೆಕ್ಕೆಗೆ ಆಧಾರವಾಗಿ, ತನ್ನತ್ತ ನೋಡದೆ, ಸಿಗರೇಟು ಸೇದುತ್ತ ಕೂತ ಸರಪಂಚನನ್ನು ನೋಡಿದ. ಎದ್ದು ನಿಂತ ದತ್ತಪ್ಪನ ಮುಖ ನೋಡಿದ, ಪರಿಸ್ಥಿತಿಯ ಅರಿವಾಗಿ ಹೋಯ್ತು. ಅವರಿವರನ್ನು ಹೆಸರುಗೊಂಡು ಕರೆದು "ಕೂಡ್ರಿ ಕೂಡಪಾ" ಎನ್ನುತ್ತ ನೇರ ಕಟ್ಟೆಗೆ ಹೋದ. "ಶರಣರೀ – ಸರಪಂಚರ" ಅಂದ, ದತ್ತಪ್ಪನ ಪಕ್ಕದಲ್ಲೇ ಸ್ಥಳ ಮಾಡಿಕೊಂಡು ಕೂರುತ್ತ "ಹೂ ಲಗಮವ್ವ ನೋಡೋಣ ಈ ವರ್ಷ ಏನೇನ ಹಾಡ ಕಟ್ಟೇರಿ, ಸುರುಮಾಡಿರಿ" ಅಂದ, ಏನೂ ಆಗಿಲ್ಲವೆಂಬಂತೆ. ಗೌಡನ ಮಾತು ಕೇಳಿ ದತ್ತಪ್ಪ ತಲೆ ಭಾರ ಇಳುವಿದಷ್ಟು ಹಗುರಾದ. ನರಲ್ಲಿನ್ನೂ ಗುಜುಗುಜು ಇತ್ತು. ಅವರ ಮಾತು ಕೇಳಿಸುತ್ತಿರಲಿಲ್ಲ ನಿಜ; ಅವರ ಕೈ ಬಾಯಿ ನೋಡಿಯೇ ಹೇಳಬಹುದಿತ್ತು: ಅವರು ತಕರಾರು ತೆಗೆಯುತ್ತಿದ್ದಾರೆಂದು. ಗೌಡನಿಗೆ ಅರಿವಾಗಿ ದನಿದೋರಿದ:

"ನಮ್ಮ ಲಗಮವ್ವ ವರ್ಷಕ್ಕೊಂದು ಏನಾರ ಹೊಸಾ ಚೀಜ ತಂದs ಇರತಾಳ ನೋಡ ದತ್ತೂ" ಎಂದು ಪಂಚರತ್ತ ನೋಡಿ ದುರ್ಗಿಯುತ್ತ ಗಮನ ಸೆಳೆದ. "ಅಯ್ಯs ಇದು ಅಬಾಯೀ ಮಗಳ್ರಿ" ಎಂದು ಹೇಳಿ "ಹೋಗs ಗೌಡನ ಪಾದ ಹಿಡದ ಬಾ" ಎಂದು ಎದ್ದು ತಲೆಬಾಗಿ ನಿಂತ

ದುರ್ಗಿಗೆ ಹೇಳಿದಳು. ದುರ್ಗಿ ಅಷ್ಟೂ ಜನರ ಕಣ್ಣಿಗೆ ಗುರಿಯಾಗಿ, ಎಳಕರ ಮನಸ್ಸಿಗೆ ಮುದವಾಗಿ, ಮದವಾಗಿ, ಆದ್ದರಿಂದ ನಾಚುತ್ತ, ಅದನ್ನು ಸಂತೋಷಿಸುತ್ತ ತಲೆ ತುಂಬ ಸೆರಗು ಹೊತ್ತು ಗೌಡನತ್ತ ಹೊರಟಳು. ಹೋಗಿ ಕಾಲುಮುಟ್ಟಿ ನಮಸ್ಕರಿಸಿದಳು. ಪಕ್ಕದ ಹಿರಿಯರ ಕಾಲು ಮುಟ್ಟಿದಳು. ಅಥವಾ ನಾಚಿಕೆಯ ಅತಿಶಯದಲ್ಲಿ ಯಾರ್ಯಾರದೋ ಕಾಲು ಮುಟ್ಟಿ ಬೆದರಿದ ಮಣಕಿನಂತೆ ಓಡಿಬಂದಳು. ಹಾಡುಗಾರಿಕೆ ಸುರುವಾಯಿತು. ಲಗಮವ್ವ ಎದ್ದುನಿಂತು,

ಕಲಿಯುಗ ಕಾಲಿಟ್ಟಿತು ಧರ್ಮ
ಉಳಿಯಲಿಲ್ಲ ಚೂರಾ!
ಕಲಿತವರ ಕಾಲಾಗ ಲೌಕಿಕವೆಂಬೋದು
ಅಧರ್ಮವಾಯಿತು ಪೂರಾ!!

– ಎಂದು ಸುರುಮಾಡಿ "ಕಲಿತ ಕೋತಿ"ಗಳ ಭಂಡತನವನ್ನು ಬಯಲಿಗೆಳೆದಳು. ಇದು ಎದುರು ತಂಡಕ್ಕೆಸೆದ ಸವಾಲಾಗಿರಲಿಲ್ಲ. ಆದರೆ ಜನ ಈ ಹಾಡಿನಿಂದ ಎಷ್ಟು ಖುಷಿಪಟ್ಟರೆಂದರೆ ಹಾಡಿನಂತ್ಯದ ಹೊಯ್ಕೊಳ್ಳುವಿಕೆಗೆ ಮುದುಕರೂ ಸೇರಿದ್ದರು. ಆ ಹಾಡನ್ನು ತಾವೇ ಹೇಳಿದಂತೆ ಆನಂದಪಟ್ಟರು. ಹಾಡು ಯಾರನ್ನು ಕುರಿತದ್ದೆಂದು ಇವರಿಗೆ ಹೇಳಿ ಕೊಡಬೇಕೆ? ಗುಡಸೀಕರನ ಮುಖ ಇನ್ನೂ ಅಸಭ್ಯವಾಯಿತು. ಒಳಗೆ ಕತ ಕತ ಕುದಿಯುತ್ತಿದ್ದನೆಂಬುದುದನ್ನು ಅವನ ಕಣ್ಣ ಜ್ವಾಲೆಗಳೇ ಹೇಳುತ್ತಿದ್ದವು. ಗೌಡ ಮುಗುಳ್ನಕ್ಕು ಸುಮ್ಮನಾದರೆ, ದತ್ತಪ್ಪ ಜೋರಾಗಿಯೇ ನಕ್ಕ. ಜನ ಸಿಳ್ಳುಹಾಕಿ ನಕ್ಕರು, ಕೆಲವರು ರುಂಬಾಲು ಹಾರಿಸ ನಕ್ಕರು. ಈ ಧಾರಾವರಿ ನಗೆಗಳನ್ನು ಸಂಯಮಿಸುವುದು ಗೌಡನಿಂದಲೂ ಸಾಧ್ಯವಿರಲಿಲ್ಲ.

ಪಂಚಾಯ್ತಿ ಮೆಂಬರರೆಲ್ಲ ಮುರುಟಿದ್ದರು. ಈ ನಗೆಗಳು ಗುಡಸೀಕರನ ಒಳಗಿನ ಬೆಂಕಿಗೆ ಹುಲ್ಲಾದವು, ಭಗ್ಗನೇ ಎದ್ದು ಕಟ್ಟೆಯಿಳಿದು, ಈಗಷ್ಟೇ ಹೊತ್ತಿಸಿದ ಸಿಗರೇಟನ್ನು ನೆಲಕ್ಕೆಸೆದು ತುಳಿದು, ಹೊಸಕಿ, ಬಿಟ್ಟ ಬಾಣದ ಹಾಗೆ ಹಿಂಡಿನಿಂದ ಮರೆಯಾದ. ಪಂಚಾಯ್ತಿ ಮೆಂಬರರು ಒಬ್ಬೊಬ್ಬರಾಗಿ ಬಾಲದ ಹಾಗೆ ಸಾಲಾಗಿ ಹಿಂಬಾಲಿಸಿದರು.

## ನಿಂಗೂನ ಕಥೆ

ನಿಂಗೂ ಈ ಊರಿನ ನಪುಂಸಕ. ಇತ್ತ ಪುರುಷನಲ್ಲದ, ಅತ್ತ ಹೆಂಗಸಲ್ಲದ ಎರಡರಲ್ಲಿ ಒಂದೂ ಆಗದ ನಿರ್ಭಾಗ್ಯ. ಹಾಗಂತ ಆ ಬಗ್ಗೆ ಅವನಿಗೆ ದುಃಖವಿದೆಯೆಂದಲ್ಲ. ಹಾಗೆ ನೋಡಿದರೆ ಇಡೀ ಊರಲ್ಲಿ ಜನರ ವಯಸ್ಸು, ಅಂತಸ್ಸು ಲಿಂಗಭೇದಗಳನ್ನು ಗಮನಿಸದೆ ಚೇಷ್ಟೆ ಮಾಡಿ ನಗಬಲ್ಲವನು ಅವನೊಬ್ಬನೇ, ತಾಯಿ ಇರಲಿಲ್ಲ. ತಂದೆ ಗಟಿವಾಳಪ್ಪನೇ ತಂದೆ, ತಾಯಿ ಎರಡೂ ಆಗಿ ಹುಡುಗನನ್ನು ಬೆಳೆಸಿದ್ದ, ಆದರೆ ಹುಡುಗನ ಚೇರಾಪಟ್ಟೆ, ನಡವಳಿಕೆ ದೊಡ್ಡವನಾದಂತೆ ಹೆಂಗಸರದೆಂದು ಸ್ಪಷ್ಟವಾಗತೊಡಗಿತು. ಸರಿಕರು ಚೇಷ್ಟೆ ಮಾಡಿದರು, ದೊಡ್ಡವರು ಬೈದರು; ಅದೇನು ರಿಪೇರಿ ಆಗಲಿಲ್ಲ, ನಿಂಗ್ಯಾ ಇದ್ದದ್ದು ನಿಂಗಿ ಎಂದೂ ಆಗದೆ ಎರಡರ ನಡುವಿನ ನಿಂಗೂ ಆದದ್ದು ಹೀಗೆ.

ಮದುವೆ ಮಾಡಿದರೆ ಎಲ್ಲ ಸರಿ ಹೋಗುತ್ತದೆಯೆಂದು ಜನ ಗಟಿವಾಳಪ್ಪನಿಗೆ ಬುದ್ಧೀ ಹೇಳಿದರು. ಅವನಿಗೂ ಗಂಡು ರೊಟ್ಟಿ ದಿಂಡು ಬೇಳೆ ತಿಂದು ಸಾಕಾಗಿತ್ತು. ಬೇಗನೇ ಮನೆಗೆ ಸೊಸೆ ಬಂದರೆ ಒಂದಿಷ್ಟು ಬೆಂದ ಅಡಿಗೆ ತಿನ್ನಬಹುದಲ್ಲಾ ಎಂದೋ, ಮಗ ಸುಧಾರಿಸಬಹುದೆಂದೋ ಅಂತೂ ತನ್ನ ಹೆಂಡತಿಯ ಸಂಬಂಧಿಕರಲ್ಲಿಯೇ ಒಂದು ಕನ್ಯಾ ಶೋಧಿಸಿ ಮಗನಿಗೆ ಅಂದರೆ ಸದರಿ ನಿಂಗೂನಿಗೆ ಮದುವೆ ಮಾಡಿಬಿಟ್ಟ.

ಮದುವೆ ಮಾಡುವದೇನೋ ತನ್ನ ಕೈಯಲ್ಲಿತ್ತು, ಮಾಡಿದ. ಮುಂದೆ? ಸೊಸೆ, ಅವಳ ಹೆಸರು ಗೌರಿ, ನಡೆಯಲಿಕ್ಕೆ ಬಂದಳಲ್ಲ, ಒಂದೆರಡು ದಿನ ನಿಂಗೂ ಮನೆಯಲ್ಲಿ ಮಲಗಿದ. ಆ ಮಾರನೇ ದಿನದಿಂದ ಮತ್ತೆ ಹೊರಗಡೆ ಕಟ್ಟೆಯ ಮೇಲೆ ಮಲಗತೊಡಗಿದ, ಹಬ್ಬಕ್ಕೆಂದು ತೌರಿಗೆ

ಹೋದ ಗೌರಿ ತನಗೆ "ರಾತ್ರಿ ಸುಖ" ಇಲ್ಲವೆಂದು ನೆಪ ಹೇಳಿ ಗಂಡನ ಮನೆಗೆ ತಿರುಗಿ ಬರಲು ನಿರಾಕರಿಸಿದಳು. ಗಟಿವಾಳಪ್ಪನೇ ಏನೇನೋ ಹತ್ತು ಸುಳ್ಳು ಹೇಳಿ ಕರೆತಂದಾಯಿತು.

ಮತ್ತೆ ಅದೇ ಸುಖ. ಆದರೆ ಆಮೇಲೆ ಸೊಸೆ ಮತ್ತೆ ತೌರು ನೆನೆಸಲಿಲ್ಲ. ನಿಂಗೂ ಒಂದು ದಿನವೂ ರಾತ್ರಿ ಮನೆ ಸೇರಲಿಲ್ಲ. ಊರಲ್ಲಿ ಗಟಿವಾಳಪ್ಪ ಸೊಸೆಯನ್ನು ಇಟ್ಟುಕೊಂಡಿದ್ದಾನೆಂದು ಸುದ್ದಿ ಕೇಳಿ ಬರತೊಡಗಿದವು. ಸರಿಕರು ನಿಂಗೂನಿಗೆ ಛೀ ಅಂದರು. ಥೂ ಅಂದರು. ಏನಂದರೂ ನಿಂಗೂ ನಿರಂಬಳಾಗಿ ಹೊರಗೇ ಮಲಗುತ್ತಿದ್ದ, ನಿಂಗೂ ಈ ಬಗ್ಗೆ ಯೋಚಿಸಲಿಲ್ಲವೆಂದಲ್ಲ. ಮುಖದ ಗೆರೆ ಕಾಣಿಸಿದಂತೆ ಗೆರೆ ಕೊರೆಯುವ ಚಿಂತೆ ಕಾಣಿಸುತ್ತದೆಯೇ? "ಇದರಲ್ಲಿ ಪಾಪ, ಗೌರಿಯ ತಪ್ಪೇನಿದೆ? ಇರೋ ತಪ್ಪೆಲ್ಲಾ ಅಪ್ಪಂದು. ಅಪ್ಪನಾಗಿ ಸೊಸೆಯನ್ನೇ ಸೇರುತ್ತಾನಲ್ಲಾ ನಾಚಿಕೆ ಬೇಡವೇ? ಆಗಲೇ ಗೋರಿಗೆ ಹೋಗೋ ವಯಸ್ಸಾಯಿತು. ಒಟ್ಟು ತಾನು ಮದುವೆಗೆ ಒಪ್ಪಿದ್ದೇ ತಪ್ಪು. ತಾನೆಲ್ಲಿ ಒಪ್ಪಿದೆ? ಅಪ್ಪನೇ ಅಲ್ಲವೇ ಒತ್ತಾಯದಿಂದ ಒಪ್ಪಿಸಿದ್ದು? ಆತ ಹಾಗೆ ಯಾಕೆ ಒತ್ತಾಯ ಮಾಡಿದ ಅಂತ ಈಗ ತಿಳಿಯುತ್ತದೆ. ಮದುವೆ ಮಾಡಿಕೊಳ್ಳದಿದ್ದರೆ ಈ ಅಪವಾದವಾದರೂ ಇರುತ್ತಿರಲಿಲ್ಲ, ಈಗ ತನ್ನ ಹೆಸರು; ತಂದೆಯ ಬಾಯಿಗೆ ಮೊಸರು!

ಹೀಗೆ ಯೋಚಿಸುವಾಗ ಸಿಟ್ಟು ಬರುತ್ತಿತ್ತು. ಆದರೆ ಒಳಗೊಳಗೆ. ಇದಕ್ಕೆಲ್ಲ ತಾನೇ ಜವಾಬ್ದಾರಿಯೆಂಬ ಅರಿವೂ ಮುಳ್ಳಾಗಿ ಚುಚ್ಚುತ್ತಿತ್ತು; ಸಾಲದ್ದಕ್ಕೆ ಗೌರಿ ಗರ್ಭಿಣಿ ಬೇರೆ ಆಗಿಬಿಟ್ಟಳು. ಈಗ ಮಾತ್ರ ನಿಂಗೂನಿಗೆ ಹಿಂಸೆಯಾಗತೊಡಗಿತು. ಮಂದಿಯ ಮಾತು ಚುಚ್ಚತೊಡಗಿದವು.

ಒಂದು ದಿನ ಅಂದರೆ ಕರಿಬೇಟೆ ನಾಳೆ ಇದೆಯೆಂದರೆ ಇಂದು ಮಧ್ಯಾಹ್ನದ ಸಮಯ ತೋಟದ ಗುಡಿಸಲಲ್ಲಿ ನಿಂಗೂ ಕಂಬಳಿ ಹೊದ್ದುಕೊಂಡು ದಣಿದು ಮಲಗಿದ್ದ, ದಣಿಯಲಿಕ್ಕೆ ಕೆಲಸ ಎಲ್ಲಿ ಮಾಡಿದ್ದ? ಯಾರೋ ಚುಚ್ಚಿ ಮಾತನಾಡಿದ್ದರು. "ಹುಟ್ಟುವ ಕೂಸು ತಮ್ಮನೋ? ಯಾ ಮಗನೋ" ಎಂದು ತನ್ನ ಹೆಂಡತಿಯ ಯಾ – ತಾಯಿಯ ಬಗೆಗೆ ಉತ್ತರ ಕೊಡಲಾರದೆ ಅವಮಾನವನ್ನು ಸಹಿಸಲಾಗದೇ ಕಂಬಳಿ ಹೊದ್ದುಕೊಂಡು ಸುಮ್ಮನೇ ಬಿದ್ದುಕೊಂಡಿದ್ದ, ಹೊಲದಲ್ಲಿ ಹೆಂಡತಿಯೆಂಬಾಕೆ ಇದ್ದಳು. ತಂದೆಯೂ ಇದ್ದ. ಸ್ವಲ್ಪ ಹೊತ್ತಾದ ಮೇಲೆ ಹೆಂಡತಿ ಗುಡಿಸಲಲ್ಲಿ ಬಂದಳು. ಮುದುಕ ಇವಳು ಕೆಲಸ ಮಾಡುತ್ತಿದ್ದುದಕ್ಕೆ ಸಿಟ್ಟು ಮಾಡಿ "ಆರಾಮ ತಗೋ" ಎಂದು ಬಾಯಿಮಾಡುತ್ತ ಒಳಗೆ ಬಂದ. ಹೊದ್ದ ಕಂಬಳಿಯ ತೂತಿನೊಳಗಿಂದ ನಿಂಗೂನಿಗೆ ಇವರ ವ್ಯವಹಾರವೆಲ್ಲ ಕಾಣಿಸುತ್ತಿತ್ತು. ಬಸುರಿನ ಭಾರಕ್ಕೆ ಬಾಡಿದ್ದ ಗೌರಿ ಕಟ್ಟೆಯ ಮೇಲೆ ಹಾಗೇ ಅಡ್ಡಾದಳು. ಮುದುಕ ಸುಮ್ಮನಿರದೇ "ಯಾಕ? ದಣಿವಾತೇನು?" ಎನ್ನುತ್ತ ಸಮೀಪ ಹೋಗಿ ಅವಳ ಕಾಲು ತಿಕ್ಕತೊಡಗಿದ. ಕಾಲಮೇಲೆ ಕೈಯಾಡಿಸುತ್ತ ಬಾಲವಾಡಿಸುವ ನಾಯಾಗಿ, ಅವಳ ಕಾಲಿಗಂಟಿದ ಧೂಳಾಗಿ ಧೂಳಿಗಂಟಿದ ಹುಳುವಾಗಿ ಜೊಲ್ಲು ಸುರಿಸುತ್ತ, ಮಾಯೆ ಮಾಡತೊಡಗಿದ, ನಿಂಗೂನಿಗೆ ಹೇಸಿಕೆ ಬಂತು. ಎದ್ದು ಅವನ ಮುದಿಮುಖದ ಮೇಲೆ ಉಗುಳಬೇಕೆನ್ನಿಸಿತು.

"ಇಲ್ಲೇ ಮಲಗ್ಯಾನ ದೂರ ಸರಿ" ಎಂದಳು ಗೌರಿ.

"ಮಲಗಿದರೇನ ಮಾಡತಾನ. ತಡಿ ಬರತೇನ" ಎನ್ನುತ್ತ ಏನೋ ನೆನಪಾಗಿ ಬಾಗಿಲು ಹಾಕಿಕೊಂಡು ಹೊರಗೆ ಹೋದ. ಗೌರಿ ಆಯಾಸದಿಂದ ಹಾಗೇ ಕಣ್ಣು ಮುಚ್ಚಿದಳು. ನಿಂಗೂನ ಮನಸ್ಸಲ್ಲಿ ಎಲ್ಲಿಯ ಸೇಡು ಉಕ್ಕಿತ್ತೋ, ಕಣ್ಣುಮುಚ್ಚಿ ಕಣ್ಣು ತೆರೆಯುವುದರೊಳಗೆ, ಹಾ ಎನ್ನುವುದರೊಳಗೆ ಮೈಯಲ್ಲಿ ಮಿಂಚು ಸಂಚರಿಸಿ ಪಕ್ಕದಲ್ಲಿದ್ದ ಕುಡಗೋಲು ಮಸೆಯುವ ಕಲ್ಲನ್ನೆತ್ತಿ ಗೌರಿ ಹೊಟ್ಟೆಯ ಮೇಲೆ ಹೆಟ್ಟಿಬಿಟ್ಟ! ತಾಯಿ ಹಾ ಎಂದು ಬಿಟ್ಟ ಉಸಿರನ್ನು ಮತ್ತೆ ತಕ್ಕೊಳ್ಳಲೇ ಇಲ್ಲ. ಹೊಟ್ಟೆ ಹಿಡಿದುಕೊಂಡು ಒಂದೆರೆಡು ಬಾರಿ ಹೊರಳಾಡಿ ಒದ್ದಾಡಿ ಸತ್ತುಬಿಟ್ಟಳು.

ಗೌರಿ ಹಾ ಎಂದು ಉಸಿರೆಳೆದದ್ದು ಗಟಿವಾಳಪ್ಪನಿಗೆ ಕೇಳಿಸಿ ಒಳಗೆ ಓಡಿಬಂದ. ಏನಾಯಿತೆಂದು ಹೆಣದ ಬಳಿ ಧಾವಿಸುವಷ್ಟರಲ್ಲಿ ನಿಂಗೂ ಸೂರಿನಲ್ಲಿದ್ದ ಚೂಪುಗೊಡಲಿ ಹಿಡಿದು ಮುದುಕನ ಗೋಣಿಗೇ ಇಕ್ಕಿಬಿಟ್ಟ. ರುಂಡ ಚಂಗನೆ ನೆಗೆದು ಸೊಸೆಯ ಪಾದದ ಕಡೆ ಉರಳಿ ಮುಂಡ ಮಾತ್ರ ಸೊಸೆಯ ಹಾಸಿಗೆ ಕಡೆಗೆ ಜಿಗಿದಾಡುತ್ತ ಧಾವಿಸತೊಡಗಿತು. ಅದೇನು ಭಯವೋ, ಆವೇಶವೋ ನಿಂಗೂ "ಹಾ ಹಾ" ಎಂದು

ಕಿರುಚುತ್ತ ಎರಡೂ ಕೈ ಎತ್ತಿ ಮುಂಡದ ಜೊತೆ ಸ್ಪರ್ಧೆಗಿಳಿದಂತೆ ಕುಣಿಯತೊಡಗಿದ. ಇನ್ನೊಂದು ಕ್ಷಣ ಮುಂಡಹಾಗೇ ಕುಣಿದಿದ್ದರೆ ನಿಂಗೂನ ಗತಿ ಏನಾಗುತ್ತಿತ್ತೋ; ಅದರ ಕಾಲಿಗೆ ಸೊಸೆಯ ಹೆಣವಿದ್ದ ಕಟ್ಟಿ ತಾಗಿದೊಡನೆ ಧೊಪ್ಪನೆ ಬೆನ್ನು ಮೇಲಾಗಿ ಬುಡ ಕಡಿದ ಮರದಂತೆ ಬಿದ್ದುಬಿಟ್ಟಿತು.

ಅದೇ ಆವೇಶದಲ್ಲೇ, ಚೂಪುಗೊಡಲಿ ಹಿಡಿದುಕೊಂಡೇ ನಿಂಗೂ ಹೊರಬಂದು ಊರಕಡೆ ಓಡತೊಡಗಿದ. ಮಧ್ಯೆ ಕಳ್ಳ ಬರದಿದ್ದರೆ ಏನಾಗುತ್ತಿತ್ತೋ. ಕಳ್ಳ ಸಿದರಾಮ "ಯಾಕಲೇ ನಿಂಗೂ ಏನಾತೊ? ಅಂದ, ನಿಂಗೂ ಈಗ ಮನುಷ್ಯನಾಗಿ ಅಲ್ಲೇ ಕುಸಿದುಬಿದ್ದ, ಎದೆ ಡವಡವ ಹೊಡೆದುಕೊಳ್ಳಲಾರಂಭಿಸಿತು. ಎಪ್ಪಾ ಎಂದು ಎದೆ ಎದೆ ಬಡಿದುಕೊಂಡು ಅಳಲಾರಂಭಿಸಿದ.

ನಿಂಗೂನ ಹುಚ್ಚಿನ ಅರೆ ಭಾಷೆ ಕೈ ಬಾಯಿಗಳ ಸನ್ನೆಗಳ ಮೇಲಿಂದ ಏನೋ ಅನಾಹುತವಾಗಿದೆಯೆಂದು ಊಹಿಸಿ "ಓಡಿಹೋಗಿ ಗೌಡ್ರ ಕಾಲ ಹಿಡಕೊಳ್ಳಲೇ" ಎಂದ. ಕೊಡ್ಲಿ ಅಲ್ಲೇ ಬಿಟ್ಟು ನಿಂಗೂ ಊರಿನತ್ತ ಓಡಿದ. ಕಳ್ಳ ಗುಡಿಸಿಲಿಗೆ ಹೋಗಿ ನೋಡಿದ. ಗುಡಿಸಲ ತುಂಬ ರಕ್ತ ಹರಿದಾಡಿತ್ತು. ಕಟ್ಟೆಯ ಮೇಲೆ ಬಕ್ಕಬರಲೆ ಬೆನ್ನು ಮೇಲಾಗಿ ಕಾಲು ಗೀಸಿಕೊಂಡು ಗಟಿವಾಳಪ್ಪನ ಹೆಣ ಬಿದ್ದುಬಿಟ್ಟಿತ್ತು. ಕಾಲ್ದೆಸೆ ಕೆಳಕ್ಕೆ ರುಂಡ ಬಿದ್ದಿತ್ತು. ಅದರಾಚೆ ಗೌರಿಯ ಹೆಣ ಕಣ್ಣು ಕಿಸಿದುಕೊಂಡೇ ಬಿದ್ದಿತ್ತು. ಕಣ್ಣಿಗೆ ಚಕ್ರ ಬಂದಂತಾಯ್ತು. ಕೂಡಲೇ ಕಳ್ಳ ಕಾಲಿಗೆ ಬುದ್ಧಿ ಹೇಳಿದ. ಇಳಿ ಹೊತ್ತಾಗಿತ್ತು. ಪಡಸಾಲೆಯಲ್ಲಿ ಗೌಡ ಕೂತುಕೊಂಡು ಮಗ ಶಿವನಿಂಗನಿಗೆ ಅದೇನೋ ವ್ಯವಹಾರ ಹೇಳುತ್ತಿದ್ದ. ನಿಂಗೂ ಓಡಿ ಬಂದವನೇ ಗೌಡನ ಕಾಲು ಗಟ್ಟಿಯಾಗಿ ಹಿಡಕೊಂಡು, "ಎಪ್ಪಾಽ ಎಪ್ಪಾಽಽ" ಎನ್ನುತ್ತ ಅವ ಪಾದಕ್ಕೆ, ತಪ್ಪಿದರೆ ನೆಲಕ್ಕೆ ತಲೆಯಿಂದ ಕುಟ್ಟಲಾರಂಭಿಸಿದ. ಗೌಡ 'ಏನೋ' ಅಂದರೂ ಇಲ್ಲ 'ಎಂತೋ' ಅಂದರೂ ಇಲ್ಲ; ಬರೀ "ಎಪ್ಪಾ ಎಪ್ಪಾ…" ಗೌಡ ನೋಡುವಷ್ಟು ನೋಡಿ ಅವನ ಜುಟ್ಟು ಹಿಡಿದು ಮೇಲೆತ್ತಿ ಕೆನ್ನೆಗೆರಡು ಬಿಗಿದ. ನಿಂಗೂ ಮತ್ತೆ ಮನುಷ್ಯರೊಳಗೆ ಬಂದ.

ಎಲ್ಲ ಕೇಳಿದ ಮೇಲೆ ಗೌಡ "ನೀ ಸೀದಾ ತೋಟಕ್ಕ ನಡಿ. ನಾವೂ ಬರತೇವ" ಎಂದು ನಿಂಗೂನನ್ನು ಕಳಿಸಿ ದತ್ತಪ್ಪನ ಮನೆಗೆ ಹೋದ. "ದತ್ತೊ ದಗದೈತಿ ಬಾ" ಎಂದು ಬಾಗಿಲಲ್ಲೇ ನಿಂತು ಕರೆದ. ಏನೋ ಅನಾಹುತವಾಗಿರಬೇಕೆಂದು ಊಹಿಸಿದ ದತ್ತಪ್ಪ ನಿಂತ ಕಾಲಮೇಲೆ ಏನು ಯಾಕೆ ಎನ್ನದೇ ಬೆನ್ನು ಹತ್ತಿದ.

ಗುಡಸೀಕರ ಉಂಡು ಮಲಗಿದ್ದವನು ಇನ್ನೂ ಎದ್ದಿರಲಿಲ್ಲ. ಕಳ್ಳ ಅವನನ್ನೆಬ್ಬಿಸಿ ನಡೆದ ಘಟನೆಯನ್ನು, ತಾನೇ ಹೆದರಿದ್ದರಿಂದ ಇರಬೇಕು, ಭಯಂಕರವಾಗಿ ವರ್ಣಿಸಿದ. ಗುಡಸೀಕರನಿಗೂ ಭಯವಾಯ್ತು. ನಿಧಾನವಾಗಿ ಸುಧಾರಿಸಿಕೊಂಡು, "ಗೌಡ್ರ ಕಾಲ ಹಿಡಕೋ ಅಂತ ನಾನಽ ಕಳಿಸಿದೆ" ಎಂದು ಕಳ್ಳ ಹೇಳಿದೊಡನೆ ಗುಡಸೀಕರನ ಮುಖದ ಮೇಲೆ ತಣ್ಣೀರು ಎರಚಿದಂತಾಯ್ತು.

"ಅಲ್ಲಲ್ಲೇ, ಇಂಥಾ ಕೇಸಿನ್ಯಾಗ ಗೌಡಗೇನ ತಿಳೀತೈತಿ?" ವಕೀಲ ನಾನೋ? ಗೌಡನೋ?"

"ನಿಮ್ಮನ್ನ ಬಿಟ್ಟ ಅವರೆಲ್ಲಿ ಹೋಗತಾರ ತಡೀರಿ; ಈಗ ಹೇಳಿ ಕಳಸ್ತಾರ" ಅಂದ. ಅದೂ ನಿಜವೇ. ಗೌಡನಿಗೆ ತಾನು ವಕೀಲಿ ಪಾಸಾದದ್ದು ಗೊತ್ತಿಲ್ಲವೆ? ಏನು ಮಾಡೋಣವೆಂದು ಕೇಳಲಿಕ್ಕೆ ಬಂದೇ ಬರುತ್ತಾರೆ. ಬಂದಾಗ ಹೋದರಾಯಿತು ಎಂದುಕೊಂಡು ಕುತೂಹಲ ತಾಳಿಕೊಂಡು ಸುಮ್ಮನೇ ಕೂತ.

ಗೌರಿ, ಗಟಿವಾಳಪ್ಪನ ಹೆಣ ನೋಡಿ ದತ್ತಪ್ಪನಿಗೇನು ಗೌಡನಿಗೂ ಭಯವಾಯಿತು. ತಕ್ಷಣ ಬಾಗಿಲು ಹಾಕಿ ಇಬ್ಬರೂ ಮುಂದಿನ ಹಾದಿ ಯೋಚಿಸುತ್ತ ಕೂತುಬಿಟ್ಟರು. ನಿಂಗೂ ತಪ್ಪು ಮಾಡಿದ ಖರೆ, ಆದರೆ ಗಟಿವಾಳಪ್ಪ ಗೌರಿಯರದೂ ತಪ್ಪೇ. ಅಲ್ಲೇ ಮಲಗಿದ್ದ ಮಗ ಕಾಣದಷ್ಟು ಕುರುಡರಾಗೋದೆಂದರೇನು? ಮನುಷ್ಯ ಸಹನೆಗೂ ಮಿತಿ ಇಲ್ಲವೆ? ಇಷ್ಟಲ್ಲದೆ ಇವರ ಆಸೆಗೆ ನಿಂಗೂ ಯಾವಾಗ ಅಡ್ಡಿ ಮಾಡಿದ್ದ? ಕಾಮ ಮುದುಕನ ಕಣ್ಣು ಕುಕ್ಕಿತು. ಸಿಟ್ಟು ನಿಂಗೂನ ಕಣ್ಣು ಕುಕ್ಕಿತು. ಇಬ್ಬರೂ ಕುರುಡರಾದರು. ಸತ್ತವರು ಸತ್ತು ಹೋದರು. ಇದ್ದವನ ಗತಿಯೇನು?

ಇಂಥ ಕೇಸುಗಳಲ್ಲಿ ಗೌಡನ ಮನಸ್ಸು ಹೇಗೆ ಓಡುತ್ತದೆಂದು ದತ್ತಪ್ಪ ಬಲ್ಲ. ಇಷ್ಟು ವರ್ಷ ಕೂಡಿದ್ದು ಊರುಗಾರಿಕೆ ಮಾಡಿ ಸುಸೂತ್ರ ಪಾರುಗಾಣಿಸಿದವರಲ್ಲವೆ? ಆದರೆ ಇಬ್ಬರ ತಲೆಯಲ್ಲೂ ಗುಡಸೀಕರ ತಪ್ಪಿ ಕೂಡ ಸುಳಿಯಲಿಲ್ಲ. ಬೇರೆ ದಿನಗಳಾಗಿದ್ದರೆ ಆ ಮಾತು ಬೇರೆ. ನಾಳೆ ಕರಿಬೇಟೆಯ ಹಬ್ಬ. ನಾಯಕರ ಹುಡುಗರು ಇಂದು ಬೇಟೆಯಾಡಲಿಕ್ಕೆ ಹೋಗುತ್ತವೆ. ಆ ಸಮಯವೂ ಹತ್ತಿರ ಬಂತು.

ಹೋಗುವ ಮುನ್ನ ಗೌಡನ ನಮಸ್ಕಾರ ಮಾಡಿ ಅವನಿಂದ ಕಾಯಿ ತಗೊಂಡು ಹೋಗುವದು ಪದ್ಧತಿ. ಅವರು ಗೌಡನ ಮನೆಗೆ ಹೋಗೋಣ, ಗೌಡ ಇಲ್ಲದಿರೋಣ, ಏನೇನೋ ಸಂಶಯಗಳೇಳೋಣ. ಆಗಲೇ ಈ ಸುದ್ದಿ ಎಷ್ಟು ಮಂದಿಗೆ ಗೊತ್ತಾಗಿದೆಯೋ, ಗೊತ್ತಾಗುವ ಮುನ್ನವೇ ಇದಕ್ಕೊಂದು ಮುಕ್ತಾಯ ಕೊಡಬೇಕೆಂದು ಇಬ್ಬರ ತವಕ. ಯೋಚಿಸುತ್ತ ಹೆಣ ಕಾಯುತ್ತ ಇಬ್ಬರೂ ಕೂತರು. ನಿಂಗೂ ಇನ್ನು ಬಂದಿರಲಿಲ್ಲ.

ಅಷ್ಟರಲ್ಲಿ ನಿಂಗೂ ಗುಡಸೀಕರ ಮತ್ತು ಕಳ್ಳ ಸಿದ್ದರಾಮನೊಂದಿಗೆ ಬಂದ. ದತ್ತಪ್ಪನ ಮೈಯುರಿಯಿತು. ಏನೋ ಮಾಡಿ ಈ ಮಗನ್ನ ಪಾರು ಮಾಡೋಣವೆಂದರೆ ಇದ್ದದ್ದೂ ಹೋಗಿ ಗುಡಸೀಕರನನ್ನು ಕರೆತಂದನಲ್ಲಾ ಎಂದುಕೊಂಡು 'ಛೀ' ಅಂದ. ಗೌಡನಿಗೆ ಅರ್ಥವಾಯಿತು. ಆದರೆ ಅವನಿಗೆ ಮನುಷ್ಯರ ಮೇಲೆ ಭಾರೀ ವಿಶ್ವಾಸ, "ಬಾ ಹುಡುಗಾ ನೀನೂ ಬಂದಿ, ಛಲೋ ಆತು" ಅಂದ. ಗುಡಸೀಕರ ನಿರ್ಲಕ್ಷ್ಯ ಮಾಡಿ ಗುಡಿಸಲ ಬಾಗಿಲು ತೆಗೆದು ಒಳಕ್ಕೆ ನೋಡಿ, ನೋಡಲಾರದೇ ಹೊರಗೆ ಬಂದ, ಗೌಡ "ಕೂಡ ಬಾ" ಅಂದ. ಹೋಗಿ ಕೂತ. ಕಳ್ಳನಿಗೆ ಬಾಗಿಲು ಹಾಕಲಿಕ್ಕೆ ಹೇಳಿದರು, ಹಾಕಿದ. ಗುಡಸೀಕರನೂ ಹೆಣ ನೋಡಿ ಬೆವರಿದ್ದ. ಹತ್ತು ನಿಮಿಷ ಯಾರೂ ಮಾತಾಡಲಿಲ್ಲ. ನಿಂಗೂನನ್ನು ಬಿಟ್ಟು ಉಳಿದವರೆಲ್ಲ ನಿಶ್ಚಲರಾಗಿ ಕಲ್ಲಿನಂತೆ ಕೂತುಬಿಟ್ಟರು. ನಿಂಗೂ ಮಾತ್ರ ಅವನ ಮುಖವನ್ನೊಮ್ಮೆ ನೋಡುತ್ತ ಕಣ್ಣೀರು ಸುರಿಸುತ್ತ ದೀನನಾಗಿ, ಹೆದರಿ ತನ್ನ ಗತಿಯೇನಾಗುವುದೋ ಎಂದು ಚಡಪಡಿಸುತ್ತಿದ್ದ.

ಕೊನೆಗೆ ಗೌಡನೇ ಬಾಯಿಬಿಟ್ಟ –

"ದತ್ತು ಗುಡಸಲಕ ಬೆಂಕಿ ಹಚ್ಚಿದರ ಹೆಂಗ?"

"ಬರೋಬರಿ" ಅಂದ ದತ್ತಪ್ಪ.

ದತ್ತಪ್ಪ ಸೈ ಅಂದರಾಯ್ತು. ಅದು ಸರಿಯಾದ ತೀರ್ಮಾನವೆಂದೇ ಗೌಡನ ಲೆಕ್ಕ "ನಿಂಗ್ಯಾ ಹೆಣ ಹೊರಗ ತಗೀಬ್ಯಾಡ. ಇಂದ ರಾತ್ರಿ ಗುಡಸಲಕ ಬೆಂಕಿ ಹಚ್ಚು. ಯಾರಿಗೇನೂ ಹೇಳಬ್ಯಾಡ. ಬೆಳಿಗ್ಗೆದ್ದ ಇಬ್ಬರೂ ಗುಡಸಲದಾಗ ಸುಟಗೊಂಡು ಸತ್ತರಂತ ಮಂದಿಗೆಲ್ಲಾ ಹೇಳು."

ಗುಡಸೀಕರನಿಗೆ ಸಿಡಿಲು ಬಡಿದಂತಾಯ್ತು. ಇದು ಹೇಳಿ ಕೇಳಿ ಖೂನಿ ಕೇಸು. ಇದರಲ್ಲಿ ತಾನಲ್ಲದೇ ಇನ್ನು ಯಾರು ಸಲಹೆ ಕೊಡಬಲ್ಲರು? ಅದು ಬಿಟ್ಟು ಹಳ್ಳಿಯ ಗಮಾರ ಮಿತಿ ಬೇಡವೆ? ಗೌಡನಿಗೆ ಬುದ್ಧಿ ಬೇಡವೆ? ತಾನು ಕೂತದ್ದನ್ನು ಮುದಿಯರಿಬ್ಬರೂ ಗಮನಿಸಲಿಲ್ಲ. ಈಗ ಕರೆಸುತ್ತಾರೆಂದು ತಾನು ಮನೆಯಲ್ಲಿ ಕೂತಿದ್ದರೆ ಕರೆಸಲೇ ಇಲ್ಲ. ಹೋಗಲಿ, ಹೆಂಗೋ ಕಳ್ಳನೇ ನಿಂಗೂನನ್ನು ತನ್ನ ಬಳಿಗೆ ಕರೆತಂದ. ತಾನಿಲ್ಲಿಗೆ ಬಂದದ್ದಾಯಿತು. ಬಂದ ಮೇಲೂ ತನ್ನ ಬಗ್ಗೆ ಈ ನಿರ್ಲಕ್ಷ್ಯವೇ? ಈ ಕೇಸು ಕೋರ್ಟಿನಲ್ಲಿ ಗೆಲ್ಲಿಸಿ, ಇವರನ್ನೆಲ್ಲ ಪಾರುಮಾಡೋಣವೆಂದು ತಾನು ಯೋಚಿಸಿದರೆ, ಈ ಹದ್ದುಗಳು ತನ್ನನ್ನೊಂದು ಹುಲ್ಲುಕಡ್ಡಿಗೆ ಸಮಾನ ಮಾಡುವದೆಂದರೇನು? ಖೂನಿ ಅಂದರೇನು? ಸಣ್ಣ ಬಾಬತ್ತೆ? ಕೋರ್ಟಿದೆ, ಕಾನೂನಿದೆ, ಕಾಯ್ದೆ ಕಣ್ಣಲ್ಲಿ ಮಣ್ಣೆರಚುವ ಕೆಲಸವನ್ನು ಹಾಡಹಗಲೇ ಮಾಡುತ್ತಾನಲ್ಲ ಇವನ ಮುದಿ ಧೈರ್ಯ ಎಷ್ಟು? ಹೋಗಲೆ ತನ್ನನ್ನಾದರೂ ಕೇಳಿದನೆ? ದತ್ತೂನನ್ನು ಕೇಳಿದನಲ್ಲ! ಇವರಿಗೆ ಬುದ್ಧಿ ಕಲಿಸಲೇಬೇಕೆಂದು ಮನಸ್ಸಿನಲ್ಲಿಯೇ ತೀರ್ಮಾನಿಸಿಬಿಟ್ಟ ಗುಡಸೀಕರ.

"ಬೆಂಕಿ ಹಚ್ಚಿ ಕಾಯ್ದೆ ಕಾನೂನು ಯಾಕ ಮೈಮ್ಯಾಲ ಹಾಕ್ಕೋತೀರಿ? ಸುಮ್ಮನೆ ಫೋಜದಾರ್ನ ಕರಸಿ ಪಂಚನಾಮೆ ಮಾಡಸರಿ" ಅಂದ.

“ಕಾಯ್ದೇ ಕಾನೂನು ನಮಗೂ ಗೊತ್ತವ ಏನಪಾ, – ಅದರ…”

ಎಂದು ದತ್ತಪ್ಪ ಬಾಯಿ ಹಾಕಿದ. ಗೌಡ ಅಷ್ಟಕ್ಕೇ ತಡೆದು,

“ಕಾಯ್ದೆ ಕಾನೂನಂದರ ಸಣ್ಣ ಮಾತಲ್ಲಪಾ, ಕೆಟ್ಟ ಇಂಗರೇಜಿ ಸರಕಾರ, ಕೇಸ ಬೆಳಗಾಂವಿಗೆ ಹೋದರ ನಿಂಗೂ ಉಳಿಯಾಣಿಲ್ಲ, ಸುಮ್ಮನ ಎಲ್ಲಾರೂ ಕೂಡಿ ಒಬ್ಬಗ ತಿಳೀತು, ತಿಳೀಲಿಲ್ಲ ಅಷ್ಟರಾಗ ಮುಗಿಸಿಬಿಡೋಣ.

“ನಿಂಗೂ ಯಾಕ ಉಳಿಯಾಣಿಲ್ಲ”?

“ಯಾಕಂದರ ತಪ್ಪು ಮಾಡ್ಯಾನ – ಅದಕ್ಕ.”

“ತಪ್ಪು ಮಾಡಿದ್ದs ಖರೆ ಆದರ ಅನುಭವಿಸಲಿ.”

“ಅಂದರೇನು ನಿಂಗೂನ ಜೇಲಿಗೆ ಕಳಿಸಕೋಣಂತೀಯೇನು?”

“ಜೇಲಿಗಿ ಯಾಕ ಹೋಗಬೇಕು? ಅವನ ಪರವಾಗಿ ನಾ ವಕೀಲಿ, ಹಿಡೀತೀನಿ” ಎಂದು ಗುಡಸೀಕರ, ತನ್ನ ಮಾತಿನಲ್ಲಿಯ ವಿರೋಧ ಗುರುತಿಸದೆ. ಈ ಹುಡುಗ ಯಾರ ಪರವಾಗಿದ್ದಾನೆಂದು ದತ್ತಪ್ಪನಿಗೆ ತಿಳಿಯದಾಯ್ತು.

“ನೋಡಪ ಗುಡಸೀಕರ, ನೀ ವಕೀಲ್ಕಿ ಹಿಡೀತೀನಂತಿಯಲ್ಲಾ, ಬರೋಬರಿ. ಹಿಡದ ಏನ್ ಮಾಡತಿ? ವಾದಾ ಮಾಡಿ ನಿಂಗೂನ ಉಳಿಸಬೇಕೆಂತಿ! ಇಲ್ಲೇ ಈಗs ಉಳಿಸಲ್ಲ, ಹಾಂಗs ನೋಡಿದರ ಕೋರ್ಟೀಗಿ ಹೋದಮ್ಯಾಲ ಕೇಸ ಹಾಂಗ ಆದೀತು, ಹೀಂಗ ಆದೀತು – ಅಂತ ಹೇಳಾಕ ಬರತೈತೇನು? ನಿನ್ನ ಕೈಗೂ ಮೀರಿದ್ದದು. ವಾದಾ ಮಾಡತಿ, ಕೂರತಿ, ನಿಂಗೂನ ಏನ ಮಾಡಬೇಕಂತ ಹೇಳವರು ಯಾರು? ಜಜ್ಜ ಸಾಹೇಬನ? ನೀನ? ಖೂನಿ ಮಾಡ್ಯಾನಂದಮ್ಯಾಲ ಫಾಸಿ ಶಿಕ್ಷಾ ಆಗಬೇಕಂತ ಅಂದರ? ಆಗ ಏನ ಮಾಡತಿ?”

“ಹಾಗಂತ ಕಾಯ್ದೆ ಕಾನೂನು ಮೀರಾಕ ಆದೀತೇನ್ರಿ?”

“ಮೀರಾಕ ನಾವೇನೀಗ ಅನ್ಯಾಯ ಮಾಡಾಕ ಹತ್ತೀದೇವು?”

“ಹಾಗಂದರ ಖೂನಿ ಮಾಡಿದವರ್ನೆಲ್ಲಾ ನೀವು ಹೀಂಗ ಬಚಾವ ಮಾಡಿಕೋತ ಹೋದರ ನ್ಯಾಯ ನೀತಿ ಉಳಿದಾವು ಹೆಂಗ?”

“ಅಂದರ ಒಟ್ಟು ನಿಂಗೂಗ ಫಾಸಿ ಶಿಕ್ಷಾ ಆಗಲೆಂದೇನು?”

ಗುಡಸೀಕರ ನಿರುತ್ತರನಾದ. ಇವರ ಈ ಅನಿರೀಕ್ಷಿತ, ಸ್ವಚ್ಛಂದ ವಾದಕ್ಕೆ ಹೇಗೆ ಉತ್ತರ ಕೊಡಬೇಕೆಂಬುದೇ ತಿಳಿಯದಾಯ್ತು. ಕೋರ್ಟಿನಲ್ಲಿ ಆಗುವ ವಾಗ್ವದಕ್ಕಿಂತ ಬೇರೆಯದೇ ಆದ, ವಿಚಿತ್ರ ವಾದವಿದು. ಈ ವಾದ ಮುಂದುವರಿಸಬೇಕಾದರೆ ಮೊದಲು ತಾನೆಲ್ಲಿ ನಿಂತಿದ್ದೇನೆ ಅನುವದನ್ನು ಮನದಟ್ಟು ಮಾಡಿಕೊಳ್ಳಬೇಕು. ಬರೀ ನ್ಯಾಯ ನೀತಿ ಎಂದರೆ ನಿಂಗೂ ಜೇಲಿಗೆ ಹೋಗಬೇಕು, ಆದರೆ ತನಗೂ ಅದು ಬೇಕಿಲ್ಲ, ಹಾಳಾಗಿ ಹೋಗಲೆಂದರೆ ಈ ಮುದಿ ನರಿಗಳು ಕಾನೂನನ್ನು ತಮ್ಮ ಕೈಯಲ್ಲಿ ತಕ್ಕೊಂಡು ತಮಗೆ ಬೇಕಾದಂತೆ ಅರ್ಥೈಸುತ್ತ ಊರಿಗೆಲ್ಲ ಹುಸಿ ಪುಢಾರಿಗಳಾಗುತ್ತಿದ್ದಾರೆ!

“ನೋಡ್ರಿ ನಿಂಗೂ ಉಳೀತಾನೋ ಬಿಡತಾನೋ; ಆದರ ಕಾಯ್ದೆ ಕಾನೂನಂದರ ನಿಮ್ಮ ಕೈಯಾಗಿನ ಜನಿವಾರಲ್ಲ.”

ಎಂದು ದತ್ತಪ್ಪನಿಗೆ ಹೇಳಿಬಿಟ್ಟ, ಜಾತಿ ಆಡಿದನಲ್ಲಾ ಎಂದು ಗೌಡನಿಗೂ ವ್ಯಸನವಾಯಿತು. ಇನ್ನು ಸುಮ್ಮನಿದ್ದರೆ ದತ್ತಪ್ಪನ ಬಾಯಿ ಮುಚ್ಚುವದು ಕಷ್ಟ. ನಿಂಗೂನಿಗಾಗಲೇ ಗುಡಸೀಕರನ ಮೇಲೆ ಸಿಟ್ಟುಬಂದಿತ್ತು. ಇದೇನಿದು? ದಾರಿಯ ಪೀಡೆ ತಂದು ಮೈಮೇಲೆ ತೂರಿಕೊಂಡಂತಾಯಿತಲ್ಲಾ ಎಂದುಕೊಂಡ ಸ್ವಥಾ ಪಂಚಾಯ್ತಿ ಮೆಂಬರ ಕಳ್ಳನಿಗೂ ಅಸಮಾಧಾನವಾಯ್ತು.

"ಆಯ್ತಪ್ಪಾ ಈಗೇನ ಮಾಡೋಣಂದಿ?"

"ಏನಂದರ ಫೋಜದಾರ್ನ ಕರಸಿ ಪಂಚಾನಾಮೆ ಮಾಡ್ರಿ" ಈ ಹುಡುಗನಿಗೊಮ್ಮೆ ಕೊನೆಯ ಬಾರಿ ಬುದ್ಧಿ ಹೇಳಿ ನೋಡೋಣ ಅನ್ನಿಸಿತು ಗೌಡನಿಗೆ,

"ನೋಡಪಾ, ನಿಮ್ಮ ಶಹರದಾಗಿನ ಕಾಯ್ದೆ ಬ್ಯಾರೆ, ನಮ್ಮ ಹಳ್ಳಿ ಕಾಯ್ದೆ ಬ್ಯಾರೆ, ನಮ್ಮದು ನಿನಗೂ ಗೊತ್ತಿದ್ದಾಂಗ ಭಾಳ ಸರಳ. ಇಲ್ಲಿ ಜಗಳಾದರ ಇಲ್ಲೇ ನ್ಯಾಯ ಸಿಗಬೇಕು. ಇಲ್ಲೀ ಜಗಳದ ಮ್ಯಾಲ ಬೆಳಗಾಂವಿ ತೀರ್ಪು ತಂದ ಹೇರೇನಂತಿ, ಹೆಂಗ ಹೇಳು?"

"ಕಾಯ್ದೆದೊಳಗ ಹಳ್ಳೀದೊಂದು ಶಹರದ್ದೊಂದು ಅಂತ ಎರಡಿಲ್ಲರಿ."

"ಇಲ್ಲದಿದ್ದರೆ ಮಾಡಬೇಕಪಾ. ಮತ್ತ ಖರೇ? ಸಿಕ್ಕೀತು ಹೆಂಗ ಹೇಳು? ಇಷ್ಟs ತಿಳಿ ಇಲ್ಲಿಂದ ಬೆಳಗಾಂವಿಗೆ ಕೇಸ ಒಯ್ತಿ. ನಿಂಗೂ ದೇವರಾಣಿ ಮಾಡಿ ಸುಳ್ಳ ಹೇಳತಾನ, ಹೇಳಸ್ತಾನ, ಆ ಸಾಕ್ಷಿ ನಂಬಿ ನೀ ವಾದ ಮಾಡತಿ. ನಿನ್ನ ವಾದ ಕೇಳಿ ಜಜ್‌ಸಾಬ ಜಜ್‌ಮೆಂಟ ಬರೀತಾನ. ಬಡ್ಯಾಗ ಸುಳ್ಳ ಐತಿ, ತುದ್ಯಾಗ ಕುಂತವಗ ಖರೆ ಹೆಂಗ ಕಂಡೀತು ಹೇಳು?"

ಯಾವ ಬದಿಯಿಂದ ನೋಡಿದರೂ ತಾನೇ ಸೋಲುತ್ತಿದ್ದೇನೆಂದು ಗುಡಸೀಕರನಿಗೆ ಅನ್ನಿಸಿತು. ದತ್ತಪ್ಪನಿಗೆ ಗೌಡನ ಅನುಭವ ಹೊಸದಲ್ಲ. ಗೌಡನ ಮಾತಿಗೆ ಮನಸ್ಸಿನಲ್ಲೇ ಭಲೇ ಅಂದ. ಗೌಡ ಮುದುವರಿಸಿದ –

"ನಾವೆಲ್ಲಾ ಮುದುಕರಾದಿವಪಾ: ನಮ್ಮ ಕಾಲ ಮುಗೀತು. ಇನ್ನ ಹಳ್ಳೀ ಕಾರಭಾರ ನೋಡಿಕೋಬೇಕಾದವ ನೀನು. ನಮ್ಮ ಕಾಲದ ಮಂದಿ ಸರಳ ಇದ್ದರು. ಹೇಳಿದ್ದ ಕೇಳತಿದ್ದರು. ನಮ್ಮ ಕಾಲದಾಗಂತೂ ನಾವು ಕೋರ್ಟು ಕಛೇರಿ ಕಟ್ಟಿ ಹತ್ತಲಿಲ್ಲ. ನೀ ವಕೀಲ ಪಾಸ ಮಾಡೀದಿ ಅಂತ ಈ ಮಂದೀನೆಲ್ಲಾ ಕೋರ್ಟಿಗಿ ಎಳದರ ಹೆಂಗ, ನೋಡು? ನರಮನಶ್ಯಾ ಮಾಡದ ಇನ್ನೇನ ದೇವರ ತಪ್ಪ ಮಡಾಕಾಗತೈತಿ? ತಪ್ಪ ಮಾಡಿದಾ ಅಂತ ಏಕದಂ ಕೊಲ್ಲಾಕ ನೀ ಯಾರು ಹೇಳು? ಮನಶ್ಯಾ ಬರೀ ಸಾಯಾಕs ಹುಟ್ಟಲಿಲ್ಲಪ್ಪಾ. ಬದುಕಾಕೂ ಹುಟ್ಯಾನ. ದೇವರ್ನ ನೋಡಲ್ಲ. ನಾವು ಮಾಡಿದ ತಪ್ಪ ನೋಡಿದರೆ ಒಂದs ಒಂದ ದಿನ ನಮ್ಮನ್ನ ಈ ಭೂಮಿ ಮ್ಯಾಗಿಡಬಾರದು. ಆದರೂ ಕರಿಮಾಯಿ ನಮ್ಮನ್ನೆಲ್ಲಾ ಇಟ್ಟಾಳಲ್ಲ? ಯಾಕ ಹೇಳು? ಯಾಕಂದರ ಸಾವಿನಕಿಂತಾ ಬದುಕ ದೊಡ್ಡದಪಾ….?"

ಇವರು ಅಂತಿಂಥ ವಾದಕ್ಕೆ ಮಣಿಯುವುದಿಲ್ಲವೆಂದು ಗುಡಸೀಕರನಿಗೆ ಖಾತ್ರಿಯಾಯ್ತು. ಇವರ ವಾದದಲ್ಲಿ ಹುರುಳಿಲ್ಲ. ನಿಜ, ಆದರೆ ಪ್ರತಿವಾದ ಹೇಗೆ ಹೂಡಬೇಕೆಂದು ತಿಳಿಯದಾಯ್ತು.

"ನೋಡರೀ, ಇಂದಿಲ್ಲ ನಾಳೆ ಈ ಸುದ್ದಿ ಪೊಲೀಸರಿಗೆ ಸಿಗೋದs. ಸಿಕ್ಕಿತು ಅಂದರ ನಿಂಗೂನ ಗತಿ ಬಿಡರಿ, ನೀವಿಬ್ಬರೂ ಈ ಕೇಸಿನ್ಯಾಗ ಸಿಗಬೀಳ್ತೀರಿ. ಈ ವಯಸ್ಸಿನಾಗ ನಿಮಗೆ ಜೇಲಾಗೋದಂದರ ಚೆಲೋ ಅಲ್ಲ; ತಿಳಿದ ನೋಡ್ರಿ."

ದತ್ತಪ್ಪ ಈತನಕ ಬಾಯಿ ಮುಚ್ಚಿದ್ದೇ ಹೆಚ್ಚು.

“ಆತಪಾ ನಾವು ಜೇಲಿಗೂ ಹೋಗಾಕ ತಯಾರ, ಆದರ ನಿಂಗೂನ್ನ ಬಿಟ್ಟು ಕೊಡಾಕ ನಾವು ತಯಾರಿಲ್ಲ. ನಿಂಗೂ ಖೂನಿ ಮಾಡಬೇಕಂತ ಮಾಡಿಲ್ಲ. ಇನ್ನ ಮುಂದ ಮಾಡಾವನೂ ಅಲ್ಲ. ಏನೋ ಅಚಾನಕ ಆದದ್ದು. ನಾವಿಬ್ಬರೂ ಅವನ ಬೆನ್ನಿಗೆ ನಿಂದರಾವರು. ಬೇಕಂದರ ನೀ ಹೋಗಿ ಪೊಲೀಸರಿಗೆ ಹೇಳಿಕೊ ಹೋಗು.”

ಹಸಿ ಗೋಡೆಯಲ್ಲಿ ಹರಳು ನಟ್ಟಂತೆ ದತ್ತಪ್ಪನ ಈ ಮಾತು ಗುಡಸೀಕರನ ಎದೆಯಲ್ಲಿ ನಾಟಿಬಿಟ್ಟಿತು. ಈ ಮುದಿಯರಿಗೆ ಈ ಧೈರ್ಯವೇ? ಮಾತು ಬಿರುಸಾದ್ದು ಗೌಡನಿಗೂ ತಿಳಿದಿತ್ತು. ಕೂಡಲೇ ಹೇಳಿದ.

“ಆಯ್ತಪಾ; ನೀ ಅದೇನು ಶಿಕ್ಷಾ ಕೊಡ್ತಿ ಕೊಡು. ನೀ ಹೇಳಿದಾಂಗ ಕೇಳಾಕ ಹಚ್ಚತೀವಿ. ತಪ್ಪಿಗಿ ಶಿಕ್ಷಾ ಇಲ್ಲ ಅನಬ್ಯಾಡ. ಆದರ ಬೆಳಗಾಂವೀ ಮಂದಿ ನಮ್ಮ ಊರಿನ ಮನಶ್ಯಾಗ ಶಿಕ್ಷಾ ಕೊಡೋದು ಶಕ್ಯಿಲ್ಲ. ಏನಂತಿ?”

“ನಾ ಜಜ್ ಅಲ್ಲ. “

“ನಾವs ಮಾಡತೀವಲ್ಲ. ಬೇಕಂದರ ನಮಗೂ ಶಿಕ್ಷಾ ಕೊಡು. ನೀ ಹೇಳಿದ್ದಕ್ಕ ಎರಡಂದರ ನಮ್ಮ ನಾಲಿಗೆ ಕಳಚಿ ಬೀಳಲಿ; ಕರಿಮಾಯಿ ಆಣೀ, ಮತ್ತೇನೇತಿ?”

## ನೆನಪುಗಳು

ಶಿವಾಪುರದ ಪರಗೌಡನಿಗೀಗ ಅರವತ್ತು ಅರವತ್ತೈದು ವಯಸ್ಸು. ಅದು ಹೆಚ್ಚಲ್ಲ. ಅವನ ಆಕೃತಿ ನೋಡಿದರೆ, ಅಮಲೇರಿದಂತೆ ಸದಾ ಕೆಂಪಡರಿದ, ಆದರೆ ನಗುವ ಕಣ್ಣು, ನೇರ ಮೂಗು, ಎರಡೂ ಅಂಚಿನಲ್ಲಿ ತಗ್ಗುತೋಡಿ ಕೊನೆಗೊಳ್ಳುವ, ಗೆರೆಯಲ್ಲಿ ಬರೆದಂಥ ತುಟಿ, ಮನಸ್ವೀ ಬೆಳೆದ ಮೀಸೆ, ತುಂಬುಗೆನ್ನೆಯ ದುಂಡು ಮುಖ, ದಾಡಿ ಬೋಳಿಸುತ್ತಿದ್ದುದೇ ಕಡಿಮೆ, ತಲೆಗೆ ರುಂಬಾಲಿದ್ದರೆ ಇತ್ತು. ಇಲ್ಲದಿದ್ದರೆ ಬಗಲಿನಲ್ಲಿರುತ್ತಿತ್ತು. ಕಿವಿಯಲ್ಲಿ ಬಂಗಾರದ ವಾಲೆ, ಬಲಗೈ ಬೆರಳಿಗೆ ನಾಲ್ಕುಂಗುರ, ಆರಡಿ ಎತ್ತರದ ಅಜಾನುಬಾಹು ಆಕೃತಿಯನ್ನು ಒಮ್ಮೆ ನೋಡಿದವರು ಅವನನ್ನಾಗಲೀ, ಅವನ ಹೆಸರನ್ನಾಗಲೀ ಮರೆಯುವದೇ ಅಸಾಧ್ಯ. ಇಷ್ಟು ವಯಸ್ಸಾದರೂ ದೇಹದ ಒಂದು ಭಾಗದಲ್ಲಿಯೂ ಚರ್ಮ ಜೋತು ಬಿದ್ದಿರಲಿಲ್ಲ. ಒಂದು ನೆರಿಗೆ ಮೂಡಿರಲಿಲ್ಲ.

ನಕ್ಕಾಗಂತು ಗೌಡನನ್ನು ನೊಡುವದೇ ಚಂದ. ಗೌರವರ್ಣದ ಆ ಮುಖದಲ್ಲಿ ಅಚ್ಚ ಬಿಳಿಯ ದಾಳಿಂಬರದ ಬೀಜದಂಥ ಹಲ್ಲಿನ ಸಾಲು. ಬಹಳ ರಮಣೀಯವಾಗಿರುತ್ತಿತ್ತು. ಬೇರೆಯವರಿಗೆ ಕೊಡ್ಲಿ ಕುಡಗೋಲು ಅಸ್ತ್ರಗಳಾದರೆ ಗೌಡನಿಗೆ ಅವನ ನಗೆಯೇ ಅಸ್ತ್ರ. ಆ ನಗೆಯಿಂದ ಅವ ಬೇಕಾದ ಶತ್ರುಗಳನ್ನು ಹಾದಿಗೆ ತಂದಿದ್ದ, ಅವನ ಹತ್ತಿರ ಜಗಳವಾಡ ಬಂದ ಕೊಳವಿಯ ಮುದುಕಪ್ಪ ಗೌಡ ಅವನ ನಗೆಗೆ ಮಾರುಹೋಗಿ ಗೌಡ ಹೇಳಿದಂತೆ ಕೇಳಿಕೊಂಡು ತಿರುಗಿ ಹೋದನಂತೆ. ‘ಜಗಳ ಮಾಡದs ಹಾಂಗ ಯಾಕ ಬಂದ್ಯೋ?’ ಎಂದು ಊರವರು ಕೇಳಿದರೆ “ಏನು ಮಾಡ್ಲೋ? ನಕ್ಕುಬಿಟ್ಟ” ಎಂದು ಹೇಳಿದನಂತೆ. ಅವಕಾಶ ಸಿಕ್ಕಾಗ ಯಾವ ಹೆಂಗಸೂ ಅವನ್ನನ್ನೊಮ್ಮೆ ಕದ್ದು ನೋಡದಿರುವುದು ಸಾಧ್ಯವಿಲ್ಲ. ಬಸೆಟ್ಟಿಯ ಹೆಂಡತಿ, ಒಮ್ಮೆ ರಾತ್ರಿ ಗೌಡನ ಹೆಸರಿನಲ್ಲಿ ಅದೇನೋ ಕನವರಿಸುತ್ತಿದ್ದಳಂತೆ. ಬಸೆಟ್ಟಿಗೆ ಎಚ್ಚರವಿತ್ತು. ಎದ್ದು ಕೂತು “ಆ ಗೌಡನ್ನೋಡಿದರ ನಮ್ಮಂಥ ಗಂಡಸರಿಗೇ ಹೆಂಗೆಂಗೋ ಆಗತೈತಿ; ಇನ್ನು ಇಂಥವಕ್ಕೇನು” ಎಂದುಕೊಂಡು ಮತ್ತೆ ಮಲಗಿದನಂತೆ.

ಇದಕ್ಕೆ ತಕ್ಕ ಹಾಗೆ ಗೌಡ ರಸಿಕ ಕೂಡ. ಹಾಗಂತ ಹದ್ದು ಮೀರಿದವನಲ್ಲ; ಕುಡಿತ ಒಂದು ಬಿಟ್ಟರೆ. ಒಂದಲ್ಲ, ಎರಡಲ್ಲ, ಬಾಸಿಂಗಬಲದ ಮದುವೆಗಳೇ ನಾಲ್ಕಾಗಿದ್ದವು. ಮೊದಲಿನ ಮೂವರು ಹೆರಿಗೆಯಲ್ಲೇ ಸತ್ತು. ಊರವರ ನೆನಪಿನಲ್ಲೂ ನಮ್ಮ ಕಥೆಯಲ್ಲೂ ಹೆಸರು ಸಹ ಉಳಿಸಿಕೊಳ್ಳದೆ. ನಾಲ್ಕನೆಯವಳು ನಿಜಗುಣೆವ್ವ. ಕೊಳವಿಯ ಮುದುಕಪ್ಪಗೌಡನ ತಂಗಿ ಆದರೆ ನಿಜಗುಣೆವ್ವನೂ ಸತ್ತಳು….ಅದು ಹೀಗೆ:

ಮದುವೆಯಾಗಿ ಕೆಲ ದಿನಗಳಾದ ಮೇಲೆ ಆಕೆ ಗಂಡು ಹೆತ್ತಳು ನಿಜ; ಆದರೆ ಕೂಸು ಸತ್ತು ಬಾಣಂತಿ ಬದುಕಿದಳು. ಗೌಡನಿಗೆ ಆಗ ಹೊಳೆದುಬಿಟ್ಟಿತು: ಇದ್ದಷ್ಟು ದಿನ ಮೊಳಕೈವರೆಗೆ ಸೋರುವಂತೆ ಸುಖವುಂಡು ಸತ್ತರಾಯಿತು, ಎಂದು ಹೀಗೆಂದು ದುಂದು ದುಂದಾಗಿ ಬದುಕತೊಡಗಿದ. ಆ ಅವಧಿಯ ಅವನ ರಸಿಕತನದ ಕಥೆಗಳೇ ನೂರೆಂಟಿವೆ. ಒಂದೆರಡನ್ನು ಸ್ವಥಾ ಲಗಮವ್ವ ಕವಿಮಾಡಿ ಹಾಡಿದ್ದಾಳೆ. ಗೌಡನೇನೋ ಗಂಡಸು, ಬಿಚ್ಚಿಬಿಟ್ ಕುದುರೆಯ ಹಾಗೆ ಇರಬಲ್ಲ; ನಿಜಗುಣೆವ್ವ? ತನ್ನಿಂದ ಈ ಮನೆತನದ ದೀಪ ಆರುವಂತಾಯಿತಲ್ಲಾ? ಎಂದು ಒಳಗೊಳಗೇ ಹಣ್ಣಾದಳು, ಒಣಗಿ ಉತ್ತತ್ತಿಯಾದಳು, ಗಂಡಹೆಂಡಿರ ಬುದ್ಧಿ ಓಡದಿದ್ದೆರೇನಾಯಿತು? ಕುಲಕರ್ಣಿ ದತ್ತಪ್ಪನ ಚಿಂತಾಮನೀ ಬುದ್ಧಿ ಸುಮ್ಮನಿರುವದೇ? “ತಾಯವರs” ಎಂದು ನಿಜಗುಣೆವ್ವನ ಬಳಿ ಬಂದ ಲೋಕಾಭಿರಾಮವಾಗಿ ಅದು ಇದು ಮಾತಾಡಿದ. ಪುರಾಣವಾಡಿದ, ದೃಷ್ಟಾಂತ ಹೇಳಿದ. ದತ್ತಕದ ಮಾತೆತ್ತಿದ ‘ಹ್ಯಾಂಗೂ ಬ್ಯಾಡರ ಶಿವಿಗೆ ಗೌಡನಿಂದ ಹುಟ್ಟಿದ ಮಗನಿದ್ದಾನಲ್ಲಾ ಅವನ್ನs ಯಾಕ ದತ್ತಕ ತೊಗೋಬಾರದು?’ ಎಂದೂ ಹೇಳಿಬಿಟ್ಟ.

ಶಿವಿಯ ಮಗ ಶಿವನಿಂಗ ಗೌಡನಿಗೇ ಹುಟ್ಟಿದವನೆಂಬ ಗುಲ್ಲು ಗುಟ್ಟಿನದಲ್ಲ. ಗೌಡನಿಗಾಗಿ ಶಿವಿ ಮಾಡಿಕೊಂಡ ಗಂಡನನ್ನೇ ಬಿಟ್ಟು ತೌರುಮನೆಯಲ್ಲೆ ಉಳಿದಿದ್ದಳು. ನಿಜಗುಣೆವ್ವನೇ ಹಟಹಿಡಿದು ಜಗಳವಾಗಿ ಶಿವ ಗೌಡ ತೋಟದ ಕಡೆ ಹೋಗದ ಹಾಗೆ ಬಂದೋಬಸ್ತ ಮಾಡಿದ್ದಳು. ಮೊದಲೇಟಿಗೇ ದತ್ತಪ್ಪನ ಮಾತನ್ನು ಗೌಡತಿ ಒಪ್ಪಲಿಲ್ಲ, ದತ್ತಪ್ಪ ಬಿಡಲಿಲ್ಲ. ಒಂದೆರಡು ದಿನ ಕಳೆದು ಪೂಜಾರಿಯ ಬಾಯಿಂದಲೂ ಹೇಳಿಸಿಬಿಟ್ಟ, ಆ ಪೂಜಾರಿಗೆ ಯಾವಾಗ ದೇವಿ ಮೈ ತುಂಬುತ್ತದೆ, ಯಾವಾಗಿಲ್ಲ ಎಂದು ಹೇಳುವದೇ ಕಷ್ಟ. ತಾನು ಆಡುವದೇನು ದೇವಿ, ನುಡಿಯುದೇನೆಂದು ಅವನಿಗೂ ತಿಳಿಯದು. ಆಯಿತು, ಕರಿಮಾಯಿಯ ಅಪ್ಪಣೆಯಾಯಿತೆಂದು ಗೌಡ್ತಿ ಒಪ್ಪಿದಳು. ದತ್ತಕವೂ ಆಗಿಬಿಟ್ಟಿತು.

ಶಿವನಿಂಗ ಗೌಡನಿಗೆ ತಕ್ಕಮಗ. ಮನೆತನದ ಗೌರವ, ಹಕ್ಕು ಧಿಮಾಕುಗಳಿಗೆ ಯಾವಂದದಿಂದಲೂ ಕುಂದುಬರುವ ಹಾಗೆ ನಡೆದುಕೊಳ್ಳಲಿಲ್ಲ. ಹೊಟ್ಟಯಲ್ಲಿ ಹುಟ್ಟಿದ ಮಗನಿಗಿಂತ ಹೆಚ್ಚಾಗಿಯೇ ಗೌಡ್ತಿಯನ್ನು ನೋಡಿಕೊಂಡ. ಶಿವಿಗೆ ತೋಟದ ಗುಡಿಸಲಿನಲ್ಲಿಯೇ ವಾಸಕ್ಕೆ ವ್ಯವಸ್ಥೆ ಮಾಡಿದರು. ಗೌಡ್ತಿ ಶಿವನಿಂಗನ ತೊಡೆಯ ಮೇಲೆ ತಲೆಯಿಟ್ಟು, “ಗೌಡನನ್ನು ಬರೋಬರಿ ನೋಡಿಕೋ ಮಗಾ” ಎಂದು ಹೇಳಿ ಪ್ರಾಣಬಿಟ್ಟಳು. ಇದನ್ನು ಜನ ಮೆಚ್ಚಿಕೊಂಡರು.

ಗೌಡ ಹರೆಯದಲ್ಲಿ ಮಾಡಿದ ಕಾರುಬಾರನ್ನು ಎದೆಗೊಟ್ಟು ಒಪ್ಪಿಕೊಂಡನಲ್ಲ; ಕೊನೆಗೆ ಶಿವನಿಂಗನನ್ನು ಮಗನಾಗಿ ತಕ್ಕೊಂಡನಲ್ಲ! ಶಿವನಿಂಗ ಜಾತಿಯಲ್ಲಿ ಬಹಳ ಕಮ್ಮಿ, ತಾಯಿಯ ಕಡೆಯಿಂದ. ಆದರೇನು, ಗೌಡನ ಬೀಜ ತಾನೇ? ಗೌಡ್ತಿಯೂ ಅಷ್ಟೇ. ಮನಸ್ಸು ಮಾಡಿದ್ದರೆ ಅವಳ ಬಳಗದ ಬಳ್ಳಿಯೇನು ಸಣ್ಣದಲ್ಲ; ಅಣ್ಣನ ಮಗ, ತಮ್ಮನ ಮಗ, ಚಿಕ್ಕಪ್ಪನ ಮಗ, ತಂಗಿಯ ಮಗ – ಹೀಗೆ ಎಷ್ಟೆಲ್ಲ ಕರುಳಿನ ಹಂದರವಿದ್ದರೂ ಅವರನ್ನೆಲ್ಲ ಬಿಟ್ಟು ಶಿವನಿಂಗನನ್ನೇ ದತ್ತು ತೆಗೆದುಕೊಂಡಳಲ್ಲ – ಇದನ್ನು ಜನ ಮೆಚ್ಚಿದರು.

ನಿಜಗುಣೆವ್ವ ಸತ್ತ ಮೇಲೆ ಗೌಡ ನೆನಪುಗಳಿಗೆ ಹೆದರಿ ಊರಿನ ಮನೆಯಲ್ಲಿ ಮಲಗುವದನ್ನೇ ಬಿಟ್ಟು ತೋಟದ ಗುಡಿಸಲಲ್ಲೇ ಶಿವಿಯೊಂದಿಗೆ, ಈಗ ಶಿವಸಾನಿಯೊಂದಿಗೆ ಇರತೊಡಗಿದ. ಊರ ಮನೆಯಲ್ಲಿ ಶಿವನಿಂಗ ನಿಜಗುಣೆವ್ವನ ತಾಯಿಯೊಂದಿಗೆ ಇರುತ್ತಿದ್ದ.

## ಕಲಿಕಾಲ ಕಾಲಿಟ್ಟಿತು

ಸರ್ಕಾರಿ ಕಾಗದ ಬಂದಿತಲ್ಲ, ಅಗಷ್ಟೇ ಗುಡಸೀಕರ ಬೆಳಗಾವಿಯಲ್ಲಿ ಎಲ್.ಎಲ್.ಬಿ. ಮುಗಿಸಿ ಬಂದಿದ್ದ. ವಕೀಲಿ ಸುರುಮಾಡಬೇಕೆಂದರೆ ಅದು ಶಿವಾಪುರದಂಥ ಊರಿನಲ್ಲಿ ಹೇಗೆ ಸಾಧ್ಯ? ಅದಕ್ಕವನು ಬೆಳಗಾವಿಗೆ ಹೋಗಿರಬೇಕು. ಆದರೆ ಆಗೆಲ್ಲ ಸ್ವಾತಂತ್ರ್ಯ ಚಳುವಳಿಯ ಕಾಲ. ಕೋರ್ಟ್ ಕಛೇರಿಗಳೇ ಸುಟ್ಟು ಹೋಗುತ್ತಿದ್ದಾಗ ಇವನ ವಕೀಲಿ ಯಾರು ಕೇಳಬೇಕು? ಅದೇ ವರ್ಷ ಅವ ತಂದೆ ತೀರಿಹೋದುದರಿಂದ ಊರಿನಲ್ಲೇ ಹೊಲಮನೆ ನೋಡಿಕೊಂಡು ಇರಬೇಕಾಯ್ತು; ಇದ್ದ. ಆತ ಹಾಗೆ ಇದ್ದದ್ದು ಗೌಡನಿಗೆ ಅನುಕೂಲವಾಗಿಯೇ ಕಂಡಿತು. “ಹೇಗೂ

ಪಂಚಾಯ್ತಿ ಮಾಡಿಕೊಳ್ಳಿರಿ" ಎಂದು ಸರ್ಕಾರಿ ಪತ್ರ ಬಂದಿದೆ. ಅದಕ್ಕೆಲ್ಲ ಇಂಗರೇಜಿ ಓದುಬರಹ ಬಲ್ಲವರಿದ್ದರೆ ಒಳ್ಳೆಯದು. ತಮ್ಮಂಥವರಿಂದೇನಾದೀತು? ಇಂಥದಕ್ಕೆ ಗುಡಸೀಕರನೇ ಯೋಗ್ಯನೆಂದು ತೀರ್ಮಾನಿಸಿ ಹಾಗೆಂದು ಊರ ಹಿರಿಯರಿಗೂ ಪಂಚರಿಗೂ ಹೇಳಿಬಿಟ್ಟ.

"ಏನಂಬೋ ಮಾತು ಗೌಡರ, ಇನ್ನs ತಲೀಮ್ಯಾಲಿನ ಮಾಂಸ ಆರಿಲ್ಲ. ಅವಕ್ಕೆಲ್ಲಾ ಇಂಥಾ ಜವಾಬ್ದಾರಿ ಹೊರಿಸಿದರ ತಡದಾವೇನ್ರೀ?" ಎಂದು ಅನೇಕರು, ಯಾಕೆ – ದತ್ತಪ್ಪ ಕೂಡ – ಕೇಳಿದ್ದರು. "ಒಂದಿಷ್ಟು ದಿನಾ ಆದಮ್ಯಾಲ ತಾವs ದಾರಿಗೆ ಬರ್ತಾರ. ಊರಗಾರಿಕಿ ಹೋಗಬರೋದೆಲ್ಲಾ. ಇನ್ನ ಮ್ಯಾಲ ಅವರಿಗೇ ಸೇರಬೇಕಾದ್ದಲ್ಲೇನ್ರೋ?" ಎಂದು ಗೌಡ ಎಲ್ಲರನ್ನೂ ಒಪ್ಪಿಸಿದ್ದ.

ಆಯ್ತು: ಕೊನೆಗೂ ಗೌಡನ ಇಚ್ಛೆಯಂತೆ ಚುನಾವಣೆಯಿಲ್ಲದೇ ಗುಡಸೀಕರ ಸರಪಂಚ (ಚೇರ್ಮನ್) ಆಗಿಯೂ ತನ್ನ ಸರಿಕರಾದ, ಶಿವಾಪುರದ ಕನ್ನಡ ಗಂಡು ಮಕ್ಕಳ ಶಾಲಾದ ಒಂದೆರಡು ಇಯತ್ತೆ ಕಲಿತುಬಿಟ್ಟ ನಾಲ್ಕು ಹುಡುಗರನ್ನು ಮೆಂಬರರಾಗಿಯೂ ನೇಮಿಸಲಾಯಿತು. ಕರಿಮಾಯಿ ಗುಡಿಯ ಹಿಂಭಾಗದ ಖಾಲಿಬಿದ್ದ ನಗಾರಿಖಾನೆಯನ್ನು ಪಂಚಾಯ್ತಿ ಆಫೀಸೆಂದೂ ಕರೆಯಲಾಯಿತು. ಆದರೆ ಇದರಿಂದ ಊರಲ್ಲಿ ಕೆಲವು ಬದಲಾವಣೆಗಳಾದುದು ನಿಜ:

(ಅ) ಗುಡಸೀಕರನ ಅಡ್ಡ ಹೆಸರು "ಗುಡಸ್ಯಾಗೋಳ" ಎಂದು. ಕುಲಕರ್ಣಿ ದತ್ತಪ್ಪನ ದಪ್ತರುಗಳಲ್ಲಿದ್ದದ್ದೂ ಇದೇ ಹೆಸರು. ಜನ ಅದನ್ನು ಸಂಕ್ಷೇಪಿಸಿ "ಗುಡಸ್ಯಾ" ಅನ್ನುತ್ತಿದ್ದರು, ಅವರಪ್ಪ ಜೀವಂತವಾಗಿದ್ದಾಗ ಅನೇಕರಿಗೆ ಬಡ್ಡಿಗೆ ಹಣ ಕೊಟ್ಟು ಅವರ ಮನೆ ಮುರಿದು ಮಠ ಮಾಡಿ ಗುಡಿಸಿದವನಾದ್ದರಿಂದ ಜನ "ಗುಡಸು" ಎಂದೇ ಕರೆಯುತ್ತಿದ್ದರು. ಈಗ ಸರಪಂಚ ಆದ ಮೇಲೆ ಅದು "ಗುಡಸೀಕರ್" ಎಂದು ಬದಲಾಯಿತು. ಹಾಗೂ ಇನ್ನೂ ಪೂರ್ವಿ ಹೆಸರಿನಿಂದಲೇ ಕರೆದವರನ್ನು ಹೀನಾಯವಾಗಿ ಬೈದು ಅವಮಾನಿಸಲಾಯಿತು. ಆದ್ದರಿಂದ ನಾವೂ ಸದರಿ ಗುಡಸುನನ್ನು ಗುಡಸೀಕರನೆಂದೇ ಕಥೆಯಲ್ಲಿ ಸಂಬೋಧಿಸೋಣ.

(ಬ) ಗುಡಸೀಕರನ ಮನೇ ಮುಂದೆ "ಜಿ.ಎಚ್. ಗುಡಸೀಕರ, ಬಿ.ಎ., ಎಲ್.ಎಲ್.ಬಿ, ಗ್ರಾಮ ಪಂಚಾಯಿತಿ ಸರಪಂಚ ಬೆಳಗಾಂ ಡಿಸ್ಟ್ರಿಕ್ಟ್" – ಎಂಬುದಾಗಿ ಒಂದು ಇಂಗ್ಲಿಷ್ ಬೋರ್ಡ್ ಬಂತು. ಗುಡಸೀರನನ್ನು ಬಿಟ್ಟು ಅದನ್ನು ಯಾರೂ ಓದಲಿಲ್ಲ. ಮತ್ತು ಓದುವದು ಸಾಧ್ಯವಿರಲಿಲ್ಲ. ಊರವರೆಲ್ಲ ಅವನ ಮನೆಯ ಮುಂದೆ ತಾಸರ್ಧತಾಸು ನಿಂತು, ನಿಂತು ಆ ಬೋರ್ಡು ನೋಡಿಬಂದರು. ಹಚ್ಚಿದ ಹದಿನೈದು ದಿನಗಳಂತೂ ದಿನಬೆಳಗಾದರೆ ಮಕ್ಕಳ ಹಿಂಡೊಂದು ಆ ಬೋರ್ಡು ನೋಡುತ್ತ ನಿಂತಿರುತ್ತಿತ್ತು. ಅದನ್ನು ಓದಿದವರಿಗೆ ಐನೂರು ರೂಪಾಯಿ ಬಹುಮಾನ ಕೊಡುವುದಾಗಿ ಇಷ್ಟರಲ್ಲೇ ಗುಡಸೀಕರ ಡಂಗುರ ಸಾರಲಿದ್ದಾನೆಂದು ಹೊಲಗೇರಿಯಲ್ಲಿ ಸುದ್ದಿಯಿತ್ತು.

(ಕ) ಪಂಚಾಯ್ತಿ ಆಫೀಸಿನಲ್ಲಿ ಕೆಲಸವಂತೂ ಇರಲಿಲ್ಲವಲ್ಲ; ಅಥವಾ ಇದ್ದರು ಇವರಿಗೆ ಗೊತ್ತಿರಲಿಲ್ಲವಲ್ಲ; ಆದ್ದರಿಂದ ಮೆಂಬರರು ಮೀಟಿಂಗ್ ಕೂಡಿದಾಗೊಮ್ಮೆ ಇಸ್ಪೀಟಾಟ ಆಡುತ್ತಿದ್ದರು. ಹೀಗಾಗಿ ಇಸ್ಪೀಟಾಟಕ್ಕೆ 'ಮೀಟಿಂಗ್' ಎಂಬ ಹೊಸ ಹೆಸರು ಬಂತು. ಮತ್ತು ಸದರಿ ಮೀಟಿಂಗುಗಳು ಒಮ್ಮೊಮ್ಮೆ ರಾತ್ರಿ ಹನ್ನೆರಡು ಗಂಟೆಯವರೆಗೂ ನಡೆಯುತ್ತಿದ್ದವು.

(ಡ) ಇದರಲ್ಲಿ ಗುಡಸೀಕರ್ ಸಂತೋಷಗೊಳ್ಳುವ ಸಂಗತಿಗಳೂ ಇದ್ದವು. ಇವರೇನು ಬರೆಯುತ್ತಿದ್ದರೊ, ಬಿಡುತ್ತಿದ್ದರೋ ಸರ್ಕಾರದವರಂತು ಇವರಿಗೆ ಪತ್ರ ಬರೆಯುತ್ತಿದ್ದರಲ್ಲ, ಬಂದ ಪತ್ರಗಳು ಇಂಗ್ಲಷಿನಲ್ಲಿರುತ್ತಿದ್ದವು. ಗುಡಸೀಕರ ಆ ಪತ್ರವನ್ನು ಎಲ್ಲರೆದುರಿಗೆ ಜೋರಿನಿಂದ ಓದುತ್ತಿದ್ದ; ಓದುತ್ತಿದ್ದನಲ್ಲ ಅಂತೂ ಒಂದು ವಿಚಿತ್ರ ಟಿಸ್‌ಪಿಸ್ ಮಾಡುತ್ತಿದ್ದನಲ್ಲ. ಜನ ಬೆಕ್ಕಸಬೆರಗಾಗಿ ತೆರೆದ ಬಾಯಿ ತೆರೆದಂತೆ ಕೇಳುತ್ತ ಕೂರುತ್ತಿದ್ದರು.

ಇದಕ್ಕಿಂತ ವಿಚಿತ್ರವೆಂದರೆ ಪತ್ರಿಕಾವಾಚನ. ಗುಡಸೀಕರ ಮೂರೋ ಆರೋ ತಿಂಗಳಿಗೊಮ್ಮೆ ಬೆಳಗಾವಿಗೆ ಹೋಗಿ ಬರುತ್ತಿದ್ದ. ಹೋದಾಗೊಮ್ಮೆ ತಪ್ಪದೆ ಇಂಗ್ಲಿಷ್ ದಿನಪತ್ರಿಕೆ ತರುತ್ತಿದ್ದ. ಇನ್ನೊಮ್ಮೆ ಬೆಳಗಾವಿಗೆ ಹೋಗಿ ಹೊಸ ಪೇಪರ್ ತರುವವರೆಗೆ ಅದೇ ಗತಿ. ಮಧ್ಯಾಹ್ನ ಊಟವಾದ ಮೇಲೆ ಸಾಮಾನ್ಯವಾಗಿ ಒಬ್ಬನೇ ಮಹಡಿಯ ಮೇಲೆ ಕೂತು ಜೋರಿನಿಂದ, ಒಂದು ಕೂಗಳತೆಯವರೆಗೆ ಕೇಳಿಸುವಂತೆ ಓದುತ್ತಿದ್ದ. ಆಗಂತೂ ಆಜುಬಾಜೂ ಮನೆಯ ಅಪ್ಪಕ್ಕಗಳು ಮಕ್ಕಳು ಓಡಿ ಬಂದು ಕೆಳಗಡೆ ಗುಂಪು ಗುಂಪಾಗಿ ನಿಂತು ಅವನ ಟಿಸ್‌ಪಿಸ್ ಕೇಳುತ್ತಿದ್ದರು. ಇದು ಗೊತ್ತಾಗಿ ಗುಡಸೀಕರ ಇನ್ನಷ್ಟು ಗತ್ತಿನಿಂದ ಓದುತ್ತಿದ್ದ. ಇದರಿಂದಾಗಿ ಊರ ಹೆಂಗಸರಲ್ಲಿ ಕೆಲವು ಜನಪದ ಕಥೆಗಳು ಹುಟ್ಟಿ ಹಬ್ಬಿದವು:

(೧) ಗುಡಸೀಕರನ ಇಂಗ್ಲಿಷ್ ಕೇಳಿ ಬೆಳಗಾವಿಯ ಬಿಳೀ ಚರ್ಮದ ಒಬ್ಬ ಇಂಗ್ರೇಜಿ ಮೇಡಮ್ಮನು ನಡುರಸ್ತೆಯಲ್ಲೇ ಇವನನ್ನು ಅಡ್ಡಗಟ್ಟಿ ತನ್ನನ್ನು ಮದುವೆಯಾಗಬೇಕೆಂದು ಕೇಳಿಕೊಂಡಳಂತೆ! ಆದರೆ ಇವಳನ್ನು ಕಟ್ಟಿಕೊಂಡರೆ ತಾನು ತಂದೆತಾಯಿಗಳನ್ನು ಬಿಟ್ಟು ಪರದೇಶಕ್ಕೆ, ಸಮುದ್ರ ದಾಟಿ ಹೋಗಬೇಕಾಗುವದಲ್ಲಾ ಎಂದು ಒಲ್ಲೆ ಎಂದನಂತೆ.

(೨) (ಅ) ಗೋಕಾಕ ಫಾಲ್ಸದ ಮಾಲೀಕ, ಅವನೂ ಇಂಗ್ರೇಜಿಯವನೇ – ಮಗಳು ಒಂದು ದಿನ ಕಾರಿನಲ್ಲಿ ಕೂತು ಇವನು ಓದುವ ಕಾಲೇಜಿಗೆ ಹೋಗಿ ಮನೆಗೆ ಕರೆದೊಯ್ದಳು. ಅದೋ ಶಿವಾಪುರದಷ್ಟು ದೊಡ್ಡ ಬಂಗಲೇ! ಇಬ್ಬರೂ ಕೈಕೈ ಹಿಡಿದು ಕುಣಿಯುತ್ತಿದ್ದರಂತೆ. ಅಷ್ಟರಲ್ಲಿ ಅವಳ ತಂದೆ ಬಂದು "ಅಪ್ಪಾ ಗುಡಸೀಕರಾ, ನನ್ನ ಮಗಳ್ನ ಮದಿವ್ಯಾಗೋ, ನಿನಗ ಈ ಫಾಲ್ಸ್ ಎಲ್ಲಾ ಬರಕೊಟ್ಟ, ಮ್ಯಾಲ ನಿನ್ನ ಹಸರ ನೋಟಿನ್ಯಾಗ ಮುಚ್ಚತೀನೋ". – ಎಂದು ಇಂಗ್ಲಿಷಿನಲ್ಲಿ ಹೇಳಿದನಂತೆ! ರೊಕ್ಕ ರೂಪಾಯಿ ಸಿಕ್ಕಾವು, ಒಮ್ಮೆ ಜಾತಿ ಕೆಟ್ಟರೆ ಹೋದ ಜಾತಿ ಸಿಕ್ಕುವದೇ? ಎಂದು ಯೋಚಿಸಿ ಗುಡಸೀಕರ "ಸಾಧ್ಯವಿಲ್ಲಾ" ಎಂದು ಇಂಗ್ಲೀಷಿನಲ್ಲಿ ಹೇಳಿದನಂತೆ!

(ಬ) ಈ ಕಥೆಯ ಇನ್ನೊಂದು ಪಾಠಾಂತರ ಕೆಳಗಿನ ಓಣಿಯಲ್ಲಿದೆ. ಅದರ ಪ್ರಕಾರ ಗುಡಸೀಕರ ಒಲ್ಲೆನೆಂದ ತಕ್ಷಣವೇ ಹುಡುಗಿ ಅತ್ತು ಕರೆದು ಇವನಿಗೊಂದು ಕೈಗಡಿಯಾರ ಕೊಟ್ಟು ಮುದ್ದಿಸಿದಳಂತೆ. ಈಗ ಗುಡಸೀಕರನ ಗಡಿಯಾರ ಇದೆಯಲ್ಲ, ಆ ಹುಡುಗಿಯೇ ಕೊಟ್ಟಿದ್ದಂತೆ. ಆಶ್ಚರ್ಯವೆಂದರೆ ಈ ಕಥೆಗಳು ಸ್ವತಃ ಗುಡಸೀಕರನ ಕಿವಿಯ ಮೇಲೆ ಬಿದ್ದಾಗಲೂ ಅಲ್ಲಗಳೆಯಲಿಲ್ಲ. ನಕ್ಕು ಸುಮ್ಮನಾದನಷ್ಟೇ. ಹೀಗಾಗಿ ಜನಪದ ಕಥೆಗಳೆಲ್ಲ ನಿಜವಾದ ಘಟನೆಗಳಾಗಿ ಬಿಟ್ಟವು.

ಹೀಗಂದರೆ ಗುಡಸೀಕರ ಸಣ್ಣ ಮನುಷ್ಯನೆಂದು ಇದರರ್ಥವಲ್ಲ. ಊರಿಗೆ ಒಳ್ಳೆಯದಾಗುವ ಕೆಲಸ ಮಾಡಬೇಕೆಂದು ಅಥವಾ ಅವನ ಮಾತಿನಲ್ಲಿಯೇ ಹೇಳುವುದಾದರೆ "ಊರು ಮುಂದೆ ತರಬೇಕೆಂದು" ಅವನಿಗೆ ನಿಜವಾಗಿಯೂ ಆಸೆಯಿತ್ತು. ತನ್ನ ಬಳಿ ಬಂದ ಮೆಂಬರರಿಗೂ ಕ| ಗಂ| ಸಾಲೆಗೂ ಹೋಗಿ ಚಿಕ್ಕ ಭಾಷಣಗಳ ರೂಪದಲ್ಲಿ ಅದನ್ನು ಸ್ಪಷ್ಟಪಡಿಸಿದ್ದ ಕೂಡ. ಅಲ್ಲವೇ ಅವನ ಬಗ್ಗೆ ಕೆಟ್ಟ ಅಭಿಪ್ರಾಯ ತಾಳಲಿಕ್ಕೆ ಜನಕ್ಕೆ ಕಾರಣಗಳಿರಲಿಲ್ಲ. ಏನೋ ಬೆಳಗಾವಿಯಲ್ಲಿ ಒಂದಿಬ್ಬರು ಇಂಗರೇಜಿ ಮೇಡಮ್‌ಗಳು ಇವನೆಂದರೆ ಬಿದ್ದು ಸಾಯುತ್ತಾರೆಂದೂ, ಅದಕ್ಕೆ ಇವನು ಆಗಾಗ ಬೆಳಗಾವಿಗೆ ಹೋಗುತ್ತಾನೆಂದೂ ಕಿಂವದಂತಿ. ವದಂತಿಗೇನು? ಕೈಯಿಲ್ಲ, ಕಾಲಿಲ್ಲ, ಹಬ್ಬುತ್ತವೆ. ಸಾಯುತ್ತವೆ. ಹಳ್ಳಿಯಲ್ಲಿ ಮಾತ್ರ ಒಬ್ಬರ ತೋರುಬೆರಳಿಗೆ ಗುರಿಯಾಗುವ ಕೆಲಸ ಮಾಡಿದವನಲ್ಲ, ಮಾತ್ರವಲ್ಲ, ಊರು ಮುಂದೆ ತರಬೇಕೆಂದವನು, ಊರು ಮುಂದೆ ತರುವದೆಂದರೇನು? ಈಗದು ಹಿಂದೆ ಉಳಿದಿದೆಯೆಂದು ಅರ್ಥವಲ್ಲವೇ? ಹಾಗೆ ಅದು ಹಿಂದೆ ಉಳಿದಿದೆಯೆಂದು ಗೊತ್ತಾದದ್ದೇ ಅವನೊಬ್ಬನಿಗೆ ಮಾತ್ರ, ಗೌಡ, ಬಸೆಟ್ಟಿ, ದತ್ತಪ್ಪ – ಇವರೇನು ಬೆಳಗಾವಿ ಅರಿಯದವರೇ? ಆದರೆ ಇವರ್ಯಾರಿಗೂ ತಮ್ಮ ಊರು ಬೆಳಗಾವಿಯಂತಿಲ್ಲ – ಎಂದು ಅನಿಸಲಿಲ್ಲ.

ಅವನಲ್ಲಿರುವ ಒಂದೇ ಒಂದು ಸಣ್ಣ ದೋಷವೆಂದರೆ, ಅದನ್ನು ದೋಷವೆಂದು ಹೇಳಿದ್ದು ದತ್ತಪ್ಪನೊಬ್ಬ ಮಾತ್ರ – ದತ್ತಪ್ಪನಿಗೇನು? ಪಿತ್ಥವಾದರೆ, ಯಾವದಕ್ಕೂ ದೋಷ ಎಂದಾನು, ಜನ ಹೇಳಬೇಕಲ್ಲ? – ಹೇಳಲಿ, ಬಿಡಲಿ, ಒಬ್ಬನಿಗಂತೂ ದೋಷವಾಗಿ ಕಂಡದ್ದು ನಿಜತಾನೆ?

– ಸರಿ – ಅದನ್ನು ನೀವೂ ದೋಷವೆಂದು ಒಪ್ಪಿಕೊಳ್ಳುವಿರಾದರೆ? ಭಾಷಣವಿಲ್ಲದೇ ಯಾವದೇ ಕಾರ್ಯ ಸುರುವಾಗ ಕೂಡದು, ಸುರುವಾದರೆ ಮುಗಿಯಕೂಡದು – ಎಂಬ ನಂಬಿಕೆ.

## ದತ್ತಾತ್ರೇಯನಾಮಾ

ಇಷ್ಟೆಲ್ಲಾ ಹೇಳಿ ದತ್ತಪ್ಪನ ಬಗ್ಗೆ ಮಾತಾಡದಿದ್ದರೆ ಗೌಡನ ಚರಿತ್ರೆಯೇ ಅಪೂರ್ಣವೆನಿಸಬಹುದು. ಗೌಡ, ಕುಲಕರ್ಣಿ ಎಂಬುದರಿಂದಲ್ಲ. ಲೋಕದ ಯಾವದೇ ಅಣ್ಣ ತಮ್ಮಂದಿರ ಜೋಡಿಗಿಂತ ಇವರಿಬ್ಬರ ಸಂಬಂಧ ಹೆಚ್ಚು ಆಳವಾಗಿತ್ತು. ಲಗಮವ್ವನ ಕಥೆಗಳ 'ರಾಜನ ಮಗ; ಮಂತ್ರಿ ಮಗ'ನಂತೆ ಇಬ್ಬರೂ ಕೂಡಿಯೇ ಬರೆದರು, ಆಡಿದರು; ಬೆಳೆದರು, ಸಾಹಸ ಮಾಡಿದರು, ವಯಸ್ಸಾದ ಮೇಲೆ ಊರುಗಾರಿಕೆಯ ಜವಾಬ್ದಾರಿ ಹೊತ್ತು ನಿಭಾಯಿಸಿದರು.

ನೂರು ಜನ ಗೌಡರ ಆಳ್ವಿಕೆಯಲ್ಲಿಯೇ ಯಾವಾಗಲೋ ದತ್ತಪ್ಪನ ಪೂರ್ವಿಕರು ಕರಿಮಾಯಿಯ ಪೂಜೆ ಮಾಡೋದಕ್ಕೆ ಬಂದು ಶಿವಾಪುರದ ಒಕ್ಕಲಾದರೆಂದೂ ಮುತ್ತಜ್ಜನ ಮಡಿ, ಮೈಲಿಗೆಯನ್ನು ಸಹಿಸದ ಕರಿಮಾಯಿ ಪೂಜಾರಿಕೆಯನ್ನು ಮತ್ತೆ ಶೂದ್ರರಿಗೆ ಕೊಟ್ಟಳೆಂದೂ ಒಂದು ಹಾಡಿದೆ. "ಬ್ರಾಮರಿಂದಲಿ ಪೂಜೆ ಸುದ್ದಾಗೋದಿಲ್ಲೆಂದು! ನಿನ್ನ ಪೂಜಾರಿಕಿ ಸೂದ್ರರಿಗಿ ಕೊಟ್ಟಿ" ಎಂದು. ಆದರೆ ದತ್ತಪ್ಪ ಇದನ್ನೊಪ್ಪುವದಿಲ್ಲ. ಸಾಮಾನ್ಯವಾಗಿ ಶೂದ್ರ ದೇವರುಗಳೆಲ್ಲ ಬ್ರಾಹ್ಮಣ ಪೂಜಾರಿಯನ್ನು ಬೇಡಿದರೆ ಕರಿಮಾಯಿ ಶೂದ್ರರನ್ನೇ ಕೇಳುವದೆಂದರೇನು? "ಹಾಂಗಲ್ಲ ತಗಿ, ಕುಲಕಣ್ಣಿಕೆ ಮಾಡಾಕಂತs ನಮ್ಮ ಪೂರ್ವಿಕರು ಇಲ್ಲಿಗೆ ಬಂದರು. ಹಾಗಂತ ಚಿಂತಾಮಣಿ ಹೇಳೇತಿ" ಎಂದು ಇವನ ಹೇಳಿಕೆ. ಕುಲಕರ್ಣಿಕೆಯ 'ಜೊತೆಗೆ ಹೊತ್ತಿಗೆ ಹೇಳುವುದು, ವೈದ್ಯ ಮಾಡುವುದು – ಇವು ಆ ಮನೆತನಕ್ಕೆ ಪರಂಪರೆಯಿಂದ ಬಂದಿದೆ.

ಆ ಮನೆತನದ ವಿದ್ಯೆ, ಬುದ್ಧಿ, ವೈದ್ಯ ಇವೆಲ್ಲವನ್ನೂ ಒಳಗೊಂಡ ಒಂದೇ ಒಂದು ಪುಸ್ತಕ ಆ ಮನೆತನದಲ್ಲಿದೆ. ಅದೇ "....ಚಿಂತಾಮಣಿ", ಅದು ಯಾವುದರ ಚಿಂತಾಮಣಿಯೆಂದ ಅವನಿಗೂ ತಿಳಿಯದು. ಯಾಕೆಂದರೆ ಚಿಂತಾಮಣಿಯೆಂದೇ ಊರಲ್ಲಿ ಅದರ ಖ್ಯಾತಿಯಿತ್ತು. ಗೌಡ ಆಗಾಗ ಸಮಸ್ಯೆ ಉಂಟಾದಾಗ "ಇದಕ್ಕೆ ನಿನ್ನ ಚಿಂತಾಮಣಿ ಏನ ಹೇಳತೈತಿ?" ಎನ್ನುತ್ತಿದ್ದ. ಇವನು ಗಂಭೀರವಾಗಿಯೇ ಅದನ್ನು ಓದುತ್ತಿದ್ದ. ದತ್ತಪ್ಪನ ಓದುವ ಶೈಲಿಯೂ ಅವನದೇ – ಅವನ ಚಿಂತಾಮಣಿಯಂತೆ. ಮೂಗಿನ ತುದಿಗೆ ಕನ್ನಡ ಏರಿಸಿ, ಭಯಭಕ್ತಿಗಳಿಂದ ಚಪ್ಪಾಗಳಿ ಹಾಕಿಕೊಂಡು, ನಮಸ್ಕಾರ ಮಾಡಿ, ಪುಸ್ತಕ ತೆರೆದು ಒಂದೊಂದೇ ಸಾಲು ಓದುತ್ತಿದ್ದ. ಒಂದು ಸಾಲು ಮುಗಿದೊಡನೇ ಅಲ್ಲಿಗೆ ವಾಕ್ಯ ಮುಗಿಯಲಿ, ಬಿಡಲಿ, ಶಬ್ದ ಮುಗಿದಿರಲಿ, ಮುಗಿಯದಿರಲಿ ಕಣ್ಣಮುಚ್ಚಿ ಸುಮ್ಮನೇ ಕೂತು ಆ ಸಾಲಿನ ಅರ್ಥವನ್ನು ಮೊದಲು ತಂತಾನೇ ತಿಳಿದುಕೊಂಡು ಆಮೇಲೆ ಎರಡನೆ ಸಾಲಿಗೆ ಹೋಗುತ್ತಿದ್ದ. ಅದೂ ಎಂಥ ವಿಚಿತ್ರ ಪುಸ್ತಕ ಎಂದರೆ, ಯಾರು ಏನು ಕೇಳಿದರೂ ಅದರಲ್ಲಿ ಬರೋಬ್ಬರಿ ಉತ್ತರ ಸಿಕ್ಕುತ್ತಿತ್ತು. ಅದರಲ್ಲಿಯ ಸಾಲುಗಳಿಂದ ಯಾವಾಗ ಬೇಕೋ ಆವಾಗ ಸಂದರ್ಭಕ್ಕೆ ತಕ್ಕ ಅರ್ಥ ಹಿಂಡುತ್ತಿದ್ದ. ಹೀಗಾಗಿ ಪುಸ್ತಕ ಹಿಡಿದಾಗ ಇವನ ಕೈ ನಡುಗುತ್ತಿತ್ತಲ್ಲ. ಇವನ ಅರ್ಥಕ್ಕೆ ಆ ಚಿಂತಾಮಣಿಯೇ ನಡುಗಿದ ಹಾಗೆ ಕಾಣುತ್ತಿತ್ತು.

ಕನ್ನಡಕ ಹಾಕುತ್ತಿದ್ದನಲ್ಲ, ಅವನ ಕಣ್ಣು ಮಂದವಾಗಿದ್ದವೆಂದು ಇದರರ್ಥವಲ್ಲ. ಅವರಪ್ಪ ಕನ್ನಡಕ ಹಾಕಿಕೊಂಡು ಆ ಪುಸ್ತಕ ಓದುತ್ತಿದ್ದ. ಆದ್ದರಿಂದ ಇವನೂ ಹಾಗೇ ಓದುತ್ತಿದ್ದ ಅಷ್ಟೇ.ಆ ಕನ್ನಡಕ ಅವನಿಗೆ ಅಂಜನದಷ್ಟು ಪ್ರಭಾವಶಾಲಿಯಾಗಿ ಕಂಡಿತು. ಯಾಕೆಂದರೆ ಕನ್ನಡಕ ಹಾಕಿದಾಗ ಪುಸ್ತಕದಲ್ಲಿ ಇಲ್ಲದ ಅರ್ಥಗಳೂ ಅವನಿಗೆ ಕಾಣಿಸುತ್ತಿದ್ದವು.

ಹಾಗಂತ ಓದುಬರಹದಲ್ಲಿ ದತ್ತಪ್ಪ ದಡ್ಡನೆಂದಲ್ಲ. ತಮ್ಮ ಹೌದೆಂಬೋ ಹಂಗಾಮದಲ್ಲಿ ಅವನೊಂದು ಕಾವ್ಯ ಕೂಡ ಮಾಡಿದ್ದ ಸಂಗತಿ ಅನೇಕರಿಗೆ ತಿಳಿದಿಲ್ಲ. ನಾಕನೇ ಇಯತ್ತೆ ಇತಿಹಾಸದಲ್ಲಿ ದಿಲ್ಲಿಯನ್ನಾಳಿದ ಬಾಬರನೆಂಬ ದೊರೆ "ಬಾಬರ ನಾಮಾ" ಎಂಬುದಾಗಿ ಒಂದು ಆತ್ಮಚರಿತ್ರೆ ಬರೆದಿದ್ದ ಸಂಗತಿಯನ್ನು ಓದಿದ್ದ. ಹಾಗೇ ತಾನೂ ಯಾಕೆ ತನ್ನ ಆತ್ಮಕಥೆ ಬರೆಯಬಾರದು? ಎನ್ನಿಸಿತು. ಪಾಪ; ಮೂರು ತಿಂಗಳು, ಹಗಲು ರಾತ್ರಿ ಕೂತು ಭಾಮಿನಿ ಷಟ್ಪದಿಯಲ್ಲಿ ಮುನ್ನೂರು ಪುಟದ ಆತ್ಮಕಥೆ "ದತ್ತಾತ್ರೇಯನಾಮ" ಬರೆದೇಬಿಟ್ಟ! ಅದನ್ನಿನ್ನು

ಯಾರಿಗಾದರೂ ಓದಬೇಕಲ್ಲ. ಗೌಡನ ಒಡ್ಡೋಲಗಕ್ಕೆ ತಗೊಂಡು ಹೋದ. ಆಸ್ಥಾನ ಕವಯಿತ್ರಿ ಲಗಮವ್ವನೂ, ಮಹಾಪಂಡಿತ ಪ್ರಶ್ನೋತ್ತರ ಮಾಸ್ತರನೂ ಆಗಲೇ ಆಸೀನರಾಗಿದ್ದರು. 'ದತ್ತಾತ್ರೇಯನಾಮಾದ' ಕಥೆ ಹೀಗೆ ಸುರುವಾಗುತ್ತದೆ.

ಶಿವಾಪುರದಲ್ಲಿ ಕಲಿಕಾಲ ಪ್ರವೇಶಿಸಿ, ಭಕ್ತಿ ನಾಶವಾಗಿ ಪಾಪ ಹೆಚ್ಚಾಯಿತು. ಕರಿಮಾಯಿ ಶಿವನ ಬಳಿ ಓಡಿಹೋಗಿ " ನಿನ್ನ ಅವತಾರ ತೋರಿಸಿ ಪಾಪದಿಂದ ನನ್ನ ಊರನ್ನು ಪಾರುಮಾಡು" ಎಂದು ಮೊರೆಯಿಟ್ಟಳು. ಕೂಡಲೇ ಶಿವ ದತ್ತಾತ್ರೇಯನೆಂಬ ಗಣನನ್ನು ಕರೆದು "ಶಿವಾಪುರದಲ್ಲಿ ಜನಿಸಿ ಭಕ್ತಿಯ ಬೆಳಗಿ ಬಾ" ಎಂದು ಕಳಿಸಿದನಂತೆ. ಅವನೇ ನಮ್ಮ ದತ್ತಪ್ಪನಂತೆ!

ಕಾವ್ಯದ ಸುರವಿಗೇ ಗೌಡ 'ಹೋ' ಎಂದು ನಗಲಾರಂಭಿಸಿದ. ಲಗಮವ್ವ ಬಿದ್ದುಬಿದ್ದು ನಕ್ಕಳು. ದತ್ತಪ್ಪನಿಗೆ ಅವಮಾನವಾಯಿತು.

"ಏ ಗೌಡಾ, ನಿನ್ನ ಮಡ್ಡ ತಲೀಗ ಇಂಥಾ ಕಾವ್ಯ ಹೆಂಗ ತಿಳಿದೀತಲೇ" ಅಂದ. ಲಗುಮವ್ವನ ಕಡೆ ತಿರುಗಿ –

"ಇವಳ್ಹೆಂಗ ನಗತಾಳ ನೋಡೋ, ಏ ಹುಚರಂಡೇ, ನಿನ್ನ ಜನ್ಮದಾಗ ಒಂದ ಭಾಮಿನಿ ಷಟ್ಪದಿ ಬರಿಯೇ ಹೌದಂತೀನಿ, ಇಡೀ ಜಗತ್ತಿನ್ಯಾಗ ದೀಡ ಸಾವಿರ ಭಾಮಿನೀ ಷಟ್ಪದಿ ಯಾ ಮಗಾ ಬರದ್ದಾನ ತೋರಿಸಿಕೊಡೇ" ಎಂದು ಹೇಳುತ್ತ,

"ಗೌಡಾ, ನಿನಗೆ ಈ ಹುಚ್ಚರಂಡೀ ಹಾಡಿಗಿಂತ ತನ್ನ – 'ದತ್ತಾತ್ರೇಯ ನಾಮಾ'ಕಡೇ ಆಯ್ತಲೋ!" ಎಂದು ಹೇಳಿಕೊಳ್ಳುತ್ತ ಅಲ್ಲಿ ನಿಲ್ಲದೇ ತನ್ನ ಕಾವ್ಯ ತಗೊಂಡು ಭರ್ರನೇ ಹೋಗಿಬಿಟ್ಟ. ಪ್ರಶ್ನೋತ್ತರಮಾಸ್ತರನಿಗೆ ಕಾವ್ಯ ಇಷ್ಟವಾಗಿತ್ತು. ಯಾಕೆಂದರೆ ಒಂದೇ ಒಂದು ಭಾಮಿನಿ ಷಟ್ಪದಿ ಹೊಸೆಯುವದು ಎಷ್ಟು ಕಷ್ಟ ಅಂತ ಅವ ಬಲ್ಲ. ಇನ್ನು ದೀಡ ಸಾವಿರ ಷಟ್ಪದಿಗಳೆಂದರೆ! ಆದರೆ ತನ್ನ ಅಭಿಪ್ರಾಯ ಹೇಳುವ ಮೊದಲೇ ದತ್ತಪ್ಪ ಎದ್ದುಹೋಗಿದ್ದ.

ಮುಂದೆ ಎಂಟುದಿನ ದತ್ತಪ್ಪ ಗೌಡನ ಮುಖ ನೋಡಲಿಲ್ಲ. 'ದತ್ತಾತ್ರೇಯಾಮಾ'ದ ವಿಷಯ ಅಲ್ಲಿಗೆ ಎಲ್ಲರೂ ಮರೆತರು. ಯಾವಾಗಲೋ ಒಮ್ಮೆ ಲಗಮವ್ವ ಕೇಳಿದಾಗ ದತ್ತಪ್ಪ ಕಳೆದುಹೋಯ್ತೆಂದು ಹೇಳಿದ. ಅದು ಹೇಗೆ ಕಳೆದುಹೋಯ್ತೆಂಬ ಬಗೆಗೆ ಲಗುಮವ್ವ ಹೇಳುವದು ಹೀಗೆ:

ಕಾವ್ಯ ವಾಚನದ ಮಾರನೇ ದಿನವೂ ದತ್ತಪ್ಪ ಮತ್ತೆ ಗೌಡನಿಗೆ ದುಂಬಾಲು ಬಿದ್ದನಂತೆ! "ಇದರಾಗ ಅದೇನ ಕಸರೈತಿ ತೋರಿಸಿಕೊಡೋ ಅಂದನಂತೆ, ಗೌಡ "ಬಿಡೋ ದತ್ತೂ ಏನ ಹುಡುಗಾಟ" ಅಂದರೆ,

"ಲೇ ನೀನಲ್ಲೋ ನನ್ನ ಕಾವ್ಯಕ್ಕೆ ಭೇಷ್ ಅನ್ನೋವನು: ಕರಿಮಾಯಿ, ಕರಿಮಾಯಿ! ಬಾ ತೋರಸ್ತೀನಿ"

– ಎಂದವನೇ ಗೌಡನನ್ನು ದರದರ ಎಳೆದುಕೊಂಡು ಕೆರೆಗೆ ಹೋದನಂತೆ. ಮೈಯಲ್ಲಿ ಆವೇಶ ತುಂಬಿದವರಂತೆ 'ಕರಿಮಾಯೀs' ಎಂದು ಜೋರಿನಿಂದ ಕೂಗುತ್ತ ಎರಡೂ ಕೈಯಿಂದ ಕಾವ್ಯ ಹಿಡಿದು ಎತ್ತಿ,

"ಕರಿಮಾಯೀ ಈ ಕಾವ್ಯದಾಗ ಸತ್ವ ಇದ್ದರ ಇದನ್ನ ತೇಲಿಸು ಇಲ್ಲಾದರ ಮುಳುಗಸು" ಎಂದವನೇ ಕೆರೆಯಲ್ಲಿ ಕಾವ್ಯ ಬಿಟ್ಟುಬಿಟ್ಟ! ಆಹಾ, ಕರಿಮಾಯಿಯ ಮಹಿಮೆಯೆಂದರೆ ಇದಲ್ಲವೆ? ಕಾವ್ಯ ಮುಳುಗಿಬಿಟ್ಟಿತು!

– ಅಂತೆ. ಹೀಗೆಂದು ಲಗಮವ್ವ ಹೇಳುತ್ತಾಳೆ. ಇದರಲ್ಲಿ ಸುಳ್ಳೆಷ್ಟೋ, ಖರೆಯೆಷ್ಟೋ! ಅಂತೂ ಅಂದಿನಿಂದ ಲಗಮವ್ವನ ಹಾಡು ಹೌಂದು ಎಂದದ್ದಕ್ಕೆಲ್ಲ ಚಿಂತಾಮಣಿ ಅಲ್ಲವೆನ್ನುತ್ತದೆ. ಇಬ್ಬರಿಗೂ ವೈರವಿದೆಯೆಂದು ಇದರರ್ಥವಾಗಬಾರದು. ಅಷ್ಟೇ ಏನು, ಒಳಗೊಳಗೆ ಒಂದು ನಮೂನಿ ಸ್ನೇಹವೇ ಇದೆ. ದತ್ತಪ್ಪನ ಮನೆಯಲ್ಲಿ ಹೊಸ ಉಪ್ಪಿನಕಾಯಿ ಹಾಕಲಿ – ಆ 'ಹುಚ್ಚರಂಡಿ'ಯನ್ನು ಕರೆಸಿ ಒಂದು ಗಡಿಗಿ ಉಪ್ಪಿನಕಾಯಿ ಕೊಟ್ಟನೇ: ಹಬ್ಬಹರಿದಿನದ ಅಡಿಗೆಯಾಗಲಿ, ಆ ಹುಚ್ಚರಂಡಿಗೆ ಕರೆ ಹೋಯಿತೇ, ಲಗಮವ್ವನೂ ಅಷ್ಟೇ ಹೋಳಿ ಹಬ್ಬದಲ್ಲಿ

“ಅಯ್ ನನ ಹಾರುವಾ” ಎನ್ನುತ್ತಾ ಅವನನ್ನು ಅಟ್ಟಿಸಿಕೊಂಡು ಹೋಗಿ ಬಣ್ಣ ಗೊಜ್ಜುವದು, ಚಂಡಿಕೆ ಮುಟ್ಟಿ ಲಟಿಕೆ ಮುರಿಯುದು ಯಾರಿಗೆ ಗೊತ್ತಿಲ್ಲ? ಹೋಗಲಿ “ಅಯ್ ನನ ಹಾರುವಾ” ಎಂದು ಅವಳೆಂದಾಗ ಅದರ ಶ್ಲೇಷೆಯನ್ನು ಜನಕ್ಕೆ ಹೇಳಿಕೊಡಬೇಕೋ?

ಊರ ಹಿರಿಯರೆಂದರೆ ಇವರೇ – ಗೌಡ, ದತ್ತಪ್ಪ, ಲಗುಮವ್ವ, ಪೂಜಾರಿ, ಬಾಳೂ, ಕಾಸೆಟ್ಟಿ: ಅದರಲ್ಲೂ ಮುಖ್ಯವಾಗಿ ಗೌಡ ದತ್ತಪ್ಪ, ಇವರ ಮೇಲಿನ ವಿಶ್ವಾಸದಿಂದ ಉಳಿದವರು ಹಿರಿತನಕ್ಕೆ ಹಾಜರಿದ್ದರೂ ಸೈ, ಇರದಿದ್ದರೂ ಸೈ – ಇವರು ಹೇಳಿದ್ದಕ್ಕೆ ಸೈಗುಡುತ್ತಿದ್ದರು. ಗೌಡ ವ್ಯವಹಾರ ತಿಳಿದವ. ವಹಿವಾಟು ಬಲ್ಲವ. ಜನಗಳನ್ನು ನಂಬುವವ. ದತ್ತಪ್ಪ ಸಿಡುಕಿನವ. ಸ್ವಲ್ಪ ವಾಚಾಳಿ. ಕವಿಯಾದುದರಿಂದ ವ್ಯಂಗ್ಯವನ್ನು ಬಲ್ಲ. ಜೊತೆಗೆ ಹಾಸ್ಯದ ಸೊಗಸುಗಾರ…. ಹೊರಗೆ ನಗಲಾಗದಿದ್ದರೂ ಒಳಗೆ ನಗುತ್ತಿದ್ದ. ಇನ್ನು ಜನ ಕುಳ್ಳರಲ್ಲ. ಮುಪ್ಪಿಗೂ ಬಾಗಿದವರಲ್ಲ, ಸೊಂಟ ನೆಟ್ಟಗಿರುವ, ಸಮಕರಿದು ವರ್ಣದವರು. ಕಣ್ಣಿನಲ್ಲಿ ನಂಬಿಕೆ, ರಾಡಿತನ ಎರಡೂ ಇರುತ್ತೆ. ಗೌಡ ದತ್ತಪ್ಪನ ಆಳಿಕೆಯಲ್ಲಿ ಅನ್ಯಾಯವಾಯಿತು ಅನ್ನಲಿಲ್ಲ. ಕಾಲ ಬದಲಾಯಿತು, ಅನ್ನಲಿಲ್ಲ ಕಲಿಕಾಲ ಕಾಲಿಟ್ಟಿತು ಅನ್ನಲಿಲ್ಲ – ಹಾಗಿದ್ದರು. ಸೇರು ಇದ್ದಲ್ಲಿ ಸೇರಾಯಿತು. ಒಂದಿದ್ದಲ್ಲಿ ನೂರಾಯಿತು. ಸಾವಿರವಾಯಿತು. ಊರು ಎಷ್ಟು ಸಮೃದ್ಧಿವಾಗಿ ಬೆಳೆಯಿತೆಂದರೆ – ಜನಸಂಖ್ಯೆ ಜಾಸ್ತಿಯಾಗಿ ನಿಮ್ಮ ಊರಿಗೊಂದು ಗ್ರಾಮಪಂಚಾಯಿತಿ ಮಾಡಿಕೊಳ್ಳಿರೆಂದು ಸರ್ಕಾರದಿಂದ ಕಾಗದ ಬಂತು.

## ಪುರವರ್ಣನೆ

ಅನಾದಿ ಕಾಲದ ಶಿವಾಪುರದ ವರ್ಣನೆಯಲ್ಲಿ ಅತಿಶಯೋಕ್ತಿಯೇ ಇದ್ದೀತು. ಹಾಡುಗಳಲ್ಲಿ

ಅಗಲಾರು ಗಾವುದ
ನಿಡಿದೇಳು ಗಾವುದ
ಸುತ್ತಲು ತಿರುಗಿದರೆ
ಹನ್ನೆರಡು ಗಾವುದ||

ಎಂದು ಇದರ ವಿಸ್ತಾರವನ್ನು ವರ್ಣಿಸಲಾಗಿದೆ. ಅಲ್ಲದೆ

“ಕೆತ್ತುಗಲ್ಲಿನ ಕೋಟೆ ಮುತ್ತಿನ ತೋರಣ!
ಕೊತ್ತಳದ ವಿಸ್ತಾರ ಹೆಂಗ್ಹೇಳಲಿ!”

ಎಂದೂ ಆದಿ ಗೌಡನ ಕೋಟೆಕೊತ್ತಳದ ವರ್ಣನೆ ಇದೆ. ಅಲ್ಲದೆ ಊರ ಮಧ್ಯದಲ್ಲಿ ಬಾಳೆ, ಬಾಳೆಗಳಲ್ಲಿ ರಸಬಾಳೆ ಗಿಡ ನೂರು ಸಾಲಾಗಿ ರಂಜಿಸುವ ಸಾವಿರದ ಹೂದೋಟಗಳಿದ್ದುವಂತೆ! ಊರಿನ ಈಗಿನ ಸ್ವರೂಪ, ವಿಸ್ತಾರ ಗಮನಿಸಿದರೆ ಮೇಲಿನ ವರ್ಣನೆ ಅತಿಯಾಯಿತೆಂದು ಅನಿಸುತ್ತದೆ. ಅಲ್ಲದೇ ಅದರಲ್ಲಿರುವ ಕೋಟೆಕೊತ್ತಳಗಳಾಗಲಿ, ಹೂದೋಟಗಳಾಗಲಿ ಒಂದೂ ಇಲ್ಲ. ಅವುಗಳ ಗುರುತು ಕೂಡ ಇಲ್ಲ.

ಈಗಿದ್ದಂತೆ ಊರು ಚಿಕ್ಕದೇ. ಗ್ರಾಮಪಂಚಾಯಿತಿಯಾಗಿ ಈಗೀಗ ಎರಡು ವರ್ಷಗಳಾದುವಷ್ಟೆ. ಕೆಲವು ಹಾಡುಗಳಲ್ಲಿ “ಮೂರು ಮನಿ ಹಳ್ಯಾಗ ಊರ ದೇವತೆ ಎನಿಸಿ| ಕೋಣ ಕುರಿಗಳ ಕೊಯ್ಸಿ ಒಗಸ್ಯಾಡಿ ಬಿಟ್ಟಿ|” ಎಂದು ಕರಿಮಾಯಿಯ ವರ್ಣನೆ ಇರುವುದರಿಂದ ಮೊದಲು ಮೂರು ಮನೆಯಿದ್ದ ಊರು ಬೆಳೆದು ಪರಗೌಡನ ಆಳಿಕೆಯಲ್ಲಿ ಗ್ರಾಮ ಪಂಚಾಯಿತಿ ಆಗುವಷ್ಟು ದೊಡ್ಡದಾಗಿ ಬೆಳೆದಿದೆ ಎಂದು ತಿಳಿದರೆ ಸಾಕು.

ಗುಡಿ ಪೂರ್ವಾಭಿಮುಖವಾಗಿದ್ದು ಕರಿಮಾಯಿಯ ಬೆನ್ನ ಹಿಂದೆ ಊರು ಹಬ್ಬಿದೆ. ಹೀಗಾಗಿ ಊರು ತಾಯಿಯ ಬೆನ್ನಿಗೆ ಬಿದ್ದಹಾಗೆ, ಅವಳ ಬೆನ್ನಿನ ಆಶ್ರಯದಲ್ಲೇ ಬೆಳೆದ ಹಾಗೆ ಕಾಣುತ್ತದೆ. ಗುಡಿಯ ಹಿಂದಿನಿಂದ ಊರಿನ ಒಂದೇ ಒಂದು ಪ್ರಮುಖ ರಸ್ತೆ ಪಶ್ಚಿಮಾಭಿಮುಖವಾಗಿ ಸಾಗಿ ಊರ ಚಾವಡಿಗೆ ಕೊನೆಗೊಳ್ಳುತ್ತದೆ. ಆ ಮುಖ್ಯ ರಸ್ತೆಗಂಟಿ ಸಣ್ಣಸಣ್ಣ ಸಂದಿಗೊಂದಿಗಳಿವೆ.

ಲಿಂಗವಂತರ ಬೀದಿ!
ಲಿಂಗವಂತರ ಬೀದಿ!
ಜಂಗಮರ ಬೀದಿಗಳು ನೂರು ಒಪ್ಯಾವು

ಎಂದು ಊರಿನ ವರ್ಣನೆಯೇನೋ ಇದೆ. ಆದರೆ ಹೊಲಗೇರಿಯನ್ನು ಬಿಟ್ಟರೆ ಉಳಿದಂತೆ ಎಲ್ಲಾ ಜಾತಿಯವರು ಬೇಕುಬೇಕಾದಲ್ಲಿ ಮನೆಮಾಡಿಕೊಂಡಿದ್ದಾರೆ. ಚಾವಡಿಯ ಎಡಕ್ಕೆ ಸುಳಿಯುವ ಸಂದಿಯ ಅಂಚಿನಲ್ಲಿ ಗೌಡನ ಮನೆಯಿದೆ. ದೊಡ್ಡ ಮನೆಯೇ, ಹಳೆಯದು. ಅಟ್ಟವೂ ಇದೆ. ಚಾವಡಿಯ ಬಲ ಸಂದಿಯಲ್ಲಿ ದತ್ತಪ್ಪನ ಮನೆ, ಸ್ವಲ್ಪ ಪ್ರತ್ಯೇಕವಾಗಿದೆ. ಊರಿಗಿರುವ ಏಕಮೇವ ಅಂದರೆ ನಮ್ಮ ಕಥಾನಾಯಕ ಮನೆಯಿದೆ. ಊರಲ್ಲಿ ಸ್ವಲ್ಪ ಆಧುನಿಕವೆನ್ನಿಸಿಕೊಳ್ಳಬಹುದಾದ, ಖರ್ಚು ಮಾಡಿ ಕಟ್ಟಿಸಿದ, ಶ್ರೀಮಂತರದೆನ್ನಬಹುದಾದ ಮನೆ ಇದೊಂದೇ.

ಇಲ್ಲಿಗೆ ಪುರವರ್ಣನೆ ನಿಲ್ಲಿಸಿ ಲಗಮವ್ವನ ಹಾಡಿನ ಚರಣಗಳಿಂದ ನಮ್ಮ ಕಥೆ ಸುರು ಮಾಡೋಣ:

ಅಲ್ಲೀಗಲ್ಲಿಗೆ ಕಥೆ ಮಲ್ಲೀಗೆ ವಾಸನೆಯು |
ಬಲ್ಲಂಥ ಜಾಣರಿಗೆ ಮಧುರವಣ್ಣಾ |
ಮುಂದೀನ ಕಥೆಯ ಅದರಂದಽವ ಹೇಳುವೆನು |
ಕರಿಮಾಯಿ ನಮಗೆ ನೀ ವರವ ಕೊಡಮ್ಮಾ ||

## ಬಂಗಾರ ಮುಖದವಳೆ

ಶಿಂಗಾರ ಮೈಯವಳು ಬಂಗಾರ ಮುಖದವಳು
ಬಲಗೈ ಭಾಷೆ ಎಡಗೈ ನಂಬಿಕೆ ಕೊಟ್ಟು ಕಾಪಾಡಲಿ.

ಮೊದಲ ಸೊಲ್ಲಿಗೆ ಕರಿಮಾಯಿಗೆ ಸಾವಿರೊಂದು ನಮಸ್ಕರಿಸಿ ಹೇಳಬೇಕಾದರೆ

ಮೂರು ಲೋಕಕ ಅಧಿಕ
ಕರಿಮಾಯಿ ಕಾರಣಿಕ
ತಿಳಿದೀತು ಹ್ಯಾಂಗ ಮರತೇಕ ||

ಎನ್ನುವ ಲಗಮವ್ವನ ಹಾಡು ಈ ಬಂಗಾರ ಮುಖ ನೋಡಿದರೆ ಅಕ್ಷರಶಃ ನಿಜವೆನಿಸುತ್ತದೆ.

ಭಯದಿಂದಲೇ, ಕೋಪದಿಂದಲೋ ಅಗಲವಾಗಿ ಕಿವಿಯವರೆಗೆ ತೆರೆದ ಕಣ್ಣುಗಳು, ಉಸಿರಾಡಿಸುತ್ತಿದೆ ಎನಸುವಂಥ ಎಸಳು ಮೂಗು, ನಕ್ಕು ನಕ್ಕು ಈಗಷ್ಟೇ ಸುಮ್ಮನಾದ, ಇಲ್ಲವೇ ಇನ್ನೇನು ನಗುತ್ತಾಳೆನಿಸುವಂಥ ತುಟಿಗಳು, ಚೂಪುಗದ್ದ, ಮೇಲೆ ಬಹುಶಃ ಎಳೆಬೆವರಿನಿಂದ

ಹಣೆಗಂಟಿದ ಸುರುಳಿ ಸುರುಳಿ ಮುಂಗುರುಳು, ಅವುಗಳ ಮೇಲೆ ಹದಿನೆಂಟು ರತ್ನದ ಹರಳುಗಳಿರುವ ಕಿರೀಟ – ಒಮ್ಮೆ ನೋಡಿದರೆ ಸಾಕು ಕಣ್ಣು ತುಂಬುತ್ತದೆ, ಎದೆ ಕೂಡ! ಊರವರಿಗೆ ಇದರ ಬಗ್ಗೆ ಎಷ್ಟು ಮಾಯೆಯೆಂದರೆ – ದಿಟ್ಟಿಸಿ ನೋಡಿದರೆ ಎಲ್ಲಿ ಬಿರಿದೀತೋ ಎನ್ನುವ ಭಾವ. ಅದಕ್ಕೇ ಶೀಗೆ ಹುಣ್ಣಿಮೆ, ರಂಡಿಹುಣ್ಣಿಮೆ, ಮುತ್ತೈದೆ ಹುಣ್ಣಿಮೆ – ಈ ಮೂರು ದಿನ ಬಿಟ್ಟರೆ ಉಳಿದ ದಿನಗಳಲ್ಲಿ ಅದನ್ನು ಗೌಡನ ಮನೆಯಲ್ಲೇ ಇಟ್ಟಿರುತ್ತಾರೆ.

ಬಸಿರಿಯರ ಕನಸಿನಲ್ಲಿ ತಾಯಿಯ ಈ ಬಂಗಾರ ಮುಖ ಮೂಡಿಬಂದರೆ ಗಂಡು ಸಂತಾನ ಖಾತ್ರಿ. ಕೆಲವರ ಕನಸಿನಲ್ಲಿ ಈ ಮುಖ ಮಾತಾಡಿದ್ದೂ ಉಂಟು. ಬಾಗಿ ನಡೆದವರ ಭಾಗ್ಯವಂತೆಯಾಗಿ, ಬೇಡಿದ ವರ ಕೊಟ್ಟದ್ದು ಉಂಟು. ಹೆಚ್ಚೇನು ಇದು ಈ ಊರಿಗೆ ಸೊಕ್ಕು, ಅಭಿಮಾನ, ವಿದ್ಯೆ, ಬುದ್ಧಿ, ಭಯ, ಭಕ್ತಿ ಎಲ್ಲಾ ಕೊಟ್ಟದ್ದುಂಟು. ಸಣ್ಣವಳಲ್ಲ ಈ ಬಂಗಾರ ಮುಖದವಳು.

ಸರಿಕ ದೇವತೆಗಳಾದ ಚೆಂಚಲಿ ಮಾಯವ್ವನಿಗೆ ಹಳಹಳಿ, ಲೋಕಾಪುರದ ದ್ಯಾಮವ್ವನಿಗೆ ಹೊಟ್ಟೆಕಿಚ್ಚು, ಸವದತ್ತಿ ಎಲ್ಲವ್ವನಿಗೆ ಮತ್ಸರಕೊಟ್ಟಳು. ಬಾಗಿ ನಡೆದ ಭಕ್ತರಿಗೆ ತೂಗುತೊಟ್ಟಿಲು ಬೆಳ್ಳಿಬಟ್ಟಲಿನ ಭಾಗ್ಯಕೊಟ್ಟಳು. ಇರುವೆ ಮೊದಲಾಗಿ, ಆನೆ ಕಡೆಯಾಗಿ ಎಂಬತ್ತನಾಲ್ಕು ಲಕ್ಷ ಜೀವನ ಕೊಟ್ಟಳು. ಬೇಲಿಗೆ ಹಸಿರು, ಮಳಲಿಗೆ ನೀರು, ಸೂರ್ಯನಿಗೆ ಬಿಸಿಲು, ಚಂದ್ರನಿಗೆ ಬೆಳ್ದಿಂಗಳು ಕೊಟ್ಟಳು.

ದಿಟ್ಟಿಸಿ ನೋಡಿದವರಿಗೆ ಕುರುಡು, ಬರಡಿಗೆ ಹಯನು, ಬಂಜೆಯರಿಗೆ ಮಕ್ಕಳು, ಮಕ್ಕಳಿಗೆ ಛಲ, ಛಲಕ್ಕೊಂದು ಗುರಿ, ಗುರಿಗೆಂಟು ಸಾಧ್ಯತೆ ಕೊಟ್ಟಳು, ಎಳೆಯರಿಗೆ ಬಿಗಿದ ಸೊಂಟ ಕೊಟ್ಟಳು; ಸೊಂಟದ ತುಂಬ ಸೂಸುವ ಪ್ರಾಯ ಕೊಟ್ಟಳು; ಪ್ರಾಯಕ್ಕೆ ತುಳುಕಾಟ ಕೊಟ್ಟಳು, ತುಳುಕಾಟಕ್ಕೆ ಸ್ವಚ್ಛಂದ, ಹಾದರ ಕೊಟ್ಟಳು, ವಯಸ್ಸಿಗೆ ಬುದ್ಧಿಕೊಟ್ಟಳು, ಬುದ್ಧಿಗೆ ತೃಪ್ತಿಕೊಟ್ಟಳು, ತೃಪ್ತಿಗೆ ಸಾವು ಕೊಟ್ಟಳು. ಹೆಚ್ಚೇನು? ಯಾರಿಗೇನು ಕೊಡಬೇಕೆಂದು ತಿಳಿಯದೆ, ಕೊಡುವ ಉತ್ಸಾಹದಲ್ಲಿ ಸಮೃದ್ಧಿಯ ಹಡೆದ ತಾಯಿ, ಕೆಲವರಿಗೆ ಕಳ್ಳಬುದ್ಧಿಯನ್ನೂ ಕೊಟ್ಟಳು.

ಇಂಥಾ ಬಂಗಾರದ ತಾಯಿ ಆದಿಗೆ ಆದಿಯ ಹಡೆದವ್ವ, ಕಡೆಯ ಕಡೆ ಗೊತ್ತಿರದವ್ವ, ಇದಿಮಾಯಿ, ಘೋಡಗೇರಿಯ ಕಂಬಾರ ಬಸವಣ್ಣೆಪ್ಪನ ಮಗ, ಭುಸನೂರುಮಠದ ಸಂಗಯ್ಯನ ಶಿಷ್ಯ, ಸಾವಳಿಗೆ ಶಿವಲಿಂಗೇಶ್ವರ ಮಠದ ಸಿದ್ದರಾಮ ಸ್ವಾಮಿಗಳು ಭಕ್ತ – ಚಂದ್ರಶೇಖರನಿಗೆ ಬರೆಯುವ ಬುದ್ಧಿಕೊಟ್ಟಳು. ಹಾಗೆಯೇ ಓದುಗರಿಗೆ ತೂಗು ತೊಟ್ಟಿಲು, ಬೆಳ್ಳಿ ಬಟ್ಟಲದ ಭಾಗ್ಯ, ಮಕ್ಕಳ, ಫಲಪುತ್ರ ಸಂತಾನದ ಸೌಭಾಗ್ಯ ಕೊಡಲಿ.

## ಚತುಷ್ಟಯರು

ಗುಡಸೀಕರ ಕೊಟ್ಟ ಹತ್ತರ ಹಗರಣ ಸೆರೇದಂಗಡಿ ತೆಗೆಯಬೇಕೆಂಬ ನಿರ್ಧಾರದಲ್ಲಿ ಕೊನೆಗೊಂಡಿತು.

ಗುಡಸೀಕರನ ಹಿಂಬಾಲಕರು, ಅಂದರೆ ಗ್ರಾಮ ಪಂಚಾಯತಿಯ ಇತರೇ ಮೆಂಬರರೆಂದರೆ – ಕಳ್ಳ ಸಿದರಾಮ, ಅಂಡೂರಾಮಯ್ಯ, ಜಿಗಸೂ ಸಾತೀರ ಹಾಗೂ ಆಯೀ ಮೆರಮಿಂಡ, ಇವರೂ ಗುಡಸೀಕರನ ಸರಿಕರೆ, ಕೂಡಿ ಕಲಿತವರೆ. ಆದರೆ ಗುಡಸೀಕರ ಬೆಳಗಾವಿಗೆ ಹೆಚ್ಚಿನ ಶಿಕ್ಷಣಕ್ಕೆ ಹೋದ. ಇವರು ಹೋಗಲಿಲ್ಲ, ಅಷ್ಟೆ. ಇವರನ್ನು ದತ್ತಪ್ಪ ಒಮ್ಮೆ "ಚತುಷ್ಟಯರು" ಎಂದು ಕರೆದ; ಬಹುಶಃ ಮಹಾಭಾರತದ ದುಷ್ಟ ಚತುಷ್ಟಯದ ನೆನಪಾಗಿ. ಈಲೂ ಅವನು ನಾಲ್ವರನ್ನೂ ಒಟ್ಟಾಗಿ ಕರೆಯುವುದು ಹೀಗೆಯೇ, ನಾವು ಇನ್ನು ಮೇಲೆ ನಮ್ಮ ಕಥೆಯಲ್ಲಿ ಅವರನ್ನು ಹಾಗೇ ಕರೆಯೋಣ.

ಆದರೆ ದುಷ್ಟ ಚತುಷ್ಟಯಕ್ಕೂ ಇವರಿಗೂ ಅರ್ಥಾತ್ ಸಂಬಂಧವಿಲ್ಲ ಮೊದಲನೆಯದಾಗಿ ಇವರು ದುಷ್ಟರಲ್ಲ. ಊರಿನ ಇತರೆಯವರಿಗಿಂತ ಭಿನ್ನರಲ್ಲ. ಅಷ್ಟಿಷ್ಟು ಕಲಿತದ್ದರ ಬಗ್ಗೆ ಸ್ವಲ್ಪ ಸೊಕ್ಕಿದೆ. ಅಷ್ಟೂ ಇಲ್ಲದಿದ್ದರೆ ಹ್ಯಾಗೆ? ಇನ್ನೊಬ್ಬರು ಹಿಂದೆ ಒತ್ತದ ಹೊರತು ಮುಂದೆ ಹೆಜ್ಜೆ

ಹಾಕುವವರಲ್ಲ. ಹೆಜ್ಜೆಹಾಕಿದ ಮೇಲೆ ಒದಗುವ ಪರಿಣಾಮಗಳನ್ನು ಮನಸ್ಸಿಗೆ ಹಚ್ಚಿಕೊಳ್ಳುವವರೂ ಅಲ್ಲ., ಕಂದಕವೋ, ದಿನ್ನೆಯೋ, ಹೆಜ್ಜೆ ಹಾಕಿದರಾಯ್ತು, ಕಣ್ಣು ಮುಚ್ಚಿಕೊಂಡು. ಚತುಷ್ಟಯರೆಂದು ಒಟ್ಟಾಗಿ ಕರೆದರೂ ಇವರಲ್ಲಿ ಪ್ರತಿಯೊಬ್ಬರಿಗೂ ತಮ್ಮದೇ ಆದ ವ್ಯಕ್ತಿತ್ವವಿದ್ದುದನ್ನು ನಿರಾಕರಿಸಲಾಗದು.

ಇವರಲ್ಲೆಲ್ಲ ಕಳ್ಳ ಸಿದರಾಮ ನೋಡುವುದಕ್ಕೂ ಧಾಂಡಿಗನಾದವನು. ಚಿಕ್ಕಂದಿನಲ್ಲಿ ಕಳ್ಳತನ ಮಾಡುವಾಗ ಸಿಕ್ಕಿಬಿದ್ದು ತನ್ನ ಹೆಸರಿಗೆ ವಿಶೇಷಣ ಅಂಟಿಸಿಕೊಳ್ಳಬೇಕಾಯಿತು. ಆದರೆ ಅದಲ್ಲ ಅವನ ವೈಶಿಷ್ಟ್ಯ. ಅಂಗಾಲಿನಿಂದ ನೆತ್ತಿಯ ತನಕ ಅವನು ನಟ. ಯಾವುದೇ ನೀರಸ ಘಟನೆಯನ್ನು ರಸವತ್ತಾಗಿ, ನಾಟಕೀಯವಾಗಿ ಕೇಳುವವರ ಕಣ್ಣಿಗೆ ಕಟ್ಟುವಂತೆ ಹೇಳಬಲ್ಲವನಾಗಿದ್ದ. ಒಮ್ಮೆ ಗುಡಸೀಕರ ದಿನಪತ್ರಿಕೆ ಓದಿ "ನೋಡೋ ಕಳ್ಳ; ಜಿನ್ನಾ ಬಂದು ಗಾಂಧೀಜಿಗೆ ಭೇಟ್ಯಾಗಿದ್ದನಂತ. ಮುಸಲ್ಮಾನರಿಗೇ ಒಂದು ಪ್ರತ್ಯೇಕ ದೇಶ, ಪಾಕಿಸ್ತಾನ ಬೇಕಂತ ಕೇಳಿದನಂತ" ಎಂದು ಹೇಳಿದ ಹತ್ತೇ ಹತ್ತು ಶಬ್ದದ ಈ ಸಂಗತಿಯನ್ನು ಕಳ್ಳ ಮೆರೆಮಿಂಡನಿಗೆ ಹೇಳಿದ್ದು ಹೀಗೆ:

ದೇಶದಾಗ ಏನೇನ ನಡದೈತಿ ಗೊತ್ತೆತೇನಲೇ? ಮೊನ್ನಿ ಮಂಗಳವಾರ ದಿನ ಗಾಂಧೀ ಗುಡಸಲದಾಗ ಕುಂತಿದ್ನಂತ, ಸೇಂಗಾ ತಿನ್ನಕೋತ. ಅಷ್ಟೊತ್ತಿಗೆ ಜಿನ್ನಾ ಬಂದ. "ಶರಣರೀ ಗಾಂದೆಪ್ಪ" ಅಂದ.

"ಬಾರೋ ಜಿನ್ನಾ ಸಾಬ, ಬಾ ಕುಂದರ ಬಾ., ಎಲ್ಲಾ ಆರಾಮ? ಮಳಿ ಬೆಳಿ ಹೆಂಗ ನಿಮ್ಮ ಕಡೆ?"

– ಅಂದ (ಗಾಂಧೀಜಿ)

(ಜಿನ್ನಾ) "ಎಲ್ಲಾ ಆರಾಮೈತಿ ಖರೆ: ನಮ್ಮ ಹುಡುಗೋರು ಭಾಳ ತಕರಾರ ತಗ್ಯಾಕ ಹತ್ಯಾವರಿ. ನೂರ ವರ್ಷ ಕೂಡಿದ್ದರೂ ಅಣ್ಣಾ ತಮ್ಮಾ ಬ್ಯಾರ್ಯಾಗೋದೇನೂ ತಪ್ಪಾಣಿಲ್ಲ. ಅದಕ್ಕ ಈಗs ದೇಶದಾಗ ನಮ್ಮಗಷ್ಟ ಪಾಲಾ ಕೊಡಸಂತ ಗಂಟಬಿದ್ದಾರ."

"ನಿನಾಪ್ನ! ಬ್ಯಾರ್ಯಾಗಿ ಏನ ಸುಖ ಉಣತೀರಿ? ಕೂಡಿದ್ದರs ನೆರಿ ಹೊರಿ ನಾಕ ಮಂದಿ ಹೆದರತಾರ, ಏನಪಾ. ಕೂಡಿದ್ದ ಅಣ್ಣತಮ್ಮರಿಗೆ ಹುಲಿ ಹಾದಿ ಬಿಡತೈತಿ. ಇಂದs ಬ್ಯಾರೆ ಆದರೆ ಇಲೀ ಹಂತಾ ಇಲಿ ಅಂಜಾಕಿಲ್ಲಾ. ಅಕ್ಕಪಕ್ಕ ನಿಮ್ಮನ್ನ ನುಂಗಿ ನೀರು ಕುಡೀತಾರ. ಎಚ್ಚರಲೇ ಪಾಲಾ ಬೇಡಂತ ಹೇಳವರಿಗೆ. ಇಲ್ಲದಿದ್ದರ ಕರತಾ, ಬುದ್ಧೀ ರೀತಿ ಹೇಳೋಣು.

– ಎಂದರಂತೆ ಗಾಂಧೀಜಿ! ಈ ಕಳ್ಳ ಸಿದರಾಮ ನಟ ಭಯಂಕರನೆನ್ನುವುದಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕೆ?

ಬಯಲಾಟಗಳಲ್ಲಿ ಖಳನಾಯಕರ, ಅದರಲ್ಲೂ ರಾಕ್ಷಸರ ಪಾತ್ರ ವಹಿಸುವುದೆಂದರೆ ಅವನಿಗೆ ಬಲು ಸುಖ. ಆ ಪಾತ್ರ ವಹಿಸಿದ. ಒಂದಿಬ್ಬರು ಹಳೇ ನಟರು ಅಟ್ಟದ ಮೇಲೆ ಬಂದು ಗರ್ಜಿಸಿದಾಗ, ಗರ್ಭಿಣಿಯರ ಗರ್ಭಪಾತವಾಯಿತೆಂಬಂಥ ಕಥೆ ಕೇಳಿದ್ದ. ತನ್ನ ಜೀವಮಾನದಲ್ಲಿ ತನ್ನ ಪಾತ್ರ ನೋಡಿ ಕೊನೇ ಪಕ್ಷ ಒಬ್ಬ ಗರ್ಭಿಣಿಯಾದರೂ ಗರ್ಭಪಾತ ಮಾಡಿಕೊಳ್ಳುವ ಹಾಗಾಗಬೇಕೆಂದು ಇವ ಆಸೆ. ಅದಕ್ಕಾಗಿ ಒಬ್ಬನೇ ಇದ್ದಾಗಲೆಲ್ಲ ಅಂಥ ಗರ್ಜನೆಯನ್ನೇ ಅಭ್ಯಾಸ ಮಾಡುತ್ತಿದ್ದ! ಬಂಜೆಯರಿಗೆ ಗೆಜ್ಜೆ ಕಾಲಿನ ಮಕ್ಕಳನ್ನು ಕೊಡುವ ಕರಿಮಾಯಿ ಅವನ ಆಸೆ ಈಡೇರಿಸದಿರಲಿ.

ಎರಡನೆಯವನೇ ಅಂಡೂ ರಾಮಯ್ಯ ಉರ್ಫ್ ರಮೇಸ. ಇವನ ಮೂಲ ನಾಮಾಂಕಿತ ರಾಮಯ್ಯ ಎಂದು. ಅವನ ಅಂಡು ಇರಬೇಕಾದ ಪ್ರಮಾಣಕ್ಕಿಂತ ದೊಡ್ಡದಾಗಿರುವುದರಿಂದ ಈ ವಿಶೇಷಣ ಸೇರಿಕೊಂಡಿತು. ಗುಡಸ್ಯಾಗೋಳ ಹೋಗಿ ಗುಡಸೀಕರ ಆದಂತೆ ಪಂಚಾಯ್ತಿ ಮೆಂಬರ್ ಆದ ಮೇಲೆ ಇವನೂ ಅಂಡೂ ರಾಮಯ್ಯ ಹೋಗಿ ರಮೇಸ ಆದ. ಹಾಗೇ ಸಹಿ ಕೂಡ ಮಾಡುತ್ತಿದ್ದ. ಗುಡಸೀಕರನಿಗೆ ಜನ ಹೆದರುತ್ತಿದ್ದರು. ಹಾಗೆಂದು ಕರೆದರು. ಇವ ಹೆಸರು ಬದಲಾಯಿಸಿದರೂ ಜನ ಮಾತ್ರ ಇವನನ್ನು ಅಂಡೂ ರಾಮಯ್ಯ ಎಂದೇ ಕರೆಯುತ್ತಿದ್ದರು.

ಇಂಗ್ಲಿಷ್ ಕಲಿತವನಲ್ಲ. ಆದರೂ ಮಾತಿಗೊಮ್ಮೆ "ಎಸೆಸ್" ಎನ್ನುತ್ತಿದ್ದ. ಮತ್ತು ಹಾಗೆ ಎಸೆಸ್ ಎನ್ನುವ ಅವಕಾಶಕ್ಕಾಗಿ ತನ್ನ ಯಾವುದೇ ಅಭಿಪ್ರಾಯಿ ಬದಲಿಸಲೂ ಸಿದ್ಧನಿದ್ದ.

ಮೂರನೆಯವ ಆಯೀ ಮರೆಮಿಂಡ. ಇವನ ಎಡಗಣ್ಣು ಸಣ್ಣದಾಗಿ ಆಗಾಗ ಕಣ್ಣೀರು ಸುರಿಸುತ್ತಿದ್ದುದರಿಂದ ಒಂದು ಕಣ್ಣಿನಿಂದ ಅತ್ತಂತೆಯೂ ಇನ್ನೊಂದರಿಂದ ನಕ್ಕಂತೆಯೂ ಕಾಣಿಸುತ್ತಿದ್ದುದೊಂದೇ ಇವನ ವಿಶೇಷ. ಕೊನೆಯವ ಜಿಗಸು ಸಾತೀರ. ಇವನ ತಾಯಿ ನಡೆಯುವಾಗ ಹೆಜ್ಜೆ ಗತಿಗೆ ತಕ್ಕಂತೆ ಅವಳ ಜೋಡೆದೆ ಟನಕ್ ಟನಕ್ ಜಿಗಿಯುತ್ತಿದ್ದವು. ಆದ್ದರಿಂದ ಅವಳಿಗೆ ಮಂದಿ ಮೂಲ ಹೆಸರು ಬಿಟ್ಟು ಕೊನೆಗೆ ಮರೆತು, ಜಿಗಸೂ ಎಂದೇ ಕರೆಯುತ್ತಿದ್ದರು. ತಾಯಿಯಿಂದ ಮಗನಿಗೂ ಜಿಗಸೂ ಸಾತೀರನೆಂದೇ ಹೆಸರು ಬಂತು. ಇದ್ದ ನಾಲ್ವರಲ್ಲಿ ಕಚ್ಚೆ ಹರಕುತನದ ಖ್ಯಾತಿ ಇವನೊಬ್ಬನಿಗೇ ಇತ್ತು. ಅದು ಹೀಗೆ: ಎಳೆಯರ ಕಳ್ಳ ಹಾದರದ ಕೇಸುಗಳನ್ನು ಹ್ಯಾಗೋ ಹೊಂಚಿ ಪತ್ತೆಹಚ್ಚುತ್ತಿದ್ದ. ಅವರು ಕ್ರಿಯೆಯಲ್ಲಿ ಸಿಕ್ಕುಬಿದ್ದೊಡನೆ ಹುಡುಗಿಯೊಬ್ಬಳನ್ನೇ ಪ್ರತ್ಯೇಕಿಸಿ ಅವಳ ತಂದೆ – ತಾಯಿಗಳಿಗೆ ಹೇಳುವುದಾಗಿ ಬೆದರಿಸುತ್ತಿದ್ದ. ಹಾಗೂ ಅದರ ಪ್ರಯೋಜನವನ್ನು ಚಕ್ರಬಡ್ಡಿ ಸಮೇತ ಪಡೆಯುತ್ತಿದ್ದ.

ಇವರಿಗೆಲ್ಲ ಒಂದು ಸಾಮಾನ್ಯ ವಿಷಯವೆಂದರೆ ಊರಿನ ಎಲ್ಲರಂತೆ ಇವರು ಹಣವಂತರಲ್ಲ. ಹಣ ಆಕಸ್ಮಾತ್ ಕಂಡರೋ ಬೆಳಗಾವಿಯ ಕನಸುಗಳಿಂದ ಉದ್ರಿಕ್ತರಾಗುತ್ತಿದ್ದರು. ಗುಡಸೀಕರ ಈ ದಿನ ಕೊಟ್ಟ ಹತ್ತು ರೂಪಾಯಿಗಳಿಂದ ಹುಚ್ಚುಹತ್ತುವಷ್ಟು ಪರವಶರಾದದ್ದು ಈ ಕಾರಣಕ್ಕೇ.

ಕಳ್ಳ ಸಿದರಾಮ ಗುಡಸೀಕರ ಕೊಟ್ಟ ಹತ್ತು ರೂಪಾಯಿಗಳನ್ನು ತಗೊಂಡು ಹೊರಬಿದ್ದು ಇನ್ನೂ ಹತ್ತು ಹೆಜ್ಜೆ ಇಟ್ಟಿರಲಿಲ್ಲ. ಅಂಡೂರಾಮಯ್ಯ ಉರ್ಫ್ ರಮೇಸ ಬಂದು ಕೂಡಿಕೊಂಡ. ಬಂದವನು ಐದು ರೂಪಾಯಿ ದುರ್ಗಿಗೆ ಕೊಟ್ಟು ಇನ್ನೈದಯ ಕುಡಿಯೋಣವೆಂದು ಸೂಚನೆ ಕೊಟ್ಟ. "ಹೀಂಗೆ ಹೇಳ್ತೀಯೇನೋ? ಸರಪಂಚಗ ಹೇಳ್ತೀನ್ನೋಡು" ಎಂದು ಸಿದರಾಮ ಹೇಳಿದೊಡನೆ "ಎಸೆಸ್" ಎನ್ನುತ್ತ ತಣ್ಣಗಾದ. ಅಷ್ಟರಲ್ಲಿ ಜಿಗಸೂ ಸಾತೀರ ಇವರನ್ನು ಕೂಡಿಕೊಂಡು" ನೀವಿಬ್ಬರೊಳಗೆ ಒಬ್ಬನೂ ನಂಬಿಗಸ್ತನಲ್ಲಂತ: ಒಬ್ಬ ಕಳ್ಳ, ಇನ್ನೊಬ್ಬ ಕುಡುಕ. ನನ್ನ ಕೈಗಿ ಕೊಡು, ನಾನs ದುರ್ಗಿಗೆ ಕೊಡತೀನಿ" ಎಂದು ಹೇಳಿದ ಉಳಿದಿಬ್ಬರು ಏಳರಲ್ಲಿ ಹುಟ್ಟಿದವರೆ? "ನಾನೇ ಕೊಡುತ್ತೇನೆಂದು ಕಳ್ಳ ಹೇಳಿದ. ಎಸೆಸ್ ನಾನು ಸಾಕ್ಷಿ ಹೇಳುತ್ತೇನೆಂದು ರಮೇಶ ಹೇಳಿದ. ಅಷ್ಟರಲ್ಲಿ ಆಯೀಮೆರೆಮಿಂಡನೂ ಅವರನ್ನು ಕೂಡಿಕೊಂಡ. "ಏ, ನಿಮ್ಮ ಮ್ಯಾಲ ಸರಪಂಚಗ ನಂಬಿಕಿಲ್ಲಂತ. ನೀನs ಇಸಕೊಂಡ ಹೋಗಿ ದುರ್ಗಿಗೆ ಕೊಡಂತ ಹೇಳ್ಯಾರ, ಕೊಡಲೇ ಕಳ್ಳ" ಎಂದ.

"ಬಂದ ನೋಡ್ರೆಲೇ ನಂಬಿಗಸ್ಥ! ಅಲ್ಲಪಾ, ನಿನ್ನ ಮ್ಯಾಲ ಅಷ್ಟ ವಿಶ್ವಾಸ ಇದ್ದಿದ್ದರ ನಿನ್ನ ಬಿಟ್ಟ ನನ್ನ ಕೈಯಾಗ ಯಾಕ ಕೊಡತ್ತಿದದರು ರೊಕ್ಕಾನ? ಹೋಗ ಹೋಗಲೇ" ಎಂದು ಕಳ್ಳ.

ಯಾರೊಬ್ಬರೂ ಸಿದ್ದರಾಮನನ್ನು ಬಿಟ್ಟು ಅಗಲಲೊಲ್ಲರು. ಕಳ್ಳನಂತೂ ಅಷ್ಟೂ ಹಣ ದುರ್ಗಿಗೆ ಕೊಡುವುದಿಲ್ಲವೆನ್ನುವುದು ಖಾತ್ರಿ. ಯಾಕೆಂದರೆ ಅವರ ದೇವರ ಗುಣ ಅವರಿಗೆ ಗೊತ್ತಿಲ್ಲವೆ? ಹ್ಯಾಗೋ ಮಾಡಿ ಕಳ್ಳ ಉಳಿಸಿಕೊಳ್ಳುವ ದುಡ್ಡಿನಲ್ಲಿ ನಾಲ್ವರೂ ಕುಡಿಯಬೇಕೆಂದು ಮೂವರ ಹಂಚಿಕೆ. ಎಷ್ಟೆಂದರೂ ಸರಪಂಚ ದುರ್ಗಿಯ ಹತ್ತಿರ ಹೋಗಿ ದುಡ್ಡಿನ ಬಗ್ಗೆ ವಿಚಾರಿಸಲಾರ. ಅಷ್ಟಾಗಿ ಎಂದೋ ವಿಚಾರಿಸಿದರೆ ಅವಳು ಸುಳ್ಳು ಹೇಳಿದಳೆಂದೋ, ಮರೆತಿದದಾಳೆಂದೋ ಹೇಳಿ ಪಾರಾಗಬಹುದು. ಎಷ್ಟೆಲ್ಲ ಕಲ್ಪಕ ಶಕ್ತಿಯಿದ್ದವರು ಒಂದು ಹುಸಿ ಹೇಳಲಿಕ್ಕಾಗುವುದಿಲ್ಲವೆ?

ಆದರೆ ಕಳ್ಳನ ತರ್ಕವೇ ಬೇರೆ. ಈ ನರಿಗಳನ್ನು ಓಡಿಸಿ ತಾನೊಬ್ಬನೇ ದುರ್ಗಿಯ ಹತ್ತಿರ ಹೋಗಿ ಐದು ಕೊಟ್ಟು ಮಿಕ್ಕ ಐದರಲ್ಲಿ ಬೆಳಗಾವಿಗೆ ಹೋಗಿ ಮಜಾ ಮಡಿಬರಬೇಕೆಂದು ಅವನ ಉಪಾಯ. ಆದರೆ ಅವರೋ ಬಿಟ್ಟುಹೋಗುವ ಲಕ್ಷಣಗಳೇ ಕಾಣಿಸುತ್ತಿಲ್ಲ. ದಿನಾ ಮಾತಿಗೊಮ್ಮೆ "ಕಳ್ಳ, ಕಳ್ಳ" ಎನ್ನುತ್ತಿದ್ದವರು ಇಂದು ಬಾಯ್ತುಂಬ "ಸಿದರಾಮಾ" ಎಂದು ಕರೆದರು. ಇಲ್ಲದ ಸದ್ಗುಣಗಳನ್ನು ಅವನ ಮೇಲೆ ಹೇರಿದರು. ಹಿಂದಿನ ಅನೇಕ ಘಟನೆಗಳಲ್ಲಿ ಹಾಸ್ಯಾಸ್ಪದನಾಗಿದ್ದ ಅವನನ್ನು ನಾಯಕನನ್ನಾಗಿಸಿ ಬಣ್ಣಕಟ್ಟಿ ವರ್ಣಿಸಿದರು. ಜಿಗಸು ಸಾತೀರ

ಸಿದರಾಮನನ್ನು ಬೆಳಗಾವಿಗೆ ಕರೆದೊಯ್ದು ಅಲ್ಲಿ ತನ್ನ ಕರ್ಚಿನಲ್ಲಿ ಸಿನಿಮಾ ತೋರಿಸುವುದಾಗಿ ಭರವಸೆ ಕೊಟ್ಟ. ಬೆಳಗಾವಿಯ ಹುಡುಗಿಯರ ಜೋಡು ಹೆಳಲುಗಳನ್ನೂ, ಹೆಳಲಿನ ಕೊನೆಯ ಟೇಪುಗಳನ್ನೂ ವರ್ಣನೆ ಮಾಡಿದ. ನಿಜ ಹೇಳಬೇಕೆಂದರೆ ಅವನು ಒಂದು ಬಾರಿಯೂ ಬೆಳಗಾವಿ ಕಂಡವನಲ್ಲ. ಆ ಹತ್ತು ರೂಪಾಯಿಗೆ ಕಳ್ಳನಂತೂ ಬಿಸಿಸಲಾರದ ಗಂಟು. ಯಾಕೆಂದರೆ ಹಣ ಅವನಲ್ಲೇ ಇದೆ. ಆತ ತನ್ನನ್ನೂ ಖರ್ಚು ಮಾಡುವುದರಲ್ಲಿ ಸೇರಿಸಿಕೊಳ್ಳಬೇಕೆಂದು ಮೂವರ ಹವಣಿಕೆ. ದಿನಾ ಬೆಳಗ್ಗೆದ್ದು ಪರಸ್ಪರ ಮುಖ ನೋಡುವವರು ಅವರವರ ಗೆರೆ ಅವರವರಿಗೆ ಗೊತ್ತಿಲ್ಲವೆ? ಸದರಿ ಮಾತುಗಳನ್ನು ಹೇಳುವವರೂ ನಂಬಿರಲಿಲ್ಲ. ಸಿದರಾಮ ಮೊದಲೇ ಕಳ್ಳ; ಅವನ್ಯಾಕೆ ನಂಬುತ್ತಾನೆ? ಅವರಿಂದ ಪಾರಾಗುವುದಕ್ಕಾಗಿ.

"ತಗಿ, ತಗಿಯೋ, ಈಗs ಹೋಗಿ ದುರ್ಗಿಗಿ ಕೊಟ್ಟ ಬರ್ತೀನಿ."

ಎಂದು ಧಾಪುಗಾಲು ಹಾಕಿ ನಡೆದ. ಆದರೆ ಅವರ್ಯಾರೂ ತಿರುಗಲಿಲ್ಲ. ಬೆನ್ನಹತ್ತಿದರು.

ಹಾಗೇ ನಡೆದುಕೊಂಡು ಸಿದರಾಮನ ಮನೆಯ ತನಕ ಬಂದರು. ಸಿದರಾಮ ನಟನಲ್ಲವೆ? – ಮನಸು ಬದಲಿಸಿದಂತೆ ಮಾಡಿ –

"ಛೇ, ಹಸವಾಗೇತಿ, ಊಟಾ ಮಾಡಿ ಆಮ್ಯಾಲ ದುರ್ಗಿಗಿ ಕೊಟ್ಟ ಬರ್ತೀನಿ." ಎಂದು ಹೇಳಿ ಮನೆಯೊಳಕ್ಕೆ ನಡೆದ. ಅಂದೂ ರಾಮಯ್ಯ ಉರ್ಫ್ ರಮೇಸನಿಗೆ ಸಿಟ್ಟುಬಂತು.

"ಏ ಕಳ್ಳಾ ದುರ್ಗಿಗೆ ರೊಕ್ಕಾ ಕೊಡತೀಯೋ? ಇಲ್ಲಾ ಸರಪಂಚಗ ಹೇಳಂತಿಯೋ?"

ಅಂದ. ಸಿದರಾಮ ಹೇಳ್ಹೋಗೊ ಎಂದು ಹೇಳಿ, ಅವನು ಖಂಡಿತ ಹೇಳುವುದಿಲ್ಲವಾದ್ದರಿಂದ ನೆಮ್ಮದಿಯಿಂದಲೇ ಒಳಗೆ ಹೋದ. ರಮೇಸನ ಮಾತನ್ನು ಅಲ್ಲೇ ದಾರಿಯಲ್ಲಿ ಹೋಗುತ್ತಿದ್ದ ನಿಂಗು ಕೇಳಿಸಿಕೊಂಡು ಸುಮ್ಮನೇ ದಾಟಿಹೋದ.

ಮೂವರೂ ಸಿದರಾಮ ಮನಯ ಮುಂದೆ ಧರಣಿ ಕೂತರು. ಸಿದರಾಮ ಹ್ಹೊಗೆ ಬರಲಿಲ್ಲ. ಇವರು ಏಳಿಲ್ಲ. ಆಯೀ ಮೆರೆಮಿಂಡ,

"ಏ ನೀವು ಹೋಗಿ ಲಗು ಊಟಾ ಮಾಡಿ ಬರ್ರಿ. ಆಮ್ಯಾಲ ನೀವು ಕುಂದರ್ರಿ, ನಾ ಹೋಗಿ ಬರ್ತೀನಿ. ಈ ಮಗಾ – ಏನ ಮಾಡತಾನ ನೋಡೇ ಬಿಡೋಣೂ." – ಎಂದ. ಉಳಿದಿಬ್ಬರಿಗೆ ಇದು ಸೈಯೆನಿಸಿತು. ಐದೇ ಮಿನಿಟಿನಲ್ಲಿ ಊಟಾ ಮಾಡಿ ತಿರುಗಿ ಬರುವುದಾಗಿ ಹೇಳಿ ಅವರಿಬ್ಬರೂ ಹೋದರು.

ಅವರು, ಮರೆಯಾಗುವುದಷ್ಟೇ ತಡ ಮೆರೆಮಿಂಡ ಸಿದರಾಮನ ಮನೆಯೊಳಕ್ಕೆ ನುಗ್ಗಿದ. ಊಟ ಮಾಡುತ್ತಿದ್ದ ಅವನ ಮುಂದೆ ಕೂತು.

"ಏ, ಅವರಿಬ್ಬರೂ ಮನೀಗಿ ಹೋಗ್ಯಾರ. ನಾವಿಬ್ಬರೂ ಹೋಗಿ ಕೊಟ್ಟ ಬರೋಣು ಬಾರೋ"

– ಎಂದ, ಸಿದರಾಮ ಜಗ್ಗಲಿಲ್ಲ. ಕೈಗೆ ಸಿಕ್ಕ ಸೌಭಾಗ್ಯ ಯಾರು ಕೊಡುತ್ತಾರೆ? ಅಷ್ಟರಲ್ಲಿ ಸಿದರಾಮನ ತಾಯಿ "ಏನ್ರೋ ಅದು?" ಎನ್ನುತ್ತಲೂ ಮೆರೆಮಿಂಡ "ಹೊರಗಿರತೇನ ಬಾ" ಎನ್ನುತ್ತ ಹೊರಗೋಡಿದ.

ಕೆಲ ಹೊತ್ತಾದ ಬಳಿಕ ರಮೇಸ, ಸಾತೀರ ಬಂದು ಮೆರೆಮಿಂಡನನ್ನು ಕೂಡಿಕೊಂಡರು, "ಇನ್ನ ನೀ ಊಟ ಮಾಡಿ ಬಾ" ಎಂದರೆ ತನಗೆ ಹಸಿವಾಇಲ್ಲ ಎಂದು ಅಲ್ಲೇ ಕೂತ. ಮೂರೂ ಅಲ್ಲೇ ಕೂತರು. ವಾರಿಗೆಯವರೆಲ್ಲ ಬಣ್ಣ ಎರಚಾಡಿದರೂ ಈ ಮೂವರು ಅಲ್ಲೇ ಕುಳಿತರು. ಸಿದರಾಮ ಹೊರಬರಲಿಲ್ಲ. ಇವರು ಏಳಲಿಲ್ಲ. ಹೆಚ್ಚೇನು ಕೂತು ಕೂತು ಕಟ್ಟೆಗೆ ತಮ್ಮ ಅಂಡುಗಳನ್ನು ಬೆಸೆದುಬಿಟ್ಟರು.

ಇಳಿಹೊತ್ತಿನಲ್ಲಿ ನಿಂಗೂ ಗುಡಸೀಕರನಿಗೂ ಧೀಮಾರಿ ಹಾಕಿ ಬಂದಾಗಲೂ ಈ ತ್ರಿಮೂರ್ತಿಗಳು ಇನ್ನೂ ಅಲ್ಲೇ ಪ್ರತಿಷ್ಠಾಪನೆಗೊಂಡಿದ್ದರು. ನಿಂಗೂ ಸೀದಾ ಒಳಗೆ ಹೋದ. ಕಳ್ಳ ಪಡಸಾಲೆಯಲ್ಲಿ ಮಲಗಿದ್ದ. ಮುಸುಕು ತೆಗೆದ ಅಲುಗಿಸಿದ, ಕೂಗಿದ, ಏಳಲಿಲ್ಲ ನಿಜವಾಗಿ ನಿದ್ದೆ ಹತ್ತಿದವನನ್ನು ಎಬ್ಬಿಸಬಹುದು. ಸುಳ್ಳು ಸುಳ್ಳೇ ನಿದ್ದೆ ಮಾಡುವಂತೆ ಬಿದ್ದವನನ್ನು ಎಬ್ಬಿಸುವುದು ಹೇಗೆ? ಆದರೂ ಇಂಗೂ ಜಾಣ "ಯಾಕೆ ಗುಡಸೀಕರ ಈ ಕಡೆ ಬಂದೆಲ್ಲಾ?" ಎಂದ ಕೂಡಲೇ ಕಳ್ಳ ಕಿತ್ತುಕೊಂಡೆದ್ದ. ಎದ್ದನಲ್ಲಾ, ನಿಂಗೂ ಚಪ್ಪಾಳೆತಟ್ಟಿ ನಗುತ್ತಿದ್ದುದನ್ನು ನೋಡಿದೊಡನೆ ಚೇಷ್ಟೆಯ ಅರಿವಾಯ್ತು. ತಾನೂ ನಕ್ಕ. ನಿಂಗೂ ಎಲ್ಲ ಗೊತ್ತಿದ್ದವರಂತೆ.

"ಸರಪಂಚ ದುರ್ಗಿಗಿ ಕೊಡಂತ ಎಷ್ಟು ರೊಕ್ಕ ಕೊಟ್ಟಾನೋ?"

ಅಂದ. ಕಳ್ಳ ಗಾಬರಿಯಾದ.

"ನಿನಗ ಯಾರ ಹೇಳಿದರೊ?"

"ಎಲ್ಲಾ ಗೊತ್ತೈತಿ ಹೇಳೊ"

ಕಳ್ಳನಿಗೂ ನಿಂಗೂನಿಗೂ ಅಕ್ಷರಶಃ "ಲಂಗೋಟಿ ಗೆಳೆತನ." ನಿಂಗೂ ಇತ್ತೀಚೆಗೆ ಸೀರೆ ಉಟ್ಟಾಗಿನಿಂದ ಅದು ಇನ್ನೂ ಗಾಢವಾಗಿತ್ತು. ಆದ್ದರಿಂದ ಕಳ್ಳ ಊರವರಿಗೆ ನೂರಕ್ಕೆ ನೂರು ಸುಳ್ಳು ಹೇಳಿದರೆ ನಿಂಗೂನಿಗೆ ನೂರಕ್ಕೆ ಮೂರರಷ್ಟಾದರೂ ನಿಜ ಹೇಳುತ್ತಿದ್ದ. ಯಾವ್ಯಾವುದೋ ದುರ್ಬಲ ಕ್ಷಣಗಳಲ್ಲಿ ಏನೇನೋ ಕೊಡುವುದಾಗಿ ಕಳ್ಳ ಭರವಸೆ ಕೊಟ್ಟಿದ್ದ. ಅವುಗಳನ್ನು ನಿಂಗೂ ನಂಬುತ್ತಿರಲಿಲ್ಲ. ಆದರೂ ಪರಸ್ಪರ ಕಂಡಾಗ ಇಬ್ಬರ ಅಂತಃಕರವೂ ಮಾತಿಗೆ ಮೀರಿದ ಒಂದು ಥರದಲ್ಲಿ ಮಿಡಿಯುತ್ತಿತ್ತು.

ಕಳ್ಳ ಈಗ ಗುಡಸೀಕರ ದುರ್ಗಿಗೆ ಕೊಡಲು ಹೇಳಿದ ಹಣದ ವಿಚಾರವಾಗಿ ನಿಜವನ್ನೇ ಹೇಳಿದ. ಆದರೆ ಹತ್ತರ ಬದಲು ಐದು ರೂಪಾಯಿಯೆಂದು ಹೇಳಿದ, ಅಷ್ಟೆ. ಇವನ ಒಳಗನ್ನು ಒಡನುಡಿಸುವ ತಂತ್ರ ಇಂಗೂನಿಗೂ ಗೊತ್ತು. ಹತ್ತೆಂದು ಹೇಳಿಸಿದ. ಆಗಲೂ ನಿಂಗೂ ನಂಬದಿದ್ದಾಗ ಐದರ ಎರಡು ನೋಡು ಕಿಸೆಯಿಂದ ತೆಗೆದು ತೋರಿಸಿ ಗಪ್ಪನೆ ಮತ್ತೆ ಕಿಸೆಗೇ ಇಳಿಸಿದ. ನಿಂಗೂನ ಬಾಯಲ್ಲಿ ನೀರೂರಿತು.

"ಏ ಕಳ್ಳ ನನಗೊಂದು ಬಾಡಿ (ಬ್ರೇಸಿಯರ್) ಕೊಡಿಸಲೇ"

ಎಂದು ಹೇಳುತ್ತ ಸರ್ರನೆ ಸರಿದು ಸಲಿಗೆಯಿಂದ ಅವನ ಹೆಗಲ ಮೇಲೆ ಕೈಹಾಕಿ ಅಂಗಲಾಚಿದ. ಕಳ್ಳಿಗೆ ದಿಗಿಲಾಯಿತು. "ಛೇ, ತಗಿಯೋ ನಿ!" ಎಂದು ದೂರು ಸರಿಸಲು ನೋಡಿದ. ನಿಂಗೂ ತಾನೇ ದೂರ ಸರಿದು,

"ನೋಡೋ ಬಾಡಿ ತಂದ ಕೊಟ್ಟೇ, ಬರೋಬ್ಬರಿ, ಇಲ್ಲದಿದ್ದರ ಗುಡಸೀಕರಗೂ ಹೇಳತೀನಿ. ದುರ್ಗಿಗೂ ಹೇಳ್ತೀನ್ನೋಡು."

ಅಂದ. ಈ ಕಳ್ಳ ದಾರಿಗೆ ಬರಲೇ ಬೇಕಾಯಿತು.

ಬಾಡಿ ಅಂದರೇನೆಂದು ಕೇಳಿದ. ಬಾಡಿ ತರಿಸುವ ವಿಚಾರ ನಿಂಗೂನಿಗೆ ಇಂದು ನಿನ್ನಿನದಲ್ಲ. ಹಿಂದೆ ರಮೇಸ ಇದರ ವಿಚಾರವಾಗಿ ಅರ್ಧಗಂಟೆ ವರ್ಣಿಸಿ ಬೆಳಗಾವಿಯ ಹುಡುಗಿಯರೆಲ್ಲ ಇಂಥ ಫ್ಯಾಷನ್ ಮಡುತ್ತಾರೆಂದು ಹೇಳಿದ್ದ. "ನೀನೂ ಹಂಗಿರಬೇಕೋ ಇಂಗೂ" ಎಂದೂ ಅಂದಿದ್ದ. ಒಂದು ರೂಪಾಯಿ ರಮೇಸನಿಗೆ ಅವ ಬೆಳಗಾವಿಗೆ ಹೋಗುವಾಗ ಕೊಟ್ಟು "ಅದನ್ನು ಕೊಂಡು ತಾ" ಅಂದಿದ. ರಮೇಸ ಬಾಡಿ ತರದೆ, ಪೇಪರಲ್ಲಿಯ ಅದರ ಚಿತ್ರ ತಂದುಕೊಟ್ಟಿದ್ದ. ಅವ್ನು ಏಳೆಂಟು ಮಡಿಕೆ ಮಡಿಚಿ ಸದಾ ತನ್ನ ಮಲಿಕಟ್ಟಿಲ್ಲೇ ಇಟ್ಟಿರುತ್ತಿದ್ದ. ಕಳ್ಳ

ಬಾಡಿ ಅಂದರೇನೆಂದೂ ಕೇಳಿದನಲ್ಲ, ಕೂಡಲೇ ಅದನ್ನು ತೆಗದು ತೋರಿಸಿದ. ಕಳ್ಳನಿಗೆ ನಗೆ ತಡೆಯಲಾಗಲಿಲ್ಲ. ನಿಂಗೂನಿಗೆ ಸ್ವಲ್ಪ ಮುಖಭಂಗವಾಯಿತು.

"ಯಾಕಲಾ, ನಾ ಇದ್ನ ತೊಡೂದ ಇನ್ನ ಮನಸ್ಸಿಗೆ ಬರಾಣಿಲ್ಲೇನು" ಅಂದ. ತಂದು ಕೊಡುವುದಾಗಿ ಕರಿಮಾಇಯ ಆಏ ಮಾಡಿ, ಹೊರಗೆ ಕಳಿಸಿದ, ಇನು ಈ ಹಣ ತನ್ನೊಬ್ಬನ ಋಣದಲ್ಲಿಲ್ಲ ಎಂದು ಖಾತ್ರಿಯಾಯ್ತು. ಎದ್ದು ಅಂಗೀ ಹಾಕಿಕೊಂಡು ಹೊರಬಂದ. ತ್ರಿಮೂರ್ತಿಗಳಿದ್ದರು. ಹೋಗಿ ಅವರನ್ನು ಸೇರಿಕೊಂಡ.

ಊರಂತೂರು ಬಣ್ಣ ಎರಚಾಡುತ್ತಿದ್ದರೆ ಈ ಮೆಂಬರ್ ಚತುಷ್ಟಯರು ಕೆರೆಯ ದಂಡೆಯ ಮೇಲೆ ಮೊಳಕಾಲ ಸುತ್ತ ಕೈಹೆಣೆದುಕೊಂಡು ಕೂತು, ಹತ್ತು ರೂಪಾಯಿಗಳನ್ನು ಹೇಗೆ ಹೇಗೆ ಖರ್ಚು ಮಾಡುವುದೆಂದು "ಮೀಟಿಂಗ್" ಮಾಡುತ್ತಿದ್ದರು. ಮುಂಜಾನೆಯ ಘಟೆಯಿಂದಾಗಿ ಸರಪಂಚ ಬಣ್ಣದಲ್ಲಿ ಪಾಲ್ಗೊಳ್ಳಲಿಲ್ಲ. ಹತ್ತು ರೂಪಾಯಿಯಿಂದಾಗಿ ಮೆಂಬರರು ಪಾಲ್ಗೊಳ್ಳಲಿಲ್ಲ. ಪಾಲ್ಗೊಂಡರೆ ಎಲ್ಲಿ ಕಳ್ಳ ತಪ್ಪಿಸಿಕೊಂಡು ಹೋಗುತ್ತಾನೋ ಎಂದು ಉಳಿದವರಿಗೆ ದಿಗಿಲು.

ಆಯ್ತು ಹೊತ್ತು ಮುಳುಗೋ ತನಕ ಅಲ್ಲೇ ಕೂತು. ಐದು ರೂಪಾಯಿಗೆ ಸೆರೆ ಕುಡಿಯುವುದೆಂದೂ, ಇನ್ನೈದು ದುರ್ಗಿಗೆ ಕೊಡುವದೆಂದು ಒಂದನೇ ತೀರ್ಮಾನವಾಯಿತು. ಆದರೆ ದುರ್ಗಿಗೆ ಕೊಡುವುದು ಹೇಗೆ? ಲಗಮವ್ವನಿಗೆ ಗೊತ್ತಾದರೆ ಪೂಜೆ ಮಾಡದೆ ಬಿಡುವ ಹೆಂಗಸಲ್ಲ. ಆದ್ದರಿಂದ ಅವಳು ಹೊರಗೆ ಹೋದಾಗ ದುರ್ಗಿಗೆ ಕೊಡಬೇಕೆಂದೂ ಆದರೆ ಹಾಗೆ ಕೊಡುವಾಗ ಉಳಿದ ಮೂವರೂ ಅಲ್ಲಿಯೇ ಹಜರಿರತಕ್ಕದ್ದೆಂದೂ ಎರಡನೇ ತೀರ್ಮಾನವಾಯಿತು. ಅಲ್ಲದೆ ದುರ್ಗಿಯ ಜೊತೆ ಒಂದೆರಡು ಮಾತು ಹೆಚ್ಚಾಗಿ ಆಡುವ ಅವಕಾಶವನ್ನು ಸಿದರಾಮನಿಗೆ ಸರ್ವಾನುಮತದಿಂದ ಕಲ್ಪಿಸಲಾಯಿತು.

ಸಾತೀರ ಮೇಲಿನ ತೀರ್ಮಾನ ಒಪ್ಪಿಕೊಂಡರೂ ಅವ ತಲೆಯಲ್ಲಿ ಹುಳುವಿನಂತೆ ಇನ್ನೊಂದು ವಿಚಾರ ಕೊರೆಯುತ್ತಿತ್ತು. ಐದು ರೂಪಾಯಿಯೆಂದರೆ ಸಣ್ಣ ಬಾಬತ್ತಲ್ಲ. ಕೊಡುವುದೇ ಹೌದಂತೆ ಹಾಗೇ ಕೊಟ್ಟದ್ದೇ ಆದರೆ ದುರ್ಗಿ ಯವುದಕ್ಕೂ ಒಪ್ಪಿಕೊಳ್ಳುವುದರಲ್ಲಿ ಸಂಶಯವಿಲ್ಲ. ಅವಳ ಒಪ್ಪಿಗೆಯನ್ನು ಯಾಕೆ ಸರಿಯಾಗಿ ಉಪಯೋಗಿಸಬಾರದು? ಎಂದುಕೊಂಡ.

"ನೋಡ್ರೋ, ಕೊಡೋದು ಖರೇ ಅಂದಮ್ಯಾಲೆ ಗಲಮವ್ವನ ಮನ್ಯಾಗ ಯಾಕ ಕೊಡಬೇಕು? ದುರ್ಗೀನ ಕರಿಮಾಯಿ ಗುಡೀ ಹಿಂದ ಕರಕೊಂಡ ಹೋಗಿ ನಾಕೂ ಮಂದಿ ಕೂಡಿ ಕೊಟ್ಟರ ಹೆಂಗ?"

ಅಂದ. ಸಾತೀರನ ಮನಸ್ಸಿನ ಹುಳಿಯ ವಾಸೆ ಎಲ್ಲರ ಮೂಗಿಗೂ ತಾಕಿತು. ಎಲ್ಲರಿಗೂ ಸರಿಯೆನ್ನಿಸಿ ರೋಮಂಚನಗೊಂಡರು. ಆದರೆ ರಮೇಸ ಒಂದು ತಿದ್ದುಪಡಿ ಮುಂದಿಟ್ಟ. ಐದು ರೂಪಾಯಿ ಸಿದರಾಮ ಒಬ್ಬನೇ ಕೊಡುವುದರ ಬದಲು ಚಿಲ್ಲರೆ ಮಾಡಿಸಿ, ಒಬ್ಬೊಬ್ಬರು ಒಂದೊಂದು ರೂಪಾಯಿ ಕೊಡಬೇಕೆಂದೂ, ಸಿದರಾಮ ಎರಡು ರೂಪಾಯಿ ಕೊಡುವುದೆಂದೂ ಸೂಚಿಸಿದ. ಸದರಿ ಕಳ್ಳನೇ ಮೊದಲು ದುರ್ಗಿಯನ್ನು ಸಾಧ್ಯವಾದರೆ ಕುಡಿಯುವದೆಂಬ ತಿದ್ದುಪಡಿಯೊಂದಿಗೆ ಒಪ್ಪಿ ಎದ್ದರು.

ಆಗಷ್ಟೇ ರಾತ್ರಿಯಾಗಿತ್ತು. ಜನ ಅಲ್ಲಲ್ಲಿ ಕಟ್ಟೆಯ ಮೇಲೆ ಕುಳಿತು ಅಂದಿ ಬಣ್ಣದ ಮೋಜುಗಳನ್ನು ಮಾತನಾಡಿಕೊಂಡು ನಗುತ್ತಿದ್ದರು. ಕೆಲವರು ಗುಡಸೀಕರ ಬಾಳೂನ ಮಗನನ್ನು ಹೊಡೆದ ಸುದ್ದಿ ಮಾತಾಡುತ್ತಿದ್ದರು. ಈ ಚತುಷ್ಟಯರು ಬಸೆಟ್ಟಿಯ ಅಂಗಡಿಯಲ್ಲಿ ಒಂದರ ಎರಡೂ ನೋಟು ಕೊಟ್ಟು ಒಂದೊಂದರ ಹತ್ತು ನೋಟಾಗಿಸಿಕೊಂಡರು. ಆ ಹತ್ತನ್ನೂ ಸಿದರಾಮ ಕಿಸೆಯಲ್ಲಿಟ್ಟುಕೊಂಡ ಲಗಮವ್ವನ ಮನೆಯ ಕಡೆ ಚಿತ್ತೈಸಿದರು.

ಲಗಮವ್ವನ ಮನೆ ಕಂ ಬಾರಿನಲ್ಲಿ ಆಗಲೇ ನಿಂಗೂ ಕೂತಿದ್ದ. ಇವರ ದಾರಿ ನೋಡುತ್ತ. ಇಷ್ಟ ಯಾಕ ತಡಾ ಮಾಡಿದಿರೋ? ಬರ್ರಿ ಬರ್ರಿ" ಎನ್ನುತ್ತ ಅವನೇ ಇವರನ್ನು ಸ್ವಾಗತಿಸಿದ. ಕಳ್ಳನ ಜೀವ ಹುಳ್ಳಳ್ಳಗಾಯಿತು. ತೋರಗೊಡದೆ ಒಳಹೊಕ್ಕ. ಚಾಪೆಯ ಮೇಲೆ ನಾಲ್ವರೂ ಕೂತರು. ನಲ್ವರ ಕಣ್ಣುಗಳು ಟಕಮಕ ದುರ್ಗಿಯ್ನೇ ಹುಡುಕುತ್ತಿದ್ದವು. ಲಗಮವ್ವ "ಏನ್ರೋ?" ಅಂದಳು. ಕಳ್ಳ ಧೈರ್ಯದಿಂದ ಹೇಳಿದ.

"ನಾಕ ಕಾಯಿ ಸೆರೆ ಕೊಡಬೇ,"

"ಮೊದಲ ರೊಕ್ಕಾ ಕೊಡು."

"ನಾವೆಲ್ಲಿ ಓಡಿಹೋಗ್ತೀವೇನಬೆ?"

ಎಂದ ಕಳ್ಳ.

"ಹೆಂಗೂ ಸರಪಂಚ ಕೊಟ್ಟಾನಲ್ಲ, ತಗದ ಬಿಸಾಕಲೇ"

ಅಂದ ನಿಂಗೂ. ಕಳ್ಳನಿಗೆ ಇನ್ನು ಗಾಬರಿಯಾದರೆ ಉಳಿದವರಿಗೆ ದಿಗಿಲಾಯಿತು. ನಾಲ್ವರ ಐದಯ ರೂಪಾಯಿ ಕೊಟ್ಟು ಐದು ಕಾಯಿ ತರಿಸಿದ, ನಿಂಗೂನಿಗೆ ಒಂದನ್ನು ಕೊಟ್ಟರು. ಅವನು ಕಳ್ಳನ ಬಳಿಯೇ ಕೂತು ಕುಡಿಯತೊಡಗಿದ. ಸಾತೀರ ಕಿಸೆಯಲ್ಲಿಯ ಸಿಗರೇಟು ಪಾಕೀಟು ತೆಗೆದು, ಅದರಲ್ಲಿಯ ಸೇದಿಬಿಟ್ಟ ಒಂದು ಸಿಗರೇಟು ತುಂಡು ತೆಗೆದು ಹೊತ್ತಿಸಿದ, ಒಂದನ್ನು ಕಳ್ಳನಿಗಿತ್ತ. ಸಾಮಾನ್ಯವಾಗಿ ಗುಡಸೀಕರ ಸೇದಿ ಬಿಟ್ಟ ತುಂಡುಗಳೆಲ್ಲ ಸಾತೀರನ ಬಳಿಯೆ ಇರುತ್ತಿದ್ದವು. ಅಷ್ಟರಲ್ಲಿ ದುರ್ಗಿ ಬಂದಳು, ಎಲ್ಲರಿಗೂ ಹುರುಪು ಬಂತು. ರಮೇಸ ಮೆರೆಮಿಂಡರೂ ಅಂಗಲಚಿ ತಲ ಒಂದೊಂದು ತುಂಡು ಪಡೆದು ಹೊತ್ತಿಸಿದರು.

ಕಾಯಿ ಬರಿದಾಗುತ್ತ ಬಂದಂತೆ ಅವರ ತಲೆ ನಾಲಿಗೆಗಳ ಸಮತೋಲ ತಪ್ಪತೊಡಗಿತು. ಈ ಮಧ್ಯೆ ಕಳ್ಳ ಏನೇನೋ ನೆಪದಿಂದ ದುರ್ಗಿಯ ಬಳಿ ಹೋಗಿ ತನ್ನಲ್ಲಿದ್ದ ನೋಟುಗಳನ್ನು ತೋರಿಸಿ ಬಂದಿದ್ದ. ಸಾತೀರ ತಾನೂ ಒಮ್ಮೆ ತೋರಿಸಿಕೊಂಡು ಬರುತ್ತೇನೆ ಎಂದು ಕೈ ಸನ್ನೆಯಿಂದಲೇ ಕೇಳಿದ. ಸನ್ನೆಯಿಂದಲೇ ಇವನೂ ನಿರಾಕರಿಸಿದ. ಹೊರಗಡೆ ಒಂದಿಬ್ಬರು ಗಿರಾಕಿಗಳು ಕೂತಿದ್ದರು. ಒಳಹೊರಗೆ ಓಡಾಡುತ್ತಿದ್ದ ದುರ್ಗಿ ಒಬ್ಬೊಬ್ಬರಿಗೆ ಒಂದೊಂದು ಥರ ಕಂಡಳು.

ಕಾಯಿಗಳು ಪೂರ್ತಿ ಬರಿದಾದ ಮೇಲೆ ಮುಂದೇನು ಎಂದು ಗುಸುಗುಸು ನಡೆಯಿತು. ಗುಡಿಯ ಹಿಂದೆ ಬರಲು ಕಳ್ಳನೇ ದುರ್ಗಿಗೆ ಹೇಳಬೇಕೆಂದು ಮೂವರೂ ಸೂಚಿಸಿದರು. ಕಳ್ಳನಿಗೆ, ಅದೇನೋ ಇಷ್ಟದ ಕೆಲಸವೆ. ಆದರೆ ಭಯ. ಹೇಗೂ ನಿಂಗೂನಿಗೂ ಕುಡಿಸಿದ್ದರಲ್ಲ. ಕಳ್ಳ ದುರ್ಗಿಗೆ ಹೇಳುವ ಜವಾಬ್ದಾರಿಯನ್ನು ನಿಂಗೂನಿಗೆ ಹೇಳಿದ. ನಿಂಗೂ ಗುಡಿಯ ಹಿಂದಿ ಪೌಳಿಯಲ್ಲಿ ನೀವೆಲ್ಲ ಕಾದಿರಬೇಕೆಂದೂ ಅಲ್ಲಿಗೆ ದುರ್ಗಿಯೊಬ್ಬಳನ್ನೇ ಕಳಿಸುವುದಾಗಿಯೂ ಹೇಳಿದ, ಎದ್ದರು.

ಹೊರಗಡೆ ಮಂದ ಬೆಳ್ದಿಂಗಳಿದ್ದರೂ ಪೌಳಿಯಲ್ಲಿ ಸುತ್ತ ಮರಗಳಿಂದಾಗಿ ಕತ್ತಲೆಯೇ ಇತ್ತು. ದುರ್ಗಿ ಈಗ ಬರುತ್ತಾಳೆ. ಆಗ ಬರುತ್ತಾಳೆಂದು ನೆನೆನೆನೆದು ನಾಲ್ವರು ತೊಡೆ ಬಿಗಿದು ಮೈ ಗರಂ ಆದವು. ರಮೇಶ ಓಡಿಹೋಗಿ ನಾಕೈದು ಸಲ ಒಂದಮಾಡಿ ಬಂದ. ಕಳ್ಳನಿನ್ನೂ ಎಲ್ಲರ ಕೈಗೆ ರೂಪಾಯಿ ಕೊಟ್ಟಿರಲಿಲ್ಲ. ಅವಳು ಬಂದಕೂಡಲೇ ಕೊಡುವುದಾಗಿ ಹೇಳಿ ಕಾಲ ತಳ್ಳುತ್ತಿದ್ದ. ಬಂದಳು!

ಕಳ್ಳ ಅವಸರದಲ್ಲಿ ಎಲ್ಲರಿಗೂ ಒಂದೊಂದು ರೂಪಾಯಿ ಕೊಟ್ಟ. ತಾನೂ ಒಂದನ್ನು ಹಿಡಿದುಕೊಂಡು ಇನ್ನೊಂದನ್ನು ಜೇಬಿನಲ್ಲೇ ಬಿಟ್ಟ. ಅವಳು ಸಮೀಪ ಬರುವದಷ್ಟೇ ತಡ "ತಗೋ ದುರ್ಗಿ" ಎಂದು ಕಳ್ಳ ಕೈಚಾಚಿದ. ಮುಂದೆ ತಾನು ಮಾಡಲಿರುವುದನ್ನು ನೆನೆದು ಆಗಲೇ ಅವನ

ಬಾಯಿ ಒಣಗಿತ್ತು; ರಮೇಸ ಮುಂದೆ ಬಂದು "ಗುಡಸೀಕರ ಕೊಟ್ಟದ್ದಲ್ಲ, ನಂದು, ತಗೋ ದುರ್ಗಿ" ಎಂದು ಹಲ್ಲುಕಿರಿದ. ಆ ಕತ್ತಲೆಯಲ್ಲೂ ಅವನ ಹಲ್ಲುಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಸಾತೀರ, ಮೆರೆಮಿಂಡ ಹಾಗೇ ಕೈಚಾಚಿದರು. ಅಷ್ಟು ಹಣ ತಕ್ಕೊಂಡು ಸುಮ್ಮನೇ ನಿಂತಳು. ಯಾರೊಬ್ಬರಿಗೂ ಧೈರ್ಯ ಸಾಲದು, ಸುಮ್ಮನೆ ಹಿಂತಿರುಗಿದಳು. ಇನ್ನೇನು ಹೋಗುತ್ತಾಳಲ್ಲಾ ಎಂದವನೇ ಸಾತೀತ ಹಿಂದಿನಿಂದ ಹಾರಿ ತೆಕ್ಕೆ ಹಾದ. ಕೂಡಲೇ ಕಳ್ಳ, ರಮೇಸ ಹರಿಬಂದು ತಮತಮಗೆ ಅನುಕೂಲವದ ಚಪಲಗಳನ್ನು ತೀರಿಸಿಕೊಳ್ಳಲಿದ್ದರು. ಅಷ್ಟರಲ್ಲಿ ಲಗಮವ್ವನ ದನಿ ಕೇಳಿಸಿತು.

"ಥೂ ತುಡುಗ ಭಾಡೇರ್ಯಾ. ದುರ್ಗಿಗಿ ಲೊಡಂತ ಗುಡಸ್ಯಾ ಹತ್ತು ರೂಪಾಯಿ ಕೊಟ್ಟರ ಕುಡದ ಉಚ್ಚೀ ಹೋದಿರಿ. ಹೌಂದಲ್ಲ ಥೂ!"

ಎನ್ನುತ್ತ ಉಗಳಿದಳು. ನಿಂಗೂ ಹೋ ಹೋ ಹೋ ಎಂದು ಕೈಬಡಿದು ನಗುತ್ತ ಲಗಮವ್ವನತ್ತ ಓಡಿಹೋದ. ನಾಲ್ವರಿಗೂ ಈಗ ತಿಳಿಯಿತು, ತಮ್ಮ ಹತ್ತಿರ ಬಂದವಳು ದುರ್ಗಿಯಲ್ಲ, ನಿಂಗೂ ಎಂದು. ಅವಳು ಯಾವಾಗ "ತಡೀರಿ ಗುಡಸ್ಯಾಗ ಹೇಳತೇನ" ಎಂದು ಹೇಳುತ್ತ ಇವರ ಕಡೆ ನುಗ್ಗಿದಳೋ, ನಾಲ್ವರೂ ಹೆದರಿ ಕಾಲಿಗೆ ಬುದ್ಧಿ ಹೇಳಿದರು.

ನಿಂಗೂನಿಗೆ ಸಿಕ್ಕದ್ದು ಒಟ್ಟು ನಾಲ್ಕು ರೂಪಾಯಿ. ಮೂರನ್ನು ಲಗಮವ್ವನಿಗೆ ಕೊಟ್ಟು ಒಂದನ್ನು ತಾನಿಟ್ಟುಕೊಂಡಿದ್ದ. ಆದರೆ ಆಮೇಲೆ ದುರ್ಗಿಯನ್ನು ನೋಡಿ ಅವನಿಗೇನು ತಿಳಿಯಿತೋ, ಎಷ್ಟೆಂದರೂ ಹೆಂಗರುಳು. ತಾನಿಟ್ಟುಕೊಂಡ ರೂಪಾಯಿಯನ್ನು ಲಗಮವ್ವನಿಗೆ ತಿಳಿಯದಂತೆ ದುರ್ಗಿಗೆ ಕೊಟ್ಟ. ಅವಳು ಅದನ್ನು ತನ್ನ ಮಲಿಕಟ್ಟಿನಲ್ಲಿ ಬಚ್ಚಿಟ್ಟುಕೊಂಡಳು.

ಚತುಷ್ಟಯರು ಓಡೋಡುತ್ತ ಪಂಚಾಯ್ತಿ ಆಫೀಸಿಗೆ ಬಂದಾಗ ಗುಡಸೀಕರ ಒಬ್ಬನೇ ಕುಡಿಯುತ್ತ ಕೂತಿದ್ದ. ನಾಲ್ವರೂ ತೊಯ್ಸಿಕೊಂಡ ಕಾಗೆಗಳ ಹಾಗೆ ಮುದುಡಿ ಕೂತರು. ಯಾರೂ ಮಾತಾಡಲಿಲ್ಲ. ಗುಡಸೀಕರ ಮತಾಡದ್ದರಿಂದ ನಿಂಗೂ ಎಲ್ಲವನ್ನೂ ಹೇಳಿದ್ದಾನೇನೋ ಎಂದು ಕಳ್ಳನಿಗೆ ಸಂಶಯ ಬಂತು. ಸಾತೀರ ತನ್ನ ಪಾಡಿಗೆ ತಾನು ಗುಡಸೀಕರ ಎಸೆದ ಸಿಗರೇಟನ್ನು ಎಳೆಯುತ್ತಿದ್ದ. ಬಹಳ ಹೊತ್ತಾದ ಮೇಲೆ ಗುಡಸೀಕರನೇ ಕೇಳಿದ –

"ಕಳ್ಳಾ, ದುರ್ಗಿಗಿ ರೊಕ್ಕಾ ಕೊಟ್ಟೇನೋ?"

"ಕೊಟ್ಟೆ. ಆದರ ಲಗಮವ್ವನ ಸೊಕ್ಕ ಅಳತಿ ಮೀರಿತ್ರಿ"

ಎಂದ ಗಾಬರಿಯಿಂದ ರೊಕ್ಕದ ವಿಷಯ ಮರೆಹಾಕುತ್ತ. ಮೆರೆಮಿಂಡ ಬಾಯಿಹಕಿದ. "ಛೇ ಛೇ ಕಂಡಾಪಟಿ ಅಗ್ಗದ ಹೆಂಗಸದು. ಹೇಳಬಾರದ್ದ ನಾ ಏನ ಹೇಳ್ಲಿ. ಸರಪಂಚ ಸಾಹೇಬರ ಮ್ಯಾಲ ನೀ ಹಾಂಗ ಪದ ಮಾಡಿದದ ತಪ್ಪಂತ ಹೆಳಿದರೆ ಮೈಯಾಗ ದೆವ್ವ ಬಂದಾಂಗ ಕೈ ಬಾಯಿ ಮಾಡಿ ಬಲ್ಹಾಂಗ  ಮಾತಾಡಾಕ ಹತ್ತಿದ್ಲು!" ರಮೇಸನಿಗೆ ಇಷ್ಟು ನೆಪ ಸಾಕಾಯಿತು.

"ಎಸೆಸ್. ಪಾಪ ಸಿದರಾಮ ಸರಪಂಚರ ಕೊಟ್ಟಾರ ತಗೋವಾ ಅಂತ ಹತ್ತ ರೂಪಾಯಿ ಕೊಟ್ಟರ ಐದು ರೂಪಾಯಿ ಅಲ್ಲೇನ? ನಿನ್ನ ಸರಪಂಚರ ನೀರ ಬಲ್ಲಿನ್ಹೋಗ" ಅಂತ ಒದರ್ಯಾಡ್ಯಾಕ ಹತ್ತಿದ್ಲು!"

ತಾನಿನ್ನೂ ಮಾತಾಡಲಿಲ್ಲವಲ್ಲಾ ಎಂದು ಸಾತೀರ ಗಮನಿಸಿಕೊಂಡ –

"ಗೌಡ ಇಪ್ಪತ್ತಕೊಟ್ಟಾನ, ನಿನ್ನ ಸರಪಂಚ ಐದꠏ ಅಲ್ಲೇನು ಕೊಟ್ಟದ್ದು? ಅಂದ್ಲು!"

ಅಂದ. ಎಲ್ಲಿ ಗುಡಸೀಕರ ಹೋಗಿ ಲಗಮವ್ವನ ಜೊತೆ ಜಗಳಾಡುವನೋ ಎಂದು – "ಬರಲಿ ನಿಮ್ಮ ಸರಪಂಚ ನನ್ನ ಹಂತ್ಯಾಕ. ಚೆಲೋಹಾಂಗ ಬುದ್ಧಿ ಕಲಿಸಿ ಕಳಸತೇನಂತಾಳಲಾ!"

ಎಂದೂ ಕಳ್ಳ ಸೇರಿದ. ಗುಡಸೀಕರ ಬಾಯಿ ತೆರೆಯಲಿಕ್ಕೆ ಅವಕಾಶ ಕೊಟ್ಟರೆ ಕೆಟ್ಟೇವೆಂಬಂತೆ ಒಬ್ಬರಾದ ಮೇಲೆ ಒಬ್ಬರು ಬಿಟ್ಟೂ ಬಿಡದೆ ಮಾತಾಡುತ್ತಿದ್ದರು. ಕೊನೆಗೆ ಗುಡಸೀಕರ –

"ಅಲ್ರೋ, ದುರ್ಗಿ ಕೈಯಾಗ ಕೊಡಂದರ ಲಗಮೀ ಕೈಯಾಗ ಯಾಕ ಕೊಟ್ಟಿರಿ?" ಎಂದು ಕೇಳಿದ ಅವರು ಹೇಳಿದ್ದನ್ನೆಲ್ಲ ನಂಬುತ್ತ.

"ಆಕಿಗೇ ಕೊಡಬೇಕಂತ ಹೋಗಿದ್ದೀವಿ. ಕರೆದ ಕೊಡಬೇಕಂದರ ಈ ಮುದಿರಾಚಿ ಬಂದ ಕೈ ಒಡ್ಡಿದಳ್ರಿ"

ಎಂದು ಇನ್ನೊಂದು ಸುಳ್ಳೆಸೆದ ಕಳ್ಳ. ಆದರೆ ಗುಡಸೀಕರ ನಂಬಿದನೆಂದು ಇವರಿಇನ್ನೂ ಖಾತ್ರಿಯಾಗಲೊಲ್ಲದು. ಬಾಯಿಗೆ ಬಂದಂತೆ ಲಗಮವ್ವನನ್ನು ಬಯ್ದರು. ಗೌಡ, ದತ್ತಪ್ಪನ ಹೆಸರು ತಂದರು. ಮಿಕ್ಕವರು ಮಾತಿಗೊಮ್ಮೆ ಕಳ್ಳನ ಸಜ್ಜಿಕೆ ಹೊಗಳಿದರು. ಕಳ್ಳ ಇವರನ್ನು ಹೊಗಳಿದ. ಕುಡಿದ ದೇಸೀ ದೇವರ ಪ್ರಭಾವವೋ, ಸರಪಂಚ ತಮ್ಮನ್ನು ನಂಬಲಿಲ್ಲವೆಂಬ ಭಯವೋ ಆಕಸ್ಮಾತ್ ಮುಂದೆ ಗೊತ್ತಾದಾಗಲೂ ತಮ್ಮ ಮೇಲೆ ಬರಬಾರದೆಂಬ ಮುಂಜಾಗ್ರತೆಯೋ ಅಂತೂ ಮಾತಾಡಿದರು. ಮಾತಾಡಿ ನಿಲ್ಲಿಸಿದರು. ಕೊನೆಗೆ ಗುಡಸೀಕರ ಹೇಳಿದ:

"ಈಗ ಲಗಮವ್ವನ ನೀರ ಇಳಿಸಬೇಕಲ್ಲಾ…"

ನಾಲ್ವರೂ ಈಗ ಹಗುರಾದರು ಗುಡಸೀಕರ ನಂಬಿದ್ದು ಖಾತ್ರಿಯಾಯಿತು ಒಬ್ಬ ಅವಳನ್ನು ಹೊಡೆಯೋಣವೆಂದ. ದುರ್ಗಿಯನ್ನು ಅಪಹರಿಸೋಣವೆಂದು ಇನ್ನೊಬ್ಬ, ಅವಳ ಸೆರೆ ಕದ್ದು ತರೋಣವೆಂದು ಮಗದೊಬ್ಬ ಇನ್ನೂ ಏನೇನೋ ಸೂಚನೆ ಬರುತ್ತಿದ್ದಾಗ ಗುಡಸೀಕರ ಒಂದು ವಿಚಾರ ಹೇಳಿದ.

"ನಾವೂ ಒಂದು ಸೆರೇದಂಗಡಿ ತಗದರ ಹೆಂಗ?"

"ಓಹೋ, ಬೇಕಾದರ ಅಂಗಡ್ಯಾಗ ನಾ ಕೂರತೀನಿ."

ಎಂದು ಮೆರೆಮಿಂಡ ಮುಂದ ಬಂದ, ರಮೇಸನಿಗಾಗಲೇ ರೋಮಾಂಚನಗಳೆದ್ದಿದ್ದವು.

"ಎಸೆಸ್, ಈ ಲಗಮಿ ಭಟ್ಟೀಸೆರೆ ಮಾರಿದರ, ನಾವು ಫಾರಿನ್ ಬ್ರಾಂಡಿ ಮಾರೋಣು!"

ಆದರೆ ಈ ವಿಚಾರ ಸಾತೀರನಿಗೆ ಸರಿಬರಲಿಲ್ಲ.

"ಒಂದ ಗುಟಕ ಬ್ರಾಂಡಿ ಯಾರ ಕುಡೀತಾರೋ? ಈಡಾಗಿ ಸಗುವಂಥಾದ್ದ ಏನರೆ ಹೇಳು"

ಎಂದ ಕೂಡಲೇ ಕಳ್ಳ. "ಅದಕ್ಯಾಕ ಕಾಳಜೀ ಮಾಡತೀರೋ? ಬ್ರಾಂಡಿ ಒಳಗ ನಾವೂ ನೀರ ಹಾಕಿ ಈಡಮಾಡಿ ಮಾರೋಣು."

ಎಂದೊಂದು ಪರಿಹಾರ ಸೂಚಿಸಿದ.

“ಎಸೆಸ್, ಫಾರಿನ್ ಬ್ರಾಂಡಿ ಅಂದ ನೀರ ಮಾರಿದರೂ, ಮಂದಿ ತಗೋತಾರ. ನಾವು ಬರೇ ಒಂದ ಬಾಟ್ಲೀದಾಗ ಐದಾರ ನೂರ ರೂಪಾಯಿ ಅಗ್ಗದೀ ಸಹಜೀಕ ದುಡೀತೇವು”

ಎಂದು ರಮೇಸ ತನ್ನ ವ್ಯವಹಾರಬುದ್ಧಿ ಪ್ರದರ್ಶಿಸಿದ. ಇಷ್ಟಾಯಿತಲ್ಲ. ಕಳ್ಳ ಗುಡಸೀಕರನನ್ನೇ ನೋಡುತ್ತ –

“ಅಂಡ್ಯಾಗ ಯಾರನ್ನ ಕುಂದರ್ಸೋಣಂದ್ರಿ?”

ಎಂದು, ತನಗೇ ಹೇಳುತ್ತಾನೆಂದು. ಗುಡಸೀಕರ ನಿಧಾನವಾಗಿ ಸಿಗರೇಟು ಸೇದುತ್ತ ಹೇಳಿದ:

“ಬೆಳಗಾವಿಂದ ಒಬ್ಬಾಕಿ ಚಿಮಣಾನ ತರೋಣು. ಅಂಗಡ್ಯಾಗಿಡೋಣು.”

ಬೆಳಗಾವಿ ಎನ್ನುತ್ತಲೂ ರಮೇಸ ಎಷ್ಟು ಉತ್ಸಾಹ ತಾಳಿದನೆಂದರೆ ಕೂತವನು ಎದ್ದು ಗುಡಸೀಕರನ ಬಳಿಹೋಗಿ,

“ಸಾಹೇಬರ, ಸಾಹೇಬರ, ಕಾರಹುಣಿವೀ ದಿನ ಹೆಂಗೂ ಅವರು ಚಿಮಣಾನ ತರತಾರಲ್ಲ ಆಗ? ಸುರು ಮಾಡೂಣ್ರಿ,”

ಅಂದ. ಗುಡಸೀಕರ ತಲೆಯ ತೀವ್ರತೆ ಇನ್ನೂ ಜಾಸ್ತಿಯಾಯ್ತು.

“ಚಿಮಣಾನ ಯಾಕ ತರ್ತಾರೋ?”

“ಆ ದಿನ ಆಟ ಗೀಟ ಮಾಡ್ತಾರಲ್ಲರಿ.”

ಗುಡಸೀಕರ ನಿಧಾನವಾಗಿ ಸಿಗರೇಟನ್ನೆಳೆದ. ವಿದೇಶೀ ಪರಮಾತ್ಮನನ್ನು ತನ್ನ ಜೀವಾತ್ಮದಲ್ಲಿ ಮೆಲ್ಲನೆ ಸುರಿದುಕೊಂಡು ಬಾಟ್ಲಿ ಖಾಲಿ ಮಾಡಿದ. ಸಮರಸ ಸಂಯೋಗವಾದಂತೆ ಆ ಈ ಕಡೆ ಅಡ್ಡಾಡುತ್ತಿದ್ದ ವಿಚಾರಗಳು ಏಕಮುಖವಾಗಿ ಸಂಘಟಿಸಿದವು. ತುಟಿ ಒರೆಸಿಕೊಂಡ. ಚತುಷ್ಟಯರು ಅವನ ಮುಖವನ್ನೇ ನೋಡುತ್ತಿದ್ದರು. ತನಗೆ ತಾನೇ ಒಮ್ಮೆ ತಲೆದೂಗಿ ಗತ್ತಿನಲ್ಲಿ ಕಚ್ಚಿಕೊಂಡಿದ್ದ ತುಟಿಗಳನ್ನು ಎರಡು ಮಾಡಿದ:

“ಅವರು ಆಟ ಮಾಡಲಿ, ಅಂದs ನಾವೂ ಒಂದು ನಾಟಕ ಮಾಡೋಣು. ಚಿಮಣಾ ನಮ್ಮಲ್ಲಿ ಬರಲಿ. ಅವರು ಬಯಲಿನಗ ಕುಣೀಲಿ. ನಾವು ಒಳೆ ನಿವಳ ಥೇಟರ್ ಹಾಕಿ ಲೈಟ, ಲೌಡ್ ಸ್ಪೀಕರ್ ತಂದ ನಾಟಕ ಮಾಡೋಣು, ನಾಟಕ ಮುಗಿದ ಮ್ಯಾಲ ಚಿಮಣಾ ನಮ್ಮಲ್ಲೇ ಇರಲಿ. ಸೆರೇದಂಗಡಿ ಬ್ಯಡಾ. ಚಾದ ಅಂಗಡಿ ತಗದ ಕೊಡೋಣೂ. ಏನಂತೀರಿ?”

ತಾನು ಈ ತಕ ಅನುಭವಿಸಿದ ಸೋಲು, ಅವಮಾನಗಳ ಸೇಡು ಈ ಉಪಾಯದಿಂದ ಸರಳಬಡ್ಡಿ, ಚಕ್ರಬಡ್ಡಿ ಸಮೇತ ತೀರಿದಂತಾಯಿತೋ? ಕಾರ ಹುಣ್ಣಿಮೆಯ ಬಯಲಾಟಕ್ಕೆ ಜನಹೋಗದೆ ತಮ್ಮ ನಾಟಕಕ್ಕೇ ಬಂದರೆ ಗೌಡನ ಕೊಂಬು ಮುರಿದಂತಾಯಿತೋ! ಚಿಮಣಾಳನ್ನು ತಂದು ಚಹದಂಗಡಿ ತೆರೆಯುವುದರಿಂದ ಲಗಮಿಯ ಸೊಕ್ಕು ಇಳಿದಂತಾಯಿತೋ! ಊರನ್ನು ಬೆಳಗಾವಿಯಾಗಿಸಲು ಪ್ರಥಮ ಹೆಜ್ಜೆ ಇಟ್ಟಂತಾಯಿತೋ! ಪುಳಕದ ಸೊಕ್ಕಿನಲ್ಲೇ ಮನೆಗೆ ಹೋದ.

ಊಟ ಮಾಡುವಾಗ ಅವನ ತಾಯಿ “ಏ ತಮ್ಮಾ, ಗಿರಿಜವ್ವಗ ಒಂದ ವರ ನೋಡಬೇಕಲ್ಲೋ. ಬೆಳದ ನಿಂತಾಳ. ಆಕಿ ವಾರಿಗೆಯವರಿಗೆಲ್ಲಾ ಮದಿವ್ಯಾಗಿ ಮಕ್ಕಳಾಗ್ಯಾವ. ಹಿರಿಯಾ ಇದ್ದಿದ್ದರ ಏನಾದರ ಒಂದ ಮಾಡ್ತಿದ್ದ. ಗೋಕಂವ್ಯಾಗ ಒಂದು ವರ ಐತೆಂತ…” ಹೀಗೆ ಏನೇನೋ

ಹೇಳುತ್ತಿದ್ದಳು. ಅವನ ತಲೆಯಲ್ಲೀಗ ತಂಗಿಯ ಮದುವೆಯ ವಿಚಾರ ಸೇರುವುದು ಸಾಧ್ಯವೇ ಇರಲಿಲ್ಲ. ಹೇಳಿದ್ದಕ್ಕೆಲ್ಲ ಹಾಂಹೂಂ ಅಂದು ಮಹಡಿ ಹತ್ತಿದ.

## ಸೀತಾಪಹರಣ

ನಾಟಕದ ತಯಾರಿ ಅದ್ಧೂರಿಯಿಂದ ನಡೆಸಿದರು. ಕಾರಹುಣ್ಣಿಮೆಯ ದಿನ ಸಮೀಪಿಸಿದಂತೆ ಹುಡುಗರ ಗಡಿಬಿಡಿ ಅತಿಯಾಯ್ತು. ಇವರಾಡುವ ನಾಟಕ ಜನರ ಕಿವಿ, ಬಾಯಿಗೆ ಸುದ್ದಿಯಾಯ್ತು. ಬಾಲೆಯರು ನೀರು ತರುವ ದಾರಿಯ ಮಾತಿಗೆ ಕಥೆಯಾಯ್ತು. ದಿನಾ ಅದರ ತಾಲೀಮು (ರಿಹರ್ಸಲ್) ನೋಡುವುದಕ್ಕೇ ಹಿಂಡು ಹಿಂಡು ಜನ ಸೇರುತ್ತಿದ್ದರು. ಮುಂದೆ ಏನಾದರಾಗಲಿ, ತಾಲೀಮುಗಳ ಅ ಸಡಗರ, ಆ ಸಂಭ್ರಮ, ಆ ವೈಯಾರ, ಛೇ ನಾಟಕದ ಹುಡುಗರು ಅಷ್ಟೂ ದಿನ ನೆಲಕ್ಕೆ ಕಾಲೂರಲೇ ಇಲ್ಲ.

ಕಳ್ಳ ರಾವಣನಾಗಿದ್ದನಲ್ಲವೆ? – ಕಲ್ಲಿ ಮೀಸೆ ಬಿಟ್ಟು ದಿನಾ ಎಣ್ಣೆ ಹಚ್ಚಿ ಉಜ್ಜಿದ್ದೇ – ಸಂಭಾಷಣೆ ಕಂಠಪಾಠ ಮಾಡಲಿಕ್ಕೆ ಹೋಗಿ ಬಂದಲ್ಲಿ ಆ ಮಾತು ಒದರಿದ್ದೇ, ನಿಂಗೂ ಸಿಕ್ಕರೆ ಅವನೇ ಸೀತೆಯೆಂದು ಎಳೆದೆಳೆದು ಗಂಟಲ ನರ ಹರಿಯೋ ಹಾಗೆ ಕಿರಚಿದ್ದೇ – ಸುಳ್ಳಲ್ಲ, ಈಗ ಯಾರೊಮದಿಗೆ ಏನು ಮಾತಾಡಿದರೂ ರಾವಣನ ಧಾಟಿಯಲ್ಲೇ ಮಾತಾಡುತ್ತಿದ್ದ. ಅವನ ನಡಿಗೆಯ ರೀತ ಕೂಡ ಬದಲಾಗಿ ಕಿಸುಗಾಲು ಹಾಕಿ ನಡೆಯುತ್ತಿದ್ದ.

ಇತ್ತ ರಮೇಸನ ಸೀತೆಯ ಸಡಗರ ಹೇಳತೀರದು. ಗೇಣುದ್ದ ಕೂದಲ ಬಿಟ್ಟು, ಸೋರುವ ಹಾಗೆ ಎಣ್ಣೆ ಹಚ್ಚಿಕೊಂಡು, ಪೇಟೆಯ ಸೂಳೆಯರಂತೆ – ತಲೆ ಬಾಚಿಕೊಂಡು, ಮೂಗು ಮುರಿಯುವ ವೈಯಾರವೇ, ಕೈ ತಿರುಗಿಸುವ ಅಭಿನಯವೇ, ಹುಬ್ಬು ಹಾರಿಸಿ ತುಟಿ ಕಚ್ಚಿಕೊಳ್ಳುವ ಶೃಂಗಾರವೇ, ಆಹಾ ನಿಂಗೂನ ಹೃದಯದಲ್ಲಿ ಸವತಿ ಮತ್ಸರ ಹುಟ್ಟಿಸಿದ್ದು ಹೆಚ್ಚಲ್ಲ. ಹುಡುಗಿಯರೂ ಇವನನ್ನು ನೋಡಿ ಕರುಬುವಂತಾಯಿತು. ಆಂಜನೇಯನಾದ ಮೆರೆಮಿಂಡ ಈಗ ನೆಗೆಯುತ್ತಲೇ ನಡೆದಾಡುತ್ತಿದ್ದ. ಇವರ ಉರವಣಿ ನೋಡಿ ಊರ ಹುಡುಗರು ನಾಟಕದಲ್ಲಿ ಪಾತ್ರ ಸಿಕ್ಕವರೇ ನಶೀಬವಂತರೆಂದು ಅಸೂಯೆಪಟ್ಟರು.

ನಾಟಕ ನೋಡುವುದಕ್ಕೆ ಜನ ದಿನದಿನಕ್ಕೆ ಹೆಚ್ಚು ಹೆಚ್ಚು ಕೌತುಕ ತಾಳುತ್ತಿದ್ದರೆ ನಿಂಗೂ ಮಾತ್ರ ಹೆಚ್ಚು ಹೆಚ್ಚು ಹೊಟ್ಟೆಕಿಚ್ಚಿನಿಂದ ಉರಿದ. ತನಗೆ ಸೀತೆಯ ಪಾತ್ರ ಕೊಡಲಿಲ್ಲವಲ್ಲಾ ಎಂದು ತಳಮಳಿಸಿದ. ತಾನು ಸೀತೆಯಾಗಿದ್ದರೆ ಹೇಗೆ ನಿಲ್ಲುತ್ತಿದ್ದೆ. ಹ್ಯಾಗೆ ಕುಣಿಯುತ್ತಿದ್ದೆ, ಹ್ಯಾಗೆ ಹಾಡುತ್ತಿದ್ದೆ, ಹ್ಯಾಗೆ ಅಭಿನಯಿಸುತ್ತಿದ್ದೆ. ಕಳ್ಳ ಎದುರು ಬಂದಾಗ ಹ್ಯಾಗಿರುತ್ತಿದ್ದೆ, ಎಳೆದಾಗ ಹ್ಯಾಗೆ ಒಳಗಾಗುತ್ತಿದ್ದೆ, ಹೊತ್ತಾಗ ಹ್ಯಾಂಗೆ ಅನುಕೂಲಳಾಗುತ್ತಿದ್ದೆ – ಇತ್ಯಾದಿ ಕಲ್ಪಿಸಿ ಇನ್ನಷ್ಟು ಅಸೂಯೆಪಟ್ಟ. ತಾನು ನಪುಂಸಕನಾದದ್ದು ವ್ಯರ್ಥವೆನಿಸಿತು. ಹ್ಯಾಗೆ ನಾಟಕ ಮಾಡುತ್ತಾರೋ ನೋಡೇ ಬಿಡುತ್ತೇನೆಂದುಕೊಂಡ.

ಸುದ್ದಿ ಸುತ್ತ ಹದಿನಾಕು ಹಳ್ಳಿಗೆ ಹಬ್ಬಿತು. ಬೆಳಗಾಂವಿಯಿಂದ ಚಿಮಣಾ ಬರುತ್ತಾಳೆಂದು, ಡ್ಯಾನ್ಸು ಮಾಡುತ್ತಾಳೆಂದು, ವಿದ್ಯುದ್ದೀಪ ತರಿಸುತ್ತಾರೆಂದು ಮೊದಮೊದಲಿದ್ದರೆ, ಆಮೇಲೆ ಅದಕ್ಕೆ ಕೈಕಾಲು ಮೂಡಿ ಕಳ್ಳ ರಂಗತಾಲೀಮಿನಲ್ಲಿ ಕಿರಿಚಿದಾಗ ಪಕ್ಕದ ಮನೆಯ ಬಸರಿ ಹಲಿವುಳ್ದಳೆಂದು, ಮೆರೆಮಿಂಡನ ಮೈಯಲ್ಲಿ ಸ್ವಥಾ ಅಂಜನೇಯ ತುಂಬುವನೆಂದು ಹಬ್ಬತೊಡಗಿದವು. ಸೀತೆಯಾದ ರಮೇಸ ಈಗೀಗ ಹೆಂಗಸರಂತೆ ತಿಂಗಳಿಗೊಮ್ಮೆ ಮುಟ್ಟಾಗುವನೆಂದೂ ನಿಂಗೂ ಹೇಳಿದ. ಇಂಥ ಸುದ್ದಿ ಪಾತ್ರಧಾರಿಗಳ ಕಿವಿಗೆ ಬಿದ್ದಾಗಲಂತೂ ಒಬ್ಬೊಬ್ಬ ಒಂದೊಂದು ರೀತಿ ಪುಳಕಗೊಳ್ಳುತ್ತ ಅದು ನಿಜವೆಂಬಂತೆ ಅಭಿನಯಿಸುತ್ತಿದ್ದ. ನಾಟಕದ ದಿನ ಯಾವಾಗ ಬಂದೀತೋ ಎಂದು ಪ್ರತಿ ಜೀವ ಚಟಪಡಿಸುತ್ತಿತ್ತು. ಸದ್ಯ ಆ ದಿನವೂ ಬಂತು.

ಆ ದಿನ ಗೌಡ ಆರು ತಾಸಿನ ಮಧ್ಯಾಹ್ನ ಗುಡಿಸಲ ಮುಂದಿನ ಮರದಡಿ ಕೂತು ಕೂರಿಗಿ ಜೋಡಿಸುತ್ತಿದ್ದ. ತೋಟದ ಅಂಚಿನಲ್ಲಿ ಶಿವನಿಂಗ ಮೇವು ಮಾಡುತ್ತಿದ್ದವನು ಅಲ್ಲೇ ನಿಂತುಕೊಂಡು ಊರಿನ ಕಡೆ ನೋಡುತ್ತಿದ್ದ. ಅವನನ್ನು ಗಮನಿಸಿ ಗೌಡ ತಾನೂ ಊರ ಕಡೆ ನೋಡಿದ. ದೂರದಲ್ಲಿ ದತ್ತಪ್ಪ, ಲಗುಮವ್ವ ಅವರೊಂದಿಗೆ ಇನ್ನಿಬ್ಬರು, ಪರವೂರಿನವರು ಗುಡಿಸಲ ಕಡೆಗೇ ಬರುತ್ತಿದ್ದರು. ಇಂಥ ಅಪವೇಳೆಯಲ್ಲಿ ದತ್ತಪ್ಪ ಬರೋ ಪೈಕಿ ಅಲ್ಲ, ಯಾಕಿರಬಹುದೆಂದು ಗೌಡನಿಗೂ ಆಶ್ಚರ್ಯವಾಯಿತು, ಹಾಗೇ ನೋಡುತ್ತ ನಿಂತ.

ಗೌಡನಿಗೆ ಉಳಿದಿಬ್ಬರು ನಮಸ್ಕಾರ ಮಾಡಿದರು. ಆಗಂತುಕರ ಉದ್ದ ಕೂದಲು, ಅವನ್ನು ಮುಚ್ಚುವಂತೆ ಹಾಕಿದ ಕರೀಟೊಪ್ಪಿಗೆ – ಇವುಗಳಿಂದ ಆಟದವರೇ – ಎಂದು ಖಚಿತವಾಯ್ತು, ಪಡಸಾಲೆಯಲ್ಲಿ ಎಲ್ಲರು ಕೂತರು. ಪಕ್ಕದ ಹಳ್ಳಿಯವರು ಪಾರಿಜಾತ ಕಲಿತಿದ್ದಾರೆ, ಆಡೋದಕ್ಕೆ ಬಂದಿದ್ದಾರೆಂದು ದತ್ತಪ್ಪ ವಿಷಯ ಹೇಳಿದ. ಕಾರಹುಣ್ಣಿಮೆ ಒಂದರ್ಥದಲ್ಲಿ ಗೌಡನ ಮನೆಯ ಹಬ್ಬ, ಕರಿ ಹರಿಯುತ್ತಿರಲಿಲ್ಲ. ಯಾಕೆಂದರೆ ವರ್ಷಗಳ ಹಿಂದೆ ಕರಿ ತಪ್ಪಿಸಿಕೊಂಡು ಪರವೂರಿಗೆ ಹೋಗಿತ್ತು. ಈ ದಿನ ರಾತ್ರಿ ಕರಿಮಾಯಿ ಶಿಶು ಮಕ್ಕಳು ಸಮೇತ ಗೌಡನ ಮನೆಗೆ ಬಂದು, ಬೇಟೆಯ ಬಿನ್ನಾಯ ಮಾಡಿ, ಆಟ, ಮೋಜು ನೋಡಿ ಬೆಳಿಗ್ಗೆ ಗುಡಿಗೆ ಹೋಗುವುದು ಪದ್ಧತಿ. ಊರಿನಲ್ಲಿ ಈ ದಿನವೇ ಗುಡಸೀಕರನ ಮಂಡಳಿ ನಾಟಕ ಆಡುವವರಿರುವಾಗ ಇನ್ನೊಂದನ್ನು ಆಡಿಸುವುದು ಗೌಡನಿಗೆ ಒಪ್ಪಾಗಿ ತೋರಲಿಲ್ಲ. ಆದರೆ ಬಂದವರು ಕೇಳಲಿಲ್ಲ. ನೀವೇ ನೋಡದಿದ್ದರೆ ನಾವೇನು ಕಲಿತಂತಾಯಿತೆಂಬಂಥ ಮಾತಾಡಿದರು. ಅದು ಆ ಭಾಗದ ಕಲಾವಿದರೆಗೆ ಸಹಜ. ಗೌಡನ ಅಭಿರುಚಿ ಅಂಥಾದ್ದು. ಹಾಡುಗಾರಿಕೆಯಿರಲಿ, ಕುಣಿತವಿರಲಿ, ಮಾತುಗಾರಿಕೆಯಿರಲಿ – ಅದರ ಹೆಚ್ಚುಗಾರಿಕೆಯನ್ನು ಗುರತಿಸಬಲ್ಲವನಾಗಿದ್ದ. ಆಡಂಬರದ ಕಲೆಯಿಮದ ಅದನ್ನು ಬೇರ್ಪಡಿಸಬಲ್ಲವನಾಗಿದ್ದ. ಅಂತೂ ಗೌಡನಿಂದ ಭೇಷ್ ಅನ್ನಿಸಿಕೊಳ್ಳದವನು ಕಲಾವಿದನೇ ಅಲ್ಲ ಎಂಬಂಥ ಗುಂಗು ಕಲಾವಿದರಲ್ಲಿತ್ತು.

ಗೌಡನ ಹುಚ್ಚೇನು ಕಮ್ಮಿಯಲ್ಲ, ಕೌಜಲಗಿ ನಿಂಗವ್ವನಿಗೆ ಭೇಷ್ ಅಂದವನು, ಶಿವಗುರೆಪ್ಪನಿಗೆ ಭಲೆ ಅಂದವನು. ಖುಷಿ ಬಂದಾಗ ಗೌಡನ ಕೊಡುಗೈ ತಡೆಯುವವರೇ ಇಲ್ಲ. ಅದೇನು ಹುಚ್ಚೋ, ಕಲೆಯ ಜೊತೆ ವಿಚಿತ್ರ ತಾದಾತ್ಮ್ಯ ಹೊಂದುತ್ತಿದ್ದ. ಹಿಂದೊಮ್ಮೆ ಸ್ವತಃ ನಿಂಗವ್ವ ಸತ್ಯಾಭಾಮೆಯಾಗಿ ಭಕ್ತಿ, ಸೇಡು, ಅನುರಾಗಗಳ ಸುಳಿಗೆ ಸಿಕ್ಕು "ಕೃಷ್ಣಾ" ಎಂದು ಆರ್ತಳಾಗಿ ಹಾಡಿದಾಗ ಆ ದಿನ ಗೌಡ ಮುದಿ ಹೆಂಗಸಿನಂತೆ ಅತ್ತುಬಿಟ್ಟಿದ್ದ. ಕಲಾವಿದರೂ ಹಾಗಿದ್ದರು. ಅದೇ ನಿಂಗವ್ವನನ್ನು ದತ್ತಪ್ಪ ಮುಂಗೈ ಹಿಡಿದು ಏನು ಕೇಳುತ್ತಿ ಕೇಳು ಎಂದಿದ್ದ. "ಕೃಷ್ಣ ಕುಡದ ಹಾಲಿನ ಗಡಿಗ್ಯೊ ಇದು. ಇದನ್ಯಾಕ ಮುಟ್ಟತಿ" ಎಂದಿದ್ದಳು. ದತ್ತಪ್ಪ ಕೂಡಲೇ ಅವಳ ಕಾಲು ಮುಟ್ಟಿ ನಮಸ್ಕರಿಸಿದ್ದ. ಆ ಕಲಾವಿದರು, ಅವರ ಕಲೆಗಳು ಬದುಕಿನ ಗೂಢಗಳನ್ನು ಝುಮ್ಮ ದಟ್ಟಿಸುವಂತೆ ಚುಚ್ಚಿದ್ದವು. ಆ ಅನುಭವದಿಂದ ಇವರು ಧನ್ಯರಾಗಿದ್ದರು.

ಆದರೆ ಈ ದಿನ ಆ ಅನುಭವ ಬೇಡವಾಗಿತ್ತು. ಚೆಲುವಾದ ಹಾಡುಗಾರಿಕೆಗೆ ಮೈ ಪುಳಕಗೊಳ್ಳುವ ದಿನ ಅಲ್ಲ ಇದು, ಮಾತುಗಾರಿಕೆಯ ಚಕಮಕಿಯ ಕಿಡಿ ಈ ದಿನ ತಲೆಯಲ್ಲಿ ಬೆಳಕು ಚೆಲ್ಲುವಂತಿರಲಿಲ್ಲ. ಕುಣಿತಕ್ಕೆ ಕಣ್ಣು ಹಿಗ್ಗುವ ಸ್ಥಿತಿಯಲ್ಲಿರಲಿಲ್ಲ. ಯಾಕೆಂದರೆ ಗುಡಸೀಕರನ ನಾಟಕದಿಂದಾಗಿ ಬಂದವರೆದುರು ಊರ ಹುಳುಕುಗಳನ್ನು ಹೇಗೆ ತೋಡಿಕೊಳ್ಳುವುದು? ಅಷ್ಟು ದೂರದಿಂದ ಬಂದವರನ್ನು ಹೇಗೆ ನಿರಾಸೆಗೊಳಿಸುವುದು? ಅಷ್ಟರಲ್ಲಿ ಶಿವನಿಂಗ ದೂರ ನಿಂತಿದ್ದವನು "ಅವರೂ ಮಾಡಿಕೊಳ್ಳೋದಾದರ ಆಡಲಿ; ನಾವ್ಯಾಕ ನಮ್ಮ ಪದ್ಧತಿ ಬಿಡಬೇಕು?" ಅಂದ. ಬೇರೆ ಸಂದರ್ಭದಲ್ಲಾದರೆ ಗೌಡ ಈ ಮತು ಮೆಚ್ಚುತ್ತಿದ್ದನೋ ಏನೊ" ಅದೇನು ಮಾಡ್ತೀಯೊ ನೀನ ಮಾಡಿಕೊ ಮಾರಾಯ" ಎಂದುಬಿಟ್ಟ ದತ್ತಪ್ಪನಿಗೆ. ದತ್ತಪ್ಪನಿಗೆ ಅಷ್ಟು ಸಾಕಾಗಿತ್ತು ಕಲಾವಿದರನ್ನು ಎಬ್ಬಿಸಿಕೊಂಡು ಹೊರಟ.

ಊರಿನ ಇನ್ನೊಂದು ಭಾಗದಲ್ಲಿ ವಿಚಿತ್ರ ಲವಲವಿಕೆ ತುಂಬಿತ್ತು. ಸ್ಟೇಜು ಕಟ್ಟುವ ಸೀನು ಸೀನರಿಯ ಪರದೆ ಕಟ್ಟುವ ನಾ ಮುಂದು, ನೀ ಮುಂದು ಜನಗಳ ಉತ್ಸಾಹ ಹೇಳತೀರದು. ನಾಟಕವಿನ್ನೂ ರಾತ್ರಿ ಉಂಡು, ಮಲಗೋ ಹೊತ್ತಿಗೆ ಸುರುವಾಗೋದು. ಜನ ಆಗಲೇ ಸ್ಟೇಜಿನ ಬಳಿ ಗಂಡು ಹೆಣ್ಣೆನ್ನದೆ, ಹಿರಿ ಕಿರಿಯರೆನ್ನದೆ ಸೇರಿಬಿಟ್ಟಿದ್ದರು. ನಾಟಕದ ಪ್ರತಿಯೊಬ್ಬ ಪಾತ್ರಧಾರಿ ಮದುವೆಯ ವರನಂತೆ, ಕೂಡಿದವರು ತನ್ನ ಮದುವೆಗೇ ಬಂದವರೆಂಬಂತೆ ಸಡಗರದಿಂದ ನೋಡುತ್ತ ನೋಡಿಸಿಕೊಳ್ಳುತ್ತ ಆ ಈ ಕಡೆ ಓಡಾಡುತ್ತಿದ್ದ. ಅವರಿಗೆ ಮುಗಿಲು ಮೂರೇ ಗೇಣು ಉಳಿದಿತ್ತು. ಸೇರಿದವರಿಗೆ ತಾನು ಪಾತ್ರಧಾರಿಯೆಂದು ತಿಳಿಯಬೇಕಲ್ಲ? ತನ್ನ ಪಾತ್ರದ ಮಾತುಗಳನ್ನು ಜನರ ಗುಂಪಿನಲ್ಲೇ ಬಾಯಿಪಾಠ

ಮಾಡುತ್ತ ಅಡ್ಡಾಡುತ್ತಿದ್ದ. ಪಕ್ಕದ ಹಳ್ಳಿಗಳ ಹೈಕಳು ಆಗಲೇ ರಾತ್ರಿಯ ಬುತ್ತಿ ಕಟ್ಟಿಕೊಂಡು ಬಂದಿದ್ದರು. ವಿದ್ಯುದ್ದೀಪದ ಬಗ್ಗೆ, ಚಿಮಣಾ ಬಗ್ಗೆ ಎಲ್ಲರೂ ತಮತಮಗೆ ತಿಳಿದ ಕಥೆಗಳನ್ನು ಎಷ್ಟು ಹೇಳಿ ಕೇಳಿದರೂ ತೃಪ್ತಿಯಿಲ್ಲ.

ಚಿಮಣಾ ಗುಡಸೀಕರನ ಮನೆಯಲ್ಲಿದ್ದಳು. ಅವನ ಮನೆಯ ಮುಂದೊಂದು ಹಿಂಡು ಹುಡುಗರು ನಿಂತಿದ್ದರು. ಅಪ್ಪಿತಪ್ಪಿ ಚಿಮಣಾ ಉಗುಳೋದಕ್ಕಾದರೂ ಹೊರಗೆ ಬಂದರೆ ಆಗಲೇ ನೋಡಬೇಕೆಂಬ ತವಕ ಪ್ರತಿಯೊಬ್ಬನಿಗೆ. ಒಳಗೆ ಮಾತಾಡುವವರ ದನಿ ಹೊರಗಿನವರಿಗೆ ಹೆಣ್ಣದನಿಯಾಗಿ ಕೇಳಿಸುತ್ತಿತ್ತು. ಗಿರಿಜಳ ಓಡಾಟ ಹೇಳತೀರದು. ಪರಿಚಿತ ಹುಡುಗರನ್ನೋ, ಪಾತ್ರಧಾರಿಗಳನ್ನೋ ಕರೆದು ಏನೇನೋ ಕೆಲಸ ಹೇಳುತ್ತ ಗಾಳಿ ತುಂಬಿದ ಎಲೆಗರುವಿನಂತೆ ಒಳಗೊಮ್ಮೆ, ಹೊರಗೊಮ್ಮೆ ವಿನಾಕಾರಣ ಓಡಾಡುತ್ತ ತನ್ನ ಪ್ರತಿಷ್ಠೆ ಪ್ರದರ್ಶಿಸುತ್ತಿದ್ದಳು.

ಆ ದಿನ ಅದೇ ಊರಿನಲ್ಲಿ ನಾಟಕವಿದ್ದ ವಿಷಯ ಬಯಲಾಟದ ಕಲಾವಿದರಿಗೂ ಗೊತ್ತಿತ್ತು. ತಮ್ಮ ಬಯಲಾಟಕ್ಕೆ ಜನ ಸೇರುವುದಿಲ್ಲವೆಂದೂ ಗೊತ್ತಿತ್ತು. ನಿರಾಸೆಯೂ ಆಗಿತ್ತು. ಆದರೂ ಗೌಡ, ಹಿರಿಯರೂ ನೋಡುತ್ತಾರಲ್ಲಾ, ಸಾಕೆಂದು ಸುಮ್ಮನಾದರು.

ಊರಿನ ಬಯಕೆ ಹಣ್ಣಾದಂತೆ ಹೊತ್ತು ಮುಳುಗಿತು. ಕತ್ತಲಾಗುವುದರೊಳಗೇ ಹೊಸ ನಾಟಕದವರು ವಿದ್ಯುದ್ದೀಪ ಹಚ್ಚಿಬಿಟ್ಟರು. ಕೇಳಬೇಕೆ? ಜನ ಅವಸರವಸರವಾಗಿ ಊಟ ಮಾಡಿ, ಸ್ಟೇಜಿನ ಮುಂದೆ ಅನುಕೂಲ ಜಾಗ ಹಿಡಿದುಕೊಂಡು ನಾ ಮುಂದೆ ತಾ ಮುಂದೆಂದು ಜಗಳಾಡುತ್ತ ಕೂತುಬಿಟ್ಟರು.

ಪ್ರೇಕ್ಷಕರಲ್ಲಿ ಒಡೆದು ಕಾಣುತ್ತಿದ್ದವಳೆಂದರೆ ಗಿರಿಜಾ, ಅವಳಿಗೆ ಹೆಮ್ಮೆ, ತಾನು ಗುಡಸೀಕರನ ತಂಗಿಯಾದದ್ದಕ್ಕೆ, ಚಿಮಣಾ ತಮ್ಮ ಮನೆಯಲ್ಲಿ ಇಳಿದುಕೊಂಡಿದ್ದಕ್ಕೆ. ಎಲ್ಲರೂ ತನ್ನ ಮಾತು ಕೇಳುತ್ತಿರುವರೆಂಬಂತೆ ಜೋರು ದನಿಯಲ್ಲಿ ಮಾತಾಡುತ್ತಿದ್ದಳು. ಅವಳ ಸುತ್ತ ಹತ್ತಾರು ಸಮವಯಸ್ಸಿನ ಹುಡುಗಿಯರು ಬಿಟ್ಟ ಕಣ್ಣು ಬಿಟ್ಟಹಾಗೆ, ತೆರೆದ ಬಾಯಿ ತೆರೆದ ಹಾಗೇ, ಆಕೆ ಹೇಳುವುದನ್ನೆಲ್ಲ ಭಯ, ಭಕ್ತಿ ಬೆರಗಿನಿಂದ ಕೇಳುತ್ತ ಕುಳಿತಿದ್ದರು. ಚಿಮಣಾಳನ್ನು ಎಷ್ಟು ವರ್ಣಿಸಿದರೂ ಆ ಹುಡುಗಿಯ ಬಾಯಿಗೆ ಸೋಲಿರಲಿಲ್ಲ.

“ಚಿಮಣಾ ಅಂದರ ಏನಂತ ತಿಳದೀರ? ಅಂಗಡ್ಯಾಗಿನ ಗೊಂಬ್ಯಾಗ್ಯಾಳ! ಪತ್ತಲ ಉಟ್ಟಾಳ ಖರೆ, ನಮ್ಹಾಂಗ ಸೆರಗ ತಲೀಮ್ಯಾಲ ಹೊರೂಣಿಲ್ಲ. ಹಾರೂರ್ಹಾಂಗ ಹೆಗಲ ಮ್ಯಾಲ ಹಾಕತಾಳ. ದೊಡ್ಡ ಸಾವ್ಕಾರಂತ! ನಿಂತ ನೋಡಿದರ ತೆಲೀ ಮ್ಯಾಗಿನ ರುಂಬಾಲ ಕೆಳಗೆ ಬೀಳಬೇಕ, ಅಷ್ಟೆತ್ತರ ಬಂಗ್ಲೆ ಐತೆಂತ; ಆರ ಮಂದಿ ಹೆಂಗಸರ ಬರೀ ಆಕೀ ಸೀರಿ ಒಗ್ಯಾಕ ಇದ್ದಾರಂತ! ಮತ್ತ ಹಾಸಗಿ ಹಾಕವಾಕಿ ಬ್ಯಾರೇ, ಅಡಿಗೀ ಮಾಡುವಾಕಿ ಬ್ಯಾರೇ, ಊಟ ನೀಡುವಾಕಿ ಬ್ಯಾರೇ, ಊಟದ ಮ್ಯಾಲ ಎಲಡಿಕಿ ಮಡಿಚಿ ಕೊಡುವಾಕಿ ಬ್ಯಾರೆ! ನಮ್ಹಾಂಗ ಬುಟ್ಟಿ ತಿಂದ ತೊಟ್ಟಿ ಹೇತಾಳಂದೀ! ನಮ್ಮ ಮನ್ಯಾಗ ಊಟ ಮಾಡೋವಾಗ ನಾನs ನೊಡೇನಲ್ಲ – ಈಟ ಈಟ ಅನ್ನ, ಇಷ್ಟ ಸಾರ, ಹಾಲ ತುಪ್ಪ! ಮೂರ ತುತ್ತ ಊಟಾ ಮಾಡತಾಳ, ಕೈ ತೊಳೀತಾಳ ಅಪ್ಪ. ಕುಬಸದಾಗಿನ ಬಾಡೀ ಹೆಂಗೈತಂದಿರೇ? ದಿನಕ್ಕೆ ಮೂರ ಬಾಡಿ ತೊಡತಾಳ! ಬಾಡೀಗಿ ಸೈತ ನಾರೂ ಎಣ್ಣಿ ಹಚ್ಚಿರತಾಳ...” ಇತ್ಯಾದಿ ಇತ್ಯಾದಿ ಈ ಮಾತು ಕೇಳಿ ಪಾಪ ಒಂದು ಅರಿಯದ ಬಾಲೆ “ಆಕೀನೂ ನಮ್ಹಾಂಗ ಹೂಂಸ ಬಿಡತಾಳು?” ಎಂದು ಕೇಳಿತು. ಆಶ್ಚರ್ಯವೆಂದರೆ ಈ ಪ್ರಶ್ನೆಗೆ ಯಾರೂ ನಗಲಿಲ್ಲ. ಇದಕ್ಕೂ ಗಿರಿಜಾ ಗಂಭೀರವಾಗಿಯೇ ಉತ್ತರ ಕೊಟ್ಟಳು.

ನಾಟಕ ಸುರುವಾಗೋತನಕ ಗಿರಿಜಾ ಒಂದಿಲ್ಲೊಂದು ಇಂಥ ಸಂಗತಿ ಹೇಳುತ್ತಲೇ ಇದ್ದಳು. ಉಳಿದವರು ಕೇಳುತ್ತಲೇ ಇದ್ದರು. ಹೇಳಿ ಅವಳು ದಣಿಯಲಿಲ್ಲ, ಕೇಳಿ ಅವು ದಣಿಯಲಿಲ್ಲ. ಇಂಥ ಹರಿಕಥೆಗಳು ಪ್ರೇಕ್ಷಕರಲ್ಲಿ ಅಲ್ಲಲ್ಲಿ ನಡೆಯುತ್ತಲೇ ಇದ್ದವು. ಗೌಡನ ಮನೇ ಮುಂದೆ ಬಯಲಾಟವಾಗಲೇ ಸುರುವಾಗಿತ್ತು.

ಇವರ ನಾಟಕ ಸುರುವಾಯ್ತು. ಪ್ರಾರಂಭಕ್ಕೆ ಗುಡಸೀಕರ ರಂಗದ ಮೇಲೆ ಬಂದು ನಾಟಕ ಕಲೆಯ ಬಗ್ಗೆ ಒಂದು ಉಪನ್ಯಾಸ ಬಿಗಿದ. ಯಾರಿಗೂ ಭಾಷಣ ತಿಳಿಯಲಿಲ್ಲ. ಆದರೆ ಯಾರೂ ಗದ್ದಲ ಮಾಡಲಿಲ್ಲ. ಭಾಷಣದ ಅಂತ್ಯಕ್ಕೆ ಪಾಪಮಾಸ್ತರ ಬಂದು ಅವನಿಗೊಂದು ಮಾಲೆ ಹಾಕಿ "ನಮ್ಮ ಊರಿನಲ್ಲಿ ಗುಡಸೀಕರ ಜಗತ್ಪ್ರಸಿದ್ಧರಾಗಿದ್ದಾರೆ" ಎಂಬಂಥ ಏನೇನೋ ಒದರಿದ. ಗುಡಸೀಕರ ಹೋಗಿ ಪ್ರೇಕ್ಷಕರಲ್ಲಿ ತನಗಾಗಿ ಹಾಕಿದ್ದ, ಸಾಲೆಯಿಂದ ತಂದಿರಿಸಿದ್ದ, ನಾಲ್ಕೂ ಕಾಲು ಸರಿಯಾಗಿದ್ದ ಕುರ್ಚೆಯಲ್ಲಿ ಠೀವಿಯಿಂದ ಕೂತ. ಪರದೆ ಎದ್ದಿತು.

ಪಾರ್ವತಿ ಪರಮೇಶ್ವರರ ಸಭೆಯಿಂದ ನಾಟಕ ಸುರುವಾಯಿತು. ಲೋಕದ ತಂದೆತಾಯಿಗಳಾದ ಅವರು ಜಗತ್‌ಕಲ್ಯಾಣ ಮರೆತು ಸರಸದಲ್ಲಿ ತೊಡಗಿದ್ದಾಗ ನಾರದನ ಪ್ರವೇಶವಾಗಬೇಕು. ಅವನ ಪ್ರವೇಶ ಹಳ್ಳಿಯ ಮಂದಿಗೆ ಅಕ್ಷರಶಃ ರೋಮಾಂಚವೆಬ್ಬಿಸಿತು. ಜೋತುಬಿದ್ದ ಹಗ್ಗದ ತುದಿಯ ಕುಣಿಕೆಯಲ್ಲಿ ಕಾಲೂರಿ ನಾರದ ಉರ್ಫ್ ಮೆರೆಮಿಂಡ ನಾರಾಯಣನ ನಾಮಸ್ಮರಣೆ ಮಾಡುತ್ತ ಎಡಗೈಯಲ್ಲಿ ಭದ್ರವಾಗಿ ಹಗ್ಗ ಹಿಡಿದುಕೊಂಡು ಬಲಗೈಯಲ್ಲಿ ತಂಬೂರಿ ಹಿಡಿದುಕೊಂಡು ರಂಗದ ಮೇಲ್ಭಾಗದಿಂದ ಮಧ್ಯ ರಂಗದವರೆಗೆ ಇಳಿದ. ಭಾವುಕ ಮಂದಿಗೆ ನಾರದ ಆಕಾಶದಿಂದ ಅವತರಿಸುತ್ತಿರುವನೋ ಏನೋ ಎಂಬಂತಾಯ್ತು. ಬೆಕ್ಕಸ ಬೆರಗಾಗಿ ಬಾಯಲ್ಲಿ ಗುಂಗಾಡು ಹೊಕ್ಕು ಹೊರಬಂದರೂ ಖಬರಿಲ್ಲದಂತೆ ಕೂತರು.

ನಾರದ ಮಹರ್ಷಿ "ಎಲ್ಲೈ ಜಗನ್ನಿಯಾಮಾಕನಾದ ಪರಮಾತ್ಮನೇ" ಎನ್ನುತ್ತ ಜಿಗಿಯಬೇಕು. ಹಾಗೆ ಜಿಗಿಯಹೋದರೆ ಕುಣಿಕೆ ಬಿಗಿಯಾಗಿ ಕಾಲು ಹೊರಬರಲೇ ಇಲ್ಲ! ಜೋಲಿ ತಪ್ಪಿದ ಮಹರ್ಷಿ ಕೈಬಿಟ್ಟ. ಸುದೈವಕ್ಕೆ ಕಾಲ ಕುಣಿಕೆ ಹಾಗೇ ಬಿಗಿಯಾಗೇ ಇದ್ದುದರಿಂದ ನೆಲಕ್ಕೆ ಅಪ್ಪಳಿಸಲಿಲ್ಲ. ನಾರದನ ಕಾಲು ಕುಣಿಕೆಯಲ್ಲಿ ಸಿಕ್ಕು ಕೆಳಕ್ಕೂ ಬೀಳದೆ, ನಿಲ್ಲಲಿಕೂ ಆಗದೆ ತಲೆಕೆಳಗಾಗಿ ತೂಗಾಡತೊಡಗಿದ! ಜನ ಹೋ ಎಂದು ನಗತೊಡಗಿದರು. ಕೆಲವರು ಇದೂ ನಾಟಕವೇ ಇರಬಹುದೆಂದು ಸ್ವಲ್ಪ ಹೊತ್ತು ಸುಮ್ಮನಿದ್ದರು. ಆದರೆ ನಾರದನ ಚಡಪಡಿಕೆ ನೋಡಿ ಅವರಿಗೂ ಅರ್ಥವಾಯಿತು. ಗುಡಸೀಕರ ಎದ್ದು "ಪರದೇ ಬಿಡೋ" ಎಂದು ಕೂಗಿದ. ಶಿವ ಗಾಬರಿಯಾಗಿ ಒಳಗೋಡಿದ. ಗುಡಸೀಕರ ಮತ್ತೆ ಕೂಗಿದ. ಪಾಪ ಪಾರ್ವತಿಗೆ ಕೂಗಾಡುವ ಜನರನ್ನು ತೂಗಾಡುವ ನಾರದನನ್ನು ಹೇಗೆ ಎದುರಿಸಬೇಕೆಂದು ತಿಳಿಯದೆ ತಾನು ಬಾಯಿಪಾಠ ಮಾಡಿದ್ದ ಹಾಡನ್ನು ಅಭಿನಯಸಮೇತ ಕೀರಲು ದನಿಯಲ್ಲಿ ಒದರುತ್ತ, ಸೊಂಟದ ಮೇಲೆ ಎರಡೂ ಕೈ ಊರಿ ಕುಣಿಯತೊಡಗಿದ. ಜನಕ್ಕೆ ನಗೆಯಿಂದ ಹುಚ್ಚು ಹತ್ತುವುದೊಂದು ಬಾಕಿ. ತೂಗಾಡುವ ನಾರದನನ್ನು ನೋಡುವುದೇ? ಕುಣಿಯುವ ಪಾರ್ವತಿಯನ್ನು ನೋಡುವುದೇ? ಕಿರುಚಾಡುವ ಗುಡಸೀಕರನನ್ನು ನೋಡುವುದೇ? ಕೊನೆಗೆ ಗುಡಸೀಕರ ಎದ್ದು ಒಳಗೆ ಹೋದ.

ಒಳಗಿದ್ದ ಕಳ್ಳ ರಾವಣನಿಗಾಗಲೇ ನೆತ್ತಿಗೇರುವಷ್ಟು ನಶೆಯೇರಿತ್ತು. ರಂಗದ ಮೇಲೆ ಆಗಲೇ ಆಂಜನೇಯ ಬಂದು ತೂರಾಡುತ್ತಿದ್ದಾನೆಂದು ಭಾವಿಸಿ ಓಡಿಬಂದು "ಎಲವೆಲವೋ ದುಷ್ಟ ಕಪಿಯೇ" ಎಂದು ನಿಲ್ಲಲಾರದೆ ಜೋಲಿ ತಡೆಯಲಾರದೆ ಗದೆ ಎತ್ತಿ ತೂಗುವ ನಾರದನನ್ನು ಹೊಡೆಯಹೋಗಿ ಕರೆಂಟಿನ ಪೆಟ್ಟಿಗೆಗೆ ಜೋರಿನಿಂದ ಅಪ್ಪಳಿಸಿದ. ಕರೆಂಟು ಹೋಗಿ ವಿದ್ಯುದ್ದೀಪಗಳೆಲ್ಲಾ ಆರಿಹೋಗಿ ಜನ ಹೋ ಎಂದು ಎದ್ದುಬಿಟ್ಟರು. ಮಕ್ಕಳು, ಹೆಂಗಸರು ಕಿರುಚಾಡತೊಡಗಿದರು. ಜನಕ್ಕೆ ಈಗ ಪಾರಿಜಾತದ ನೆನಪಾಯಿತು. ಸ್ವಲ್ಪ ಹೊತ್ತು ಸುಧಾರಿಸಿಕೊಂಡಿದ್ದು ಆ ಕಡೆ ನುಗ್ಗಿದರು.

ಎಲ್ಲ ಎದ್ದುಹೋದರು, ರಂಗಭೂಮಿ ಸ್ತಬ್ಧವಾಗಿತ್ತು. ಗುಡಸೀಕರ ಬ್ಯಾಟ್ರಿ ಹಿಸುಕಿ ಎಲ್ಲರನ್ನೂ ಹೆಸರುಕೊಂಡು ಕರೆಯುತ್ತ ಹುಡುಕಿದ. ಪರದೆಯ ಹಿಂದೆ ಕಳ್ಳ ಮೂಲೆಯಲ್ಲಿ ಕಾಲೆತ್ತೋ, ಕೈಯೆತ್ತೋ ಬೇಹೋಶ್ ಆಗಿ ಒಣಗು ಹಾಕಿದ ಬಟ್ಟೆಯ ಹಾಗೆ ಬಿದ್ದುಬಿಟ್ಟಿದ್ದ. ಹೋಗಿ ಎಬ್ಬಿಸಿ ನೋಡಿದ. ನಶೆಯೇರಿದ್ದು ಸ್ಪಷ್ಟವಾಯಿತು. ಸಮೀಪದಲ್ಲಿ ಸೀತೆ ಮುರಿದ ಗೊಂಬೆಯ ಹಾಗೆ ಬಿದ್ದುಬಿಟ್ಟಿದ್ದಳು. ಉಳಿದವರೆಲ್ಲ ಫರಾರಿ. ಹಾಗೇ ನೋಡುತ್ತ ಬಂದಾಗ ಚಿಮಣಾ ಪಿಳಿಪಿಳಿ ಕಣ್ಣು ಬಿಡುತ್ತ ಸಂಕುಚಿತವಾಗಿ ಉಡುಗಿದ್ದಳು. ಕೋಪ ತಾಪ, ನಿರಾಸೆಗಳಿಂದ ಮೊದಲೇ ಸುಡುತ್ತಿದ್ದವನಲ್ಲಿ ಸೊಂಟದ ಬೆಂಕಿ ಭುಗಿಲ್ಲೆಂದು ಹೊತ್ತಿಕೊಂಡು ಉರಿಯಿತು. ತನಗೇ ಗೊತ್ತಲ್ಲದಂತೆ ಹೋಗಿ ಅವಳನ್ನು ತಬ್ಬಿಕೊಂಡ.

ನಿಂಗೂ ಚಲೋದಾಗಿ ಸೇಡು ತೀರಿಸಿಕೊಂಡಿದ್ದ. ಮುಟ್ಟಿ ನೋಡಿಕೊಳ್ಳುವ ಹಾಗೆ ಬರೆ ಎಳೆದಿದ್ದ. ತಿಂದರೆ ತುಟಿ ಕೆಂಪಗಾಗುತ್ತವೆಂದು ಪುಸಲಾಯಿಸಿ ರಾವಣ ಉರ್ಫ್ ಕಳ್ಳನಿಗೂ ಸೀತೆ ಉರ್ಫ್ ರಮೇಸನಿಗೂ ಎಲಡಿಕೆ ಮಡಚಿ ಕೊಟ್ಟಿದ್ದ. ಅದರಲ್ಲಿ ಮತ್ತುಬರುವ ಗಿಡಮೂಲಿಕೆ ಇಟ್ಟಿದ್ದ. ಗುಡಸೀಕರನ ಭಾಷಣ ಮುಗಿಯೋ ಹೊತ್ತಗೆ ರಾವಣನ ತಲೆತಿರುಗಿ ಎದುರು ನಿಂತವರು ಎರಡೆರಡಾಗಿ ಕಾಣತೊಡಗಿದರು. ಜಗಿಯುತ್ತ ತುಟಿ ಸವರಿಕೊಳ್ಳುತ್ತ ಮೂಲೆಗೊರಗಿದ್ದ ಸೀತೆ ಮೇಲೇಳಲೇ ಇಲ್ಲ. ಕಳ್ಳನಿಗೆ ಜೊಂಪು ಕೂಡ ಹತ್ತಿತ್ತು. ಅಷ್ಟರಲ್ಲಿ ಜನರ ಹಾಹಾಕಾರ ಕೇಳಿಸಿ ಎಚ್ಚೆತ್ತು ನೋಡಿದ. ನಾರದ ತೂಗಾಡುತ್ತಿದ್ದನಲ್ಲಾ, ಓಹೋ ಹನುಮಂತನ ಪ್ರವೇಶವಾಗಿದೆಯೆಂದು ಭಾವಿಸಿ ಓಡಿಹೋದ. ಹೊಡೆಯುವುದಕ್ಕೆ ಹೋಗಿ ನಾರದನ ಬದಲು ಕರಂಟ್ ಡಬ್ಬಿಗೆ ಹೊಡೆದ. ಮುಂದಿನ ಕಥೆ ನಿಮಗೆ ಗೊತ್ತೇ ಇದೆ. ಕತ್ತಲಲ್ಲಿ ಜನರ ಹಾಹೋ ನಡೆದು ನಟರು ಗಾಬರಿಯಿಂದ ಬೆದರಿದ ಕುರಿಗಳಂತೆ ದಿಕ್ಕುಪಾಲಾಗಿ ಸತ್ತೆವೋ ಬದುಕಿದೆವೋ ಎಂದು ಓಡಿಹೋದರು.

ಆದರೆ ಯಾರಿಂದ ಹೀಗಾಯಿತೆಂದು ಕೊನೆಯ ತನಕ ಯಾರಿಗೂ ತಿಳಿಯಲೇ ಇಲ್ಲ. ತನಗೆ ಯಾರೋ ಮದ್ದು ಮಾಟ ಮಾಡಿರಬೇಕೆಂದು ಕಳ್ಳ ನಂಬಿದರೆ, ತನಗೆ ದೃಷ್ಟಿಯಾಗಿ ಹೀಗಾಯಿತೆಂದು ಸೀತೆ ನಂಬಿದ. ಕರಿಮಾಯಿಯಿಂದಲೇ ಹೀಗಾಯಿತೆಂದು ಜನ ನಂಬಿದರು. ಯಾಕೆಂದರೆ ಇದು ವಿನಾಕಾರಣ ನಂಬಿಕೆಯಲ್ಲ.

ಇಲ್ಲಿ ಗುಡಸೀಕರ ನಾಟಕ ನಡೆದಿದ್ದರೆ ಗೌಡನ ಮನೆಯ ಮುಂದೆ ಪಾರಿಜಾತ ನಡೆದಿತ್ತಲ್ಲವೆ? ದೇವರೇಸಿ ಅಲ್ಲೇ ಕೂತು ಆಟ ನೋಡುತ್ತಿದ್ದ. ಸರಿಸುಮಾರು ಇಲ್ಲಿ ನಾರದ ತೂಗಾಡುತ್ತಿದ್ದಾಗ ಅಲ್ಲಿ ದೇವರೇಸಿ ಒಂದೆರಡು ಸಲ ಬಿಕ್ಕಿದನಂತೆ. ಇಲ್ಲಿ ತಾಯಿ ಬಿಕ್ಕುವುದಕ್ಕೂ ಅಲ್ಲಿ ಕರೆಂಟು ಹೋಗುವುದಕ್ಕೂ ಸಮವಾಯಿತು. ತಾಯಿ ಇಲ್ಲೀತನಕ ಹರಿಯುವ ನೀರು ತರುಬಿದ್ದಳು. ಬಿಳಿ ಮೋಡದಿಂದ ಮಳೆ ಬರಿಸಿದ್ದಳು. ಆದರೆ ವಿದ್ಯುದ್ದೀಪ ಕಳೆಯಬಲ್ಲಳೆಂದು ಯಾರಿಗೂ ತಿಳಿದಿರಲಿಲ್ಲ. ಮಾರನೇ ದಿನವೇನೋ ಕಾರಾರು ರೀತ್ಯ ಗುಡಸೀಕರ ವಿದ್ಯುದ್ದೀಪದವನಿಗೆ ಹಣಕೊಟ್ಟು ಕಳಿಸಿದ್ದ. ಆದರೆ ಅವನ ಕಣ್ಣು ಹೋದವೆಂದೂ, ಅವನು ಅಳುತ್ತ ಇನ್ನೊಬ್ಬರ ಕೈಹಿಡಿದುಕೊಂಡು ಹೊದನೆಂದೂ ಸುದ್ದಿ ಅಥವಾ ನಂಬಿಕೆ ಹಬ್ಬಿತು. ಹೆಚ್ಚೇನು, ಗೌಡ, ದತ್ತಪ್ಪ ಕೂಡ ಇದನ್ನು ನಂಬಿದರು.

ಈ ನಂಬಿಕೆಗಳಿಂದ ಚತುಷ್ಟಯರೂ ಅಧೀರರಾದರು. ಆದರೆ ಗುಡಸೀಕರ ಮಾತ್ರ ಎಳ್ಳಕಾಳು ಮುಳ್ಳಮೊನೆಯಷ್ಟೂ ವಿಚಲಿತನಾಗಲಿಲ್ಲ. ಚಿಮಣಾಳ ಸಂಗಸುಖದಲ್ಲಿ ಹುಡುಗ ಒಳಗೊಳಗೇ ಆಳದಲ್ಲಿ ಆಳ್ಳಕಾಗಿದ್ದ. ನಾಟಕ ಕೆಟ್ಟುದಕ್ಕೆ ಕಾರಣ ಕೆದರಿ ತಿಳಿಯುವ ಗೋಜಿಗೆ ಅವ ಹೋಗಲೇ ಇಲ್ಲ.

ನಾಟಕವಾದ ಎರಡು ಮೂರು ದಿನ ಊರಿನ ಮನಸ್ಸು ಕದಡಿಬಿಟ್ಟಿತ್ತು. ಊರ ಬಾಯೊಳಗೆಲ್ಲ ಕರಿಮಾಯಿಯ ಸುದ್ದಿಯೇ. ಚಿಮಣಾಳ ಸುದ್ದಿಯೇ. ನಾಟಕದ ಸುದ್ದಿಯೇ. ಗುಡಸೀಕರ ಈಗ ಗೌಡನ ಎದುರಾಳಿಯಾಗಿದ್ದ. ಗೌಡ ತಾನೇ ಮುಂದಾಗಿ ಪಂಚಾಯ್ತಿ ಕೊಟ್ಟದ್ದನ್ನು, ಈತ ಎಲ್‌ಎಲ್‌ಬಿ ಪಾಸಾದಾಗ ಸಕ್ಕರೆ ಹಂಚಿದ್ದನ್ನು ಜನ ಸ್ಮರಿಸಿದರು. ಆದರೆ ಹುಡುಗಿಯರ ಕಲ್ಪನೆಗಳಿಗೆ ರೆಕ್ಕೆ ಮೂಡಿ ಸಿಕ್ಕಾಪಟ್ಟೆ ಹಾರಾಡಲು ಇರೋ ಮುಗಿಲು ಸಾಲದೆನಿಸಿ, ಹಳೇ ಮುದುಕಿಯರು ಕಾಶಿ ಕೈಲಾಸದ ಕನಸು ಕಂಡಂತೆ ಇವರು ಬೆಳಗಾವಿಯ ಕನಸು ಕಾಣತೊಡಗಿದರು.

ಈಗ ಊರಲ್ಲಿ ಚಿಮಣಾ ಇದ್ದಳು. ಇವಳೊಂದಿಗೆ, ಅವಳ ಜೊತೆ ಬಂದಿದ್ದ ಇನ್ನೊಬ್ಬ ನಮ್ಮ ಕಥೆಯಲ್ಲಿ ಕಾಲಿರಿಸಿದ. ಅವನೇ ಬಸವರಾಜು. ಗುಡಸೀಕರ ಮತ್ತೆ ಚೇತರಿಸಿಕೊಂಡ. ಚತುಷ್ಟಯರನ್ನು ಕರೆಸಿದ. ಅವರೋ ನಾಟಕ ತನ್ನಿಂದಲೇ ಕೆಟ್ಟಿತೆಂದು ಪ್ರತಿಯೊಬ್ಬನೂ ಒಳಗೊಳಗೇ ಹುಳುಹುಳು ಮಾಡುತ್ತಿದ್ದ. ಈ ಮೂರು ದಿನವೆಲ್ಲ ಅವರು ತಮ್ಮ ಮೇಲಿನ ತಪ್ಪು ಜಾರುವಂಥ ನೆಪ ಸೃಷ್ಟಿಸುವುದರಲ್ಲೇ ಕಾಲ ಕಳೆದಿದ್ದರು. ಕರೆಸಿದ್ದಕ್ಕೆ ಅಂಜುತ್ತ ಹೋದರೆ ಆಶ್ಚರ್ಯ ಕಾದಿತ್ತು. ಗುಡಸೀಕರ ನಾಟಕದ ಸುದ್ದಿ ಎತ್ತಲೇ ಇಲ್ಲ.

“ಯಾಕ್ರೋ? ಚಾದಂಗಡಿ ವಿಚಾರ ಮರತಬಿಟ್ಟಿರೇನ್ರೋ? ಹೋಗ್ರಿ, ಹೋಗ್ರಿ, ಊರ ಹೊರಗ ಹೊಲಗೇರಿ ಹಂತ್ಯಾಕ ನಮ್ಮ ಜಾಗಾ ಐತೆಲ್ಲ, ಅಲ್ಲೊಂದು ಗುಡಸಲಾ ಹಾಕ್ರಿ, ನಾಳಿ ಚೆಲೋ ದಿನ ಐತಿ. ಸುರುಮಾಡೋಣು, ನಡೀರಿ.”

# ಉದ್ಯೋಗಪರ್ವ

ಮಾರನೇ ದಿನ ದತ್ತಪ್ಪ, ಕೈಮಾರು ಹೊತ್ತೇರಿರಬೇಕು, ಗುಡಸೀಕರನ ಮನೆಗೆ ಬಿಜಯಂಗೈದ. ಗುಡಸೀಕರ ಮಹಡಿಯ ಮೇಲೆ ಕೂತು ದನಿಮಾಡಿ ಇಂಗ್ಲಿಷ್ ಓದುತ್ತಿದ್ದ. ಅವನ ತಾಯಿಗೂ ತಂಗಿಗೂ ಆಶ್ಚರ್ಯವಾಯಿತು; ದತ್ತಪ್ಪ ತಮ್ಮ ಮನೆತನಕ ಬರುವುದೆಂದರೇನು? ಗಿರಿಜ ಮಹಡಿ ಹತ್ತಿ ದತ್ತಪ್ಪ ಬಂದುದನ್ನು ತಿಳಿಸಿಬಂದಳು. ಒಳಗಿನಿಂದ ಗೌರವ್ವ ಸಂಭ್ರಮದಿಂದ ಮುದುಕಿ ಹೊರಗೆ ಬಂದಳು. "ಬರ್ರಿ ಬರ್ರೀಯೆಪ" ಎನ್ನುತ್ತ ಜಮಖಾನ ಹಾಸಿದಳು. ದತ್ತಪ್ಪ "ಹೂಂ ಮಗಳು ವಯಸ್ಸಿಗಿ ಬಂದಾಳ; ಚೆಲೋ ವರ ನೋಡಿ ಕೊಡಬೇಕಿಲ್ಲೊ" ಎನ್ನುತ್ತ ಕೂತ. ಗಿರಿಜಾ ನಾಚಿ ಒಳಗೋಡಿದಳು. "ನೀವs ನೋಡಿ ಅದರದ್ದೊಂದ ಮದವೀ ಮಾಡಿಬಿಡಿರಿ" ಎಂದು ಮುದುಕಿ ಹೇಳುತ್ತಿದ್ದಂತೆ ಗುಡಸೀಕರ ಕೆಳಗಿಳಿದು ಬಂದ! ತಾಯಿ ಒಳಗೆ ಹೋದಳು.

"ಏನು? ದತ್ತಪ್ಪನವರು ಮನೀತನಕ ಬಂದಿರಿ?" ಎನ್ನುತ್ತ ಗಡಂಚೆಯ ಮೇಲೆ ಕೂತ. ದತ್ತಪ್ಪ ಬಂದುದಕ್ಕೆ ತಾಯಿ, ತಂಗಿ ಸಡಗರ ಮಾಡಿದ್ದು ಸರಿಬರಲಿಲ್ಲ. ಹಾಗೆಂದು ಬಾಯಿಬಿಟ್ಟು ಹೇಳಲಾರ. ಆದರೆ ಆತ ಬಂದುದಕ್ಕೆ ಏನೋ ಮಹತ್ವದ ಕಾರಣ ಇರಬೇಕೆಂದು ಊಹಿಸಿದ. ಬಹುಶಃ ನಿನ್ನೆ ನಾಯೆಲ್ಯಾ ಸೆರೆಕುಡಿದು ಸುಟ್ಟುಕೊಂಡು ಸತ್ತದ್ದು, ಇದಕ್ಕೆಲ್ಲ ತಾನೇ ಹೊಣೆಯೆಂದು, ಆ ತಪ್ಪನ್ನೆಲ್ಲ ತನ್ನ ಮೇಲೆ ಹೊರಿಸಲು ಬಂದಿರಬಹುದೆಂದುಕೊಂಡ. ಸ್ವಲ್ಪ ಅಧೀರನೂ ಆದ. ಜಾರಿಕೊಳ್ಳಲು ಕೊಡಬೇಕಾದ ಜವಾಬುಗಳನ್ನೆಲ್ಲ ತಯಾರು ಮಾಡಿಕೊಂಡ. ಹ್ಯಾಗೆ ಸುರುಮಾಡೋದು ಎಂದು ದತ್ತಪ್ಪ ಕೂತ. ಈ ಹುಡುಗ ತಮ್ಮ ಪೈಕಿ ಅಲ್ಲ ಅನ್ನಿಸಿತು. ಹಾಗೆ ಎಷ್ಟಂತ ಕೂರುತ್ತಾನೆ?

"ತಮ್ಮಾ, ನಿನ್ನ ಜೊತೆ ಒಂದಷ್ಟು ಮಾತಾಡೋದಿತ್ತಲ್ಲ"

"ಅದೇನ ಇಲ್ಲೇ ಆಗಲೆಲ್ಲ."

"ನೋಡಪಾ, ನಾವೆಲ್ಲಾ ಹಿರೇರು ಕೂಡಿ ಪಂಚಾಯ್ತಿ ಮಾಡಿಕೊ ಅಂತ ನಿನ್ನ ಕೈಯಾಗ ಕೊಟ್ಟಿವಿ. ಊರಿಗೇನಾರ ಹಿತ ಮಾಡ್ತಿ ಅಂತಂದ್ವಿ. ಅದೇನೋ ಆಗಲಿಲ್ಲ. ಊರವರೆಲ್ಲಾ ತಿರುಗಿ ನೀವs ತಗೊಳ್ರಿ ಅಂತ ನಮಗ ಹೇಳಾಕ ಹತ್ಯಾರ. ಅದಕ್ಕ ನೀನs ಮುಂದಾಗಿ ಕೊಟ್ಟುಬಿಡು."

ಗುಡಸೀಕರ ಇದನ್ನು ನಿರೀಕ್ಷಿಸಿರಲಿಲ್ಲ. ಈಗ ಸರಿಯಾಗಿ ಉತ್ತರ ಕೊಡದಿದ್ದರೆ ತಾನು ಸೋತಂತೆ

"ನೋಡ್ರಿ, ಬೇಕಾದಾಗ ಕೊಡಾಕ, ಬ್ಯಾಡಾದಾಗ ತಗೊಳ್ಳಾಕ ಪಂಚಾಯ್ತಿಯೇನೂ ನಿಮ್ಮ ಮನಿ ಆಸ್ತಿ ಅಲ್ಲ, ಅದು ಊರುಗಾರಿಕೆ ವಿಷಯ. ಪಂಚಾಯ್ತಿ ಜಾರಿಗೆ ಬರಬೇಕಾದರೂ ಒಂದಷ್ಟು ನೇಮ ಅದಾವ, ಕಾಯ್ದೆ ಕಾನೂನು ಅದಾವ. ಅದರ ಪ್ರಕಾರ ಆಗೇತಿ. ಈಗ ತತಾ ಅಂದರ ಎಲ್ಲಿಂದ ಕೊಡೋಣು? ಇನ್ನ ಆರೆಂಟ ತಿಂಗಳಿಗಿ ಇಲೆಕ್ಷನ್ ಬರತೈತಿ. ನೀವೂ ನಿಂತಕೊಳ್ರಿ, ನಾವೂ ನಿಂತಕೋತೀವಿ."

"ಖರೆ" – ಅಂದ ದತ್ತಪ್ಪ.

"- ನನ್ನ ಮನಿ ಆಸ್ತಿ ಅಲ್ಲ, ನಿನ್ನ ಮನೀದು ಅಲ್ಲ. ಕಾಯ್ದೆ ಕಾನೂನಂದಿ; ಅದ್ಯಾವ ಕಾಯ್ದೆ ಕಾನೂನಿಲ್ಲದs ನಿನ್ನ ಕೈಗೆ ಕೊಟ್ಟಿವಿ. ಆಗ್ಯಾಕ ನಿನಗ ಕಾಯ್ದೆ ಕಾನೂನ ನೆನಪಾಗಲಿಲ್ಲಪಾ?"

ದತ್ತಪ್ಪನ ಅಕ್ರಮವಾದಕ್ಕೆ ಎದುರುತ್ತರ ಕೊಡುವುದು ಕಷ್ಟವೇ.

"ಊರವರೆಲ್ಲಾ ಕೂಡಿ ಕೊಟ್ಟಿರಿ; ಅದಕ್ಕ ಅದು ಕಾಯ್ದೆಶೀರ ಆತು. ಇಗ ನೀವೊಬ್ಬರs ಕೇಳಾಕ ಬಂದಿರಲ್ಲಾ. ಅದಕ್ಕ ಕಾಯ್ದೆ ನೆನಪಾತು."

“ಹಂಗಾದರ ಈಗೂ ಊರಮಂದೀನೆಲ್ಲಾ ಕೂಡಿಸಿ ಈ ಮಾತು ಹೇಳಸಂತೀಯೇನು?” ದತ್ತಪ್ಪನಿಗಿದು ಅಸಾಧ್ಯವಿಲ್ಲ. ಊರ ಮಂದಿ ಕೂಡಿ ಒತ್ತಾಯ ಮಾಡಿದರೆ ತಾನು ಹಿಂದೆ ಸರಿಯಲೇಬೇಕಾಗಬಹುದು. ಅಲ್ಲದೆ ಊರಿನಲ್ಲಿ ತನ್ನ ಬೆನ್ನಕಟ್ಟುವ ಜನ ಆ ನಾಲ್ಕು ಜನ ಮೆಂಬರರನ್ನು ಬಿಟ್ಟರೆ ಯಾರೂ ಇರಲಿಲ್ಲವೆನ್ನುವುದು ಅವನಿಗೆ ಗೊತ್ತು. ಅದೆಲ್ಲಿಂದ ಈ ಪೀಡೆ ಗಂಟುಬಿತ್ರೋ ಎಂದುಕೊಂಡ.

“ನೋಡ್ರಿ, ನಿಮಗ್ಯಾಕ ಪಂಚಾಯ್ತಿ ಮ್ಯಾಲ ಕಣ್ಣು ಬಿದ್ದಾವಂತ ಗೊತ್ತಾಗೇತಿ. ಮೊದಲು ಪಂಚಾಯಿತಿ ಬಂದಾಗ ಅದೇನಂತ ನಿಮಗ ಗೊತ್ತಿರಲಿಲ್ಲ. ಬಿಟ್ಟಕೊಟ್ಟಿರಿ. ಈಗ ನಾವಷ್ಟು ಊರಾಗ ಮುಂದ ಬರಾಕ ಹತ್ತಿದೇವಲ್ಲ. ಅದಕ್ಕ ಹೊಟ್ಟೇಕಿಚ್ಚ ಸುರುವಾಗೇತಿ. ನಮಗಿದೆಲ್ಲಾ ತಿಳಿಯೋದಿಲ್ಲವೆನ್ನ ಬ್ಯಾಡ್ರಿ.”

ಹುಡುಗನ ಭ್ರಮ ಕೇಳಿ ದತ್ತಪ್ಪ ಮನಸ್ಸಿನಲ್ಲಿ ಬಾಯಮೇಲೆ ಬೆರಳಿಟ್ಟುಕೊಂಡು ಭಲೇ ಅಂದ.

“ಹೌಂದಪಾ, ನೀ ಮುಂದ ಹೊಂಟೇದಿ, ನಾವು ಹಿಂದ ಉಳದೀವಿ. ನಾವಷ್ಟ ಮುಂದ ಬರಾಕ ನಮ್ಮ ಕೈಗಿ ಪಂಚಾಯ್ತಿ ಕೊಡತೀಯೇನು?”

ಮಾತಿನ ವ್ಯಂಗ್ಯವನ್ನು ತಂತಾನೇ ಸಂತೋಷಿಸುತ್ತ ಕೇಳಿದ ದತ್ತಪ್ಪ. ಇನ್ನೂ ಏನೇನು ಹೇಳುತ್ತಿದ್ದನೋ, ಅಷ್ಟರಲ್ಲಿ ಗುಡಸೀಕರ ಭಾರೀ ಜಗಳವಾದಂತೆ – ಏರುದನಿಯಲ್ಲಿ ಅವನ ಮಾತನ್ನು ಕತ್ತರಿಸಿದ –

’ಅದೆಂಗರಿ? ಹೇಳಲಿಲ್ಲಾ ಇಲೆಕ್ಷನ್ ಬರಲೆಂತ? ಆಳಬೇಕಂತ ಹೇಳಿ ಊರಗಾರಿಕಿ ಗುತ್ತಿಗಿ ತಗೊಂಡಿದಿರೇನು? ಇಷ್ಟ ದಿನ ಆಳಿದಿರಿ, ಸಾಕಾಗಲಿಲ್ಲ? ಇನ್ನ ಹೊಸಬರಿಗಷ್ಟ ಚಾನ್ಸ್ ಕೊಡರಿ.”

“ಚಾನ್ಸ್ ಕೊಟ್ಟೇವಲ್ಲಪಾ, ಕೊಟ್ಟಿದ್ದಕ್ಕ ಊರಿಗೇನ ಹಿತ ಮಾಡಿದಿ?”

“ಇಷ್ಟ ದಿನ ಹೇತ ರಟ್ಟ ಮಾಡೀರಿ. ಅದನ್ನ ತೊಳ್ಯಾಕ ಒಂದಷ್ಟ ದಿನ ಬ್ಯಾಡ?” ಗುಡಸೀಕರನ ಏರುದನಿ ಕೇಳಿ ಜಗಳವಾಡುತ್ತಿದ್ದಾರೆಂದು ಅವನ ತಾಯಿ ಒಳಗಿನಿಂದ ಬಂದಳು. ಗಿರಿಜಾ ದೂರ ನಿಂತು ಕೇಳುತ್ತಿದ್ದಳು. ಆಸುಪಾಸು ಹಾದುಹೋಗುತ್ತಿದ್ದವರು ಹೊರಬಾಗಿಲಲ್ಲಿ ನಿಂತು ಇದೇನೆಂದು ಕೇಳುತ್ತಿದ್ದರು. ಗುಡಸೀಕರನಿಗೆ ಭಂಡ ಧೈರ್ಯ ಬಂತು. ಬಾಯಿಗೆ ಬಂದ ಹಾಗೆ ಮಾತಾಡತೊಡಗಿದ. ಹೊರಗೆ ನಿಂತ ಒಬ್ಬ ಹುಡುಗನಿಗೆ ಪಂಚಾಯ್ತಿ ಮೆಂಬರರನ್ನು ಕರೆತರಲಿಕ್ಕೆ ಹೇಳಿದ. ತಾನು ಊರಿಗೆ ಎಷ್ಟೆಲ್ಲ ಹಿತ ಮಾಡಬೇಕೆಂದರೂ ಹಳೇ ಹದ್ದುಗಳು ಅಡ್ಡಿಬರುತ್ತವೆಯೆಂದ; ಈ ಊರಾಗಲೇ ಬೆಳಗಾವಿಯಾಗಿರುತ್ತಿತ್ತು – ಎಂದ. ಪೋಜುದಾರನ ಎದುರಿಗೆ ಅವಮಾನ ಮಾಡಿದ್ದಕ್ಕೆ ಅಂದ. ಹೀಗೆ ಬಿಟ್ಟೂ ಬಿಡದೆ ಮಾತಾಡುವುದಕ್ಕೆ ಕಾರಣ ಹೀಗೇ ಚತುಷ್ಟಯರು ಬರುವ ತನಕ ನಡೆಸಿ ಅವರು ಬಂದರೋ ತಲೆಗೊಬ್ಬ ಒಂದೊಂದು ಮಾತಾಡಿದರೂ ದತ್ತಪ್ಪನ ಬಾಯಿ ಕಟ್ಟಿಹೋಗುತ್ತದೆ – ಎಂದು ಹೊಂಚಿದ್ದ.

ಅವನೆಂದುಕೊಂಡಿದ್ದಂತೆ ಚತುಷ್ಟಯರೂ ಬಂದರು. ಮನೇ ಮುಂದೆ ಆಗಲೇ ಹಿಂಡು ಜನ ಸೇರಿದ್ದರು. ಏನು ಯಾಕೆ – ಯಾರಿಗೂ ತಿಳಿಯುತ್ತಿರಲಿಲ್ಲ. ಬರೇ ಗುಡಸೀಕರನ ಬಾಯಿ ಕೇಳಿಸುತ್ತಿತ್ತು. ದತ್ತಪ್ಪ ಅವನ ಚಿಕ್ಕತನದ ವಾಚಾಳಿತನದೊಂದಿಗೆ ಆಟವಾಡುತ್ತ ಕೂತುಬಿಟ್ಟ. ಬಂದ ಚತುಷ್ಟಯರು ದತ್ತಪ್ಪನಿಗೆ ನಮಸ್ಕಾರ ಮಾಡಿ ಮೂಲೆ ಸೇರಿದರು. ಆಗಾಗ ಹಲ್ಲು ಕಿಸಿದರು; ಹಸ್ತ ಹೊಸೆದರು. ಅವರನ್ನು ಕೆಣಕುತ್ತ, “ಕೇಳಿದಿರೇನ್ರೊ? ನಾವೆಲ್ಲ ಸೇರಿ ಊರ ಹಾಳಮಾಡಿದಿವಂತ. ಅದಕ್ಕ ಪಂಚಾಯ್ತಿ ಬಿಟ್ಟಕೊಡರಿ ಅಂತ ಹೇಳಾಕ ಬಂದಾನ” ಎಂದು ಹೇಳಿ ದತ್ತಪ್ಪನ ಕಡೆಗೂ ತಿರುಗಿ “ಹೋಗ್ರಿ; ಎಲೆಕ್ಷನ್ ಆಗಲಿ; ಅಲ್ಲೇ ತೀರ್ಮಾನವಾಗಲಿ” ಎಂದ. ಕೂಡಿದವರಿಗೆ ವಿಷಯವೇನೆಂದು ತಿಳಿಯಿತು. ಚತುಷ್ಟಯರು ಉತ್ತರ ಹೊಳೆಯದ ಸಾಲೆ ಮಕ್ಕಳಂತೆ ಸುಮ್ಮನೆ ಕೈಕಟ್ಟಿಕೊಂಡು ನಿಂತರು. ಕೂಡಿದವರಲ್ಲೊಬ್ಬ “ಹೌಂದಪಾ, ಹಿರೇರ ಹೇಳಿಧಾಂಗ ಕೇಳಬೇಕು” ಅಂದ. ಗುಡಸೀಕರನಿಗೆ ಇನ್ನೂ ಸಿಟ್ಟುಬಂತು – “ಹಿರೇತನ ಮಾಡಾಕ ನಿನ್ನ ಕರಸಲಿಲ್ಲಪಾ; ಮೊದಲ ನನ್ನ ಮನೀ ಬಿಟ್ಟು ಹೊರಬೀಳು” ಅಂದ.

ತಕ್ಷಣ ದತ್ತಪ್ಪ ಎದ್ದು ನಡೆದುಬಿಟ್ಟ. ಮಂದಿಗೆ ಗುಡಸೀಕರ ದತ್ತಪ್ಪನಿಗೇ ಮನೆಬಿಟ್ಟು ಹೊರಬೀಳೆಂದು ಹೇಳಿದಂತೆನಿಸಿತು. ಅವರೂ ಸಿಟ್ಟಾಗಿ ತಲೆಗೊಂದು ಮಾತಾಡುತ್ತ ಚದುರಿದರು. ಚತುಷ್ಟಯರು ಮಾತಾಡದ್ದೊಂದು ಕಡೆ, ಮಂದಿಯಲ್ಲೊಬ್ಬ ನಡುವೆ ಬಾಯಿಹಾಕಿದ್ದಿನ್ನೊಂದು ಕಡೆ, ಇನ್ನಷ್ಟು ಮಾತಾಡಿಸಿಕೊಳ್ಳಲು ದತ್ತಪ್ಪ ಕೂರಲಿಲ್ಲದ್ದ ಮತ್ತೊಂದು ಕಡೆ – ಎಲ್ಲ ಕೂಡಿ ಗುಡಸೀಕರನ ತಲೆ ಕಾವೇರಿತು. ಅವನ ತಾಯಿಗೂ ಅಸಮಾಧಾನವಾಯ್ತು; ದತ್ತಪ್ಪ ಮನೆಗೆ ಬಂದಾಗ ಗೌರವದಿಂದ ಮಗ ನಡೆದುಕೊಳ್ಳಲಿಲ್ಲವಲ್ಲಾ, ಇದ್ಯಾಕೆ ಹೀಗೆ ಮಾಡಿದನೆಂದು ಬಗೆಹರಿಯಲಿಲ್ಲ. ಅಲ್ಲದೆ ದತ್ತಪ್ಪ ಶಾಂತವಾಗೇ ಮಾತಾಡಿದ್ದ. ಎದುರಿನ ಕಣ್ಣುಗಳನ್ನು ಎದುರಿಸಲಾರದೆ, ಅಟ್ಟ ಹತ್ತಿ ತನ್ನ ಬಿಟ್ಟು ಉಳಿದೆಲ್ಲ ದತ್ತಪ್ಪ ಇಲ್ಲವೆ ಗೌಡನೆಂಬಂತೆ ಬಾಯಿ ತುಂಬ ಬೈಯುತ್ತ ಅಡ್ಡಾಡತೊಡಗಿದ.

ನಿಜ ಹೇಳಬೇಕೆಂದರೆ ಗುಡಸೀಕರ ಖಳನಾಯಕನಲ್ಲ. ಕಲಿತದ್ದರ ಬಗ್ಗೆ ಒಂದಿಷ್ಟು ಧಿಮಾಕಿತ್ತು. ಕಲಿತವರೇ ಇಲ್ಲದಲ್ಲಿ ಅದು ಹೆಚ್ಚಲ್ಲ. ಪ್ರಾಯದ ಮದ ಇತ್ತು. ಆ ವಯಸ್ಸಿಗೆ ಅದೂ ಹೆಚ್ಚಲ್ಲ. ಅಪ್ಪ ಗಳಿಸಿದ ದುಡ್ಡಿತ್ತು; ಆದರೆ ಧಾರಾಳತನವೂ ಇತ್ತು ಜನ ಅವನನ್ನೆಂದೂ ತಮ್ಮ ಶತ್ರುವೆಂದು ಭಾವಿಸಲಿಲ್ಲ. ಗೌಡನಿಗೂ ಅವನಿಗೂ ವಿರೋಧವಿದೆಯೆಂದು ತಿಳಿಯಲಿಲ್ಲ. ಹೆಚ್ಚೇನು, ಚತುಷ್ಟಯರೂ ಹಾಗೆ ನಂಬಲಿಲ್ಲ.

ಕಲಿತ ಪ್ರಾಯದ ಎಲ್ಲ ಹುಡುಗರಂತೆ ಅವನೂ ಆದರ್ಶದ ಬೆಂಕಿಯನ್ನು ಪದರಿಗೆ ಕಟ್ಟಿಕೊಂಡ. ಬೆಂಕಿಯ ಬೆಳಕಿನಲ್ಲಿ ಕನಸು ಕಮಡ. ಅದರ ಕಾವಿನಲ್ಲಿ ಹುರುಪುಗೊಂಡ. ಪ್ರಾಯದ ಎಳೆಯರನ್ನು ಲಗಮವ್ವ "ಇಸಾಮಿತ್ರನ್ಹಾಂಗ" ಎಂದಿದ್ದಾಳೆ, ತನ್ನ ಹಾಡಿನಲ್ಲಿ, ಅದು ನಿಜವೆ; ಇದ್ದ ವ್ಯವಸ್ಥೆಯ ಅರೆಕೊರೆ ಸರಿಪಡಿಸುವ ಆಸೆ; ಪುನಃ ಸೃಷ್ಟಿಸುವ ಬಯಕೆ. ಊರಿಗೆಲ್ಲ ತಾನೊಬ್ಬನೇ ಸುಶಿಕ್ಷಿತನಾದ್ದರಿಂದ, ಬೆಳಗಾವಿಯ ಲೋಕಜೀವನ ಕಂಡವನಾದ್ದರಿಂದ ತನ್ನ ಪಾಲಿನ ಹೊಣೆಗಾರಿಕೆ ಜಾಸ್ತಿಯೆಂದು ಮನಗಂಡಿದ್ದ. ದೇಶಕ್ಕೇ ದೇಶವನ್ನೇ ಬದಲು ಮಾಡುವುದು ತನ್ನಿಂದಾಗಲಿಕ್ಕಿಲ್ಲ ಖರೆ; ಕಲಿತವರಿಗೆ ಗಾಂಧೀಜಿ ಹೇಳಿಲ್ಲವೆ? ಹಳ್ಳಿಗಳಿಗೆ ಹೋಗಿರಿ – ಎಂದು. ಸರಿ, ತನ್ನ ಪಾಡಿಗೆ ತಾನು ತನ್ನ ಹಳ್ಳಿ ಸುಧಾರಿಸಿದರೆ ಸಾಕು, ಇದಕ್ಕಿಂತ ಸಾರ್ಥಕವಾದ ಕೆಲಸ ಇನ್ನೇನಿದೆ? ಚಳವಳಿ ಸೇರಲಿಲ್ಲ; ಆದರೆ ಗಾಂಧಿ ಹೇಳಿದಂತೆ ಖಾದಿ ಉಟ್ಟ; ತೊಟ್ಟ, ಇನ್ನೇನು, ಸ್ವಲ್ಪ ಕುಡಿಯುವ ಚಟ ಇತ್ತು. ಹಳ್ಳಿಗರ ಕಣ್ಣಲ್ಲಿ ಅದೊಂದು ದುಶ್ಚಟವೂ ಅಲ್ಲ. ಬಹುಶಃ ಗಾಂಧೀ ಬಂದು ಏನು ಕೇಳಿದರೂ ಇವನಲ್ಲಿ ಉತ್ತರಗಳಿದ್ದವು. ಆದರೆ 'ಯಾಕೋ ಗುಡಸೀಕರ ಕುಡಿಯುತ್ತಿ?' ಎಂದು ಕೇಳಿದ್ದರೆ ಮಾತ್ರ ನಿರುತ್ತರನಾಗುತ್ತಿದ್ದ. ಒಮ್ಮೊಮ್ಮೆ ಕರುಳಿಗಿಳಿದ ಚಟ ಬಿಡಲಾರದೆ ಅದಕ್ಕೂ ನೆಪ ಹುಡುಕುತ್ತಿದ್ದ. ಅದು ದೊಡ್ಡದಲ್ಲ, ಅವನ ಪ್ರಾಯದ ಮುಖದಲ್ಲಿಯ ಮೊಡವೆಯಂತೆ ಕಂಡೀತಷ್ಟೆ.

ಕೈಯಲ್ಲಿ ಗಾಂಧೀಫೋಟೋ, ತಲೆಯಲ್ಲಿ ಹಳವಂಡ ಹೊತ್ತುಕೊಂಡು ಹಳ್ಳಿಗೆ ಬಂದ. ಆದರೆ ಹಳ್ಳಿಯಲ್ಲಿ ಜನ ಕಾಣಿಸಲಿಲ್ಲ; ಪ್ರಾಣಿಗಳಿದ್ದವು. ಅಂಕುಡೊಂಕಾದ ರಸ್ತೆಗಳು; ಗಟಾರಿಲ್ಲದ ಓಣಿಗಳು, ಕೊಳೆತು ಎಲ್ಲೆಂದರಲ್ಲಿ ನಾರುವ ತಿಪ್ಪೆಗಳು, ಧೂಳಿನಲ್ಲಿ ಉರುಳಾಡುವ ಕೂಸುಗಳು, ಕುನ್ನಿಗಳು, ಬೇಕಾಬಿಟ್ಟೆ ಅಡ್ಡಾಡುವ ನಾಯಿಗಳು, ದನಗಳು, ಜನಗಳು – ಕಂಡು ಅಪಾರ ಕರುಣೆ ಬಂತು. ಕೊಳೆ ತೊಳೆಯಬೇಕಾದ್ದೇ ಮೊದಲ ಕೆಲಸವೆಂದುಕೊಂಡ. ಅದಕ್ಕೆ ಅವಕಾಶವೂ ಸಿಕ್ಕಿತು.

ಪಂಚಾಯಿತಿಯಾಯ್ತು; ತಾನೇ ಸರಪಂಚನಾದ. ಸಭೆ ಮಾಡಿದ. ಅವನ ಸಭೆಗಳಿಗಾದ ಗತಿ ಹಿಂದೆ ನೋಡಿದ್ದೀರಿ. ಆದರೆ ನಿಂಗೂನ ಕೇಸಿನಲ್ಲಿ ಆಘಾತವೇ ಆಯ್ತು ಗುಡಸೀಕರನಿಗೆ. ಕಾಣಾಕಾಣಾ ಆದ ಖೂನಿಯನ್ನ ಹಾಡುಹಗಲೇ ಮುಚ್ಚುವುದೆಂದರೆ! ಖೂನಿಯೆಂದರೆ ಖೂನಿಯೇ. ಹೆಚ್ಚಲ್ಲ, ಕಮ್ಮಿಯಲ್ಲ. ಅದರ ತೀರ್ಮಾನ ಕೋರ್ಟಿನಲ್ಲೇ ಆಗಬೇಕು. ಕಾಯ್ದೆ ಹಳ್ಳಿಗೊಂದು, ಶಹರಕ್ಕೊಂದು ಇರುವುದಿಲ್ಲ. ಊರ ಗೌಡ, ಕುಲಕರ್ಣಿ ಈ ರೀತಿ ತಾವೇ ಕಾನೂನನ್ನು ಕೈಗೆ ತಕ್ಕೊಂಡರೆ ನ್ಯಾಯ ಉಳಿದೀತೆ? ಛೆ ಛೇ ಇದನ್ನು ಯೋಚಿಸುವುದೇ ಅಸಾಧ್ಯ. ಈತನಕ ಅವನಿಗೆ ಗೌಡ, ದತ್ತಪ್ಪನ ಬಗ್ಗೆ ಗೌರವ ಭಾವನೆ ಇರಲಿಲ್ಲ. ಅಸಮಾಧಾನವೂ ಇರಲಿಲ್ಲ. ಆದರೆ ಈಗ ಮಾತ್ರ ಕೋಪ ಬಂತು. ಕಾಪಾಡುವ ಹೆಸರಿನಲ್ಲಿ ಊರನ್ನು ಹಾಳು ಮಾಡುವವರು ಇವರೇ – ಎಂದುಕೊಂಡ. ಸಾಲದ್ದಕ್ಕೆ ಎಲ್ಲ ಕೂಡಿ ಫೋಜುದಾರನ ಎದುರಿಗೆ ಅವರಂತೇ ಮಾತಾಡಿದ್ದರು. ಜನ ಎಷ್ಟೆಲ್ಲ ಅಜ್ಞಾನದಲ್ಲಿದ್ದರೆ ಅಷ್ಟಷ್ಟು ಇವರಿಬ್ಬರೂ ದೇವತೆಗಳಾಗುತ್ತಾರೆ. ಅದಕ್ಕೆ ಇವರಿಗೆ ಜ್ಞಾನದ

ಮಾತಾಡುವವರು ಬರ್ಷಣವಾಗುತ್ತಾರೆ. ತಾನು ಮುಂದೆ ಬಂದರೆ ಜನಕ್ಕೆ ತಿಳುವಳಿಕೆ ಕೊಟ್ಟರೆ ಇವರ ಮಹಿಮೆ ನಂದುವುದಲ್ಲಾ, ಅದಕ್ಕೇ ಇವರಿಗೆ ತನ್ನ ಬಗ್ಗೆ ಅಸೂಯೆ ಎಂದುಕೊಂಡ.

ಇವತ್ತೂ ಅಂಥದೇ ಆಘಾತವಾಗಿತ್ತು. ಎಲೆಕ್ಷನ್ನಿಲ್ಲದೆ ಹಿರಿಯರು ಪಂಚಾಯ್ತಿ ತನ್ನ ಕೈಗಿಟ್ಟದ್ದು ನಿಜ. ಆದರೆ ಅದಕ್ಕೆ ಕಾರಣ ಬೇರೆ. ಕಲಿತವರಿರಲಿಲ್ಲ; ಪಂಚಾಯ್ತಿ ಅಂದರೇನೆಂದು ಗೊತ್ತಿಲ್ಲ. ಬೇರೆ ದಿಕ್ಕಿಲ್ಲದೆ ತಟ್ಟೆಯೊಳಗಿಟ್ಟು ಕೈಗಿತ್ತರು. ಈಗ ತಿರುಗಿ ಕೇಳಿದರೆ? – ಹೊಸದಾಗಿ ಕಲಿತವರು ಬಂದರೋ? ದತ್ತಪ್ಪ ಊರವರನ್ನೆಲ್ಲ ಕೂಡಿಸಿ ಪಂಚಾಯ್ತಿ ಕೇಳಿದ ಎನ್ನೋಣ. ಗೌಡನಿಗೆ ಹೆದರಿ ಮಂದಿ ಕೈ ಎತ್ತಲೂಬಹುದು. ಹಾಗಾದರೆ ಅದು ಪಂಚಾಯ್ತಿ ಆಯ್ತೆ? ಊರಿನ ಪ್ರತಿಯೊಬ್ಬನಿಗೂ ಆಯ್ಕೆಮಾಡುವ ಸ್ವತಂತ್ರ ಹಕ್ಕಿದೆ. ಇವರಿಗೆ ಅದು ಬೇಕಿಲ್ಲ.

ಹೀಗೆ –

ಹಲವು ಹದಿನೆಂಟು ಥರ ಯೋಚಿಸಿದ. ಯಾವ ಮಗ್ಗುಲಿನಿಂದ ತಿಳಿದು ನೋಡಿದರೂ ತನ್ನದೇ ನಿಜ ಅನ್ನಿಸಿತು. ಒಂದಂತೂ ಅವನಿಗೂ ಖಾತ್ರಿಯಾಯ್ತು; ಹಿಂದಿನಂತೆ ಈ ಸಲ ಪಂಚಾಯ್ತಿಯನ್ನ ಅವರು ತಟ್ಟೆಯೊಳಗಿಟ್ಟು ಕೊಡೋದಿಲ್ಲ. ಎಲೆಕ್ಷನ್ ಗ್ಯಾರಂಟಿ. ಅದರ ತಯಾರಿ ಈಗಿನಿಂದಲೇ ಸುರುಮಾಡಬೇಕೆಂದ. ಕಾರಹುಣ್ಣಿಮೆ ದಿನ ನಾಟಕವಾಡುತ್ತೇವಲ್ಲಾ ಅದು ಎಲೆಕ್ಷನ್ ಗೆಲುವನ್ನು ಹತ್ತಿರ ತರಬೇಕು. ಎಂದುಕೊಂಡ.

## ನಾಯೆಲ್ಯ ಅಂಗೀಯೆಲ್ಯಾ ಆದದ್ದು

ನಾಯೆಲ್ಯಾ ಬುದ್ಧಿಗಲಿತಾಗಿನಿಂದ ಹಾಕುತ್ತಿದ್ದುದು ಗೌಡನ ಹಳೆಯ ಅಂಗಿಗಳನ್ನೇ. ಅವನೊಮ್ಮೆಯೂ ಹೊಸ ಅಂಗಿ ಹೊಲಿಸಿಕೊಂಡವನೇ ಅಲ್ಲ. ಹೊಲಿಸಿಕೋ ಎಂದು ಕೊಟ್ಟರೂ ಕುಡಿಯುತ್ತಿದ್ದ. ಗೌಡನಿಗೆ ಬೇಸರವಾಯ್ತು. ಕತ್ತೆಯಂಥ ಕತ್ತೆ ಒಂದಾಣೆಯ ಹಗ್ಗ ಹರಿಯತ್ತದೆ. ನಾಯೆಲ್ಯಾ ಒಂದು ಅಂಗಿಯನ್ನಾದರೂ ಹರಿಯದಿದ್ದರೆ ಹೇಗೆ? ಅವನಳತೆಯ ಎರಡು ಹೊಸ ಅಂಗಿಗಳನ್ನು ಹೊಲಿಸಿಕೊಟ್ಟ.

ಹೊಸ ಅಂಗಿ ಹಾಕಿಕೊಂಡಾಗ ನಾಯಿಲ್ಯಾನನ್ನು ಹಿಡಿಯುವವರೇ ಇಲ್ಲ. ಊರ ತುಂಬ ವಿನಾಕಾರಣ ಅಡ್ಡಾಡಿ ಬಂದ. ಬರುಹೋಗುವವರ ಯೋಗಕ್ಷೇಮ ಕೇಳಿದ. ಕೆಲಸ ಮಾಡುವಾಗ ಅದನ್ನು ಕಳಚಿಟ್ಟಿದ್ದೇನು, ಹೆಂಡತಿ ಮುಟ್ಟ ಬಂದರೆ ಅವಳ ಹೊಲಸು ಕೈಗೆ ಮುನಿದದ್ದೇನು, ಮಲಗುವಾಗ ಕಂಬಳಿ ಝಾಡಿಸಿ ಝಾಡಿಸಿ ಹಾಸಿಕೊಂಡದ್ದೇನು! ಇವನ ಸಡಗರಕ್ಕೆ ಕೊಂಬು ಮೂಡಿಸಂತೆ ಸಾವಳಗಿಯ ಜಾತ್ರೆ ಬಂತು. ಊರಿಗಿಂತ ಮುಂಚೆಯೇ ಹೋದ, ಅಡ್ಡಾಡಿದ. ಜಾತ್ರೆಯ ಪ್ರತಿಯೊಬ್ಬರ ಅಂಗಿಯ ಜೊತೆ ತನ್ನ ಅಂಗಿ ಹೋಲಿಸಿಕೊಂಡ. ಆಯಿತು. ಜಾತ್ರೆಯೆಲ್ಲಾ ಮುಗಿದು ಮಾರನೇ ದಿನ ಗುಡಿಸಲಿಗೆ ಬಂದ, ನೋಡಿದರೆ ಬರೀ ಲಂಗೋಟಿಯಲ್ಲೇ ಇದ್ದ! ರಂಗಿ ಯಾಕೆಂದು ಕೇಳಿದರೆ ಹೀಗಾಯಿತಂತೆ:

ರಾತ್ರಿ ಬಯಲಾಟಕ್ಕೆ ಶೂದ್ರರ ಬಳಗದಲ್ಲಿ ಹೋಗಿ ಮುಂದಾಗಿಯೇ ಕೂತನಂತೆ. ಫಕ್ಕನೆ ಅಂಗಿಯ ಬಗ್ಗೆ ಚಿಂತೆ ಮೂಡಿತು. ಮಠದ ಹುಗ್ಗೀ ಪ್ರಸಾದ ಹೊಟ್ಟೆತುಂಬ ಗಚ್ಚಿನಂತೆ ಗಟ್ಟಿಯಾಗಿ ಇಳಿದಿತ್ತು. ಗೌಡ ಜಾತ್ರೆಗೆಂದು ಕೊಟ್ಟ ಚವಲಿಯಿಂದ ಹೆಂಡ ಕುಡಿದಿದ್ದ. ಅಂಗಿಯ ಸಡಗರದಲ್ಲಿ ಹೆಚ್ಚಾಗಿಯೇ ಓಡಾಡಿದ್ದ. ಮಂಪರು ಬಂದು ಕಣ್ಣುಮುಚ್ಚತೊಡಗಿದವು. ಸುತ್ತ ನೋಡಿದರೆ ಒಬ್ಬ ಶೂದ್ರನಿಗೂ ಮೈಮೇಲೆ ತನ್ನಂಥ ಅಂಗಿಯಿಲ್ಲ. ಒಮ್ಮೆ ನಿದ್ದೆ ಹತ್ತಿತೋ – ತನ್ನ ನಿದ್ದೆ ಸಾಮಾನ್ಯವೆ? ಮರದ ತುಂಡಿನಂತೆ ಬಿದ್ದ – ಎನ್ನೋಣ, ಆಮೇಲೆ ತನ್ನ ಅಂಗಿಯನ್ನು ಯಾರಾದರೂ ಕಳಚಿಕೊಂಡರೆ? ನಿದ್ದೆ ಮಾಡುವುದೇ – ಬೇಡ ಎನ್ನೋಣ. ಬರೋ ನಿದ್ದೆ ಹೇಳಿ ಕೇಳಿ ತನ್ನಪ್ಪಣೆ ಕೇಳಿ ಬರುತ್ತದೋ? ಆದ್ದರಿಂದ ಅಂಗೀ ಕಳಚಿ ಬಗಲಲ್ಲಿ ಗಟ್ಟಿಯಾಗಿ ಹಿಡಿದಿಟ್ಟುಕೊಂಡು ಬಯಲಾಟ ನೋಡಿದರೆ, ಮೈಗೆ ತಂಗಾಳಿ ಸವರಿ ಇತ್ತ

ನಿದ್ದೆಯೂ ಬರುವುದಿಲ್ಲ; ಒಂದು ವೇಳೆ ಬಂದರೂ ಬಗಲಲ್ಲಿಯ ಅಂಗಿಯನ್ನಾದರೂ ಕಿತ್ತುಕೊಳ್ಳುವಾಗ ತನಗೆ ಎಚ್ಚರವಾಗೇ ಆಗುತ್ತದೆ! ಹೀಗೆಂದುಕೊಂಡು ಅಂಗೀ ಕಳಚಿ ಮುದ್ದೆಮಾಡಿ ಬಗಲಲ್ಲಿ ಗಟ್ಟಿಯಾಗಿ ಹಿಡಿದು, ಅವಚಿಕೊಂಡು ಕೂತ. ನಿದ್ದೆಯೂ ಬಂತು. ಮುಂದಿನ ಕತೆ ನಿಮಗೆ ಗೊತ್ತೇ ಇದೆ. ನಾಯಲ್ಯಾ ತನ್ನ ಮೊದಲನೇ ಅಂಗಿ ಕಳಕೊಂಡದ್ದು ಹೀಗೆ.

ಒಂದು ಸಲ 'ಮುನಿಯೆಲ್ಯಾ' ಅಂದರೆ ಅದೇ ಅವನ ಕರಿನಾಯಿ ಇತ್ತಲ್ಲಾ, ಅದಕ್ಕೆ ಅದೇನು ಸ್ಫೂರ್ತಿ ಉಕ್ಕಿತೋ ಮಧ್ಯರಾತ್ರಿ, ಅಮಾವಾಸ್ಯೆ ಕತ್ತಲಲ್ಲಿ ಜೋರಿನಿಂದ, ಊರ ನಿಶ್ಯಬ್ದತೆ ಸೀಳಿ ಎರಡಾಗುವಂತೆ ಕಿರಿಚಿತು. ಕೇಳಿದ ಊರ ನಾಯಿಗಳು ಥಕ್ಕನೆ ಎಚ್ಚತ್ತು ತಂತಮ್ಮ ಸ್ಥಳಗಳಲ್ಲೇ ನಿಂತುಕೊಂಡು ಹೊಲಗೇರಿಯ ಕಡೆ ಮುಖಮಾಡಿ, ಜಿಗ್ಗಾಲು ಕೊಟ್ಟು ಕೂಗಲಾರಂಭಿಸಿದವು. ಎಷ್ಟು ಹೊತ್ತಾದರೂ ಅವುಗಳ ಸೊಲ್ಲು ನಿಲ್ಲಲೊಲ್ಲದು. ಯಾರೋ ಕಳ್ಳ ನುಗ್ಗಿರಬೇಕೆಂದು ಮಲಗಿದ್ದವರು ಎದ್ದರು. ನೋಡಿದರೆ ಯಾರೂ ಇರಲಿಲ್ಲ. ಅವಾವಾಸ್ಯೆಯಲ್ಲವೆ? ಕರಿಮಾಯಿ ಈ ದಿನ ಸಂಚಾರ ಕೈಗೊಂಡು ಕೆಟ್ಟ ದೆವ್ವಗಳಿಂದ ಊರು ಕಾಯುತ್ತಾಳೆ. ಬಹುಶಃ ನಾಯಿಗಳಿಗೆ ತಾಯಿಯೇ ಕಂಡಿರಬೇಕೆಂದು ಜನ ಭಾವಿಸಿಕೊಂಡು ಮತ್ತೆ ಮಲಗಿದರು.

ಆದರೆ ನಾಯೆಲ್ಯಾ ಈ ಸಂದರ್ಭ ಬಳಸಿಕೊಂಡ. ಯಾರು ಏನೆಂದು ಜನ ಹುಯ್ಯಲೆದ್ದಾಗಲೇ ಈತ ಮಾದರ ಭರಮನ ಗುಡಿಸಲಿಗೆ ನುಗ್ಗಿ ಪಡಸಾಲೆಯ ಕೋಳೀ ಬುಟ್ಟಿಗೆ ಕೈಹಾಕಿ, ಸಪ್ಪಳ ಮಾಡದೆ ಒಂದು ಕೋಳೀ ತಂದು ಅದರ ಕತ್ತು ಹಿಸುಕಿ ತನ್ನ ಗುಡಿಸಲಲ್ಲಿಟ್ಟು ಮತ್ತೆ ಸಾಜೋಗರಂತೆ ಹೊರಬಂದು, ಯಾರು? ಏನು? ಎಂದು ಎಲ್ಲರಂತೆ ಸೋಜಿಗ ನಟಿಸುತ್ತ ಅವರ ಜೊತೆ ನಿಂತ. ಕೆಲಹೊತ್ತಾಗಿ ಒಳಗೆ ಬಂದರೆ ರಂಗಿ, ಆ ಹೊತ್ತಿನಲ್ಲೇ ಎದ್ದು ಆಗಲೇ ನೀರು ಕಾಸಿ ಕೋಳಿ ಅದ್ದಿಬಿಟ್ಟಿದ್ದಳು. ಬೆಳಗಾಗುವುದರೊಳಗೆ, ತನ್ನ ಹೆಂಡತಿಗೂ ಗೊತ್ತಿಲ್ಲದಂತೆ ಕೋಳಿ ಮುಗಿಸಿಬಿಡಬೇಕೆದು ಇವನ ಲೆಕ್ಕ. ರಂಗಿ ನಾಯಲ್ಯಾನ ಹೆಂಡತಿಯಲ್ಲವೆ? ಒತ್ತಿ ಬಂದ ನಿರಾಸೆ, ಸಿಟ್ಟು ತಡಕೊಂಡು ಒಲೆಯ ಮುಂದೆ ಕೂತ.

ತುಸು ಹೊತ್ತು ಕೂರುವುದರಲ್ಲೇ ಕುದಿಯಿತೋ ಇಲ್ಲವೋ ನೋಡೋಣವೆಂದು ಒಂದು ಹೋಳು ತೆಗೆದು ರಂಗೀ ಹಾಗೇ ತಿಂದಳು ಈಗ ಕೋಪ ಅಸಹನೀಯವಾಯಿತು.

"ಏ ಬೇಬರಿಸಿ, ಕದ್ದುಕೊಂಬಂದವ ನಾನು. ನನಗ ತೋರಿಸದ ಬಕ್ಕರಸಾಕ ಸುರು ಮಾಡಿದಿ?'

"ಸುಮ್ ಕುಂದರಬಾರದ? ಕುದ್ದ್ಯತ್ಯೋ ಇಲ್ಲೊ ನೋಡತೀನಿ"

"ಯಾಕ? ನನಗ ತಿಳೀತಿರಲಿಲ್ಲೆನು?"

"ಏ ಭಾಡ್ಯಾ, ಬಾಯಿ ಮುಚ್ಚಿಕೊಂಡು ಕುಂದರತೀಯಾ? ಮಾದರ ಭರಮ್ಯಾಗ ಹೇಳಂತೀಯಾ?"

ಎನ್ನತ್ತಾ ಇನ್ನೊಂದು ಹೋಳು ತಿಂದಳು. ಬಾಯಿ ಮಾಡುವಂತಿಲ್ಲ, ಬಿಡುವಂತಿಲ್ಲ. ಬಾಯಿ ಮಾಡಿದರೆ ರಂಪಾಟ ಮಾಡಿ ಭರಮ್ಯಾನಿಗೆ ಹೇಳಿದರೆ ಆಶ್ಚರ್ಯವಿಲ್ಲ. ಬಾಯಿ ಮುಚ್ಚಿಕೊಂಡಿದ್ದರೆ ಕುದಿಯುವ ಮೊದಲೆ ಈ ರಂಡಿ ಗಡಿಗೆಯ ಬುಡಸಮೇತ ಮುಗಿಸಿಬುಡುವುದರಲ್ಲಿ ಸಂಶಯವಿಲ್ಲ. ಆಗಲೆಂದು ಇವನೂ ಒಂದು ಹೋಳು ತಿಂದ. ಸೇಡಿನೆಂದೆಂಬಂತೆ ಅವಳೂ ತಿಂದಳು. ಇವನೂ ತಿಂದ. ಹೀಗೆ ಕುದ್ದಿದೆಯೋ, ಅಲ್ಲವೋ ನೋಡುವುದರಲ್ಲೇ ಅರ್ಧ ಕೋಳಿ ಮುಗಿಯಿತು. ಕುದಿಸಿ ಮಸಾಲೆ ಹಾಕಿ, ಚಂದಾ ಮಾಡಿ ತಿನ್ನುವುದು ಹಾಗಿರಲಿ, ಬರೀ ಕುದಿಯುತ್ತಿದ್ದ ಮಾಂಸ ಕೂಡ ತನಗೆ ಸರಿಯಾಗಿ ಸಿಗುತ್ತಿಲ್ಲ, ಎನಿಸಿತು. ಈ ಸ್ಪರ್ಧೆಯಲ್ಲಿ ರಂಗಿ ಸರಿಯಾಗಿ ಮೂಳೆ ಕೂಡ ಉಗುಳುತ್ತಿರಲಿಲ್ಲ! ಏನೋ ಕೊನೆಯ ಉಪಾಯವೆಂದು "ಏ, ಹಾದರಗಿತ್ತಿ, ಕೂಸಿಗೊಂದೀಟ ಬಿಡತೀಯೋ ಇಲ್ಲೋ?" ಅಂದ.

“ರಸ ಕೊಟ್ಟರಾತ ಬಿಡ್ಸ”

ಎನ್ನುತ್ತ ಮತ್ತೆ ಮುಕ್ಕಿದಳು. ಇನ್ನು ತನಗೊಂದು ಮೂಳೆಯೂ ದಕ್ಕುವುದಿಲ್ಲವೆಂದು ಖಾತ್ರಿಯಾಗಿ ತಕ್ಷಣವೇ ಅವಳ ಕೈ ಹಿಡಿದು,

“ಇನ್ನೊಂದು ತುತ್ತ ಬಾಯಿಗೆ ಹಾಕಿದರ ಕರಿಮಾಯಿ ಆಣಿ”

ಅಂದ. ಅವಳೂ ಇವನಿಗೆ ಕರಿಮಾಯಿ ಆಣೆ ಹಾಕಿದಳು. ಒಗ್ಗರಣೆ ಹಾಕಿ ಪಲ್ಯ ಮಾಡುವ ತನಕ ಯಾರೂ ಮಾಂಸ ಮುಟ್ಟಕೂಡದೆಂದಾಯಿತು. ಆದರೆ ಆಣೆ ಪಾಲಿಸುವದರ ಬಗ್ಗೆ ಇಬ್ಬರಿಗೂ ನಂಬಿಕೆಯಿಲ್ಲ. ಆಣೆಯ ಭರಾಟೆಯಲ್ಲಿ ನಾಯೆಲ್ಯಾ ರಂಗಿಗಿಂತ ಮಾಂಸದ ಗಡಿಗೆಗೆ ಹೆಚ್ಚು ಸಮೀಪ ಬಂದಿದ್ದ! ಗೊತ್ತಾದೊಡನೆ ಅವನು ತಿನ್ನದ ಹಾಗೆ, ಆದರೆ ಪ್ರೀತಿಯೆಂದೆಂಬಂತೆ ಗಪ್ಪನೆ ತನ್ನ ನಳಿದೋಳ್ಗಳಿಂದ ನಾಯೆಲ್ಯಾನನ್ನು ಬಳಸಿ ಈಚಲುಮರಕ್ಕೆ ಕಾಡುಬಳ್ಳಿ ಸುತ್ತಿದಂತೆ ತಬ್ಬಿಕೊಂಡು ಕೂತಳು.

ಮಾಂಸ ಕುದಿಯಿತು. ನೀರು ಬಸಿದು ಒಂದೆಡೆಯಿಟ್ಟು ಒಗ್ಗರಣೆ ತಯಾರಿ ನಡೆದಾಗ ಬಾಗಿಲಲ್ಲಿದ್ದ ಮುನಿಯೆಲ್ಯಾ ಗುರ್ ಎಂದಿತು. ಯಾರೋ ಬಂದದ್ದು ಸ್ಪಷ್ಟವಿತ್ತು. ಹೋಗಿ ಕದ ತೆಗೆದು ನೋಡೆಂದು ಹೆಂಡತಿಗೆ ಹೇಳಿದ. ನೀನೇ ನೋಡೆಂದು ಅವಳು ಹೇಳಿದಳು. ನೀನು ತಾನು ಎನ್ನುವಷ್ಟರಲ್ಲಿ ಗೌಡ “ಮುನಿಯೆಲ್ಯಾ” ಎಂದು ಕೂಗಿದ್ದು ಕೇಳಿಸಿತು. ಗಡಬಡಿಸಿ, ಬಿಟ್ಟು ಓಡಿಹೋದರೆ ಈ ಹಾಳು ರಂಡೆ ಮುಗಿಸಿಬಿಡಬಹುದೆಂದು ತಕ್ಷಣ ಅವಳ ಕೈ ಹಿಡಿದುಕೊಂಡೆ ಹೋಗಿ ಬಾಗಿಲು ತೆಗೆದ. ಹೊರಗಾಗಲೆ ಮೂಡಲು ಹರಿಯತೊಡಗಿತ್ತು.

ಹೊರಗೆ ಗೌಡ ನಿಂತಿದ್ದ. ಗೌಡನೆದುರಿಗೆ ಹೆಂಡತಿಯನ್ನು ಹೇಗೆ ಹಿಡಿದಿರುತ್ತಾನೆ? ಬಿಟ್ಟ. ಎಡೆ ಹೊಡೆಯಬೇಕೆಂದು ತಾಕೀತು ಮಾಡಿ ಗೌಡ ಹೋದ. ಅತ್ತ ಗೌಡ ಹೋದ. ಇತ್ತ ನಾಯೆಲ್ಯಾ ಬಿಟ್ಟಬಾಣದ ಹಾಗೆ, ಅವಸರದಿಂದ ಒಳಗೆ ಬಂದು ನೋಡಿದರೆ ರಂಗಿ ಎಲ್ಲಾ ಮಾಂಸ ಕಬಳಿಸಿ ಕಟಲ್ ಕಟಲ್ ಎಂದು ಮೂಳೆ ಜಗಿಯುತ್ತಿದ್ದಳು. ನಾಯೆಲ್ಯಾನಿಗೆ ಅಳು ಬರುವಷ್ಟು ಕೋಪ ಬಂತು. ‘ಹಾದರಗಿತ್ತೇ’ ಎಂದು ಹಾರಿ ಅವಳ ತುರುಬಿಗೇ ಕೈ ಹಾಕಿ ಒದ್ದ. ಅವಳೋ ಛೇ, ಈ ಹತಭಾಗ್ಯನ ಅಂಗೀಗೆ ಕೈ ಹಾಕಿದಳು. ಸಿಟ್ಟಿನ ಭರದಲ್ಲಿ ಅಂಗಿ ಗಮನಿಸದೆ ರಪ್ಪೆಂದು ಹೊಡೆದ. ಅವಳು ಟರ್ರ ಎಂದು ಅಂಗಿ ಹರಿದಳು ಇನ್ನಷ್ಟು ಕೋಪ, ಇನ್ನಷ್ಟು ನಿರಾಶೆ, ಇನ್ನಷ್ಟು ನೋವಿನಿಂದ ಇನ್ನಷ್ಟು ಹೊಡೆದ. ಅವಳು ಅಂಗಿಯನ್ನು ಇನ್ನಷ್ಟು ಹರಿದು ತ್ಯಾಪೆ ಹಚ್ಚಲಿಕ್ಕೂ ಆಗದಂತೆ ಚಿಂದಿ ಚಿಂದಿ ಮಾಡಿ ಎಸೆದಳು!

ನ್ಯಾಯೆಲ್ಯಾ ಎರಡನೇ ಅಂಗಿಯಿಂದಲೂ ವಂಚಿತನಾದ ಈ ಕಥೆ ಕೇಳಿ ಜನ ನಕ್ಕರು. ಅಂದಿನಿಂದ ಅಂಗೀಯೆಲ್ಯಾ ಎಂದೂ ಧಾರಾಳವಾಗಿ ಇನ್ನೊಮ್ಮೆ ನಾಮಕರಣ ಮಾಡಿದರು. ಆಮೇಲೆ ಅವನಿಗೆ ಗೌಡನ ಅಂಗಿಗಳೇ ಗತಿ! ಗೌಡನ ದೊಡ್ಡ ಅಂಗಿ ಇವನ ಸಣಕಲು ಮೈಗೆ ಜೋತುಬೀಳುತ್ತಿತ್ತು. ಆದರೂ ಆತ ಬೇರೆ ಹೊಸ ಅಂಗಿ ಬಯಸಲಿಲ್ಲ. ಬರಬರುತ್ತ ಗೌಡನ ಜೊತೆಯಲ್ಲಿದ್ದಾಗ ಅಂಗೀಯೆಲ್ಯಾನಿಗೆ ಒಮ್ಮೊಮ್ಮೆ ಅಂದರೆ ಕುಡಿದಾಗ ಹೆಮ್ಮೆ ಕೂಡ ಅನಿಸುತ್ತಿತ್ತು. ಆಗೆಲ್ಲ ತನ್ನ ಹೆಂಡತಿ ರಂಗಿಗೆ ರಂಗಾಸಾನಿ ಎಂದು ಬಾಯಿತುಂಬ ಕರೆಯುತ್ತಿದ್ದ.

# ಕುರಿಯ ಬಲಿ

ಮಾರನೇ ಮುಂಜಾನೆ ಕೈ ಮಾರು ಹೊತ್ತೇರಿರಬೇಕ, ಗೌಡನ ಮನೆಯಿಂದ ನಾಯೆಲ್ಯಾನಿಗೆ ಕರೆ ಬಂತು. ಎಲ್ಯಾ ಇದನ್ನು ಊಹಿಸಿಕೊಂಡೇ ಊರಿಗಿಂತ ಮುಂಚೆ ಎದ್ದು, ತೋಟಕ್ಕೆ ಹೋಗಿದ್ದ. ಹಳಬ ಅಲ್ಲಿಗೂ ಬಂದ. ಇನ್ನು ಉಳಿಗಾಲವಿಲ್ಲ. ಬೈಸಿಕೊಳ್ಳುವುದಕ್ಕೆ ಮೈ ಬಿರುಸು ಮಾಡಿಕೊಂಡೇ ಬಂದ.

ಗೌಡರ ಮನೆಯಲ್ಲಾಗಲೇ ಜನ ತುಂಬಿತ್ತು. ಹಿರಿಯರಿದ್ದರು. ಭರಮ, ಅವನವ್ವ ಇದ್ದರು. ಆಶ್ಚರ್ಯವೆಂದರೆ ಮನೆಯ ಹೊರಗಡೆ ಕಟ್ಟೆಯ ಮೇಲೆ ಸರಪಂಚ ಕೂತಿದ್ದ. ಚತುಷ್ಟಯರಿದ್ದರು. ನಾಯೆಲ್ಯಾನನ್ನು ನೋಡಿದೊಡನೆ ಕಳ್ಳ ನಕ್ಕ. ನಾಯೆಲ್ಯಾ ಒಳಕ್ಕೆ ದೀನನಾಗಿ ಹೋಗಿ ದನಗಳ ಹಕ್ಕೆಯಲ್ಲಿ ನಿಂತ.

ವಿಚಾರಿಸುವುದೇನಿದೆ? ‘ಭರಮ ಹೇಳಿದ್ದು ಖರೆ ಏನೋ?’ ಎಂದು ಗೌಡ ಕೇಳಿದ. ನಾಯೆಲ್ಯಾ ದೊಪ್ಪನೆ ಕೆಳಗೆಬಿದ್ದು;

“ತಪ್ಪಾತ್ರಿ ಎಪ್ಪಾ, ನಶೇದಾಗ ಏನೇನೋ ಆತು. ನಾ ಎಂದೂ ಹಿಂಗ ಮಾಡಿದಾಂವಲ್ಲ. ಸರಪಂಚ ಅದೆಂಥಾದೋ ಭಿರಂಡಿ ಕೊಟ್ಟರು. ಹೊಸಬ ಸೊಲಪ ಹೆಚ್ಚ ಗದ್ದಲಾ ಮಾಡಿತರಿ.”

ಎಂದು ತಪ್ಪನ್ನೆಲ್ಲಾ ಭಿರಂಡಿಯ ಮೇಲೆ ಹಾಕಿದ. ಗುಡಸೀಕರನ ಸುದ್ದಿ ಈತನಕ ಆ ಜಗಳದಲ್ಲಿ ಕೇಳಿಸಿರಲಿಲ್ಲ. ಅಥವಾ ಯಾರಿಗೂ ಅನಿಸುವಂಥಾದ್ದೇ. ಯಾಕೆಂದರೆ ಅಂಗಿಯೆಲ್ಯಾ ಕುಡಿಯುವುದೇನೂ ಗುಟ್ಟಿನ ಸುದ್ದಿಯಲ್ಲ. ಅಥವಾ ಅದು ಸುದ್ದಿಯೇ ಅಲ್ಲ. ಮೀನು ನೀರು ಕುಡಿಯುತ್ತದೆ. ಎಂಬಂತೆ. ಆದರೆ ಒಂದು ಸಲವೂ ಈ ರೀತಿ ಹದ್ದು ಮೀರಿದವನಲ್ಲ. ಅನೀತಿಯೆಂದು ಊರವರು ಯಾವುದಕ್ಕೆ ಉಗುಳಿನಲ್ಲಿ ಬರೆದಿಟ್ಟರೋ ಆ ಸೀಮೆಗೆ ಮರೆತು ಕೂಡ ಕಾಲಿಟ್ಟವನಲ್ಲ. ಅಂಥವನು ಈ ರೀತಿ ಮಾಡಿರೋದರಲ್ಲಿ ಏನೋ ವಿಶೇಷ ಪ್ರೇರಣೆ ಇರಬೇಕೆಂದೂ ಎಲ್ಲರಿಗೂ, ಭರಮನಿಗೂ ಅನಿಸಿತು. ಇದಕ್ಕೆಲ್ಲ ಮಾತು ಕೊಟ್ಟಂತೆ ದತ್ತಪ್ಪ ಬಾಯಿಬಿಟ್ಟ.

“ನೋಡ್ರಿ, ನಾಯೆಲ್ಯಾ ಕುಡುಕ ಖರೆ. ಆದರ ಎಂದೂ ಹದ್ದು ಮೀರಿರಲಿಲ್ಲ. ಸೆರೆ ಅಂದರ ಜೊಲ್ಲ ಸುರಸತಾನ ಅಂದಮ್ಯಾಲ ನಾವs ಸ್ವಲ್ಪ ಎಚ್ಚರದಿಂದ ಇರಬೇಕಾಗತದ.

ಬರೀ ಲಗಮೀ ಬಟ್ಟಲ ಸೆರೆ ಕುಡದs ಮಗಾ ಎಪರಾ ತಪರಾ ಬೀಳತಾನ. ಇನ್ನ ಪರದೇಶಿ ಭಿರಂಡಿ ಅಂದರೆ ಹೆಂಗಾಗ ಬ್ಯಾಡ?”

ಹೋಳೀ ಹುಣ್ಣಿಮೆ ದಿನ ತನ್ನ ಮಗನನ್ನು ಗುಡಸೀಕರ ಹೊಡೆದ ಸೇಡು ಬಾಳೂನಲ್ಲಿ ಇನ್ನೂ ಇತ್ತು,

“ಹೌಂದರಿ. ಗ್ರಾಮಪಂಚಾಯ್ತಿ ಯಾಕ ಮಾಡಿದಿವಿ? ಮಂದಿ ಪರದೇಶೀ ಭಿರಂಡಿ ಕುಡ್ಯಾಕ ಕಲೀಲೆಂತ ಮಾಡಿದಿವೊ? ಊರಿಗಿಷ್ಟು ಒಳ್ಳೇದಾಗಲೆಂತ ಮಾಡಿದಿವೋ? ಮೊದಲs ಮಳ್ಳಮಂದಿ ಅವಕ್ಕೆಲ್ಲಾ ಹಿಂಗ ಚಟ ಕಲಿಸಿದರೆ ಹೆಂಗ ಹೇಳ್ರಿ?”

ಎಂದೂ ಬಾಯಿ ಹಾಕದ ಬಸೆಟ್ಟೆಯೂ ಇಂದು ಬಾಯಿ ಹಾಕಿದ, “ನನ್ನ ಕೇಳಿದರ, ನಾಯೆಲ್ಯಾ ಕೊಡಬೇಕಾದ ದಂಡಾ ಸರಪಂಚನ ಕೊಡಬೇಕಾಗತೈತ್ರಿ”s ಗೌಡ ಏನೂ ಹೇಳದಾದ. ಯಾಕೆಂದರೆ ನಾಯೆಲ್ಯಾ ಇದ್ದದ್ದು ಗೌಡನ ಮನೆಯಲ್ಲಿ, ಆಳಾಗಿ. ಆದ್ದರಿಂದ ದತ್ತಪ್ಪನ ಕಡೆ ನೋಡಿದ. ಹೇಗೋ ಇಬ್ಬರಿಗೂ ಸಮಾಧಾನವಾಗುವ ಒಂದು ತೀರ್ಮಾನ ನೀನೇ ಕೊಡು ಎಂಬರ್ಥದಲ್ಲಿ. ಆದರೆ ದತ್ತಪ್ಪ ತುಟಿ ಬಿಚ್ಚುವುದರೊಳಗೆ ದೇವರೇಸಿ ತೀರ್ಮಾನ ನೀನೇ ಕೊಡು ಎಂಬರ್ಥದಲ್ಲಿ. ಆದರೆ ದತ್ತಪ್ಪ ತುಟಿ ಬಿಚ್ಚುವುದರೊಳಗೆ ದೇವರೇಸಿ ತೀರ್ಮಾನ ಹೇಳಿಬಿಟ್ಟಿದ್ದ.

“ಮಾದಕ ಕುಲಕ್ಕ ಅಪಮಾನ ಮಾಡಿಧಾಂಗಾಗೇತಿದು, ಕುಲ ಅಂದಮ್ಯಾಲ ಸಣ್ಣದರಾಗ, ಮುಗ್ಯಾಣಿಲ್ಲ, ಒಂದು ಕುರಿ ದಂಡ ಕೊಡಲಿ.”

ಅಂಗೀಯೆಲ್ಯಾನ ಕಿಮ್ಮತ್ತೆಷ್ಟು? ಕುರಿ ಅಂದರೆ ಅವನೆಲ್ಲಿಂದ ಕೊಡತ್ತಾನೆ? ದೇವರೇಸಿಗಿದು ಗೊತ್ತಿಲ್ಲದೆ ಇಲ್ಲ. ಆದರೆ ಸಾಮಾನ್ಯವಾಗಿ ಇಂಥ ಕೇಸುಗಳಲ್ಲಿ ಕಟ್ಟುವ ದಂಡವೇ ಇದು. ದೇವರೇಸಿಯ ಬಾಯಿಂದ ಮಾತು ಹೊರಬಿದ್ದ ಮೇಲೆ ಯಾರೇನು ಹೇಳಿಯಾರು? ಆದರೆ ಕುರಿ ಯಾರು ಕೊಡಬೇಕು? ಎನ್ನುವುದೇ ಪ್ರಶ್ನೆ. ದೇವರೇಸಿ ಮೊದಲೇ ಮುಗ್ಧ. ನಾಯೆಲ್ಯಾನ ಹೆಸರಿನಲ್ಲಿ ಒಂದು ಕುರಿ ವಸೂಲಾಗಲಿ, ಏನಂತೆ? ಕುಲದವರೆಲ್ಲ ಕೂಡಿ ಮಾಂಸ ತಿಂದು ಎಷ್ಟೋ ದಿನಗಳಾಯ್ತು. ಈಗಲಾದರೆ ಬಾಯಿ ಹೊಸಲಾದರೂ ಹರಿದುಹೋದೀತು.

ಕುರಿ ಎಂದೊಡನೆ ಅಂಗೀಯೆಲ್ಯಾ ಭೂಮಿಗೇ ಕುಸಿದ. ಮಾತಾಡಲಿಕ್ಕೆ ಆಗಲೊಲ್ಲದು. ತನ್ನ ಕಡೆ ಯಾರು ನೋಡಿದರೆ ಅವರಿಗೆ “ಕಾಪಾಡ್ರಿ” ಎಂಬ ಸೂಚನೆ ಬರುವಂತೆ ಕೈ ಕೈ ಮುಗಿದ. “ಕುರಿ ಎಂದ ಕೊಡ್ತೀಯೋ?”

ಎಂದು ಮತ್ತೆ ದೇವರೇಸಿಯೇ ಬಾಯಿ ಹಾಕಿದ.

“ಎಪ್ಪಾ, ತಪ್ಪಾತ್ರಿ, ಇದೊಮ್ಮೆ ಎಲ್ಲಾ ಹೊಟ್ಯಾಗ ಹಾಕ್ಕೊಂಡ ಮಾಫೀ ಮಾಡರಿ.”

– ಎನ್ನುತ್ತಾ ಅಂಗೀಯೆಲ್ಯಾ ಸರ್ವದೈವಕ್ಕೆ ಅಡ್ಡಬಿದ್ದ. ಅಡ್ಡಬಿದ್ದರೆ ಕುರಿ ಬರುತ್ತದೆಯೊ?

ಆದರೆ ಹೇಗೆ ಒತ್ತಾಯ ಮಾಡುತ್ತಾರೆ? ತಕ್ಷಣ ಅಂಗೀಯೆಲ್ಯಾ ನೆಲದ ಮೇಲಿನ ಒಂದೆರಡು ಸಣ್ಣ ಹಳ್ಳ ಆರಿಸಿಕೊಂಡು, ಎಡಗೈಯಿಂದ ಬಲಗಿವಿ, ಬಲಗೈಯಿಂದ ಎಡಗಿವಿ ಹಿಡಿದುಕೊಂಡು ಒಂದೆರಡು ಬಾರಿ ಕೂತು ಎದ್ದ. ಕೂತು ಎದ್ದರೆ ಕುರಿ ಬರುತ್ತದೆಯೊ?

“ಬೇಕಾದರ ಎಪ್ಪಾ, ಮನೀತನಕ ಕುಂಡೀ ಎಳೀತೀನ್ರಿ”

ಹಾಗೆ ಎಳೆದರೆ ಕುರಿ ಬರುವುದೊ? ಬಂತು! “ನೋಡಲೇ ಅಂಗೀಯೆಲ್ಯಾ….” ಎಂದು ದನಿ ಹಾಕುವುದರಲ್ಲಿದ್ದ ಅಷ್ಟರಲ್ಲಿ ಕಳ್ಳ ಒಳಗೆ ಬಂದು “ನಾಯೆಲ್ಯಾ, ಸರಪಂಚರ ಕುರಿ ಕೊಡತಾರಂತ ಬಿಡಲೇ” ಎಂದ. ಅಂಗೀಯೆಲ್ಯಾ ಕೂಡಲೇ ಹೊರಗೋಡಿದ ಗುಡಸೀಕರನ ಕಾಲು ಹಿಡಿಯಲಿಕ್ಕೆ. ಪಂಚರು ಕೊಡಲಿ ಎಂದರು. ಗೌಡ ಸುಮ್ಮನಾದ, ದತ್ತಪ್ಪನೂ.

ಎಲ್ಲರೂ ಎದ್ದುಹೋದ ಮೇಲೆ ಪಂಚರಿನ್ನೂ ಹಾಗೇ ಕೂತಿದ್ದರು. ಇದು ಹಿತವಲ್ಲ ಅನ್ನಿಸಿತು. ಅಂಗೀಯೆಲ್ಯಾನ ಬಗ್ಗೆ ಯಾರಿಗೂ ಚಿಂತೆಯಾಗಲಿಲ್ಲ. ಆದರೆ ಗುಡಸೀಕರ ಈ ರೀತ ಮಧ್ಯೆ ಪ್ರವೇಶಿಸಿದ್ದು ತಪ್ಪೆನಿಸಿತು. ಬಸೆಟ್ಟಿಯೇನೋ ಬರೋಬರಿ ಬಂದ. ಆದರೆ ಪಂಚರ ತೀರ್ಮಾನಕ್ಕಿಂತ ಮುಂಚೆ ಹೇಳಿ ಕಳಿಸಿದ್ದು ತಪ್ಪೆನಿಸಿತ್ತು, ಅಷ್ಟೆ. “ಇದು ಬರೋಬರಿ ಆಗಲಿಲ್ಲ.”

– ಅಂದ ದತ್ತಪ್ಪ, ಎಲ್ಲರೂ ಸುಮ್ಮನಿದ್ದರು. ಮತ್ತೆ ಅವನೇ ಮುಂದುವರಿಸಿದ. “ಏನೋ ಕಲ್ತ ಹುಡುಗ್ರು, ಊರಿಗೆ ಹಿತ ಮಾಡ್ಯಾವು ಅಂತ ಪಂಚಯ್ತಿ ಕೊಟ್ಟರ, ಇದು ಕಾಗೀ ಕೈಯಾಗ ಕಚೇರಿ ಕೊಟ್ಟಾಂಗಾತು. ತಿರುಗಿ ತಗೊಳ್ಳೋದs ಬರೋಬರಿ ಕಾಣತದ.”

“ಈಗ ಹೆಂಗ ಮಾಡೋಣಂದಿ?”

– ಬಾಳೂ ಕೇಳಿದ.

“ಹೆಂಗೇನು? ಪಂಚಾಯ್ತಿ ತಿರಿಗಿ ತಗೊಂಡ ನಾವು ಇಟ್ಟಕೋ ಬೇಕಷ್ಟ.”

– ಎಂದ ಬಸೆಟ್ಟಿ.

– ದುಡುಕ ಬ್ಯಾಡ್ರೆಪಾ. ಆ ಹುಡುಗೋರ್ನ ಹಾದಿಗಿ ತರಾಕಿ ಯಾವ ಹಾದೀನ ಇಲ್ಲೇನು?

– ಗೌಡ ಕೇಳಿದ. ಉಳಿದವರು ಒಪ್ಪಲಿಲ್ಲ. ಬಾಳೂ, ಬಸೆಟ್ಟಿಗಾದರೆ ಇನ್ನೂ ಆತುರ. ಹೆಂಗೂ ನಾವೇ ಪಂಚಾಯ್ತಿ, ಸರಪಂಚ – ಅಂತ ಮಾಡಿದ ಮೇಲೆ ನಾವೇ ಬೇಡ ಅಮದಾಗ ಹಿಂದೆಗೆಯಬೇಕೆಂಬುದೇ ಅವರ ವಾದ. ಅದಂತೂ ಸುಲಭದ ಮಾತಲ್ಲ ಎನ್ನುವುದು ಗೌಡನಿಗೆ ಗೊತ್ತು. ದತ್ತಪ್ಪನಿಗೆ ಗೊತ್ತು. ಕೊನೆಗೆ ಎಲ್ಲರ ಒಪ್ಪಿಗೆಯಂತೆ ಒಂದು ನಿಲುಗಡೆಗೆ ಬಂದರು. ದತ್ತಪ್ಪ ಹಿರಿಯ ಪಂಚರ ಪರವಾಗಿ ಗುಡಸೀಕರನ ಬಳಿಗೆ ಹೋಗಬೇಕು. ಗ್ರಾಮಪಂಚಾಯ್ತಿಗೆ ರಾಜೀನಾಮೆ ಕೊಡೋದಕ್ಕೆ ಹೇಳಬೇಕು.

## ಭಲೇ ದಿಲ್ದಾರ

ನಾಯೆಲ್ಯಾ ಮಹಾದಿಲ್‌ದಾರ ಕುಡಿತದಲ್ಲಿ, ಹಲಗೆ ಹೊಡೆಯುವುದರಲ್ಲಿ, ಎಲ್ಲದರಲ್ಲೂ. ನಿಮ್ಮ ಹತ್ತಿರ ಬಟ್ಟಲು ಸೆರೆ ಸಿಗುತ್ತದೆಂದರೆ ಅವನ ಮೋಜಿನ ಮಾತು ಕೇಳಬೇಕು; ಬೇಕಾದರೆ ನಿಮ್ಮ ಬಗ್ಗೆ ಪದ ಕಟ್ಟಿ ಹಾಡಿದರೂ ಹಾಡಿದನೇ, ಒಗಟು ಹೇಳಿದನೇ ಬೇಕೆಂದರೆ ಎದ್ದು ಕುಣಿದನೇ, ಸುಳ್ಳು ಹೇಳಿದನೇ; ಬೇಡವಾದರೆ ನಿಜ ಹೇಳಿದನೇ, ಅಂತೂ ಏನೂ ಮಾಡಬಲ್ಲ. ಓಂಕಾರೆಪ್ಪನ ಬನ್ನೀಮರ ಆ ಊರಿನಲ್ಲೇ ದೆವ್ವಗಳಿರುವ ಭಾರೀ ಸ್ಥಳವೆಂದು ಖ್ಯಾತಿ. ಪ್ರತಿ ಅಮಾವಾಸ್ಯೆಯಂದು ಸರಿರಾತ್ರಿಯಲ್ಲಿ ಐದು ಜನ ಥಳಥಳ ಹೊಳೆಯುವ ಹೆಂಗಸರು ಆರತಿ ಬೆಳಗಿ, ಪ್ರದಕ್ಷಿಣೆ ಹಾಕಿ ಬೆಳ್ಳಂಬೆಳಗು ಮಂಗಳಾರತಿ ಮಾಡಿ ಬೆಳ್ಳೀ ಚಿಕ್ಕೆ ಮೂಡಿದೊಡನೆ ಕೆರೆಯ ಕಡೆ ಓಡುವರೆಂದೂ ಜನರಲ್ಲಿ ನಂಬಿಕೆಯಿದೆ. ಕೆಲವರು ಈ ಅದ್ಭುತ ದೃಶ್ಯವನ್ನು ಕಣ್ಣಾರೆ ಕಂಡದ್ದಾಗಿಯೂ ಹೇಳುತ್ತಾರೆ. ಬಾಟ್ಲಿ ಸೆರೆ ಕೊಡುವುದಾಗಿ ಜಿದ್ದು ಕಟ್ಟಿದ್ದಾಗ ನಾಯೆಲ್ಯಾ ಆ ಬನ್ನೀಮರಕ್ಕೆ ಅಮಾವಾಸ್ಯೆಯ ಕಗ್ಗತ್ತಲೆಯಲ್ಲೇ ಹೋಗಿ ಬಂದಿದ್ದಾನೆ ಎಂದರೆ ಎಂಥ ಧೈರ್ಯವಂತ ಇದ್ದಿರಬೇಕು!

ಶಿವಾಪುರದಲ್ಲಿ ಗ್ರಾಮಪಂಚಾಯಿತಿ ಮೆಂಬರರ ಮೀಟಿಂಗಿನ ಸುದ್ದಿ ಊರಲ್ಲಿ ಕೇಳಿಸತೊಡಗಿತ್ತಲ್ಲ, ಊರವರಿಗೆ ಆ ಸುದ್ದಿ ಕೇಳಿಸಿದರೆ ನಾಯೆಲ್ಯಾನಿಗೆ ನಾರತೊಡಗಿತು. ಆ ‘‘ಫಾರಿನ್ ಭಿರಂಡಿ’’ಯನ್ನು ಒಮ್ಮೆಯಾದರೂ ಕುಡಿಯಲೇಬೇಕೆಂದು ಮನಸ್ಸು ಹರಿಯತೊಡಗಿತು. ಚತುಷ್ಟಯರಿಗೆ ದೆವ್ವಿನ ಕಥೆ ಹೇಳಿದ. ಅವರಿಂದೇನೂ ಆಗಲಿಲ್ಲ. ಯಾಕೆಂದರೆ ಅವರೆಲ್ಲಿಂದ ಕೊಡಬೇಕು? ಗುಡಸೀಕರನನ್ನೇ ಹಿಡಿಯಬೇಕೆಂದ. ಅವನೋ ಸಿಡುಕ. ದೆವ್ವಿ ಕಥೆಗೆ ಬಗ್ಗುವವನಲ್ಲ, ಅಲ್ಲದೆ ಇವನ ಅನೇಕ ಕಥೆಗಳ ದೆವ್ವಗಳು ಇರೋದು ಗೌಡನ ತೋಟದಲ್ಲಿ, ಆದರೂ ಇವನ ಭೂತಕಥಾಸರಿತ್ಸಾಗರದಲ್ಲಿ ಗುಡಸೀಕರ ಇಷ್ಟಪಡುವ ಒಂದು ಕಥೆಯಿತ್ತು. ಗುಡಸೀಕರ ಎರಡು ಮೂರು ಬಾರಿ ಆ ಕಥೆ ಕೇಳಿ ಹಾಗೇ ಕಳಿಸಿದ್ದ. ನಾಯೆಲ್ಯಾ ಬಾಯಿಬಿಟ್ಟು ತನಗೊಂದು ಹನಿ ಹನಿಸಿರೆಂದು ಕೇಳಿದರೂ ಮುಂದೆ ಕೊಡೋಣವೆಂದು ಹೇಳಿ ನಿವಾರಿಸಿದ್ದ. ಮಾಸ್ತರ ಎದ್ದುಹೋದ ಮೇಲೆ ನಗಾಡುತ್ತಿದ್ದರಲ್ಲ. ಗುಡಸೀಕರ ಎಲ್ಯಾನಿಗೆ ತಿಳಿಯದಂತೆ ಖಾಲಿ ಬಾಟ್ಲಿಗೆ ನೀರು ಹಾಕಿ ಒಳಗೆ ಕರೆದ. ಕರೆಯುವುದಿನ್ನೂ ಮುಗಿಯುವುದರೊಳಗೇ ನಾಯೆಲ್ಯಾ ಒಳಗೆ ಬಂದಿದ್ದ.

“ನಾಯೆಲ್ಯಾ, ಆ ಗೌಡನ ದೆವ್ವಿನ ಕಥಿ ಇನ್ನೊಮ್ಮಿ ಹೇಳಲೇ’’ ಎಂದ ಗುಡಸೀಕರ, ಬಾಟ್ಲಿಯ ನೀರನ್ನೇ ಗ್ಲಾಸಿಗೆ ಬಗ್ಗಿಸಿಕೊಂಡು ಕುಡಿಯುತ್ತ. ನಾಯೆಲ್ಯಾನ ಆಸೆ ಕರಗಿ ನೀರಾಗಿ ಹರಿದಂತೆ ಜೊಲ್ಲು ಬಂತು. ಅನೇಕ ದಿನಗಳ ತನ್ನ ಆಸೆ ಈಡೇರಬಹುದೆಂಬ ನಂಬಿಕೆಯಿಂದ ಕಣ್ಣು ಅಗಲವಾಗಿ ಬೆಳೆದವು. ಮುಖ ಕಳೆಕಳೆಯಾಯಿತು. ಮನಸ್ಸಿನಲ್ಲಿ ಕರಿಮಾಯಿಯನ್ನು ಸ್ಮರಿಸಿ ‘‘ಎವ್ವಾ, ಗುಡಸೀಕರಗ ಚಲೋ ಬುದ್ಧಿ ಕೊಡವ್ವಾ’’ ಎಂದು ಬೇಡಿಕೊಂಡು ಕಥೆ ಹೇಳಲಿಕ್ಕೆ ಸಿದ್ಧನಾದ. ಒಮ್ಮೆ ಚತುಷ್ಟಯರ ಮುಖ ನೋಡಿದ. ಇವನ ಸಂಭ್ರಮ ನೋಡಿ ಅವರಿಗೂ ಅಂದರೆ ಚತುಷ್ಟಯರಿಗೂ ನಗೆ ಬಂತು. ಅದು ಅವರು ಅರಿಯದ ಕಥೆಯೇನಲ್ಲ. ಆದರೆ ಹೇಳುವ ಅವನ ಹುರುಪಿನಲ್ಲಿ ಇಂದೊಂದು ವಿಶೇಷವಿತ್ತು. ಮದುವೆಯಾದ ಹೊಸ ಹುಡುಗ, ಪ್ರಥಮರಾತ್ರಿ, ತನ್ನ ಹೆಂಡತಿಯ ಬಳಿ ಹೋಗುವಾಗಿನ ವಿಶೇಷ ಕಾಂತಿಯಿತ್ತು. ಮುಖದಲ್ಲಿ. ಲವಲವಿಕೆಯಿಂದ ಕತೆ ಹೇಳತೊಡಗಿದ:

ಒಂದಾನೊಂದು ಕಾಲದಲ್ಲಿ, ಒಂದಾನೊಂದು ಹಳ್ಳಿಯಲ್ಲಿ ರಾಜ ಮಂತ್ರಿ ಪ್ರಧಾನಿ ದಂಡು ದಳವಾಯಿ ಮಂದಿ ಮಾರ್ಬಲ ಸಮೇತ ಸುಖವಾಗಿದ್ದರು. ಶಿವಾಪುರದಲ್ಲಿ ನಾಯೆಲ್ಯಾ ರಂಗಸಾನಿ ಅಂತ ಗಂಡ ಹೆಂಡತಿ ಇದ್ದರು. ನಾಯೆಲ್ಯಾ, ಕುಡುಕ ನನ ಮಗ, ಕುಡಿಯೋದರಲ್ಲಿ ಅವನ್ನ ಮೀರಿಸುವಂಥವರು ಸುತ್ತ ನಾಡಿನಲ್ಲೇ ಇರಲಿಲ್ಲ. ಒಂದು ದಿನ ಊರಲ್ಲಿದ್ದ ಅಡುಗೂಲಜ್ಜಿ ಲಗಮವ್ವನ ಗುಡಿಸಲಲ್ಲಿ ಖೂಬಾಗಿ ಕುಡಿದ. ಕುಡಿದ ಮೇಲೆ ಹೆಂಡತಿ ನೆನಪಾಯ್ತು. ಮನೆಗೆ ಹೋದ, ಮಲಗಿದ. ಮಧ್ಯರಾತ್ರಿ ಇದ್ದಕ್ಕಿದ್ದಂತೆ ತನ್ನ ತೋಟದಲ್ಲಿ (ಅಂದರೆ ಗೌಡನ ತೋಟದಲ್ಲಿ) ಯಾರೂ ಇಲ್ಲವೆಂದು ಸೇಂಗಾ, ಒಣಗು ಹಾಕಿದ್ದರಿಂದ ಯಾರಾದರೂ ಕಳ್ಳರು ಬಂದರೆ ಹೆಂಗಪಾ ಅಂದುಕೊಂಡು ಎದ್ದ. ಅಮಾವಾಸ್ಯೆಯ ಕತ್ತಲೆ, ಹೆದರಿಕೆಯಾಯ್ತು. ಕರಿಮಾಯಿಯ ಮೇಲೆ ಭಾರಹಾಕಿ, ಆದದ್ದಾಗಲಿ ಎಂದು ನಡೆದ.

ತೋಟದ ಸಮ ಸಮೀಪ ಬಂದ ಹಾಗೆ ಸ್ವಲ್ಪ ಧೈರ್ಯ ಬಂತು. ಯಾಕೆಂದರೆ ಇವನು ಬರುವ ಮುಂಚೆಯೇ ಗೌಡರು ಬಂದು ಕಣದ ಹತ್ತಿರ ಕಾಲು ಚಾಚಿ ಬೆಂಕಿ ಕಾಸುತ್ತ ಕೂತಿದ್ದರು. ತಡಮಾಡಿ ಬಂದಿದ್ದ. ಅದಕ್ಕೇ ಗೌಡ ಬಯ್ಯುತ್ತಾರೆಂದು ಹೆದರಿಕೊಂಡೇ "ಎಪ್ಪಾ ತಪ್ಪಾತರೀ'' ಎನ್ನುತ್ತ ಸಮೀಪ ಬಂದ. ಬಂದು ನೋಡುತ್ತಾನೆ; ಗೌಡರಲ್ಲ. ಗೌಡರ ದೆವ್ವ! ಕೊಡ ಗಾತ್ರದ ತರಡು ಚೆಲ್ಲಿಕೊಂಡು ತನ್ನ ಕಾಲೀಗೇ ಬೆಂಕಿ ಹಚ್ಚಿ, ಉರಿಮಾಡಿ ಕಾಯಿಸಿಕೊಳ್ಳುತ್ತಿದೆ! ''ಸತ್ತಿನೋ! ಎಪ್ಪಾ ಕರಿಮಾಯೀ'' ಎಂದವನೇ ಓಡಿಹೋಗಿ ಗುಡಿಸಲದೊಳಗಿಂದ ನೀರು ಚಿಮುಕಿಸಿದನಂತೆ. ದೆವ್ವ ಗಪ್ಪಗಾರ, ಮಟಾಮಾಯ!

ಮಾರನೇ ದಿನ ಗೌಡನನ್ನು ನೋಡಿದಾಗಲೂ ಅವನಿಗೆ ಅದೇ ಥರ ಹೆದರಿಕೆಯಂತೆ. ಆಗಲೂ ಅವನು ರಾತ್ರಿ ಗೌಡರನ್ನು ಮುಖಾಮುಖಿ ನೋಉಡವುದಿಲ್ಲವಂತೆ –

"ಅವರಲ್ಲಿ, ನಾವಿಲ್ಲಿ''

ಎನ್ನುತ್ತ ಕಥೆ ಮುಗಿಸಿದ.

ಇಂಥಾ ಕಥೆಗಳನ್ನು ಬೇಕಾದರೆ ಎಣಿಸಿ ಸಾವಿರ ಹೇಳಿಯಾನು, ಸೆರೆ ಸಿಕ್ಕೋದಾದರೆ. ಸಾವಿರ ಕಥೆಗೂ ಇವನೇ ನಾಯಕನಾದರೂ, ಇವನು ಹೇಳುವುದು ಮತ್ತೆ ''ಒಂದಾನೊಂದು ಕಾಲದಲ್ಲಿ, ಒಂದಾನೊಂದು ಊರಿನಲ್ಲಿ'' ಎಂದೇ. ಆದರೆ ಬೇರೆಯವರ ದೆವ್ವಗಳಿಗೂ, ಇವನ ದೆವ್ವಗಳಿಗೂ ಒಂದು ವ್ಯತ್ಯಾಸವಿದೆ. ಇವೆಲ್ಲ ನೀರಿಗೆ ಹೆದರುತ್ತವೆ ಮತ್ತು ಪ್ರತಿಯೊಂದು ಕಥೆಯಲ್ಲೂ ಇವನೇ ಜಯಶಾಲಿಯಾಗುತ್ತಾನೆ. ಇದು ನಿಜವಿದ್ದೀತು, ಯಾಕೆಂದರೆ ಈ ತನಕ ಬದುಕಿದ್ದಾನಲ್ಲ! ಕೆಲವು ಹೆಣ್ಣು ದೆವ್ವಗಳು ಇವನಿಗೆ ಸೆರೆ ಕದ್ದು ತಂದುಕೊಟ್ಟು ಇವನೊಂದಿಗೆ ಮಲಗಿಹೋಗುತ್ತವಂತೆ!

ಕಥೆ ಕೇಳಿ ಎಲ್ಲರೂ ಹೋ ಎಂದು ನಕ್ಕರು. ಗುಡಸೀಕರನಿಗೆ ಖುಶಿಯಾಗಿ ''ತಗೊಳ್ಲೆ ಮಗನs ಭಿರಂಡಿ ಕುಡಿ'' ಎಂದು ಬಾಟ್ಲಿಯನ್ನೇ ಅಂದರೆ ನೀರು ತುಂಬಿದ ಬಾಟ್ಲಿಯನ್ನೇ ಇಡೀಯಾಗಿ ಅವನಿಗಿತ್ತು, ''ಹೋಗು, ನನ್ಹೆಸರ ಹೇಳಿ ಕುಡಿ ಹೋಗು'' ಎಂದ. ಕೊಟ್ಟ ತಕ್ಷಣವೇ ನಾಯೆಲ್ಯಾ ಅದೆನ್ದೆ ಇದೆನ್ನದೆ ಬಾಯಿಗಿಟ್ಟು ಗಟ ಗಟ ಗಟ ಕುಡಿದು ಬರಿ ಬಾಟ್ಲಿ ಕಂಕುಳಲ್ಲಿಟ್ಟುಕೊಂಡು ಕಣ್ಣು ಅಗಲವಾಗಿ ತೆರೆದುಕೊಂಡು, ನಿಶ್ಚಲವಾಗಿ ಕೂತುಬಿಟ್ಟ! ಚತುಷ್ಟಯರು ಬಿದ್ದು ಬಿದ್ದು ನಗುತ್ತಿದ್ದರೆ ಎಂಟು ಜನ ನಕ್ಕಂತೆ ಕಂಡರು. ಗುಡಸೀಕರನಿಗೆ ಕೈ ಮುಗಿದು ಹೊರಬಿದ್ದ. ಊರು ಆಗಲೇ ಮಲಗಿತ್ತು.

ನ್ಯಾಯೆಲ್ಯಾ ಈ ಹಿಂದೆ ಭಿರಂಡಿ ಹೇಗಿರುತ್ತದೆಂದು ಚತುಷ್ಟಯರನ್ನು ಕೇಳಿದ್ದ. ಅವರೋ ನಾಲ್ವರು ನಾಲ್ಕು ಥರಾ ಹೇಳಿದ್ದರು. ಕಳ್ಳ ''ಹೊಟ್ಯಾಗ ರಂ ಅಂದು ತಲಿ ಗಿರ್‍ರಂತ ತಿರುಗಿ, ಕಾಲಾಗ ಕುದುರಿಮರಿ ಜಿಗಧಾಂಗಾಗತೈತಿ'' ಅಂದಿದ್ದ. ''ಒಂದ ನಮೂನಿ ಒಂದಿದ್ದದ್ದ ನಾಕೆಂಟ ಆಧಾಂಗ ಇರತೈತಿ'' ಅಂತ ರಮೇಸ ಹೇಳಿದ್ದ. ''ಕೆರ್ಯಾಗ ಈಸ ಬಿದ್ದಾಂಗಿರತೈತಿ'' ಎಂದು ಸಾತೀರ ಹೇಳಿದ್ದ.

ಮೆರೆಮಿಂಡನಂತೂ "ಸ್ವರ್ಗಲೋಕ ಕಾಣತೈತಲ್ಲೋ ಮೊನ್ನಿ ನಮ್ಮ ಅಜ್ಜಾ ನಿಮ್ಮ ಅಜ್ಜೀ ಎಲ್ಲಾ ಕಂಡರು. ನಿಮ್ಮ ಅಜ್ಜೀನ ನಮ್ಮಜ್ಜಾ ಅಟ್ಟಿಸಿಕೊಂಡ ಓಡತಿದ್ದಾ!" ಎಂದು ಹೇಳಿದ್ದ. ಇದನ್ನೆಲ್ಲ ಕೇಳಿ "ಅವರವರ ಭಾವಕ್ಕೆ ತಕ್ಕಂತೆ ಅವರವರ ಪರಮಾತ್ಮ" ಎಂದುಕೊಂಡು ತನಗೇನು ಆಗುತ್ತದೋ, ಕಾಣುತ್ತದೋ ಎಂದು ಕಾತರದಿಂದ ಇದ್ದ. ತನಗೊಮ್ಮೆ ಈ ಭಿರಂಡಿ ಸಿಕ್ಕರೆ ಮೆರೆಮಿಂಡನ ಅಜ್ಜಿಯನ್ನು ತಾನು ಹಿಡಿದುಕೊಳ್ಳಬೇಕೆಂದೂ ಅಂದುಕೊಂಡಿದ್ದ. ಈಗ ನೋಡಿದರೆ ಈ ನಾಲ್ವರ ನಾಲ್ಕು ಥರದ ಅನುಭವ ತನಗೊಬ್ಬನಿಗೇ ಏಕದಂ ಏಕಕಾಲಕ್ಕೆ ಆದಂತೆ ಅನಿಸಿತು. ನಡೆಯುವುದಕ್ಕೆ ರಸ್ತೆ ಸಾಲದಾಯ್ತು. ಕುದುರೆಮರಿಯ ಮೇಲೆ ಹತ್ತಿ ಕೂತಂತೆ ಅನಿಸಿತು. ಒಂದಿದ್ದದ್ದು ನಾಕೆಂಟೂ ಕಂಡಿತು. ಕೆರೆಯಲ್ಲಿ ಈಜಾಡಿದಂತಾಯ್ತು. ಸ್ವರ್ಗಲೋಕ ಕಂಡು, ಅದರಲ್ಲಿ ಮೆರೆಮಿಂಡನ ಅಜ್ಜಿ ಎದುರು ಬಂದಂತಾಗಿ "ಸಿಕ್ಕಲೇ ಹುಡುಗಿ" ಎಂದು ತೆಕ್ಕೆ ಹಾದ. ತೆಕ್ಕೆಗೆ ಸಿಕ್ಕವನು ನಿಂಗೂ! ನಾಯೆಲ್ಯಾನಿಗೂ ಎದು ಗೊತ್ತಾಯಿತು. ಸರಿಯಾಗಿ ನಿಲ್ಲಲೂ ಆಗಲೊಲ್ಲದು. ಮಾತಾಡಲೂ ಆಗಲೊಲ್ಲದು. ಅವನ ಕಂಕುಳದ ಬಾಟ್ಲಿ ನೋಡಿ ಇದು ಗುಡಸೀಕರನೆಂದು ನಿಂಗೂ ಗುರುತಿಸಿದ. ಹೀಗೇ ಬಿಟ್ಟರೆ ರಸ್ತೆಯ ಪಾಲಾಗುತ್ತಾನೆಂದು ನಿಂಗೂ ಅವನ ರಟ್ಟೆ ಹಿಡಿದು ಅವನ ಗುಡಿಸಲ ಕಡೆ ಬಿಡೋಣವೆಂದು ಕರೆದುಕೊಂಡು ನಡೆದ. ಜೋಲಿ ತಪ್ಪಿ ನಾಯೆಲ್ಯಾ ನಿಂಗೂನ ಸೊಂಟ ತಬ್ಬಿಕೊಂಡ. "ಥೂ ಖೋಡಿ" ಎಂದು ಅಂಥ ಕತ್ತಲೆಯಲ್ಲೂ ನಿಂಗೂ ನಾಚಿಕೊಂಡ. ತನ್ನ ಓಣಿ ಸಮೀಪಿಸುವ ತನಕ ನಾಯೆಲ್ಯಾ ಏನೇನೋ ಮಾತಾಡುತ್ತಿದ್ದ. ನಿಂಗೂ ಸೂತ್ರದ ಗೊಂಬೆ ಥರಾ ಕಾಣಿಸುವುದಾಗಿ ಹೇಳಿದ. ಚಿಮಣಾ ನಿನ್ನ ಮುಂದೆ ಏನೇನೂ ಅಲ್ಲ ಅಂದ. ಇನ್ನೇನು ತನ್ನ ಹೆಂಡತಿ ಮುಂದಿನ ಅಮಾವಾಸ್ಯೆಗೆ ಸಾಯತ್ತಾಳಲ್ಲಾ, ಸತ್ತಕೂಡಲೇ ನಿಂಗೂನನ್ನೇ ಮದುವೆಯಾಗುವುದಾಗಿ ಕರಿಮಾಯಿಯ ಆಣೆ ಮಾಡಿದ. ಓಣಿ ಬಂದೊಡನೆ ಅವನನ್ನು ಅಲ್ಲೇ ಬಿಟ್ಟು "ಇನ್ನು ಗುಡಸಲಕ ಹೋಗಲೇ ಭಾಡ್ಯಾ" ಎಂದೂ ನಿಂಗೂ ಅವನಾಡಿದ್ದನ್ನೆಲ್ಲ ಜ್ಞಾಪಿಸಿಕೊಳ್ಳುತ್ತ ತನ್ನ ಮನೇ ಕಡೆ ಓಡಿಹೋದ.

ನಾಯೆಲ್ಯಾ ಗುಡಿಸಲಿಗೆ ಹೋಗಿ ಬಾಗಿಲು ಬಡಿದ. ಒಳಗಿನಿಂದ "ಯಾರವರಾ" ಎಂದದ್ದು ಕೇಳಿಸಿತು. ಇವನ ಪಿತ್ಥ ನೆತ್ತಿಗೇರಿತು. "ಯಾರವರಾ? ನಿನ ಗಂಡ! ಬಾಗಿಲ ತಗಿಯೇ ಬಿದ್ದಾಡೀ" ಅಂದ. ಅಂದು ಬಾಗಿಲಿಗೊಂದು ಒದ್ದ. ಒದ್ದು "ಬಾಗಿಲು ತೆಗಿಯೇ ರುಕ್ಮಿಣೀ; ಮೋಅದ ಅರಗಿಣೀ" ಎಂದು ಪಾರಿಜಾತದ ಕೃಷ್ಣನ ಹಾಡು ತೊದಲಿದ. ಬಾಗಿಲು ತೆರೆಯಿತು, ಒಳನುಗ್ಗಿದ. ಒಳಗೆ ಒಮ್ಮೆಲೇ, ಹಾರಾಟ, ಕೂಗಾಟ ಸುರುವಾಯಿತು. ಯಾಕೆಂದರೆ ಅದು ನಾಯೆಲ್ಯಾನ ಗುಡಿಸಲಾಗಿರಲಿಲ್ಲ. ತಪ್ಪಿ ಮಾದರ ಭರಮನ ಗುಡಿಸಲಿಗೆ ನುಗ್ಗಿದ್ದ. ಭರಮ ಮನೆಯಲ್ಲಿರಲಿಲ್ಲ.

ಭರಮನ ಹೆಂಡತಿ ಮತ್ತು ತಾಯಿ ಕಿರುಚಾಡುತ್ತ, ಒದರಾಡುತ್ತ, ಬೈಗಳಗಳಿಂದ ನಾಯೆಲ್ಯಾನನ ಕುಲಕೋಟಿಯನ್ನು ತೊಳೆಯುತ್ತ ಕೈಗೆ ಸಿಕ್ಕ ತಟ್ಲೆ, ಕಸಪೊರಕೆಯಿಂದ ಕೈ ಬಾಯಿ, ನೋಡದೆ ಬಾರಿಸಿ, ಮೈ ನೀರಿಳಿಸುತ್ತ ಹಾಹೋ ಎಂದು ಗದದಲ ಮಾಡತೊಡಗಿದರು. ಕಳ್ಳನಿರಬೇಕೆಂದು ಪಕ್ಕದ ಗುಡಿಸಲಿನವರು ಎಚ್ಚೆತ್ತು ಹೊರಗೆ ಬಂದು ಭರಮನ ಮನೆ ನುಗ್ಗಿ ಅವರೂ ಒದ್ದರೂ. ಈ ತನಕ ದಿಕ್ಕು ತಪ್ಪಿ, ಏನೆಂದು , ಯಾಕೆಂದು, ಹ್ಯಾಗೆಂದು ತಿಳಿಯದೆ ಒದರಾಡದೆ ಸುಮ್ಮನೆ ಏಟು ತಿನ್ನುತ್ತಿದ್ದವನು ಮಂದಿ ಬುತ್ತಲೂ ತನಗಿನ್ನು ಉಳಿಗಾಲವಿಲ್ಲೆಂದು "ಸತ್ರಿನ್ರೋ ಎಪ್ಪಾ" ಎಂದು ಸಿಡಿದ ಉಗುಳಿನಂತೆ ಹೊರಬಿದ್ದ.

ನೋಡಿದರೆ ನಾಯೆಲ್ಯಾ! ಮೂಲೆ ಗುಡಿಸಲದ ಅವನ ಹೆಂಡತಿ ರಂಗಸಾನಿಗಾಗಲೇ ಎಚ್ಚರವಾಗಿ ಹೊರಬಂದಿದ್ದಳು. ಇಬ್ಬರೂ ಹೆಂಗಸರು ಅಳುತ್ತ, ಕರೆಯುತ್ತ ಹೊರಬಂದ ಎಲ್ಲರಿಗೂ ಹೇಳಿ ಸಹಾಯಕ್ಕಾಗಿ ಕೂಗಾಡತೊಡಗಿದದರು. ಈಗ ಅವನಿಗೆ ಒಂದಿಷ್ಟೂ ನಿಶೆಯಿರಲಿಲ್ಲ. ಕಂಡ ಕಂಡವರ ಕಾಲು ಹಿಡಿದ. "ನಿಶೇದಾಗ ತಪ್ಪಾತೆಪ್ಪೋ" ಅಂದ. ಕೂಡಿದವರು ಥೀ ಥೂ ಅಂದರು. ಭರಮನ ತಾಯಿ ಹಾಗೂ ಹೆಂಡತಿಯ ಕೂಗಾಟ ಇನ್ನೂ ಸಾಗಿತ್ತು. ಉಳಿದವರು "ನಾಳಿ ಗೌಡಗ ಹೇಳೋಣು, ಹೋಗ್ರಿನ್ನ" ಎಂದು ಸಮಾಧಾನ ಮಾಡಿ ಅವರನ್ನು ಒಳಗೆ ಕಳಿಸಬೇಕಾದರೆ ಕುರಿ ಕೋಣ ಬಿದ್ದವು. ರಂಗಿ ನಾಯೆಲ್ಯಾನನ್ನು ದರ ದರ ಎಳೆದುಕೊಂಡು ಹೋಗಿ ಬಾಗಿಲಲ್ಲಿ ಕಾಲಿನಿಂದ ಒಂದೆರಡು ಚೆಲ್ಲಿ, ಅಲ್ಲೇ ಬಿಟ್ಟು ಒಳಗೆ ಹೋಗಿ ಮಲಗಿದಳು. "ಕರಿಮಾಯಿ! ಏನ ಹೋಗಿ ಏನಾತಿದು" ಎಂದು ಚಿಂತಿಸುತ್ತ ನಾಯೆಲ್ಯಾ ಬಾಗಿಲಲ್ಲೇ ಬಿದ್ದುಕೊಂಡ, 'ಮುನಿಯೆಲ್ಯಾ'ನೊಂದಿಗೆ.

# ದುರ್ಗಿಯ ಕನಸು

ಗುಡಸೀಕರ ತಲೆಯಲ್ಲಿ ಕಾರ ಹುಣ್ಣಿವೆ, ಚಹದಂಗಡಿಯ ಹುಳ ಕೊರೆಯುತ್ತಿದ್ದರೆ ಇತ್ತ ಆತ ಕೊಟ್ಟ ಒಂದು ರೂಪಾಯಿಯ ನೋಟು ದುರ್ಗಿಯ ಎಳೆಯ ಎದೆಯನ್ನು ಕೊರೆಯುತ್ತಿತ್ತು.

ಗುಡಸೀಕರ ಕೊಟ್ಟ ಹತ್ತರಲ್ಲಿ ಕೊನಗೆ ಒಂದು ರೂಪಾಯಿ ಅದೂ ನಿಂಗೂನ ದಯದಿಂದ ದುರ್ಗಿಗೆ ದಕ್ಕಿತ್ತು. ಅದನ್ನು ಮಲಿಕಟ್ಟಿಗೆ ಸೇರಿಸಿದೊಡನೆ ಹೊಸ ಪ್ರಾಯಕ್ಕಿಂತ ಈ ನೋಟಿನ ಭಾರವೇ ಹೆಚ್ಚಾಗಿ ಎದೆ ಬಿಗಿಯಿತು. ಹುಚ್ಚು ಹುಡುಗಿ ಗಾಳಿ ತುಂಬಿದ ಎಳೆಗರವಿನಂತೆ ಒಳಗೊಮ್ಮೆ ಹೊರಗೊಮ್ಮೆ ವಿನಾಕಾರಣ ಅಡ್ಡಾಡಿದಳು. ಈಗಷ್ಟೆ ರೆಕ್ಕೆ ಮೂಡಿದ ಇಟ್ಟೆ ಅಕಾ ಅಲ್ಲಿ, ಇಕಾ ಇಲ್ಲಿ ಎಲೆ ಎಲೆಗೆ ಹೂ ಹೂವಿಗೆ ಮೇಲಕ್ಕೆ ಕೆಳಕ್ಕೆ ಹಾರಾಡುವಂತೆ ನೆಲಕ್ಕೆ ಕಾಲೂರದೆ ಹರಿದಾಡಿದಳು. ಲಗಮವ್ವನ ಕಣ್ಣು ತಪ್ಪಿಸಿ, ಕತ್ತಲಲ್ಲಿ ಕೈಹಾಕಿ ಹಾಕಿ ನೋಟು ಮುಟ್ಟಿ ಮುಟ್ಟಿ ನೋಡಿದಳು. ಅಯ್ ಶಿವನ; ಮೈ ಬಿಸಿಯೇರಿ ಅಂಗಾಲಿನಿಂದ ನೆತ್ತಿಯ ತನಕ ವಿಷ ಏರಿ, ತೊಡೆಬೆವರಿ, ಎದೆಕುಪ್ಪಸ ತಿಟ ತಿಟ ಎನ್ನುತ್ತಿತ್ತು.

ಲಗಮವ್ವ ಊಟಕ್ಕೆ ಕರೆದರೆ ಬರೀ ಊಟದ ಅಭಿನಯ ಮಾಡಿ ಮಲಗಿದಳು. ಬಿಗಿದ ನರನರಗಳನ್ನು ಜಗ್ಗಿಜಗ್ಗಿ ಸಡಿಲು ಮಾಡಲೆಂಬಂತೆ ಒಡಮುರಿದು ಹಾಸಿಗೆಯ ತುಂಬ ತೋಳು ಕಾಲುಗಳನ್ನು ಉದ್ದುದ್ದಕ್ಕೆ ಚಾಚಿ ಆಕಳಿಸಿದಳು. ಈಜು ಬಾರದ ಪಾಪ; ಎಳೇ ಹುಡುಗಿ, ಬಿಸಿ ನೀರ ಹೊಳೆಯ ಮಹಾಪೂರದ ತಿರುಗಣಿಯ ಇಕ್ಕಟ್ಟಿನಲ್ಲಿ ಸಿಕ್ಕು ವಿಲಿವಿಲಿ ಒದ್ದಾಡಿದಳು. ಹಾಸಿಗೆಯಲ್ಲಿ ಅರಿಯದ ಬಾಲಿ, ಬೆನ್ನು ಮೇಲಾಗಿ ಬಿದ್ದಕೊಂಡು, ನಾಕೈದು ಸಲ ಎದೆಯಿಂದ ತಲೆದಿಂಬು ಗುಮ್ಮಿ ಗುಮ್ಮಿ ಎದೆಯ ಘನ ಕರಗಿಸಲೆಳಸಿದಳು. ಹಗುರಾದಂತಾಗಿ ಹಾಗೇ ಬಿದ್ದುಕೊಂಡಳು. ನಿದ್ದೆಯಲ್ಲೊಂದು ಕನಸುಕಂಡಳು:

ಬೆಳದಿಂಗಳ ಮಾಯೆ ಆವರಿಸಿ ಊರಂತೂರು ತೇಲುಗಣ್ಣು, ಮೇಲುಗಣ್ಣಾಗಿ ನಿದ್ರಿಸುತ್ತಿದ್ದಾಗ ಇವಳೊಬ್ಬಳೇ ಕಿಲಕಿಲ ನಗುತ್ತ ಕೆರೆಯ ದಂಡೆಯ ಬಂಡೆಗಳ ಮೇಲೆ ಥೈ ಥೈ ಥೈ ಗೆಜ್ಜೆಯ ಹೆಜ್ಜೆಯೂರಿ ಓಡಾಡುತ್ತಿರುವಾಗ ಗುಡಸೀಕರ ಬಂದು ಇವಳನ್ನು ಅಮಾತ ಎತ್ತಿ ಗೊಂಬೆಯಂತೆ ಮೇಲೆ ಹಾರಿಸಿ ಆಕಾಶದಲ್ಲಿ ಬಿಟ್ಟೊಡನೆ –

ಹೋ ಬಿದ್ದೆನೆಂಬಾಗ ಕೆಳಕ್ಕೆ ಹುಲ್ಲಿನ ಬಣಿವೆ –
ಧಪ್ಪೆಂದು ಅಂಗಾತ ಬಿದ್ದು ಎದೆ ಹೊಮ್ಮಿ ಕುಪ್ಪಸ ಹರಿದು
ಖೊಖ್ಖೊಃಖ್ಖ್ ಎಂದು ಬಯಲಾಟದ ರಾವಣನಂತೆ ನಗುತ್ತ ಸಿಗರೇಟು ಸೇದಿ
ಬಿಳಿಹೊಗೆ ಬಣಿವೆ ಸೇರಿ, ನೂರ್ಮಡಿಯಾಗಿ
ಬಣಿವೆ ತುಂಬ ಹೊಗೆಯಾಗಿ
ಊರ ತುಂಬಾಗಿ
ತನ್ನ ಮೈಮೇಲೆ ಯಾರೋ ಪಸಪಸ ತುಳಿಯುತ್ತ
ಚೆಂಡಾಟವಾಡುವಾಗ – ಎವ್ವಾ ಸತ್ತನೇ ಎಂದು
ಚೀರಿ –

– ಎಚ್ಚರಾಯ್ತು. ಎದೆ ಹಿಡಿದುಕೊಂಡು ಮೇಲೆದ್ದು ಕೂತಳು. ಕೆನ್ನೆ, ಕತ್ತಿನ ಮೇಲೆ, ಹಣೆ ಮೂಗಿನ ಮೇಲೆ ಮೂಡಿದ ಬೆವರನ್ನು ಒರೆಸಿಕೊಂಡಳು. ಹೋಗಿ ನೀರು ಕುಡಿದು ಬಂದಳು. ಪಕ್ಕದ ಗುಡಿಸಲಲ್ಲಿ ದೇವರೇಸಿ ಬಿಕ್ಕುತ್ತಿದ್ದುದು ಕೇಳಿಸಿತು.

# ಪ್ರಶ್ನೋತ್ತರ ಮಾಸ್ತರ

ಗೌಡ ದಿನದಂತೆ ಒಂದು ದಿನ ಬೆಳಿಗ್ಗೆದ್ದು ಕೆರೆಯಲ್ಲಿ ಜಳಕ ಮಾಡಿ ಮನೆಗೆ ಬಂದ. ಅಂಗಳದಲ್ಲಿ ನಾಯೆಲ್ಲ್ಯಾ ಆಗಲೇ ಗಳೇ ಸಾಮಾನು ತಯಾರು ಮಾಡಿಕೊಂಡು ಎತ್ತುಹೂಡುತ್ತಿದ್ದ. ಗೌಡ ಅವನಿಗೆ "ಕೆಳಗಿನ ಹೊಲದ ನೆಲ ಇನ್ನೂ ಬಿರುಸಾಗಿರುವುದರಿಂದ ಬಳೆಸಾಲಕ್ಕೆ ಬದಲು ಇನ್ನೊಮ್ಮೆ ಕುಂಟಿ ಹೊಡೆಯುವುದಕ್ಕೆ ಹೇಳುತ್ತಿದ್ದ. ಪ್ರಶ್ನೋತ್ತರ ಮಾಸ್ತರ ಆಗಷ್ಟೇ ಎದ್ದು ಹೊರಕಡೆಗೆ ಹೊರಟಿದ್ದವನು ಗೌಡನನ್ನು ಕಂಡೊಡನೆ ಚರಿಗೆ ಸಮೇತ ಎರಡೂ ಕೈ ಜೋಡಿಸಿ "ಎದ್ದಿರಾ ಗೌಡರೇ?" ಎಂದ. "ನೀವೆದ್ದಿರಾ ಮಾಸ್ತರ?" ಎಂದು ಗೌಡ ಕೇಳಿ ಪ್ರತಿ ನಮಸ್ಕಾರ ಮಾಡಿದ. ಅಷ್ಟರಲ್ಲಿ ಗುಡಸೀಕರ ಕೆರೆಯ ಕಡೆಯಿಂದ ಈ ಕಡೆಗೆ ಬರುತ್ತಿದ್ದದು ಕಾಣಿಸಿತು. ಮಾಸ್ತರ ಬರುತ್ತಿದ್ದ ಗುಡಸೀಕರನನ್ನು ನೋಡಿಯೂ ನೋಡದಂತೆ ನಿವಾರಿಸಿ, ಹಾದಿ ಬಿಟ್ಟು, ಸಂದಿಯೊಂದರಲ್ಲಿ ತೂರಿ ಮರೆಯಾದ. ಗುಡಸೀಕರ ಇದ್ಯಾವುದನ್ನು ಗಮನಿಸಲಿಲ್ಲವೇನೋ ಎಂಬಂತೆ ತನ್ನ ಮನೆಗೆ ಹೋದ.

ಈ ಊರಲ್ಲಿ ಕಗಂಸಾಲೆ (ಕನ್ನಡ ಗಂಡು ಮಕ್ಕಳ ಶಾಲೆ) ಸುರುವಾದಾಗಿನಿಂದ ಇಲ್ಲಿದ್ದವನು ಅವನೊಬ್ಬನೇ ಮಾಸ್ತರ. ವಯಸ್ಸಾಗಿತ್ತು. ಪಕ್ಕದ ಊರಿನವನು. ಹೆಂಡತಿ, ಮಕ್ಕಳು ಕೂಡ ಉಂಟಂತೆ. ಬಂದು ಇಷ್ಟು ವರ್ಷವಾದರೂ ಸಂಸಾರವನ್ನು ತನ್ನ ಹಳ್ಳಿಯಲ್ಲೇ ಬಿಟ್ಟು ಇಲ್ಲೊಂದು ಹಳೆಯ ಮನೆಯಲ್ಲಿದ್ದ. ಶನಿವಾರ ಒಪ್ಪತ್ತು ಸಾಲೆ ಮಾಡಿ ಊರು ಬಿಟ್ಟರೆ ಮತ್ತೆ ಅವನ ದರ್ಶನವಾಗುವುದು ಮಂಗಳವಾರ ಮಧ್ಯಾಹ್ನವೆ. ಅವನ ಬಗ್ಗೆ ವಾರದಾಗ ಮೂರದಿನ ಬಂದ ಹೋಗಾಂವ ಎಂದು ಹುಡುಗರು ಕದ್ದು ಹಾಡುತ್ತಿದ್ದರು. ಸೋಮವಾರ ಸಂತೇ ದಿನವಾದ್ದರಿಂದ ಸರಕಾರದ ಅಪ್ಪಣೆಯಿಲ್ಲದೆ ತಾನೇ ರಜಾ ಘೋಷಿಸುತ್ತಿದ್ದ. ಬಂದು ಇಷ್ಟು ದಿನವಾದ್ದರಿಂದ ಅವನೇನು ಈ ಊರಿನಲ್ಲಿ ಬೇರುಬಿಡಲೇ ಇಲ್ಲ. ಸದಾ ಒಂದು ಕಾಲು ಇಲ್ಲಿ, ಇನ್ನೊಂದು ಕಾಲು ಹಳ್ಳಿಯಲ್ಲಿ. ತಾನಾಯಿತು, ತನ್ನ ಸಾಲೆಯಾಯಿತು. ಅಲ್ಲದೆ ಇಂದೋ, ನಾಳೆಯೋ ನಿವೃತ್ತನಾಗಬೇಕು. ಇದ್ದಷ್ಟು ದಿನ ಎಲ್ಲರಿಗೆ ಬೆಲ್ಲದ ಹೇರಾಗಿದ್ದು ಹೋದರಾಯಿತು ಎಂದು ಊರಿನ ಉಸಾಬರಿಯಲ್ಲಿ ತಲೆಹಾಕುತ್ತಲೇ ಇರಲಿಲ್ಲ.

ಪರಿವೂರಿನವನಲ್ಲವೇ? ಈ ಊರ ಯಾರ್ಯಾರ ನೀರು ಎಷ್ಟೆಂದು ಅವನಿಗೆ ಕೊನೆಯ ತನಕ ತಿಳಿಯಲೇ ಇಲ್ಲ. ತಿಳಿದುಕೊಳ್ಳಲು ಅವನು ಯತ್ನಿಸಲೂ ಇಲ್ಲ. ಆದ್ದರಿಂದ ಯಾರು ಕಂಡರೂ ಅವರಿಗೆ ಕೈ ಜೋಡಿಸಿ ಅತಿ ವಿನಯ ಪ್ರದರ್ಶಿಸುತ್ತ, ಅವರಿಗೆಲ್ಲ ಖಾತ್ರಿಯಾಯಿತೋ ಇಲ್ಲವೋ ಎಂದು ಹಲ್ಲುಗಿಂಜುತ್ತ, ಮಾತಿಗೊಮ್ಮೆ ರೀ ರೀ ಎನ್ನುತ್ತ ಅವರ ಯೋಗಕ್ಷೇಮ ಕೇಳುತ್ತಿದ್ದ. ಹಾಗೆ ಕೇಳಿದ್ದು ಎಲ್ಲಿ ಸಾಲ ಕೇಳಿದಂತಾಯಿತೋ ಎಂದು, ಅಥವಾ ಪಾಪ, ಅವರಿಗೇಕೆ ಉತ್ತರ ಹೇಳುವ ತಾಪತ್ರಯವೆಂದು ತಾನೇ ಉತ್ತರವನ್ನೂ ಹೇಳುತ್ತಿದ್ದ. ಉದಾಹರಣೆಗೆ ಶಿವಾಪುರದ ಒಬ್ಬ ಸಜ್ಜನ ಭೇಟಿಯಾದನೆನ್ನೋಣ, ಕೂಡಲೇ ಮಾಸ್ತರನು "ನಮಸ್ಕಾರರಿ, ಹೆಂಗ, ಆರಾಮ ಇದ್ದೀರಾ?" ಎಂದು ಕೇಳಿ, "ಆರಾಮ ಇರಬೇಕಲ್ಲ, ಮಕ ನೋಡಿದರs ತಿಳೀತೈತಿ" ಎಂದು ಉತ್ತರವನ್ನು ತಾನೇ ಹೇಳುತ್ತಿದ್ದ.

"ಬೆಳಿ ಚೆಲೋ ಆದಾವ್ರೆ?"

"ಚೆಲೋ ಇರದೇನ್ರಿ? ಕಂಡಾಪಟಿ ಮಳಿ ಆಗೇತಿ."

ಎಷ್ಟೋ ಸಲ ಹೊಲ ಇಲ್ಲದವರಿಗೂ ಹೀಗೇ ಪ್ರಶ್ನೋತ್ತರಿಸಿ ದಾಟಿ ಹೋಗುತ್ತಿದ್ದ. ಅಲ್ಲದೆ ಅವನ ಯೋಚನಾಕ್ರಮವೂ ಹೀಗೇ ಇತ್ತು. ತಾನು ಏನು ಯೋಚನೆ ಮಾಡುತ್ತಿದ್ದೇನೆ ಎನ್ನುವುದು ತನಗೇ ಸ್ಪಷ್ಟವಾಗಿ ತಿಳಿದಿರಲೆಂದು ಯೋಚಿಸುವಾಗಲೆಲ್ಲ ಮಾತಾಡುತ್ತಲೇ ಯೋಚಿಸುತ್ತಿದ್ದ. ಏನೂ ಇಲ್ಲದೆ ಮಾತಾಡುವ ಜನ ಇಷ್ಟು ಸಿಕ್ಕರೆ ಬಿಟ್ಟಾರೆಯೆ? ಮಾಸ್ತರನು "ಪ್ರಶ್ನೋತ್ತರ ಮಾಸ್ತರನಾದದ್ದು" ಹೀಗೆ.

ಮಾಸ್ತರ ಈ ದಿನ ಮುಂಜಾನೆ ಗೌಡನಿಗೆ ನಮಸ್ಕರಿಸಿದ್ದನ್ನು ಗುಡಸೀಕರ ನೋಡದವನಂತೆ ನೋಡಿದ್ದ. ರಾತ್ರಿ ಮಾಸ್ತರನಿಗೆ ಪಂಚಾಯ್ತಿ ಆಫೀಸಿಗೆ ಬರಬೇಕೆಂಬ ಬುಲಾವ್ ಹೋಯಿತು. ಯಾವನಾದರೂ ಇನ್ಸ್‌ಪೆಕ್ಟರ್ ಬಂದಿದ್ದಾನೋ? ಯಾರಿಗ್ಗೊತ್ತು. ಏನಾದರೂ ಆರ್ಡರ್ ಬಂದಿದೆಯೋ? ಯಾರಿಗ್ಗೊತ್ತು – ಹೀಗೆ ತಂತಾನೆ ಪ್ರಶ್ನೋತ್ತರಿಸುತ್ತಲೇ ಬಂದ, ಗುಡಸೀಕರನೂ, ಅಷ್ಟು ದೂರದಲ್ಲಿ ಜಮಖಾನೆಯ ಮೇಲೆ ಚತುಷ್ಟಯರೂ, ಕುಡಿಯುತ್ತ, ಮೀಟಿಂಗ್ ಮಾಡುತ್ತ ಅಂದರೆ ಇಸ್ಪೀಟಾಡುತ್ತ ಕೂತಿದ್ದರು. ಹಾಗಿ ನೋಡಿದರೆ ಪಾಪ, ಮಾಸ್ತರನೇ ಅವರಿಗೆ ಒಂದು ಕಾಲಕ್ಕೆ ಒಂದೆರಡು ಅಕ್ಷರ ಹೇಳಿಕೊಟಟಿದ್ದವನು. ಅವನು ಕಲಿಸಿದ ತಿರುಕನ ಕನಸನ್ನು ಕಳ್ಳ ಇನ್ನೂ ಮರೆತಿಲ್ಲ. ಆದ್ದರಿಂದ ಚತುಷ್ಟಯರಿಗೆ ಮಾಸ್ತರನ ಮುಂದೆ ಮೀಟಿಂಗ್ ಮಾಡಲು ಸಂಕೋಚವಾಯ್ತು. ಆದರೆ ಗುಡಸೀಕರ ಸಿಟ್ಟಾದರೆ ಕಷ್ಟ, ಅಲ್ಲದೆ ವಿದೇಶೀ 'ಭಿರಂಡಿ'ಯ ಒಂದೆರಡು ತೊಟಕು ಒಳಗಿಳಿದಿತ್ತು. ಅದೂ ಬೇಡ; ಈಗವರು ಊರಿನ ಗ್ರಾಮಪಂಚಾಯಿತಿ ಮೆಂಬರರಲ್ಲವೇ? ಗೌಡನನ್ನೇ ಎದರು ಹಾಕಿಕೊಂಡವರಿಗೆ ಮಾಸ್ತರ ಯಾವ ಲೆಕ್ಕ? ಕಲಿಗಾಲ ಬೇರೆ ಇವರ ಮುಖಾಂತರವೇ ಊರಿಗೆ ಕಾಲಿಟ್ಟಿತ್ತು. ಲಗಮವ್ವನ ಹಾಡಿನ ಪ್ರಕಾರ.

ಮಾಸ್ತರ ಮುದ್ದೆಯಾಗಿ ಮುಷ್ಟಿಯಷ್ಟೇ ಆಗಿ ಬಂದ. "ನಮಸ್ಕಾರರೀ ಸರಪಂಚ ಸಾಹೇಬರs" ಅಂದ. ಗುಡಸೀಕರ ಕತ್ತೆತ್ತಿ ಅವನ ಕಡೆ ನೋಡಲೇ ಇಲ್ಲ. ಉಳಿದವರು ಒಳಗೆ ಬರ್ರೀ ಅನ್ನಲಿಲ್ಲ. ಮಾಸ್ತರ ಬರುವ ಮುನ್ನವೇ ಉಳಿದವರಿಗೆ ಗುಡಸೀಕರ ಮುಂಜಾನೆ ನಡೆದದ್ದನ್ನೆಲ್ಲ ಹೇಳಿಬಿಟ್ಟಿದ್ದ. ಅವರು ಹಾಗೆ ಸುಮ್ಮನೆ ಕೂತರೋ ಇಲ್ಲವೋ ಮಾಸ್ತರನ ಜಂಘಾಬಲ ಕೈಕೊಟ್ಟಿತು. ಒಳಗೊಳಗೆ ಚಡಪಡಿಸಿದ. ಏನೇನೋ ಪ್ರಶ್ನೋತ್ತರಿಸಿಕೊಳ್ಳುತಿದ್ದುದು ಅವನ ಹಸ್ತಾಭಿನಯದ ಮೂಲಕ ಸ್ಪಷ್ಟವಾಗುತ್ತಿತ್ತು. ಬಹುಶಃ ಕರೆಸಿರಲಾರರು, ಯಾರೋ ಬಂದು ಚೇಷ್ಟೆ ಮಾಡಿರಬಹುದೆಂದು "ಬರಲೇನ್ರಿ ಹಂಗಾದರ?" ಎಂದು ಕೇಳಿ "ಆಗಲಿ" ಎಂದು ತಾನೇ ಅಪ್ಪಣೇ ಕೊಟ್ಟಕೊಂಡು ನಡೆದ, ಕಳ್ಳನ ಗುರುಭಕ್ತಿ ಜಾಗೃತವಾಯಿತು.

"ಕುಂದರ್ರೀ ಮಾಸ್ತರ"

ಮಾಸ್ತರ ಕುಸಿದವರಂತೆ ಕೂತ. ಎಲ್ಲರೂ ತಂತಮ್ಮ ಇಸ್ಪೀಟ್ ಎಲೆಗಳ ಕಡೆಗೇ ನೋಡುತ್ತಿದ್ದರು. ರಮೇಸ ಕೇಳಿದ,

"ಏನ್ರೀ ಮಾಸ್ತರ, ಗೌಡನ ಜೋಡಿ ಅದೇನ ನಿಮ್ಮ ಸಲಿಗೆ?"

"ನಂದೇನ ಸಲಿಗಿ? ಏನೂ ಇಲ್ಲಲ್ಲಾ."

"ಇರದಿದ್ದರ ಹರೀವತ್ತ ಅದ್ಯಾಕಷ್ಟ ಕೈ ಕೈ ಮುಗೀತಿದ್ದಿರಿ?"

"ಕೈ ಕೈ ಮುಗೀತಿದ್ದೇ? ಹೌಂದು, ಹರೀವತ್ತೆದ್ದಮ್ಯಾಲ ಎದ್ದಿರಾ ಅಂತ ಕೇಳಿದರ ತಪ್ಪ? ತಪ್ಪಲ್ಲ."

ಮಾಸ್ತರ ತಪ್ಪ ತಪ್ಪಲ್ಲಂದನಲ್ಲ. ಸಾತೀರನ ಸೇಡು ಹೆಡೆ ತೆಗೆಯಿತು. ಯಾಕೆಂದರೆ ಚಿಕ್ಕಂದಿನಲ್ಲಿ ತಾನು ಏನು ಬರೆದು ತೋರಿಸಿದರೂ ಈ ಮಾಸ್ತರ ತಪ್ಪುತಪ್ಪು ಅಂತಿದ್ದ.

"ಏನ್ರಿ ತಪ್ಪಲ್ಲಂದರ? ಹುಡುಗೋರಿಗೆ ಚೆಲೋ ಸಾಲಿ ಕಲಸೋದ ಬಿಟ್ಟ ಎದ್ದವರ ಮನೀ ಮನೀ ಅಡ್ಡಾಡಿ ಎದ್ದಿರಾ? ಎದ್ದಿರಾ? ಅಂತ ಕೇಳಿಕೊಂಡ ತಿರಗತೀರಿ. ಹದಿನೇಳ ಆರಲಾ ಎಷ್ಟಂತ ಕೇಳಿದರ ಒಬ್ಬ ಹುಡುಗ್ಗೂ ಹೇಳಾಕ ಬರಲಿಲ್ಲ. ಇದs ಏನ್ರಿ ಸಾಲಿ ಕಲಿಸೋಣಿಕಿ? ವಾರದಾಗ ಮೂರ ದಿನಾ ಇಲ್ಲಿರತೀರಿ. ನಾಕ ದಿನಾ ನಿಮ್ಮೂರಾಗಿರ್ತೀರಿ. ಇಂದs ಗುಡಸೀಕರ ಸಾಹೇಬರ ಮ್ಯಾಲ ಬರದ ಹಾಕಿದರ ನಿಮ್ಮ ಗತಿ ಏನಾದೀತು?"

ಎದೆಯ ಮೇಳೆ ಏಕದಂ ಬಂಡೆ ಬಿದ್ದಂತೆ ಮಾಸ್ತರ ಒದ್ದಾಡಿದ. ಕೈಮುಗಿದು "ಇಲ್ಲರೀ, ಇಲ್ಲರೀ" ಅಂದ. ಮಾಸ್ತರನ ಮೇಲೆ ತನ್ನ ಮಾತಿನ ಪ್ರಭಾವ ಹೀಗಾದೀತೆಂದು ಸಾತೀರನಿಗೂ ಗೊತ್ತಿರಲಿಲ್ಲ, ಅವರಲ್ಲೆಲ್ಲ ಸ್ವಲ್ಪ ದಡ್ಡನೆಂದರೆ ಮೆರೆಮಿಂಡ. ಆದ್ದರಿಂದಲೇ ಅವನ ಕರುಳು ಕರುಗಿತು. ಎಷ್ಟೆಂದರೂ ಅಕ್ಷರ ಕಲಿಸಿದ ಗುರು ಅಲ್ಲವೆ? ಬಳಸಿ ಬಳಸಿ ಯಾಕೆ? ನೇರವಾಗೇ ಹೇಳಬಹುದಲ್ಲಾ.

"ಛೇ ಛೇ ಮಾಸ್ತರ ನೋಡರಿಲ್ಲೆ. ನಾಳಿಂದ ದಿನಾ ಹರವತ್ತೆದ್ದ ಗುಡಸೀಕರ ಸಾಹೇಬರ ಮನೀಗಿ ಹೋಗಿ ಎದ್ದಿರಾ ಅಂತ ಕೇಳಿ ಬರ್ರಿ. ಮೆಂಬರು ಯಾರಾದರೂ ಸಿಕ್ಕರ "ಎದ್ದೀರಾ?" ಅಂತ ಕೇಳ್ರಿ. ಆ ಗೌಡ, ದತ್ತೂ ಇದ್ದಾರಲ್ಲಾ, ಅವರನ್ನ ಇನ್ನ ಮ್ಯಾಲ ಮಾತಾಡಸಬ್ಯಾಡರಿ, ತಿಳೀತ?"

ಅಂದ. ಈ ನೇರ ಮಾತು ಗುಡಸೀಕರನಿಗೆ ಹಿಡಿಸಲಿಲ್ಲ.

"ದಿನಾ ಮುಂಜಾನೆ ಬ್ಯಾಡ, ನೋಡಪಾ, ಸಾಲಿ ಇರೋದು ಪಂಚಾಯ್ತಿ ಕೈಯಾಗ. ನಾವಃ ಮ್ಯಾಲ ಬರದ ಹಾಕಿದರೆ ನಾಳಿ ನಿಮ್ಮ ಗೌಡನೂ ನಿಮ್ಮನ್ನು ಉಳಸಾಕಿಲ್ಲ. ದತ್ತೂನೂ ಉಳಸಾಕಿಲ್ಲ. ನಿಮ್ಮ ಕಡಿಂದ ನಮಸ್ಕಾರ ಮಾಡಿಸ್ಕೋಬೇಕಂತ ಹಿಂಗ ಹೇಳಲಿಲ್ಲ ಮತ್ತ, ತಿಳಕೊಳ್ರಿ."

ಮಾಸ್ತರ ಹುಚ್ಚನಂತಾದ. ಏಓ ಹೇಳಲು ಏಳುತ್ತಿದ್ದ ಏನು ಹೇಳಬೇಕೆಂದು ತೋಚದೆ ಕೂರುತ್ತಿದ್ದ. ಹಸ್ತಾಭಿನಯಕ್ಕಂತೂ ಮಿತಿಯೇ ಇರಲಿಲ್ಲ. ನೋಡಿದರವರಿಗೆ ಕೈ ಮೈ ಚಲವಲನ ಕಾಣೀಸುತ್ತಿತ್ತೇ ಹೊರತು ಅವನ ಮಾತು ಕೇಳಿಸುತ್ತಿರಲಿಲ್ಲ. ಮೆರೆಮಿಂಡನಿಗೆ ಬಹಳ ಕೆಡುಕೆನಿಸಿತು ಕಳ್ಳನಿಗೂ.

"ಹೋಗ್ರಿ ಮಾಸ್ತ ಇನ್ನ"

ಎಂದು ಗುಡಸೀಕರನ ಪರವಾಗಿ ಅಪ್ಪಣೆ ಕೊಟ್ಟ. ಬದುಕಿದೆ ಎಂದು ಮಾಸ್ತರ ಒಂದೇ ನೆಗೆತಕ್ಕೆ ಪಂಚಾಯ್ತಿ ಆಫೀಸಿನಿಂದ ಹಾರಿಬಿಟ್ಟ. ಮನೆಗೆ ಬಂದು ಶಿಷ್ಯರೆ ಇವರು? ಚಂಡಾಲರು. ಎಂದು ತಂತಾನೇ ಪ್ರಶ್ನೋತ್ತರಿಸಿಕೊಂಡ. ಇನ್ನು ಮೇಲೆ ಇವರು ಸಭೆ ಮಾಡಿದರೆ ಕುರ್ಚಿ ಕೊಡಬೇಕೆ? ಸಾಧ್ಯವಿಲ್ಲ, ಎಂದುಕೊಂಡ, ಆದರೆ ಕೊಡದೆ ಇರುವುದು ಹೇಗೆ ಸಾಧ್ಯ? ಅದ್ದರಿಂದ ಕುರ್ಚಿಯ ಒಂದು ಕಾಲು ಮುರಿದುಬಿಡಬೇಕೆಂದೂ ನಿಶ್ಚಯಿಸಿಕೊಂಡು ತಂತಾನೇ ಸಮಾಧಾನಪಡಿಸಿಕೊಂಡ.

ಮಾಸ್ತರ ಹೋದೊಡನೆ ಗುಡಸೀಕರ ನಕ್ಕ. ಅವನ ಇಮ್ಮಡಿ ಇವರು ನಕ್ಕರು, ನಿಜ ಹೇಳಬೇಕೆಂದರೆ ಚತುಷ್ಟಯರಿಗೆ ಮೈತುಂಬ ಸಿಕ್ಕ ಸಿಕ್ಕಲ್ಲಿ ಪುಳಕವೆದ್ದಿತ್ತು. ಪಂಚಾಯ್ತಿ ಮೆಂಬರದಾಗಿನಿಂದ ಯಾರೂ ಈ ಥರ ಹೆದರಿರಲಿಲ್ಲ. ಅದೂ ಚಿಕ್ಕಂದಿನಲ್ಲಿ ಎಷ್ಟೊಂದು ಹೆದರಿಸಿದ್ದ ಮಾಸ್ತರ ಹೇಗೆ ಹೆದರುವುದೆಂದರೆ! ಒಬ್ಬೊಬ್ಬರೂ ಮಾತಾಡಿದ ಮಾತನ್ನು ವಿರೋಚಿತವಾಗಿ ಇನ್ನೊಮ್ಮೆ ಹೇಳಿ ನಕ್ಕರು. ಮಾಸ್ತರನ ಅಭಿನಯ ಮಾಡಿ ಮತ್ತೆ ನಕ್ಕರು. ಗುಡಸೀಕರ ಎಲ್ಲರಿಗೂ ಒಂದೊಂದು ಹನಿ 'ಭಿರಂಡಿ' ಸಿಡಿಸಿ ಉಳಿದುದನ್ನು ತಾನು ಬಗ್ಗಿಸಿಕೊಂಡು ಬಾಟ್ಲಿ ಖಾಲಿಮಾಡಿದ, ಮತ್ತೊಂದು ಹನಿ ಸಿಕ್ಕಿತಲ್ಲಾ ಎಂಬ ಸಂತೋಷಕ್ಕೆ ಮಗುದೊಮ್ಮೆ ನಕ್ಕರು. ಅಷ್ಟರಲ್ಲಿ ಗೌಡನ ಆಳು ನಾಯೆಲ್ಯಾ ಹಲ್ಲು ಕಿರಿಯುತ್ತ ಹಾಜರಾದ.

# ರಂಡಿ ಹುಣ್ಣಿವೆ

ಆ ದಿನ ರಾತ್ರಿ ದೇವರೇಸಿ ಬಯಸಿದ ಸರವೇನೋ ಸಿಕ್ಕಿತು. ಆದರೆ ತಾಯಿಯಿಂದ ಭಿನ್ನವಾದ.

ದೇವರೇಸಿ ಬಂದು ಹೋದಾಗ ಸುಂದರಿ ಒಳಗಿದ್ದರೂ ಬಸವರಾಜು ಇಲ್ಲವೆಂದು ಹೇಳಿದ್ದ. ದೇವರೇಸಿಯ ಮುಖಚರ್ಯೆ ನೋಡಿ ತೊಡೆತಟ್ಟಿ ನಕ್ಕ. ರಾತ್ರಿ ಮಂದಿ ಉಂಡು ಮಲಗೋ ಹೊತ್ತು. ಬಸವರಾಜು ಮತ್ತು ಸುಂದರಿ ರೇಡಿಯೋ ಕೇಳುತ್ತ ಕಾಲಮೇಲೆ ಕಾಲ ಹಾಕಿಕೊಂಡು ಕೂತಿದ್ದರು. ನಿರೀಕ್ಷಿಸಿದಂತೆ ದೇವರೇಸಿ ಬಂದ. ಮುಖ ಹೀರಿ ಒಗೆದು ಸೊಟ್ಟೆಯಾಗಿತ್ತು. ಕಣ್ಣು ಕೆಂಪಾಗಿ ಹರಳಾಗಿದ್ದವು. ಅವ ಬಂದಾಗ ಇಬ್ಬರೂ ಏಳಲಿಲ್ಲ. ಕೂತುಕೊಂಡೇ ಬಸವರಾಜು ಕಾಲು ಬದಲಿಸಿ 'ಅದೇನ ದೊಡ್ಡ ಕಿಮ್ಮತ್ತಿನ ಸರಾ? ಅದಕ್ಯಾಕಿಷ್ಟ ಕಳವಳಪಡ್ತಿ?' ಎಂದ ವರೇಸಿಗೆ ಅಸಮಾಧಾನವಾಯ್ತು.

"ಏನೆಂಬೋ ಮಾತೋ ಹುಡುಗಾ? ಬೆಂಕಿ ಕೆಂಡದಂಥಾ ದೇವೀ ಜೋಡಿ ನಗಡತಾರೇನೋ ಹುಚ್ಚಾ?"

ಈ ತನಕ ಬಾತಿಗೆಬಾರದ ಸರವಾಗಿದ್ದ ಅದರ ಬೆಲೆ, ದೇವರೇಸಿಯ ದೈನಾಸ ನೋಡಿದ ಮೇಲೆ, ಬಸವರಾಜನಿಗೆ ತಿಳಿದುಬಿಟ್ಟಿತು. 'ಕೊಡೋಣಂತ, ನಾವೆಲ್ಲಿ ಓಡಿಹೋಗ್ತೀವೇನು? ಏನೋ ಹುಡುಗಾಟದ ಹುಡುಗಿ, ತಂದಾಳ, ಕೊಡಸ್ತೇನಿ. ಕೂತುಕೊ ಬಾ' ಎಂದ. ಅಷ್ಟರಲ್ಲಿ ಸುಂದರಿ ಹರಿವಾಣದ ತುಂಬ ಭಟ್ಟೀ ಸೆರೆತಂದು ಮುಂದಿಟ್ಟಳು. ಈಗ ಸರ ತಿರುಗಿ ಕೊಡಸುತ್ತಾನೆಂದು ಖಾತ್ರಿಯಾಗಿತ್ತು. ಕೂತ. ಬೆಳಗಿನಿಂದ ತುತ್ತು ಕೂಳಿಲ್ಲ, ಹನಿ ನೀರು ಮುಟ್ಟಿರಲಿಲ್ಲ. ಒಮ್ಮೆಲೆ ಹಸಿದ ಅರಿವಾಯ್ತು. ಕುಡಿದ, "ಇನ್ನ ಸರಾ ಕೊಡವಾ" ಅಂದ. ಇನ್ನೊಮ್ಮೆ ಹರಿವಾಣ ತುಂಬಿದಳು. ಅದನ್ನೂ ಕುಡಿದ. ಖಂಡಬಂತು, ತಿಂದ. ಸುಮ್ಮನೇ ಕೂತ. ಬಸವರಾಜು ಹೇಳಿದ – "ಬೆಂಕೀ ಕೆಂಡದಂಥಾ ದೇವೀ ಅಂತೀ; ಆ ಸರ ಇದ್ದಲ್ಲಿಂದ ಇಲ್ಲಿ ಬಂದ ಬೀಳೋ ಹಾಂಗ ಮಾಡು" ಅಂದ.ದೇವರೇಸಿ ಸುಮ್ಮನಾದ. "ತಾಯೀ ಸತ್ಯ ಅಷ್ಟಿದ್ದರ ನಾ ರಕ್ತ ಕಾರಿ ಸಾಯೋ ಹಂಗ ಮಾಡಲಿ" ಎಂದು ಸುಂದರಿಯೂ ಮಾತು ಸೇರಿಸಿದಳು, ಬಸವರಾಜನ ಮುಗುಳು ನಗೆಗೆ ತನ್ನ ಹೀಹೀ ನಗೆ ಸೇರಿಸುತ್ತ. ದೇವರೇಸಿ ಒಂದು ಥರ್ರನೆ ತೇಗಿ ಬಿಕ್ಕತೊಡಗಿದ. ಕೂಡಲೇ ಬಸವರಾಜು "ತಾಯಿ ಬಂದಾಳ ಪಾದಾ ಹಿಡಕೊ" ಎಂದು ಸುಂದರಿಗೆ ಹೇಳಿದ. ಸುಂದರಿ ಓಡಿಹೋಗಿ ಕಾಲು ಹಿಡಿದಳು.

ಪಾದಾ ಹಿಡಕೊಂಡವಳು ಹಾಗೇ ಕಾಲು ತಿಕ್ಕತೊಡಗಿದಳು. ದೇವರೇಸಿ ತೇಲುಗಣ್ಣಾಗಿ ಹಾಗೇ ಹಿಂದೆ ಮುಂದೆ ತೂಗುತ್ತ, ಬಿಕ್ಕುತ್ತ ಕೂತ. ಇದು ದೇವೀ ಮೈಮೇಲೆ ಬಂದ ಗುರುತು. ಬಸವರಾಜು ಒಳಗೊಳಗೇ ನಗುತ್ತಿದ್ದವನು ಸುಂದರಿಗೆ ಕಣ್ಣು ಹೊಡೆದ. ಅವಳು ಕಾಲು ತಿಕ್ಕುತ್ತ, ತಿಕ್ಕುತ್ತ ಮೊಳಕಾಲು ದಾಟಿ ತೊಡೆ ತಿಕ್ಕ ತೊಡಗಿದಳು. ತಾಯಿ ಬಿಕ್ಕು ಗಕ್ಕನೆ ನಿಂತು, ಗಡಬಡಿಸಿ ಮೇಲಿನ ಕೈ ನಿವಾರಿಸಿದ. ಸುಂದರಿ ಹೋ ಎಂದು ನಕ್ಕಳು. ಬಸವರಾಜು ಹುಸಿ ಸಿಟ್ಟಿನಿಂದ 'ತಾಯೀ ತೊಡೆಯಲ್ಲಿ ಬೆಂಕಿಯಿದೆ. ಹಾಗೆಲ್ಲ ಆಟ ಆಡಬ್ಯಾಡ' ಎಂದ. ಸುಂದರಿ ಇನ್ನೂ ನಕ್ಕಳು. ನಗು ತಡೆಯದೆ ಒಳಗೆ ಹೋದಳು. ಮತ್ತೆ ಹರಿವಾಣ ತುಂಬಿದಳು. ದೇವರೇಸಿ ಕುಡಿಯದೆ "ತಾಯಿ ನನ್ನ ಕೊಂದ ಹಾಕತಾಳ ಸರಾ ಕೊಡ ಎವ್ವಾ" ಎಂದು ದೊಡ್ಡ ದನಿ ತೆಗೆದು ಅಳುತ್ತಾ ಸುಂದರಿಗೆ ಕೈಮುಗಿದ. ಬಸವರಾಜು ಗಾಬರಿಯಾಗಿ ತಕ್ಷಣ ಸರಕೊಡುವಂತೆ ಹೇಳಿ ಹೊರಗೆ ಬಂದ, ಯಾರಾದರೂ ಇಲ್ಲಿ ನಡೆಯುವುದನ್ನ ಗಮನಿಸುತ್ತಿದ್ದರೆಯೋ ಎಂದು ನೋಡುವುದಕ್ಕೆ. ಸದ್ಯ ಯಾರಿರಲಿಲ್ಲ, ಅಲ್ಲೇ ನಿಂತ.

ಸುಂದರಿ ಸರ ತಂದು, 'ತಗೋ' ಎಂದಳು. ದೇವರೇಸಿ ಅಡರಾಸಿ ಅದಕ್ಕೆ ಕೈಹಾಕಹೋದಾಗ ನಗುತ್ತ ಹಿಂದೆ ಸರಿದಳು. ಬುಡಕಡಿದ ದೊಡ್ಡ ಮರ ಬಿದ್ದ ಹಾಗೆ ದೇವರೇಸಿ ಸಮತೋಲ ತಪ್ಪಿಬಿದ್ದ. ಮತ್ತೆ ತೋರಿಸಿದಳು. ಮತ್ತೆ ಎದ್ದು ಅಲ್ಲೀತನಕ ತೂರಾಡುತ್ತ ಹೋಗಿ ಕೈಹಾಕಿದ. ಮತ್ತೆಯೂ ಹಿಂದೆ ಸರಿದಳು. ಹೀಗೆ ನಾಲ್ಕೈದು ಸಲ ಮಾಡಿದಾಗ ಕೊನೆಗೆ ಅವಳನ್ನೇ ಗಟ್ಟಿಯಾಗಿ ಹಿಡಿದು ಕಸಿಯುತ್ತಿದ್ದ. ಬೆಳಗಿನಿಂದ ಹಸಿದು ನಿಶ್ಯಕ್ತಗೊಂಡಿದ್ದ. ರಕ್ತ ಕಾರಿಕೊಂಡಿದ್ದ. ಮೈಮೇಲೆ ಅಡರಿದ್ದ ಅವನನ್ನು ಜೋರಿನಿಂದ ಚೆಮಣಾ ದೂಕಿದಳು. ಅಲ್ಲೇ ನಿಂತ.

ಸುಂದರಿ ಸರ ತಂದು, 'ತಗೋ' ಎಂದಳು. ದೇವರೇಸಿ ಅಡರಾಸಿ ಅದಕ್ಕೆ ಕೈಹಾಕ ಹೋದಾಗ ನಗುತ್ತ ಹಿಂದೆ ಸರಿದಳು. ಬುಡಕಡಿದ ದೊಡ್ಡ ಮರ ಬಿದ್ದ ಹಾಗೆ ದೇವರೇಸಿ ಸಮತೋಲ ತಪ್ಪಿಬಿದ್ದ. ಮತ್ತೆ ತೋರಿಸಿದಳು. ಮತ್ತೆ ಎದ್ದು ಅಲ್ಲೀತನಕ ತೂರಾಡುತ್ತ ಹೋಗಿ ಕೈಹಾಕಿದ. ಮತ್ತೆಯೂ ಹಿಂದೆ ಸರಿದಳು. ಹೀಗೆ ನಾಲ್ಕೈದು ಸಲ ಮಾಡಿದಾಗ ಕೊನೆಗೆ ಅವಳನ್ನೇ ಗಟ್ಟಿಯಾಗಿ ಹಿಡಿದು ಕಸಿಯುತ್ತಿದ್ದ. ಬೆಳಗಿನಿಂದ ಹಸಿದು ನಿಶ್ಯಕ್ತಗೊಂಡಿದ್ದ. ರಕ್ತ ಕಾರಿಕೊಂಡಿದ್ದ. ಮೈಮೇಲೆ ಅಡರಿದ್ದ ಅವನನ್ನು ಜೋರಿನಿಂದ ಚಿಮಣಾ ದೂಕಿದಳು. ಅಲ್ಲೇ ಜೋಲಿ ತಪ್ಪಿಲ ಕುಸಿದ. ಕೈಕಾಲೂರಿ ಏಳಬೇಕೆಂದಾಗ ಚಿಮಣಾ ಓಡಿಹೋಗಿ ಅವನ ಡುಬ್ಬ ಹತ್ತಿ ಕುಕ್ಕರಿಸಿದಳು. ಏಳಲಾರದೆ ಬೀಳಲಾರದೆ ನೊಂದ ಪ್ರಾಣಿಯ ಹಾಗೆ ದೇವರೇಸಿ ಹೋರಾಡುತ್ತಿದ್ದ. ಹೇಳಿ ಕಳಿಸಿದ ಹಾಗೆ ಬಸವರಾಜು ಒಳಗೆ ಬಂದ. ಅದೇನು ಉಮೇದಿ ಉಕ್ಕಿತ್ತೋ ಸುಂದರಿ ಹೋ ಎಂದು ನಗುತ್ತ ಹುಲಿಯೇರಿದ ಕರಿಮಾಯಿಯ ಭಂಗಿಯಲ್ಲಿ ಕೂತ ಆಶೀರ್ವದಿಸಿದಳು. ಬಸವರಾಜನಿಗೆ ದಿಗಿಲಾಯಿತೇನೋ, ಗಂಭೀರವಾಗಿ ಕೈಮುಗಿದ!

ಅಂತೂ ಹುಣ್ಣಿಮೆಯೇನೋ ಬಂತು. ತಾಯಿ ರಂಡಿಯೂ ಆದಳು.

ತಾಯಿ ರಂಡಿ ಆದುದಕ್ಕೆ ಏನೋ ಚಂದ್ರ ಕ್ಷಯರೋಗಿಯಂತೆ ಬಿಳಿಚಿದ.

ಆ ದಿನ ಬೆಳಗಿನ ಬೆಳ್ಳಿಮೂಡುವ ಸಮಯದಲ್ಲಿ ಗೌಡನಿಗೆ, ಕರಿಮಾಯಿಯ ಗುಡಿಯ ನಡುಗಂಬ ನಡುಗಿ ಇಡೀ ಗುಡೀ ಕುಸಿದಂತೆ ಕನಸಾಯಿತು. ಫಕ್ಕನೆ ಎದ್ದು ಕೂತ. ಎದೆ ನಡುಗಿತು. ಕೂತು ಚಿಂತಿಸಲಾಗಲಿಲ್ಲ. ಅನಾಹುತ ತಪ್ಪಿಸುವುದು ಸಾಧ್ಯವೇ ಎಂದು ನೋಡಿದ. ಹಾದಿ ಕಾಣಲಿಲ್ಲ. ಕನಸನ್ನು ದತ್ತಪ್ಪನಿಗೆ, ದೇವರೇಸಿಗೆ ತಿಳಿಸಬೇಕೆಂದು ಆಗಲೇ ಜಳಕಕ್ಕೆ ಕೆರೆಯ ಕಡೆ ನಡೆದ.

ಊರಿಗಿನ್ನೂ ಬೆಳಗಾಗಿರಲಿಲ್ಲ. ಗುಡಿಗೆ ಹೋದ. ಒಳಗೆ ಕತ್ತಲೆಯಿತ್ತು. ತಾಯಿಯ ಮೂರ್ತಿ ಕಾಣಿಸುತ್ತಿರಲಿಲ್ಲ. ಹಾಗೇ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ ಬಂದು ಹೊರಗೆ ಪೌಳಿಯ ದೀಪಗಂಬದ ಕಟ್ಟೆಯ ಮೇಲೆ ಕೂತ. ಶೀಲೆ ಹುಣ್ಣಿಮೆಯಲ್ಲಿ ತಾಯಿಯ ಕೈ ಮುರಿದವರ ಪತ್ತೆಯಾಗಿರಲಿಲ್ಲ. ಗುಡಿಕಟ್ಟಿಸಿದ ತನ್ನ ಹಿರಿಯರ ನೆನಪಾಯಿತು. ತಾಯಿ ಸೇಡು ತೀರಿಸಿಕೊಳ್ಳುತರತಿದ್ದಾಳೆನ್ನಿಸಿ ಭಯವಾಯ್ತು. ಮತ್ತೆ ಮಗನ ನೆನಪಾಗಿ ಕಂಠ ತುಂಬಿ ಬಂತು. ಎಷ್ಟು ಹೊತ್ತು ಕೂತಿದ್ದನೋ, ಮೈಯೆಚ್ಚರ ಬಂದಾಗ ಬೆಳ್ಳಂಬೆಳಕಾಗಿತ್ತು. ಮತ್ತೊಮ್ಮೆ ಪ್ರದಕ್ಷಿಣೆ ಹಾಕಿದ. ಕಣ್ಣುತುಂಬ ತಾಯಿಯ ಮೂರ್ತಿ ನೋಡಿದ. 'ಹಡದವ್ವಾ ನನ್ನ ಮನೀ ದೀಪಾ ಉಳಸು' ಎಂದು ಅಡ್ಡಬಿದ್ದ. ಶೀಗೇ ಹುಣ್ಣಿಮೆಯಲ್ಲಿ ಮುರಿದ ಕೈಯಲ್ಲಿ ಹಾಗೇ ಕಟ್ಟಿದ್ದರಲ್ಲ, ಅದು ಕೆಳಗೆ ಬಿದ್ದಿತ್ತು. "ಕತ್ತಿ ಚೆಲ್ಲೋದ ನಿನ್ನ ಪದವಿ ಅಲ್ಲ ತಾಯಿ, ಮತ್ತ ಹಿಡದ ಊರ ಜೀಂವಾ ಕಾಯಿ" ಎಂದು ಮತ್ತೆ ಮೊದಲಿನಂತೆ ಕಟ್ಟಿದ. ಆ ಕನಸು, ಈ ಅಪಶಕುನ ಒಟ್ಟಾರೆ ಅಮಂಗಳವೆನ್ನಿಸಿ ದತ್ತೂನ ಮನೆಕಡೆ ಹೆಜ್ಜೆ ಹಾಕಿದ.

ಅಲ್ಲಿ ದತ್ತಪ್ಪ ಸ್ನಾನ ಕೂಡ ಮಾಡದೇ ತಲೇಮೇಲೆ ಕೈಹೊತ್ತು ಚಿಂತಾಮಣಿ ನೋಡುತ್ತ ಕೂತಿದ್ದ. ಇವ ತನ್ನ ಕನಸು ಹೇಳಬೇಕೆಂದು ಬಾಯಿ ತೆರೆಯುವುದರೊಳಗೆ ದತ್ತಪ್ಪ –

"ಗೌಡಾ, ರಾತ್ರಿ ಕನಸಿನಾಗ ನನ್ನ ಚಿಂತಾಮಣಿ ಕಳಧಾಂಗಿತ್ತೋ!" ಅಂದ. ಗೌಡ ಮಾತಾಡಲೇ ಇಲ್ಲ.

ಬಹುಶಃ ಇವರಿಬ್ಬರ ಕನಸು ಕೇಳಿದ ಮೇಲೆ ಹೇಳಿದಳೋ ಅಥವಾ ನೆನಸಿಕೊಂಡಳೋ ಯಾಕೆಂದರೆ ಲಗಮವ್ವ ಕವಿಯಿತ್ರಿಯಾದ್ದರಿಂದ ಬೇಕುಬೇಕಾದ ಸಮಾಂತರ ಸಂಗತಿಗಳನ್ನು ನಿಂತಕಾಲ ಮೇಲೇ ಹೊಸೆಯಬಲ್ಲವಳಾದ್ದರಿಂದ ಹೀಗೆ ಹೇಳಬೇಕಾಯಿತು. ಅವಳ ನಾಲಗೆ ಕಳಚಿ ಬಿದ್ದಂತೆ ಕನಸಾಗಿತ್ತು.

ಊರಿಗೆಲ್ಲಾ ಆದಂತೆ ದೇವರೇಸಿಯ ಗುಡಿಸಲಿಗೂ ಬೆಳಗಾಯಿತು. ಬೆಳತನಕ ಕಣ್ಣಿಗೆ ಕಣ್ಣು ಹಚ್ಚಿರಲಿಲ್ಲವಾದ್ದರಿಂದ ಕಣ್ಣು ಕೆಂಪಗೆ ಕರಿಮಾಯಿಯ ಕಣ್ಣಿನಂತೆ ಕಾಣುತ್ತಿದ್ದವು. ಜ್ವರದಿಂದ ಮೈ ಸಿಡಿಯುತ್ತಿತ್ತು. ತಾನಿಂದು ಬದುಕುವುದಿಲ್ಲವೆಮದು ಖಚಿತವಾಗಿತ್ತು. ಏನಿದ್ದದ್ದು

ಏನಾಗಿ ಹೋಗಿತ್ತು! ಊರವರ ಮುಖ ನೋಡುವುದಿರಲಿ, ತಾಯಿಯ ಮುಖ ಕಣ್ಣಾರೆ ನೋಡುವುದು ಹ್ಯಾಗೆ, ಕೈಯಾರೆ ಮುಟ್ಟಿ ಪೂಜೆ ಮಾಡೋದು ಹ್ಯಾಗೆ? ಓಡಿಹೋಗಿ ಒಂದು ಸಲ ನಿನ್ನೆ ನಡೆದದದ್ದನ್ನೆಲ್ಲ ಗೌಡನ ಮುಂದೆ ಒದರಿಬಿಡಲೆ ಎನ್ನಿಸಿತು. ಯಾಕೆ, ತಾಯಿಯ ಮಹತ್ವದ ಹುಣ್ಣಿಮೆ ಇದು; ತಾಯಿ ರಂಡಿಯಾಗುವ ಹುಣ್ಣಿಮೆ. ಆದದ್ದಾಗಲಿ ತಾಯಿ ಬೇಕಾದರೆ ನನ್ನನ್ನು ರಕ್ತಕಾರಿಸಿ ಕೊಂದು ಇನ್ನೊಬ್ಬರನ್ನಾಯ್ದುಕೊಳ್ಳಲಿ ಎಂದುಕೊಂಡ. ಇಷ್ಟು ವರ್ಷ ದೇವರೇಸಿಯಾಗಿದ್ದವನಿಗೆ ಅದೇ ಮಾನದ ಸಾವು. ಅಥವಾ ತಾಯಿ, ಎಷ್ಟಂದರೂ ಹಡೆದ ಕರುಳು. ನನ್ನ ತಪ್ಪನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳಬಾರದೇಕೆ? 'ನಾವೋ ಉಪ್ಪು ಹುಳಿ ಖಾರ ತಿಂಬವರು, ತಪ್ಪು ಮಾಡುವವರು, ತಾಯಿಯಲ್ಲದೆ ಇನ್ಯಾರು ಕಾಪಾಡಬೇಕು? ಮಗು ಹೇಸಿಕೆ ಮಾಡಿಕೊಳ್ಳುತ್ತದೆ. ತಾಯಿ ತೊಳೆದು ಹತ್ತಿರ ಕರೆದುಕೊಳ್ಳುವುದಿಲ್ಲವೆ? ಏನು ಮಾಡುತ್ತಿದ್ದೇನಂತ ಅರಿವಿಲ್ಲದ ಮಗು ತಾಯಿಗೆ ಹೊಡೆಯುತ್ತದೆ. ಹಸಿದಾಗ ಮತ್ತೆ ಅವ್ವಾ ಎನ್ನುತ್ತದೆ. ಹೊಡೆದಾಗ ಹೊಡಿಸಿಕೊಂಬವಳೂ ಅವಳೇ. ಹಸಿದಾಗ ಮೊಲೆಯೂಡುವವಳೂ ಅವಳೇ ಅಥವಾ, ಉಗುಳಿದಳು ಅನ್ನೋಣ. ಅವಳೇನು ಹೊರಗಿನವಳೆ? ತಾಯಿಯಲ್ಲವೆ? ಅವಳಿಗೆ ಉಗುಳುವ ಹಕ್ಕಿದೆ. ಆಕೆ ನನ್ನನ್ನು ಗುಡಿಯಾಚೆ ಉಗುಳಿದರೂ ಅದು ಮಾನವೆ. ಅವಳೇ ಹುಟ್ಟಿಸಿದಳು. ಅವಳೇ ಕೊಲ್ಲಲಿ, ಎಂದುಕೊಂಡು ಧೋತರ ತಗೊಂಡೆದ್ದ. ಮೈಯಲ್ಲಿ ದಿನದ ಕಸುವಿರಲಿಲ್ಲ. ಉತ್ಸಾಹವಿರಲಿಲ್ಲ. ಮಂದಿಯ ಮುಖ ನೋಡುವ ಧೈರ್ಯವಿರಲಿಲ್ಲ. ಸುಡುಸುಡುವ ಜ್ವರ ಬೇರೆ. ಮೆಲ್ಲಗೆ ಸಾಧ್ಯವಿದ್ದಷ್ಟು ಜನಗಳನ್ನು ನಿವಾರಿಸಿ ಕೆರೆಗೆ ಹೋಗಿ ಮಿಂದ. ಒದ್ದೆಯುಟ್ಟು ಗುಡಿಗೆ ಬಂದ. ಕಣ್ಣಿಗೆ ಕತ್ತಲು ಬಂದು ಗುಡಿಯ ಹೊಸ್ತಿಲ ಮೇಲೆ ಬಿದ್ದ. ಮತ್ತೆ ತಾನೇ ಎದ್ದು ಒಳಗೆ ಹೋದ.

ದೀಪ ಹಚ್ಚಿದ. ತಾಯಿಯ ಸೀರೆ ಕಳಚಿ ಮೈಗೆ ಮಜ್ಜನ ಮಾಡಿಸುವಾಗ ಮೈ ಝುಂ ಎಂದು ಚಳಿ ಬಂದು ನಡುಗಿದ. ನಡುಗುವ ಕೈಗಳಿಂದಲೇ ಮಡಿ ಉಡಿಸಿದ. ತಾನು ತಂದಿದ್ದ ಕವಡೆಯ ಸರ ಹಾಕಿದ. ಹೂವೇರಿಸಿದ. ಗಂಟೆ ಬಾರಿಸಿದ. ಕೊನೆಗೆ ಪ್ರದಕ್ಷಿಣೆ ಹಾಕಿ ಅಡ್ಡಬಿದ್ದ. ಏಳುವ ಮನಸ್ಸಾಗಲೊಲ್ಲದು. ಚಳಿಜ್ವರ ನೆತ್ತಿಗೇರತೊಡಗಿತು.

ತಡವರಿಸಿಕೊಂಡು ಮೇಲೆದ್ದು ತಾಯಿಯ ಮುಖದ ಕಡೆ ನೋಡಿದ. ಒತ್ತರಿಸಿ ದುಃಖ ತಡೆಯಲಾಗದೆ 'ಎವ್ವಾ' ಎಂದು ಅಳತೊಡಗಿದ. "ಎದಿ ಕಲ್ಲ ಮಾಡಿಕೊ ಬ್ಯಾಡ ತಾಯೀ", ಎಂದು ಎದೆ ಎದೆ ಬಡಿದುಕೊಂಡ. " ನಾ ನಿನ್ನ ಮಗನಾ ಹಡದವ್ವಾ" ಎನ್ನುತ್ತ ಹಣೆಯನ್ನು ಕಲ್ಲಿಗೆ, ಗದ್ದಿಗೆಗೆ ಬಾರಿಸಿದ. ಅದೇನು ಕರಿಮಾಯಿಯ ಮಾಯೆಯೋ, ಮೂರ್ತಿಯ ಬಲಭುಜದ ಹೂವು ಕೆಳಗೆ ಬಿತ್ತು. ದೇವರೇಸಿಗೆ ಹೋದ ಜೀವ ತಿರುಗಿ ಬಂದಷ್ಟು ಸಂತೋಷವಾಯ್ತು. ಸ್ವಥಾ ತಾಯಿ ಅವನನ್ನು ತಬ್ಬಿಕೊಂಡು, ಮೈದಡವಿ 'ಮಗನ ಚಿಂತೀ ಮಾಡಬ್ಯಾಡ. ನಾ ಇದ್ದೀನಿ' ಅಮದಷ್ಟು ನೆಮ್ಮದಿಯಾಯ್ತು. ಮೈ ಹುಷಾರಾಗಿ ಚಳಿ ಜ್ವರ ಬಿಟ್ಟೋಡಿ ಮೈ ಬೆವರಿದ. ತಾಯಿಗೆ ಅತ್ಯಂತ ವಿನೀತನಾದ....ಕೃತಜ್ಞತೆಯಿಂದ ತುಂಬಿ ತುಂಬಿ ಕಣ್ಣೀರು ತುಳುಕಿದ. "ತಾಯಿ ನನ್ನ ತಪ್ಪ ಹೊಟ್ಯಾಗ ಹಾಕ್ಕೊಂಡ್ಲು; ತಾಯಿ ಆಶೀರ್ವಾದ ಆತು" ಎಂದು ತನಗೆ ತಾನೇ ಗಟ್ಟಿಯಾಗಿ ಹೇಳಿಕೊಳ್ಳುತ್ತ ಗುಡಿಸಲ ಕಡೆ ನಡೆದ.

ಇಡೀ ದಿನ ಗುಡಸೀಕರನ ಪಾರ್ಟಿಯ ಪ್ರಚಾರವೋ ಪ್ರಚಾರ. ಬೆಳಗಾವಿಯಿಂದ ಬ್ಯಾಂಡ್ಸೆಸೆಟ್‌ನವರನ್ನು, ಅವರ ಹಿಂದೆ ಕುಣಿಯುವ ಪಾತ್ರದ ಸೂಳೆಯರನ್ನು ಕರೆತಂದು ಊರ ತುಂಬ ಕುಣಿಸಿದರು. ಸ್ವಯಂ ಗುಡಸೀಕರ ಚತುಷ್ಟಯರೊಂದಿಗೆ ಮನೆ ಮನೆಗೆ ಹೋಗಿ ತಮಗೇ ಹೋಟು ಹಾಕಬೇಕೆಂದುಅಬಾಲವೃದ್ಧರಿಗೆ ವಿನಂತಿಸಿಕೊಂಡು ಬಂದ. ಗೌಡ ದತ್ತಪ್ಪ ಹೋಗಲಿಲ್ಲ. ಕನಸುಗಳಿಂದ ಅವರ ಮನಸ್ಸು ಮೊದಲೇ ಜರ್ಜರಿತವಾಗಿತ್ತು. ನಿಂಗೂ ಮಾತ್ರ ಕುಸ್ತೀ ಹುಡುಗರನ್ನು ಕರೆದುಕೊಂಡು ಗೌಡರಿಗೇ ಹೋಟು ಹಾಕಬೇಕೆಂದು, ಗಂಡಸರು, ಹೆಂಗಸರೆನ್ನದೆ ಎಲ್ಲರಿಗೂ ಹೇಳಿ ಬಂದ. ಲಗಮವ್ವ ಹೆಂಗಸು ರೀತಿಯಲ್ಲಿ ಹೇಳಿ ಬಂದಳು. ಬಾಳೂ ಬಸೆಟ್ಟಿ ಅವರೂ ಅಲೆದಾಡಿ ಬಂದರು. ಕಂಡಕಂಡವರಿಗೆಲ್ಲ ದೇವಿಯ ಬಂಡಾರ ಹಚ್ಚಿಬಂದರು. ಈ ಗಡಿಬಿಡಿಯಲ್ಲಿ ಸಂಜೆಯಾದದ್ದೇ ಯಾರಿಗೂ ತಿಳಿಯಲಿಲ್ಲ.

ಸೂರ್ಯ ಪಶ್ಚಿಮದಲ್ಲಿ ಮುಳುಗುತ್ತಿದ್ದ. ದನಕರು ಮನೆಗೆ ಧಾವಿಸುವ ಅವಸರದಲ್ಲಿ ಎದ್ದ ಧೂಳು, ಪ್ರಚಾರಕ್ಕಾಗಿ ಜನ ಓಡಾಡಿ ಎದ್ದ ಧೂಳು, ಪಾತ್ರದವರು ಕುಣಿದಾಡಿ ಹುಡುಗರು ಅವರ ಸುತ್ತ ಗುಂಪುಗೂಡಿ ತುಳಿದಾಡಿ ಎದ್ದ ಧೂಳು, ಕಾರಖಾನೆಯ ಹೊಗೆಯಂತೆ ಅಡರಿದ್ದ ಕಲಬೆರಕೆಯ ಈ ವಿಚಿತ್ರ ಧೂಳಿನಲ್ಲಿ ಊರಿನ ವಿವರಗಳು ಅಸ್ಪಷ್ಟವಾಗಿ ತೋರುತ್ತಿದ್ದವು. ಇದರ ಜೊತೆಗೆ ಮೈಕಿನ, ಬ್ಯಾಂಡ್‌ಸೆಟ್ಟಿನ,

ಮನುಷ್ಯರ ವಿಕಾರ ದನಿಗಳು ಬೆರೆತು ಊರಿಗೂರೇ ಕಿಟಾರನೆ ಕಿರುಚುತ್ತಿದ್ದಂತೆ ಕೇಳಿಸುತ್ತಿತ್ತು. ಮಕ್ಕಳು ಹೆದರಿ ಮೊಲೆ ಮರೆತು ಚೀರಿದರೂ ಯಾರಿಗೂ ಕೇಳಿಸದಂತಾಗಿತ್ತು. ಪಶ್ಚಿಮದ ಆಗಸ ಕರಿಮಾಯಿಯ ಕೆಂಗಣ್ಣಿನಂತೆ ಕೆಂಪಗಾಗಿತ್ತು. ಮೂಡಣದಲ್ಲಿ ಹುಣ್ಣಿಮೆ ಚಂದ್ರನ ಆಕೃತಿ ಮೂಡಿತು.

ಇದು ಉಳಿದೆಲ್ಲ ರಂಡಿ ಹುಣ್ಣಿಮೆಯಂತಿರಲಿಲ್ಲ. ಎದ್ದ ಧೂಳು ನೆಲಕ್ಕಂಟಿರಲಿಲ್ಲ. ಸಪ್ಪಳ ನಿಂತಿರಲಿಲ್ಲ. ಬೆಳದಿಂಗಳು ಹುಚ್ಚೆಚ್ಚು ಕೆರಳಿದಂತೆ ಆಕಾರಗೊಂಡುದಕ್ಕೆಲ್ಲ ನೆರಳು ಬಂತು. ನೆರಳು ಕ್ಷಣೇ ಕ್ಷಣೇ ದಟ್ಟವಾಗಿ ಕತ್ತಲೆಯ ಮರಿಯಂತಾಯಿತು.

ನಾನಾ ನಮೂನೆಯ ದನಿಗಳಲ್ಲಿ ಗೌಡನ ಮನೆಯಿಂದ ಹೊರಟ ಹಲಗೆ, ಡೊಳ್ಳಿನ ದನಿಯೂ ಒಂದಷ್ಟೆ. ಕೆಲವರ ಊಟವಾಗಿತ್ತು; ಕೆಲವರದಿಲ್ಲ. ಆಗಲೇ ಪಂಚರು, ಹಿರಿಯರು, ಆಳು ಮಕ್ಕಳು, ಗರತಿಯರು ಗೌಡನ ಮನೆಯ ಮುಂದೆ ಸೇರಿದ್ದರು. ಪಲ್ಲಕ್ಕಿಯಲ್ಲಾಗಲೇ ದೇವಿಯ ಬಂಗಾರದ ಮುಖವನ್ನಿಟ್ಟಿದ್ದರು. ಒಂದು ಕಡೆಯಿಂದ ದತ್ತಪ್ಪ, ಇನ್ನೊಂದು ಕಡೆಯಿಂದ ಗೌಡ ತಾಯಿಗೆ ಚೌರಿ ಬೀಸುತ್ತಿದ್ದರು. ಡೊಳ್ಳಿನ ಅಬ್ಬರದಲ್ಲಿ ಅವರ ಹಾಡು ಕೇಳಿಸುತ್ತಿರಲಿಲ್ಲ. ಬರುವವರೆಲ್ಲ ಬಂದುದು ಖಚಿತವಾದೊಡನೆ ಗೌಡ ಮೆರವಣಿಗೆ ಹೊರಡಲೆಂದ. 'ಚಾಂಗು ಭಲೇ' ಎಂದು ಮೆರವಣಿಗೆ ಹೊರಟಿತು.

ಮೆರವಣಿಗೆ ಊರಿನ ಮುಖ್ಯ ರಸ್ತೆಗಳಲ್ಲಿ ಹಾದು ದೇವರೇಸಿಯ ಗುಡಿಸಲಿಗೆ ಬಂತು. ದೇವರೇಸಿಯಾಗಲೇ ಹಸಿರು ಸೀರೆ ಉಟ್ಟು ಸಿದ್ಧನಾಗಿದ್ದ. ದೇವರೇಸಿಯ ಮೈಸುಡುತ್ತಿದ್ದುದನ್ನು ಗಮನಿಸಿ ಲಗಮವ್ವ "ಯಾಕೋ ಅವ್ವನ ಮೈ ಕಾದ ತಗಡಾಗೇತಿ" ಎಂದಳು. ಉಳಿದ ಗರತಿಯರೂ ಗಮನಿಸಿದರು. ದೇವರೇಸಿ ಉತ್ತರ ಕೊಡಲಿಲ್ಲ. ಮುತ್ತೈದೆಯರು ಹಾಡುತ್ತ ಅವನ ಎರಡೂ ಕೈಗೆ ಐದು ವರ್ಣಗಳ ಬಳೆ ಮೊಳಕೈತನಕ ತೊಡಿಸಿದರು. ಹಣೆ ತುಂಬ ಕುಂಕುಮ, ಬಂಡಾರ ಹಚ್ಚಿದರು. ಜಡೆಗೆ ಹೂ ಮುಡಿಸಿ ಬಂಡಾರ ಸಿಡಿಸಿದರು. ಕಾಲಿಗೆ ತೋಡೆ ತೊಡಿಸಿದರು. ಕೈಯಲ್ಲಿ ನವಿಲುಗರಿಯ ಚೌರಿ ಹಿಡಿದುಕೊಂಡಾದ ಮೇಲೆ 'ಚಾಂಗು ಭಲೇ' ಎಂದು ಮೆರವಣಿಗೆ ಗುಡಿಯ ಕಡೆ ನಡೆಯಿತು…

ಪೌಳಿಗೆ ಬಂದು ವಾಲಗ ಸುರುವಾಯಿತು. ಗೌಡ ತಾಯಿಯ ಬಂಗಾರದ ಮುಖವನ್ನೂ ಮಡಿಲಲ್ಲಿ ಬಚ್ಚಿಟ್ಟು ಕೂಸಿನಂತೆ ಎದೆಗವಚಿಕೊಂಡ. ದತ್ತಪ್ಪ ಚೌರಿ ಬೀಸುತ್ತ ದಾರಿ ತೋರಿಸಿದ. ತಾಯಿಯ ಬಂಗಾರದ ಮುಖವನ್ನು ಗರ್ಭಗುಡಿಗೆ ಒಯ್ದರು. ನಿಶ್ಯಕ್ತಿಯಿಂದ ದೇವರೇಸಿ ನಡೆಯಲಾರದಾಗಿದ್ದ ಲಗಮವ್ವ ರಟ್ಟೆಯಲ್ಲಿ ಕೈಹಾಕಿ ಒಳಗೊಯ್ದಳು ಅವರಷ್ಟೆ ಒಳಗೆ ಹೋದೊಡನೆ ಬಾಗಿಲಿಕ್ಕಿತು.

ತಾಯಿಯ ಬಂಗಾರದ ಮುಖವನ್ನು ಮೂಲ ವಿಗ್ರಹಕ್ಕೆ ಜೋಡಿಸಿದರು. ಕೆಂಪಗೆ ಥಳ ಥಳ ಹೊಳೆಯುವ ಕಣ್ಣುಪಟ್ಟಿಗಳನ್ನು ಹೊಂದಿಸಿದರು. ಕವಡೆಯ ಸರ ತೆಗೆದು ತಾಯಿಯ ಎದುರಿಗಿಟ್ಟರು. ಗರಿಗರಿ ನೆರಿಗೆ ಹೊಯ್ದು ಹಸಿರು ಸೀರೆ ಉಡಿಸಿದರು. ಬಂಗಾರದ ಥಾರಾವರಿ ಆಭರಣ ತೊಡಿಸಿದರು. ವಿಗ್ರಹದ ಕೈಗೂ ಐದು ವರ್ಣದ ಬಳೆ ತೊಡಿಸಿದರು. ತಾಯಿಯ ಈ ಬಗೆಯ ಶೃಂಗಾರ ಇನ್ನು ಒಂದು ತಿಂಗಳ ತನಕ ನೋಡದೊರೆಯುವುದಿಲ್ಲ. ಆದ್ದರಿಂದ ಗೌಡ, ಲಗಮವ್ವ, ದತ್ತಪ್ಪ ಬಿದ್ದ ಕನಸುಗಳಿಗೆ ಹೆದರಿದ್ದರಿಂದ ಇದ್ದೀತು, ತುಂಬ ಭಾವುಕರಾಗಿ ಕಣ್ಣುತುಂಬ ನೋಡಿದರು. ಹಿಂದೆ ತಾಯಿಯ ಕೈ ಸಿಡಿಯುವಂತೆ ಮಾಡಿದ ಪಾಪಿ ಪತ್ತೆಯಾಗಿರಲಿಲ್ಲ. ತಾಯಿಯ ಮಾತೇ ಹೀಗೆ. ಎಲ್ಲಾ ತಮ್ಮ ಪರಿಣಾಮಗಳಿಂದಲೇ ತಿಳಿಯುತ್ತವೆ. ಮೊದಲೇ ಗೊತ್ತಾದರೆ ಆಗುವ ಅನಾಹುತವನ್ನಾದರೂ ತಪ್ಪಿಸಬಹುದು. ಆದರೆ ತಿಳಿಯುವಂತೆ ಮಾತಾಡಲಯ ತಾಯಿ ತಮ್ಮಂತೆ ಮನುಷ್ಯಳೆ? ಆಕೆಯ ವ್ಯವಹಾರದಲ್ಲಿ ಕೈಹಾಕುವುದು ತಮ್ಮಿಂದೇನಾದೀತು? ಇದನ್ನೆಲ್ಲ ನೆನದಾಗ ತಾವೆಂಥ ದುರ್ಬಲರೆಂದು ಅನಿಸುತ್ತದೆ. ಆಗೋದನ್ನ ಕೈಕಟ್ಟಿಕೊಂಡು ಸಾಕ್ಷಿಯಾಗಿ ನೋಡುವುದೆಷ್ಟೋ ಅಷ್ಟೆ.

ದೇವರೇಸಿಯನ್ನು ಎಬ್ಬಿಸಿಬೇಕಾಯ್ತು. ಎಬ್ಬಿಸುವಾಗ ಮೈ ಸುಡುತ್ತಿದ್ದುದು ಗೌಡನಿಗೂ ತಿಳಿದು ಹಳಹಳಿಸಿದ. ದೇವರೇಸಿ ಎದ್ದು ಧೂಪಾರತಿಯನ್ನು ಕೈಗೆತ್ತಿಕೊಂಡೊಡನೆ ಗರ್ಭಗುಡಿಯ ಬಾಗಿಲು ತೆರೆದರು. ಹೊರಗೆ ನೆರೆದಿದ್ದ ಭಕ್ತರೆಲ್ಲ ಬಾಗಿಲಿಗಿ ಮುಕುರಿ ತಾಯಿಯ ಬಂಗಾರದ ಶೃಂಗಾರ ಮೂರ್ತಿಯನ್ನು ಕಣ್ಣುತುಂಬ ನೋಡಿದರು. ದೇವೇರೇಸಿ ಧೂಪಾರತಿ ತಗೊಂಡು ಹೊರಬಂದು ಗುಡಿ ಪ್ರದಕ್ಷಿಣೆ

ಹಾಕಿದ. ದೀಪಕಂಬದ ಹತ್ತಿರ ಹೋಗಿ ಅಲ್ಲಿದ್ದ ಗಣಗಳಿಗೆ ಧೂಪಾರತಿಯ ಕೈ ಮೇಲಕ್ಕೆತ್ತಿ 'ಚಾಂಗುಭಲೇ' ಎಂದು ಕಿರಿಚಿ ನೆಲಕ್ಕೆ ಕುಕ್ಕಿದ ಕೂಡಲೇ ನೆರೆದ ಭಕ್ತರೆಲ್ಲ ಗುಡಿಯಲ್ಲಿದ್ದ ಎಲ್ಲ ಗಂಟೆ, ಜಾಗಟೆ, ತಾಳ, ಡೊಳ್ಳುಗಳನ್ನು ಚಾಂಗು ಭಲೇ ಎಂದು ಕಿರುಚುತ್ತ ಕಿವಿಗಡಚಿಕ್ಕುವಂತೆ ಬಾರಿಸತೊಡಗಿದರು.

ದೇವರೇಸಿ ಓಡೋಡುತ್ತ ಬಂದು ಗರ್ಭಗುಡಿ ಹೊಕ್ಕು. ಈಗ ತಪಸ್ಸಿಗಾಗಿ ಅಡವಿಯಲ್ಲಿದ್ದ ಜಡೆಮುನಿಯ ಸಂಹಾರವಾಯಿತೆಂದೂ ಆ ಸುದ್ದಿಯನ್ನು ದೇವರೇಸಿ ಓಡೋಡುತ್ತ ಬಂದು ತಾಯಿಗೆ ಅರಿಕೆಮಾಡಿದನೆಂದೂ ಇದರರ್ಥ್. ತಾಯಿಯೀಗ ರಂಡೆ(ವಿಧವೆ)ಯಾದ್ದರಿಂದ ಆಕೆಯ ಕೈಬಳೆ ಒಡೆಯುತ್ತಾರೆ. ಗೌಡ ಆವೇಶದಲ್ಲಿದ್ದ ದೇವರೇಸಿಯನ್ನು ತೆಕ್ಕೆಹಾಯ್ದು ಹಿಡಿದುಕೊಂಡಿದ್ದ. ಲಗಮವ್ವ ಅವಸರದಲ್ಲಿ ದೇವರೇಸಿಯ ಕೈಬಳೆ ಒಡೆದಳು. ಕುಂಕುಮ ಅಳಿಸಿದಳು. ದತ್ತಪ್ಪ ಮೂರ್ತಿಯ ಕೈಬಳೆ ಒಡೆದು ಕುಂಕುಮ ಅಳಿಸಿದ. ಕೂಡಲೇ ಕೂಡಿದ ಭಕ್ತರು ಬಿಲ್ಲುಬಾಣೆಸೆದಂತೆ ಮೂರ್ತಿಯ ಕಡೆಗೆ ಅಡಿಕೆಗಳನ್ನು ಎಸೆದರು. ದೇವದಾನವರು ತಾಯಿಯ ಗರ್ಭಕ್ಕೆ ಆಯುಧಗಳನ್ನೆಸೆದರೆಂದು ಇದರರ್ಥ. ಗರ್ಭ ಕಳಚಿದೊಡನೆ ದೇವರೇಸಿ ವಿಕಾರವಾಗಿ ಕಿರಿಚಿದ. ಗೌಡ, ದತ್ತಪ್ಪ ಲಗುಬಗೆಯಿಂದ ನಾನಾ ಬಗೆಯ ಇಪ್ಪತ್ತೊಂದು ಹಣ್ಣುಗಳನ್ನು ತಾಯಿಯ ಉಡಿಯಲ್ಲಿ ಕಟ್ಟಿದರು.

ತಾಯಿ ಕೂಡಲೇ ಕೋಪಗೊಂಡಳು. ದೇವರೇಸಿಯ ಮೈತುಂಬಿ ಮುಳ್ಳಾವಿಗೆ ಹತ್ತಿದ್ದಳು. ಕೈಯಲ್ಲಿ ಖಡ್ಗ ಕೊಟ್ಟರು. ಎಡಗೈಯಲ್ಲಿ ಪಂಜು ಕೊಟ್ಟರು. ರಭಸದಿಂದ ಗುಡಿಬಿಟ್ಟು ಹೊರಗೆ ಪೌಳಿಗೋಡಿದಳು. ಪೌಳಿಯ ತುಂಬ ಗಂಡಸರು ಕಿಕ್ಕಿರಿದು ನೆರೆದಿದ್ದರು. ಈಗ ತಾಯಿ ದೇವದಾನವರ ಸಂಹಾರಕ್ಕೆ ಹೊರಡುವ ಸಮಯ. ಆ ಅವಸರದಲ್ಲಿಯೇ ಹಕ್ಕಿನ ಹಿರಿಯರನ್ನು ಕರೆದು ಊರ ಯೋಗಕ್ಷೇಮದ ಬಗ್ಗೆ ಮೂರು ವಿಶೇಷ ಕಾರಣಿಕ ಹೇಳಿ ಊರ ಸೀಮೆ ದಾಟುತ್ತಾಳೆ. ಪಲ್ಲಕ್ಕಿಯ ಹತ್ತಿರ ನಿಂತೊಡನೆ ತಾಯಿ ಪಂಜಿನ ಕೈ ಎತ್ತಿ 'ಏsss' ಎಂದು ಕಿರುಚಿದಳು. ಕೇಳುವುದಕ್ಕೆ ಎಲ್ಲರೂ ಸ್ತಬ್ಧರಾದರು. ಗೌಡ ಗಪ್ಪನೆ ಬಗ್ಗಿ ತಾಯಿಯ ಮುಳ್ಳಾವಿಗೆಯ ಮೇಲೆ ನಿಂತ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡ. ಗುಡಿಯ ಒಳಗಡೆ ಹೆಂಗಸರು ಇನ್ನೂ ಗದ್ದಲ ಮಾಡುತ್ತಿದ್ದರು. ದತ್ತಪ್ಪ ಗದರಿಸಿದ, ಸುಮ್ಮನಾದರು. ಆದರೆ ಏನೋ ಗುಸುಗುಸು ನಡೆಯುತ್ತಿತ್ತು. ತಾಯಿ ಬೇಗನೆ ಬಾಯಿ ಬಿಡಲಿಲ್ಲ. ಬರೀ ಬಿಕ್ಕತೊಡಗಿದಳು.

ಜನ ಮೈಯೆಲ್ಲಾ ಕಿವಿಯಾದರು. ಆಶ್ಚರ್ಯವೆಂದರೆ ಗುಡಸೀಕರ ಕೂಡ ಬಸವರಾಜನೊಂದಿಗೆ ಕಾರಣಿಕ ಕೇಳಲು ಬಂದಿದ್ದ. ಒಳಗೊಳಗೇ ದೇವಿ ತನ್ನ ಎಲೆಕ್ಷನ್ ಪರವಾಗಿಯೇ ಕಾರಣಿಕ ಹೇಳಿಯಾಳೆಂಬ ನಂಬಿಕೆಯಿತ್ತು. ಬಸವರಾಜು ಅವನ ಪಕ್ಕದಲ್ಲೇ ನಿಂತು ಹೆಂಗಸರ ಕಡೆ ಕುಡಿನೋಟ ಬೀರುತ್ತ ನಿಂತಿದ್ದ. ಗುಡಸೀಕರನ ಕಿವಿಯಲ್ಲಿ ಏನೋ ಹೇಳುತ್ತಿದ್ದಂತೆ ಬಾಯಿ ಮುಚ್ಚಲಿಕ್ಕೆ ಸನ್ನೆಮಾಡಿ ಕಾರಣಿಕಕ್ಕೆ ಕಿವಿಗೊಟ್ಟ. ಹೆಂಗಸರಲ್ಲಿದ್ದ ಗಿರಿಜಳಿಗೆ ಕಾರಣಿಕದ ಬಗ್ಗೆ ಕಾಳಜಿಯಿದ್ದಂತಿರಲಿಲ್ಲ. ಬಸವರಾಜೂನನ್ನು ಕಣ್ಣಿನಿಂದಿರಿಯುತ್ತ, ಹಲ್ಲು ಕಿಸಿಯುತ್ತ ನಿಂತಿದ್ದಳು. ಈಗಲೂ ತಾಯಿಗೆ ಬಾಯಿ ಬಂದಿರಲಿಲ್ಲ. ಬರೀ ಬಿಕ್ಕುತ್ತಿದ್ದಳು.

ಗೌಡನ ಎದೆ ಡವಡವ ಹೊಡೆದುಕೊಳ್ಳುತ್ತಿತ್ತು. ತಾಯಿಯ ವಾಣಿ ಏನಾಗುತ್ತದೋ, ಬಾಯಿ ಕೂಡ ಬರದಾಗಿತ್ತು. ನಿಂಗೂ ಹೆಂಗಸರಲ್ಲೇ ನಿಂತಿದ್ದವನು ಬಸವರಾಜುವಿನ ಕಣ್ಣ ಬೇಟೆ ಗಮನಿಸಿದ್ದ. ನೋಡಿ ಅಸೂಯಪಟ್ಟಿದ್ದ. ಹಿಂದೆ ನಿಂತಿದ್ದ ಸುಂದರಿ ನಿಧಾನವಾಗಿ ಬಿಕ್ಕತೊಡಗಿದ್ದಳು. ಕೂಡಲೇ ಹೆಂಗಸರು ಅವಳನ್ನು ಗದರಿಕೊಂಡರು. ಒಂದು ಸಲ ಸುಮ್ಮನಾಗಿ ಮತ್ತೆ ಬಿಕ್ಕತೊಡಗಿದಳು. "ಈ ರಂಡಿಗೇನಾಗೈತ್ಯೊ ಬ್ಯಾನಿ" ಎಂದು ಹೆಂಗಸರಿಗೆ ಕೇಳಿಸುವಂತೆ ಲಗಮವ್ವ ಬೈದು ಮತ್ತೆ ಕಾರಣೀಕಕ್ಕೆ ಕಿವಿಯೊಡ್ಡಿದಳು. ನಿಂಗೂ ತಿರುಗಿ

ನೋಡಿದಾಗ ಸುಂದರಿ ನಿಂತಲ್ಲೇ ಬಿಕ್ಕುತ್ತ ಕುಸಿದಿದ್ದಳು. ಬಿಕ್ಕುವಾಗ ಎದ್ದೆದ್ದು ಬೀಳುತ್ತಿದ್ದಳು. ಅಷ್ಟರಲ್ಲಿ ತಾಯಿ ಇನ್ನೊಮ್ಮೆ,

"ಏssss"

ಎಂದು ಕಿರಿಚಿದಳು, ಜನ ಸ್ತಬ್ಧರಾದರು. ಗೌಡ ತಾಯಿಯ ಕಾಲನ್ನು ಇನ್ನೂ ಬಿಗಿಯಾಗಿ ಹಿಡಿದ. ಕಿವಿಯ ಮೇಲೆ ತಾಯಿಯ ಬೆಚ್ಚಗಿನ ಕಣ್ಣೀರ ಹನಿ ಬಿದ್ದಾಗ ಕಳವಳವಾಯ್ತು. ತಾಯಿಗೆ ಬಾಯಿ ಬಂತು:

ಆಸರದ ಆಲದ ಮರದ ಬೇರ
ನೀರಿಲ್ಲದ ಒಣಗ್ಯಾವು
ನೀರ ಹಾಕೋದ ಮರೀಬ್ಯಾಡ್ರೆಲೇ….

ಕಾರಣಿಕ ಸ್ಪಷ್ಟವಾಗಿ ಚುನಾವಣೆಯ ಬಗ್ಗೆ ಇತ್ತೆಂಬ ಬಗ್ಗೆ ಯಾರಿಗೂ ಅನುಮಾನವಾಗಲಿಲ್ಲ. ಆಸರದ ಆಲದ ಮರದ ಬೇರಿಗೆ ನೀರು ಹಾಕುವುದೆಮದರೆ ಗೌಡನ ಪಾರ್ಟಿಗೆ 'ಹೋಟು' ಹಾಕಬೇಕೆಂಬುದಾಗಿ ಎಲ್ಲರೂ ಅರ್ಥೈಸಿಕೊಂಡರು. ಗಟ್ಟಿಮುಟ್ಟಾದ ನುಡಿಯೆಂದು ಜನ ಆಡಿಕೊಂಡರು ಕೂಡ, "ನಡೀಪಾ ಗುಡಸೀಕರಾ ಇನ್ನ" ಎಂದೊಬ್ಬ ಕುಸ್ತೀ ಹುಡುಗ ಕುಹಕವಾಡಿದ. ಗುಡಸೀಕರನಿಗೆ ನಿರಾಶೆಯಾಯ್ತು. ಬಸವರಾಜೂನ ಕಡೆ ನೋಡಿದ. ಅವನಿರಲಿಲ್ಲ.

ರಂಡಿ ಹುಣ್ಣಿವೆ ದಿನ ಆಗೋದು ಒಟ್ಟು ಮೂರು ನುಡಿಗಳು. ಊರುಗಾರಿಕೆಯ ಮೊದಲನೆಯ ನುಡಿಯಾದ ಮೇಲೆ ಎರಡನೆಯ ನುಡಿ ಗೌಡನ ಮನೆತನಕ್ಕೆ ನೇರವಾಗಿ ಸಂಬಂಧಪಡುವುದರಿಂದ ತನ್ನ ಕಳೆದ ಮಗನ ಬಗ್ಗೆ ತಾಯಿ ಏನು ಹೇಳುವಳೋ ಎಂದು ಗೌಡ ತವಕಗೊಂಡ. ಗಂಟಲಲ್ಲಿದ್ದ ಎರಡನೆ ನುಡಿ ಇನ್ನೇನು ದನಿಗೊಂಡು ಹೊರಬರಬೇಕು, ಅಷ್ಟರಲ್ಲಿ ಗುಡಿಯೊಳಗಿದ್ದ ಸುಂದರಿ ವೀರಾವೇಶದಿಂದ "ಏ" ಎಂದು ಥೇಟ್ ದೇವರೇಸಿಯಂತೆ ಕಿರಚಿದಳು. ಜನ ದಂಗಾದರು.

ಏನು, ಎತ್ತ, ಯಾಕೆ, ಹ್ಯಾಗೆ – ತಿಳಿಯುವ ಮುನ್ನವೇ, ಜನ ಹಿಂದಿರುಗಿ ಹೆಂಗಸರತ್ತ ನೋಡ ನೋಡುವುದರೊಳಗೆ ಸುಂದರಿ ಹೆಂಗಸರ ಮಧ್ಯದಿಂದ ನೆಗೆದು ಬಂದು ಗಂಡಸರ ಗುಂಪಿನಲ್ಲಿ ಹೊಕ್ಕು ಎರಡೂ ಕೈಯಲ್ಲಿದ್ದ ಬಂಡಾರವನ್ನು ರಭಸದಿಂದ ಮೇಲಕ್ಕೆರಚಿದಳು. ದೇವರೇಸಿ ಅವಾಕ್ಕಾಗಿ ನಡುಗಿದ. ಅವಳು ಒಲೆದಾಡುವ ಪರಿ ನೋಡಿ ದೇವೀ, ತನ್ನ ಬಿಟ್ಟು ಇವಳ ಮೈತುಂಬಿದಳೆಂಬ ದುಃಖ ಒಂದೆಡೆಗಾದರೆ ಎಲ್ಲಿ ತನ್ನ ಗುಟ್ಟು ರಟ್ಟು ಮಾಡುವಳೋ ಎಂಬ ಭಯ ಇನ್ನೊಂದೆಡೆ, ಸುಂದರಿ ಓಡಿ ಬಂದು ದೇವರೇಸಿಯ ಹತ್ತಿರವೇ ನಿಂತು ತನ್ನ ಶಕ್ತಿಯನ್ನೆಲ್ಲ ಒಗ್ಗೂಡಿಸಿ ಇನ್ನೊಮ್ಮೆ ಕಿರಚಿದಳು. ಜನರ ಮನಸ್ಸು ಚೆದರಿ ಚೆಲ್ಲಾಪಿಲ್ಲಿಯಾಯಿತು. ಅವಳು ಒಲೆದಾಡುವ ಪರಿಯೋ ಥೇಟ್ ದೇವರೇಸಿಯಂತೇ ಇದ್ದುದರಿಂದ ಇವಳಿಗೂ ತಾಯಿ ಮೈತುಂಬಿರಬೇಕೆಂದು ಕೆಲವರಂದುಕೊಂಡರು. ಈ ಹುಚ್ಚರಂಡೆ ಹಗರಣಾ ಮಾಡುತ್ತಿದ್ದಾಳೆಂದು ಕೆಲವರಂದರು. ಮೈತುಂಬದಿದ್ದರೆ ಕೂಡಿದ ಭಕ್ತರಲ್ಲಿ ಹೀಗೆ ಒದರುವ ಧೈರ್ಯ ಬರುತ್ತಿತ್ತೇ? ಪಲ್ಲಕ್ಕಿಯ ಹತ್ತಿರ ನಿಲ್ಲುವ ಧೈರ್ಯವಾಗುತ್ತಿತ್ತೇ? ಹಗರಣಾ ಮಾಡಿದ್ದರೆ ನಾವ್ಯಾಕೆ, ದೇವಿ ಸುಮ್ಮನಿರುತ್ತಿದ್ದಳೆ? ನಿಂತಲ್ಲೇ ರಕ್ತ ಕಾರಿಸಿ ಬಿಡುತ್ತಿದ್ದಳು. ಅದೂ ಹೋಗಲಿ, ಅವಳ ದನಿಯಲ್ಲೇ ಏನೋ ಒಂದು ವಿಶೇಷವಿದೆ. ಹಲ್ಕಟ ಹೆಂಗಸೇನೋ ಹೌದು. ಆದರೆ ತಾಯಿಯ ಮನಸ್ಸಿಗೆ ಬಂದರೆ ಏನು ಮಾಡಲಾಗುತ್ತದೆ? ದೇವರೇಸಿ ಏನೋ ಮೈಲಿಗೆ ಮಾಡಿರಬೇಕು. ಇಲ್ಲದಿದ್ದರೆ ಅವನನ್ನು ಬಿಟ್ಟು ದೇವೀ ಇನ್ನೊಬ್ಬರನ್ನು ಯಾಕೆ ಆರಿಸಿಕೊಳ್ಳುತ್ತಿದ್ದಳು? ಗೌಡ ಅಪ್ರತಿಭನಾದ. ದತ್ತಪ್ಪನ ಚಿಂತಾಮಣಿಯ ಬುದ್ಧಿ ಮಸಳಿಸಿತು. ಏನು ಮಾಡಬೇಕೆಂದು ಯಾರಿಗೂ ತೋಚಲೊಲ್ಲದು. ಸುಂದರಿ ಮತ್ತೆ ಕಿರಿಚಿ ಬಿಕ್ಕತೊಡಗಿದಳು. ಇದು ದೇವರೇಸಿಯ ಬಿಕ್ಕಿನಂತೆ ಇತ್ತು. ನಂಬಲು ಸಿದ್ಧರಾದ ಕೆಲವು ಭಾವುಕರಿಗೆ ಸಂಶಯವೇ ಉಳಿಯಲಿಲ್ಲ. ಚರ್ಚಿಸುವ ಸಮಯವೂ ಅದಲ್ಲ.

# ಎಲ್ಲೀ ಹೋದಳೆನ್ನಬೇಡಿರೇ

ಸುಂದರಿ ಕೈ ಎತ್ತಿ "ಚೆಗರಿಗೆ ನೀರ ಹಾಕ್ರಲೇ" ಎಂದು ಕಿರಿಚಿದಳು. ದೇವರೇಸಿಯ ಕೈಯ ಪಂಜು ಕಳಚಿ ಹಾಗೇ ಕೆಳಕ್ಕೆ ಬಿತ್ತು. ಹತ್ತಿರಿದ್ದವರಿಗೆ ಅವಳ ಮಾತು ಕೇಳಿಸಿತು. ದೂರಿದ್ದವರಿಗೆ ಕೇಳಿಸಲಿಲ್ಲ. ಏನು, ಏನೆಂದು ಅವರಿವರಿಂದ ತಿಳಿದುಕೊಂಡರು. ಕೂಡಲೇ ದತ್ತಪ್ಪ ಕೈ ಮೇಲೆತ್ತಿ "ಇದು ಗುಡಸ್ಯಾನ ದೇವರಪೋ" ಎಂದು ಕೂಗಿದ. ಜನ ದೇವಿಯೆಂದರು. ಹೊಯ್ಮಾಲಿಯೆಂದರು. ಹಾ ಎಂದರು, ಹೋ ಎಂದರು. ದೇವರೇಸಿ,

"ದೇವೀ ನನ್ನ ಕೈ ಬಿಟ್ಟಳ್ರೋss"

– ಎಂದು ಕಿರುಚುತ್ತ ಭೂತ ಕಂಡ ಮಗುವಿನಂತೆ ರಭಸದಿಂದ ಜನಗಳನ್ನು ಆ ಈ ಕಡೆ ತಳ್ಳಿ ಹೊರಗೋಡಿಬಿಟ್ಟ. ಜನ ಹೋ ಎಂದು ಗಾಬರಿಯಲ್ಲಿ ಕಿರುಚುತ್ತಿದ್ದಂತೆ ಗೌಡ "ಸತ್ತಗಿತ್ತಾನ ಬಾರೋ ದತ್ತೂ" ಎಮದು ಕಿರಿಚಿ ದೇವರೇಸಿಯ ಬೆನ್ನುಹತ್ತಿದ. ದತ್ತಪ್ಪನೂ ಓಡಿದ. ಅವರ ಹಿಂದಿನಿಂದ ಕೆಲವು ಕುಸ್ತೀ ಹುಡುಗರೂ, ಇನ್ನು ಕೆಲವರೂ ಓಡಿದರು. ಬಸವರಾಜು ಯಾವುದೋ ಪರಿಯಿಂದ ಗರ್ಭಗುಡಿ ಸೇರಿದವನು ಯಾರಿಗೂ ಗೊತ್ತಾಗದಂತೆ ಹೆಜ್ಜೇನಿನ ಮೂರು ಹುಟ್ಟುಗಳಿಗೆ ಉದ್ದ ಕೋಲಿನಿಂದ ಬೀಸಿ ಹೊಡೆದ. ಒಂದೊಂದೇ ಏಟಿಗೆ ಮೂರು ಹುಟ್ಟುಗಳು ಕತ್ತರಿಸಿ ನೆಲಕ್ಕೆ ರೊಪ್ಪೆಂದು ಬಿದ್ದವು. ಬಿದ್ದ ಹುಟ್ಟುಗಳ ಸುತ್ತ ಹಸಿ ನೆತ್ತರಿನಂತೆ – ಜೇನುತುಪ್ಪ ಹುಳು ಸಮೇತ ಚೆಲ್ಲೆಂದು ಸಿಡಿಯಿತು. ಆಘಾತದಿಂದ ತತ್ತರಿಸಿದ ಹುಳುಗಳು ಗೊಂಯೆಂದು ಭಗ್ಗನೆ ಹೊಗೆಯೆದ್ದಂತೆ – ಹೊರಬಿದ್ದು ಸಿಕ್ಕಸಿಕ್ಕವರನ್ನು ಸಿಕ್ಕಸಿಕ್ಕಲ್ಲಿ ಕಚ್ಚತೊಡಗಿದವು.

ಕಿರುಚಾಟ, ಕೂಗಾಟ, ಒದರಾಟ, ಅಯ್ಯೋ ಅಪ್ಪಾ,ಅವ್ವಾ, ತಾಯೀ, ಕರಿಮಾಯೀ ಎಂದು ಜನ ಮರೆ ಎಲ್ಲಿದ್ದರಲ್ಲಿಗೆ ಹೋ ಎಂದು ಒಡತೊಡಗಿದರು. ಬಿದ್ದರೋ, ಎದ್ದರೋ, ತುಳಿದರೋ, ತುಳಿಸಿಕೊಂಡರೋ – ಬಟ್ಟೆ ಕಿತ್ತೆಸೆದರು, ಸೀರೆ ಬಿಚ್ಚಿ ಎಸೆದರು, ಹೊಯ್ಕೊಂಡರೂ, ಹೊಡಕೊಂಡರೂ ಹುಳ ಬಿಡದೆ ಅಟ್ಟಿಸಿಕೊಂಡು ಹೋಗಿ ಎಲ್ಲೆಂದರಲ್ಲಿ, ಒಬ್ಬೊಬ್ಬರಿಗೆ ಸಾವಿರ ಸಾವಿರ ಮುತ್ತಿ, ಒಂದನ್ನು ಒರೆದರೆ ಅದರ ನೆತ್ತರಿನಿಂದ ಸಾವಿರ ಹುಟ್ಟಿ, ಜೀವದ ಪರಿವೆಯಿಲ್ಲದೆ ಹೆಂಗಸರು ಮಕ್ಕಳೆನ್ನದೆ, ಬಿದ್ದವರೆದ್ದರೆನ್ನದೆ, ಹೊಕ್ಕಲ್ಲಿ ಬಿಡದೆ, ಬಿದ್ದಲ್ಲಿ ಸೋದೆ ಗೊಂಯೆಂದು, ಹುಯ್ಯೆಂದು ಕಚ್ಚಿದುವು.

ಒಂದೆರಡು ಗಳಿಗೆಯಲ್ಲಿ ಗುಡಿ ಇದ್ದಕ್ಕಿದ್ದಂತೆ ಖಾಲಿಯಾಗಿ ದೂರದಲ್ಲಿ ಹೆಂಗಸರು ಮಕ್ಕಳ ಅಳುವಿನ ದನಿ, ಊರನಾಯಿಗಳು ವಿಕಾರವಾಗಿ ಊಳಿಡುವ ದನಿ ಮಾತ್ರ ಕೇಳಿಸುತ್ತಿತ್ತು.

ಶಿಶು ಮಕ್ಕಳು ಕಡಿದಷ್ಟು ಕಡಿಯಲೆಂದು ಅಲ್ಲೇ ಕಂಬಳಿಗಳಲ್ಲಿ ಮುದ್ದೆಯಾಗಿ ಬಿದ್ದಿದ್ದರು. ಗುಡಸೀಕರನೂ ಒಬ್ಬನ ಕಂಬಳಿಯಲ್ಲಿ ಹಾಗೆ ಅವಿತಿದ್ದವನು ದೈವವಶಾತ್ ಎಂಬಂತೆ ದೇವಿಯ ಬಂಗಾರದ ಮುಖದ ನೆನಪಾಯಿತು. ಹುಳ ಇನ್ನೂ ಕಡಿಮೆಯಾಗಿರಲಿಲ್ಲ. ಕಡಿಮೆಯಾಗುವ ಲಕ್ಷಣಗಳೂ ಕಾಣಲಿಲ್ಲ. ಗೌಡ, ದತ್ತಪ್ಪ ಇವರೂ ಯಾರಿರಲಿಲ್ಲ. ಬಿದ್ದುಕೊಂಡೇ ಶಿಶು ಮಕ್ಕಳನ್ನು ಉದ್ದೇಶಿಸಿ ದೇವಿಯ ಬಂಗಾರದ ಮುಖದ ಬಗ್ಗೆ ಹೇಳಿದ. ಆಗ ಅವರಿಗೂ ನೆನಪಾಯಿತು ಏಳಿರೆಂದು ಒಂದಿಬ್ಬರನ್ನು ಎಬ್ಬಿಸಿ ಕಚ್ಚುತ್ತಿದ್ದ ಹುಳ ಗಮನಿಸದೆ ಗರ್ಭಗುಡಿಯೊಳಗೆ ಓಡಿಹೋಗಿ ತಾಯಿಯ ಬಂಗಾರದ ಮುಖವನ್ನು ಜೋರಿನಿಂದ ಕಿತ್ತುಕೊಂಡ. ಕಿತ್ತ ರಭಸಕ್ಕೆ ತಾಯಿಯ ಇಡೀ ಮೂರ್ತಿ ರುಂಡವಿಲ್ಲದೆ ಬರೀ ಮುಂಡ ಮಾತ್ರ ಧೊಪ್ಪನೆ ನೆಲಕ್ಕೆ, ಬೆನ್ನು ಮೇಲಾಗಿ ಕೈಕಾಲೂರಿ ಬಿದ್ದುಬಿಟ್ಟಿತು. ಗುಡಿಯಲ್ಲಿದ್ದ ಫಲ ಚೆಲ್ಲಾಪಿಲ್ಲಿಯಾಗಿ ಬಿದ್ದವು. ಅಲ್ಲಿದ್ದವರ ಜೀವ ಹಾರಿಹೋದಂತಾಯ್ತು. ನಾಳೆ ಸರಿಪಡಿಸಿದರಾಯ್ತೆಂದು ಉಟ್ಟ ಧೋತ್ರದಲ್ಲಿ ತಾಯಿಯ ಮೂರ್ತಿ ಬಚ್ಚಿಟ್ಟುಕೊಂಡು ಆಭರಣಗಳನ್ನಾಯ್ದುಕೊಂಡು ಶಿಶು ಮಕ್ಕಳೊಂದಿಗೆ ಮನೆಗೆ ಓಡಿದ. ಓಡಿ ಬಂದವರಲ್ಲಿ ಬಸವರಾಜೂ ಕೂಡ ಒಬ್ಬನಾದದ್ದು ಮನೆಗೆ ಬಂದಮೇಲೆ ತಿಳಿಯಿತು.

ಎಲ್ಲರ ಮುಖ ಬಾತುಹೋಗಿ ಗುರುತು ಸಿಗದಾಗಿತ್ತು. ಬಸವರಾಜೂನ ಕಣ್ಣು, ಸೊಂಡಿ, ಕಿವಿ ಎಲ್ಲಾ ಉಬ್ಬಿ ಬಾಯಿ ತೆರೆದಾಗ ಲಗುಮವ್ವನ ಹಾಡಿನ ದೈತ್ಯನಂತೆ ಕಾಣುತ್ತಿದ್ದ. ಈಗ ಮಾತಾಡಿ ಪ್ರಯೋಜನವಿರಲಿಲ್ಲ. ಒಬ್ಬೊಬ್ಬರೂ ಮೈ ಪರಚಿಕೊಳ್ಳುವ ಕೆಲಸದಲ್ಲಿ ನಿರತರಾಗಿದ್ದರು. ಒಳಗೆ ಗಿರಿಜಾ ಸಣ್ಣಾಗಿ ಅಳುತ್ತಿದ್ದಳು. ದೂರದಲ್ಲಿನ್ನೂ ಜನರ ನರಳಾಟ ಕೇಳಿಸುತ್ತಿತ್ತು. ನಾಯಿಗಳು ಊಳಿಡುತ್ತಿದ್ದವು. ಗೌಡ, ದತ್ತಪ್ಪ ಈಗ ಬಂದಾರು ಆಗ ಬಂದಾರೆಂದು ಬಂದೊಡನೆ ಈ ಮುಖ, ಆಭರಣಗಳನ್ನೂ ಅವರಿಗೊಪ್ಪಿಸಿ ಜವಾಬ್ದಾರಿ ತೀರಿಸಿಕೊಳ್ಳಬೇಕೆಂದು ದಾರಿನೋಡುತ್ತ, ಮೈಪರಚಿಕೊಳ್ಳುತ್ತ ಗುಡಸೀಕರ ಕುತ. ಬಹಳ ಹೊತ್ತಾದರೂ ಯಾರೂ ಬರುವ ಸುಳಿವು ಕಾಣಲಿಲ್ಲ. ತಾವೆಲ್ಲಾ ಇಲ್ಲಿದ್ದರೆ ಅವರಿಗೆ ದೇವಿಯ ಮುಖ ಇಲ್ಲಿದ್ದುದ್ದು ತಿಳಿಸುವುದಾದರೂ ಹ್ಯಾಗೆ? ಬಂದಿದ್ದ ಶಿಶು ಮಕ್ಕಳನ್ನು ಗೌಡ, ದತ್ತಪ್ಪರ ಮನೆಗೆ ಕಳುಹಿಸಿದ. ಅವರ ಅಳುಮುಖ ನೋಡಿ ಗುಡಸೀಕರನ ಕರುಳು ಕಿತ್ತು ಬಾಯಿಗೆ ಬಂದಂತೆ ಗಂಟಲು ತುಂಬಿ ಬಂತು. ಬಸವರಾಜ ಇಲ್ಲದಿದ್ದರೆ ಅತ್ತುಬಿಡುತ್ತಿದ್ದನೋ ಏನೋ! ಅವ ಮಿಕಿ ಮಿಕಿ ಇವನನ್ನೇ ನೋಡುತ್ತಿದ್ದ. ಅವನಿಗೂ ಅನಿರೀಕ್ಷೀತ ಆಘಾತವಾದಂತಿತ್ತು.

ಒಂದು ತಾಸು ಹಾದಿ ನೋಡಿದ. ಯಾರೂ ತನ್ನ ಮನೆ ಕಡೆ ಬರುವ ಲಕ್ಷಣ ಕಾಣಿಸಲಿಲ್ಲ. ಗಡಿಯಾರ ನೋಡಿಕೊಂಡ. ಆಗಲೇ ಮೂರು ಗಂಟೆಯಾಗಿತ್ತು. ಬಸವರಾಜು ಕೂತಲ್ಲೇ ಮಲಗಿ ಗೊರಕೆಹೊಡೆಯುತ್ತಿದ್ದ. ದೇವಿಯ ಮುಖ ಕಣ್ಣು ತೆರೆದುಕೊಂಡು ಪಲ್ಲಂಗದ ಮೇಲೆ ಹಾಗೇ ಕೂತಿತ್ತು. ತಗೊಂಡು ಹೋಗಿ ತನ್ನ ದೇವರ ಮನೆಯ ತಿಜೋರಿಯಲ್ಲಿಟ್ಟು ಬೀಗ ಹಾಕಿಬಂದ. ಇನ್ನೂ ಯಾರೂ ಬರಲಿಲ್ಲ.

ಒತ್ತೊತ್ತಿ ಉಕ್ಕಿಬರುವ ಅಲೋಚನೆಗಳಿಂದ, ಚಿಂತೆಗಳಿಂದ ಅಳು ಬಂತು. ಗಳಗಳ ಕಣ್ಣೀರು ಸುರಿಸಿದ. ಸುಂದರಿ ಮಾಡಿದ್ದು ಬಸವರಾಜೂನ ಕುತಂತ್ರದಿಂದಲೇ ಎಂದು ಖಾತ್ರಿಯಾಗಿತ್ತು. ಅದೆಲ್ಲ ತನಗಾಗಿ ಇದ್ದೀತು. ಆಸರೆ ಹಾಗೆ ಮಾಡಿದ್ದು ಸರಿಯಲ್ಲವೆಂದು ಅವನ ಒಟ್ಟು ಅಭಿಪ್ರಾಯವಾಗಿತ್ತು. ತನ್ನೊಬ್ಬನ ಅಧಿಕಾರದಾಹಕ್ಕಾಗಿ ಇಡೀ ಹಳ್ಳಿಯ ಪುರಾಣವನ್ನು ಬಲಿಗೊಡುವುದೂ ಅವನಿಗೆ ಬೇಕಿರಲಿಲ್ಲ. ಆದರೆ ಎಲ್ಲ ಅನಿರೀಕ್ಷಿತವಾಗಿ ಘಟಿಸಿಬಿಟ್ಟಿತ್ತು. ಗೌಡ ತನಗಿಂತ ಬಹಳ ದೊಡ್ಡವನೆನ್ನಿಸಿತು. ಬೆಳಿಗ್ಗೆ ದೇವಿಯ ಮುಖ ಒಪ್ಪಿಸಿ ಕ್ಷಮಾಪಣೆ ಕೇಳಬೇಕೆಂದುಕೊಂಡ. ತಾನು ಎಲ್.ಎಲ್.ಬಿ. ಪಾಸಾದಾಗ ಅವ ಸಕ್ಕರೆ ಹಂಚಿದ್ದನ್ನು, ಎಲೆಕ್ಷನ್ ಇಲ್ಲದೆ ಪಂಚಾಯ್ತಿ ತನ್ನ ಕೈಗಿತ್ತದ್ದನ್ನು, ಇತ್ತೀಚೆಗೆ ತೋಟದಲ್ಲಿ ತನ್ನನ್ನು ಕಂಡು ಅಂಗಲಾಚಿದ್ದನ್ನು ನೆನೆದುಕೊಂಡ. ಗುಡಿಯಲ್ಲಿ ನಡೆದ ಇಂದಿನ ಗೊಂದಲ ನೆನಪಿಸಿಕೊಂಡ. ದೇವಿಯ ಅಳು ಮಕ್ಕಳ ಅಳುಮುಖ ನೆನಪಿಸಿಕೊಂಡ. ಜನ ತನ್ನನ್ನು ಕ್ಷಮಿಸಲಾರರೆನ್ನಿಸಿತು. ಪಶ್ಚಾತ್ತಾಪದಿಂದ ಸುಟ್ಟು ಸುಣ್ಣವಾದ. ಬಹುಶಃ ಪಶ್ಚಾತ್ತಾಪದಿಂದಲೋ ಏನೋ ಎದೆ ಸ್ವಲ್ಪ ಹಗುರವಾಯ್ತು. ಅನವಿಗೇ ಗೊತ್ತಿಲ್ಲದಂತೆ ಕಣ್ಣುಮುಚ್ಚಿ ನಿದ್ರೆಹೋದ.

ಬೆಳಿಗ್ಗೆ ಯಾರೋ ಚಿಟ್ಟನೆ ಚೀರಿದ್ದು ಕೇಳಿಸಿತು. ಎಚ್ಚರವಾಗಿ ಕಣ್ಣು ತೆರೆದ. ಕೆಳಗೆ ತನ್ನ ತಾಯಿ ಕಿರುಚುತ್ತಿದ್ದಳು. ತಬ್ಬಿಬ್ಬಾಗಿ ಕೆಳಗಿಳಿದುಹೋದ. ಮುದುಕಿ ದೇವರ ಮನೆಕಡೆ ಕೈತೋರಿಸುತ್ತ ಎದೆ ಎದೆ ಬಡಿದುಕೊಂಡು ಅಳುತ್ತಿತ್ತು. ನೋಡಿದರೆ ತಿಜೋರಿಯ ಬಾಗಿಲು ತೆರೆದಿತ್ತು. ಒಳಗೆಲ್ಲ ಖಾಲಿ.

ಬಸವರಾಜು ಕರಿಮಾಯಿಯ ಬಂಗಾರದ ಮುಖದೊಂದಿಗೆ ಆಭರಣ, ಹಣ ತಗೊಂಡು, ಗಿರಿಜೆಯನ್ನು ಓಡಿಸಿಕೊಂಡು ಪರಾರಿಯಾಗಿದ್ದ.

* * *

ಅದಾಗಿ ಸರಿಯಾಗಿ ಒಂದು ತಿಂಗಳಾಯಿತು. ಇಂದು ಮುತ್ತೈದೆ ಹುಣ್ಣಿವೆ, ಹುಣ್ಣಿವೆಯಂದು ವಿಧವೆಯಾದ ತಾಯಿ ಕರಿಮಾಯೆ ಒಂದು ತಿಂಗಳ ಅವಧಿಯಲ್ಲಿ ಏಳೇಳು ಶಿರದ ಈರೇಳು ಭುಜಗಳ ದೈತ್ಯರನ್ನೂ, ದೇವತೆಗಳನ್ನೂ ಸಂಹರಿಸಿ ಮಕ್ಕಳ ಹಾಗೂ ಗಂಡನ ಜೀವ ಮರಳಿ ಪಡೆದುಕೊಂಡು ಹಿಂದುರುಗಿ ಬರುವ ದಿನ ಇದು. ತಾಯಿ ಬರಲೇ ಇಲ್ಲ.

ಧರಣಿಗೆ ದೊಡ್ಡವಳಾದ ಕರಿಮಾಯಿ ಆಡುವ ಮಕ್ಕಳಿಗೆ ತೂಗು ತೊಟ್ಟಿಲವಾದಳು. ಮುತ್ತೈದೆಯರಿಗೆ ಬಾಗಿನವ ಮೊರವಾದಳೂ. ಹಣ್ಣು ಮುದುಕರಿಗೆ ಊರುವ ಕೋಲಾದಳು. ಅನಾಥರಿಗೆ ಆಧಾರವಾದಳು. ಅವಳನ್ನು ನೆನೆದು ಕೈಲಿ ಹಿಡಿದ ಕೆಂಡ ಕೆಂದಾವರೆಯಾಯ್ತು. ಮಣ್ಣು

ಚಿನ್ನವಾಯಿತು. ಹಿಟ್ಟು ಬೆಲ್ಲವಾಯಿತು. ಅಂಬಲಿ ಪಾಯಸವಾಯಿತು. ಜೋಪಡಿ ಅರಮನೆಯಾಯಿತು. ಇಂಥ ಮೂರು ಲೋಕಕ್ಕೆ ಅಧಿಕವಾದ ತಾಯಿ ಬರಲೇ ಇಲ್ಲ.

ಆಕಾಶ ಪಾತಾಳ ಒಂದು ಮಾಡಿ ಹುಡುಕಿದರೂ ಬಸವರಾಜು ಸಿಕ್ಕಲಿಲ್ಲ. ಪೊಲೀಸರಿಗೆ ಹೇಳಿ ಬಂದಿದ್ದರು. ಅವರಿಂದ ಈ ತನಕ ಯಾವ ಬಾತಮಿಯೂ ಬಂದಿರಲಿಲ್ಲ. ಆ ದಿನ ಗುಡಸೀಕರ ಬಂಗಾರದ ಮುಖ ತೆಗೆದಾಗ ರುಂಡವಿಲ್ಲದ ತಾಯಿಯ ಮೂರ್ತಿ ಬಕ್ಕ ಬರಲು ಕೈಕಾಲೂರಿ ಬಿದ್ದಿತ್ತು. ಅದನ್ನೆತ್ತಿ ಮುಂಡಕ್ಕೆ ಕಟ್ಟಿಗೆಯ ಮುಖವನ್ನಾದರೂ ಜೋಡಿಸಬೇಕಿತ್ತು. ಶುದ್ಧ ಮಾಡಿದಲ್ಲದೆ ಅದಾಗದು. ತಾಯಿಯೇ ಬರದಿದ್ದರೆ ಶುದ್ಧ ಮಾಡಿಯಾದರೂ ಏನು ಪ್ರಯೋಜನ? ಹೆದರಿಕೆಯಲ್ಲಿ ಲಗಮವ್ವನೂ ಗುಡಿಯ ಕಡೆ ಸುಳಿದಿರಲಿಲ್ಲ. ಅವಳೇನಾದರೂ ಈ ಪರಿಯಲ್ಲಿರುವ ತಾಯಿಯನ್ನು ಕಂಡಿದ್ದರೆ, ದೈತ್ಯರು ತಾಯಿಯ ರುಂಡ ಚೆಂಡಾಡಿದರೆಂದು ಅತ್ತಕೊಂಡು ಹಾಡುತ್ತಿದ್ದಳೋ ಏನೋ! ರಾತ್ರಿಯಾದೊಡನೆ ಒಬ್ಬಳೇ ಗುಡಿಸಲಲ್ಲಿ ಕೂತುಕೊಂಡು

ಎಲ್ಲೀ ಹೋದಳೆನ್ನಬ್ಯಾಡಿರೇ
ಕರಿಮಾಯಿ ನಿಮ್ಮ ಮನಸೀನಾಗ ಐದಾಳೆನ್ನಿರೇ |
ಎತ್ತ ಹೋದಳೆನ್ನಬ್ಯಾಡಿರೇ
ಕರಿಮಾಯಿ ನಿಮ್ಮ | ಚಿತ್ತದೊಳಗೈದಾಳೆನ್ನಿರೇ ||

ಎಂದೇನೋ ಹಾಡುತ್ತಿದ್ದಳು, ಬಹುಶಃ ತನ್ನ ಸಮಾಧಾನಕ್ಕಾಗಿ. ಆದರೆ ಅವಳ ದನಿ ವಿಕಾರವಾಗಿ ದೂರದಲ್ಲಿದ್ದವರಿಗೆ ಅದೊಂದು ನೊಮದ ಪ್ರಾಣಿಯ ಆಳಾಪದಂತೆ ಕೇಳಿಸುತ್ತಿತ್ತು.

ದೇವರೇಸಿ ಆ ದಿನ ಎಲ್ಲರನ್ನೂ ತಪ್ಪಿಸಿ ಕಾಡಿನಲ್ಲಿ ಮಾಯವಾದ. ಮೂರು ದಿನಗಳ ತರುವಾಯ ನೇಣು ಹಾಕಿಕೊಂಡ ಅವನ ಹೆಣ ಸಿಕ್ಕಿತ್ತಷ್ಟೆ. ತಾಯಿ ಇನ್ನೊಬ್ಬ ದೇವರೇಸಿಯನ್ನಾರಿಸಿಕೊಂಡು ಅವನ ಮುಖಾಂತರ ಬಂಗಾರದ ಮುಖದ ಸುಳಿವು ಕೊಟ್ಟಾಳು. ಇಲ್ಲವೆ ಬಸವರಾಜನಿಗೆ ನೆತ್ತರು ಕಕ್ಕಿಸಿ ಅವ ಓಡಿಬಂದು ವಾಪಸ್ಸು ಕೊಡುವಂತೆ ಮಾಡ್ಯಾಳೆಂದು ಎಲ್ಲರ ನಂಬಿಕೆಯಾಗಿತ್ತು. ಅಂಥ ಸುದ್ದಿ ಈಗ ಬಂದೀತು, ಆಗ ಬಂದೀತು, ಇಂದು ಬಂದೀತು, ನಾಳೆ ಬಂದೀತೆಂದು ಕಾದರು. ಬೆಳಗಾವಿಯ ಪತ್ರಿಕೆಗಳಲ್ಲಿ "ಶಿವಾಪುರದಲ್ಲಿ ಭಾರೀ ದರೋಡೆ, ಚಿನ್ನದ ಮೂರ್ತಿಯ ನಾಪತ್ತೆ" ಎಂಬ ತಲೆಬರಹದಡಿಯಲ್ಲಿ ಸುದ್ದಿ ಪ್ರಕಟವಾಯಿತಷ್ಟೆ. ಇದನ್ನು ನೋಡಿ ಜನ ತಮ್ಮ ಆಪ್ತರು ಸತ್ತ ಸುದ್ದಿ ಕೇಳಿದಂತೆ ಹೋ ಎಂದು ಅತ್ತರು. ಊರಿಗೆ ಊರೇ ಸತ್ತವರ ಮನೆಯಂತೆ ಬಿಕೋ ಎನ್ನುತ್ತಿತ್ತು.

ಈಗ ಕರಿಮಾಯಿ ಹೆಸರು ಹೇಳುವುದಕ್ಕೇ ಹೆದರುತ್ತಿದ್ದರು. ಯಾರೊಬ್ಬರೂ ದನಿ ಎತ್ತರಿಸಿ ಮಾತಾಡುತ್ತಿರಲಿಲ್ಲ. ಊರ ಹೊರಗಿನಿಂದ ಯಾರು ಬಂದರೂ ಅವರನ್ನು ಮುತ್ತಿ ತಾಯಿಯ ಸುದ್ದಿಯೇನೆಂದು ಕೇಳುತ್ತಿದ್ದರು. ಒಬ್ಬರ ಮುಖದಲ್ಲೂ ಕಳೆಯಿರಲಿಲ್ಲ. ಪ್ರತಿಯೊಬ್ಬರ ಹೊಕ್ಕಳ ಬಳಿ ದೊಡ್ಡ ಗಾಯವಾಗಿ ಅದರ ವೇದನೆಯಿಂದ ಅತ್ತು ಅತ್ತು ಈಗಷ್ಟೇ ಸುಮ್ಮನಾಗಿದ್ದವರಂತೆ ಅಥವಾ ಉಕ್ಕುವ ದುಃಖವನ್ನು ತುಟಿಕಚ್ಚಿ ತಡೆದಂತೆ ಕಾಣಿಸುತ್ತಿದ್ದರು. ಕಣ್ಣಂಚಿನಲ್ಲಿ ತಾಯಿ ಸಿಕ್ಕಾಳೆಂಬ ಆಸೆ ಮಾತ್ರ ಹೊಳೆಯುತ್ತಿತ್ತು. ದಿನೇ ದಿನೇ ಅದೂ ಬಾಡತೊಡಗಿತ್ತು.

ಗೌಡ ಈ ಒಂದು ತಿಂಗಳ ಅವಧಿಯಲ್ಲಿ ತೊಗಲು ಜೊತು ಹೆಗಲು ಬಿದ್ದ ಮೈ ಮೇಲಿನ ನೊಣಕ್ಕೂ ಬಾಲ ಎತ್ತಲಾಗದ ಮುದಿ ಎತ್ತಿನಂತಾಗಿದ್ದ. ಕೂತರೆ ಕೂತ, ನಿಂತರೆ ನಿಂತ, ದಾಡಿ ಮಾಡಿಸಿಕೊಂಡರೆ ಮಾಡಿಸಿಕೊಂಡ, ಇಲ್ಲದಿದ್ದರಿಲ್ಲ, ಮಾತುಕೊಟ್ಟು ಹೋದ ತಾಯಿ ಬಂದಿರಲಿಲ್ಲ. ಮಗ ಶಿವನಿಂಗ ಮಂದಿರಲಿಲ್ಲ. ಶಿವನಿಂಗನ ಸುದ್ದಿ ಬಂದಿರಲಿಲ್ಲ, 'ಕರಿಮಾಯಿಗೆ ಬೇಡ, ಸಾವಿಗಾದರೂ ನನ್ನ ಮೇಲೆ ಕರುಣೆ ಬರಬಾರದೇ?' ಎಂದುಕೊಂಡು ಕಾಲ ನೂಕುತ್ತಿದ್ದ. ಆದರೆ ಸಾವಿಗೆಲ್ಲಿಯ ಕರುಳು? ಇದ್ದೊಂದು ಜೊತೆ ಶಿವಸಾನಿಯೂ "ಶಿವನಿಂಗಾ" ಎಂದು

ಕಣ್ಣುಮುಚ್ಚಿದಳು. ಇನ್ನು ತನ್ನ ಸರದಿ. ಈಗಲೋ ಆಗಲೋ "ತಾಯೀ" ಎನ್ನುವುದಕ್ಕೆ ಸಿದ್ಧನಾಗಿ ಕೂತ, ಮಗನ ತೋರುವ ತಾಯಿ ಕರಿಮಾಯಿ ಮುತ್ತೈದೆ ಹುಣ್ಣಿಮೆಯೆಂದು ಉದ್ಭವಿಸುವಳೆಂಬ ನಂಬಿಕೆ ಮಾತ್ರ ಕಣ್ಣಲ್ಲೇ ಇತ್ತು. ಸದಾ ಮೊಳಕಾಲಿಗೆ ಕೈಕಟ್ಟಿ ಗುಡಿಯ ದೀಪ ಕಂಬದ ಕಟ್ಟೆಯ ಮೇಲೆ ಎದುರನ್ನೇ ನೋಡುತ್ತ ಕೂತಿರುತ್ತಿದ್ದ. ಅಗತ್ಯವಿದ್ದಾಗ ಮಾತ್ರ ಆಗೀಗ ಒಂದೆರಡು ಮಾತಾಡುತ್ತಿದ್ದ. ಮಾತಾಡಿದಾಗೊಮ್ಮೆ ಕಣ್ಣೀರು ಸುರಿಸುತ್ತಿದ್ದ. ಅವನನ್ನು ನೋಡಿದೊಡನೆ ಜನಕ್ಕೆ ಕಳೆದ ತಾಯಿಯ ನೆನಪಾಗಿ ದುಃಖ ಒತ್ತರಿಸಿ ಬರುತ್ತಿತ್ತು. ಅವನ ಗಂಟಲಲ್ಲಿ ಅನ್ನ ಇಳಿಸುವುದೇ ದತ್ತಪ್ಪನ ಸಮಸ್ಯೆಯಾಗಿತ್ತು.

ಈ ಒಂದು ತಿಂಗಳಲ್ಲಿ ಇನ್ನೂ ಏನೆಲ್ಲಾ ಆಯ್ತು ಊರಿನಲ್ಲಿ. ಈ ಮಧ್ಯೆ ಚಿಮಣಾ ತುಂಬು ಗರ್ಭಿಣಿಯಾಗಿ ಇದೇ ಊರಿಗೆ ಬಂದಿದ್ದಳು. ತಲೆ ಕೆದರಿ, ಮೈ ಸೊರಗಿ, ಕಡ್ಡಿಯಾಗಿ ಬರೀ ಚಿಂದಿ ಬಟ್ಟೆಯ ಉಬ್ಬಿದ ಬಸುರು ಮಾತ್ರ ಮುಂಚಾಚಿ ತೋರುತ್ತಿದ್ದ ಅವಳನ್ನು ಗುರುತಿಸುವುದೇ ಕಷ್ಟವಾಗಿತ್ತು. ಗುರುತು ಸಿಕ್ಕೊಡನೆ ಊರವರೆಲ್ಲ ಅವಳ ಸುತ್ತು ಮುತ್ತಿದರು. ಅವಳಿಂದ ಪ್ರಯೋಜನವಾಗುವಂತಿರಲಿಲ್ಲ. ಬಾಯಿ ಹೋಗಿತ್ತು. ಸಾಲದ್ದಕ್ಕೆ ಹುಚ್ಚು ಬೇರೆ. ಬಸವರಾಜು ಅವಳಿಗೂ ಮೋಸ ಮಾಡಿದ್ದ. ಅವಳ ಮೇಲೆ ಸಿಡಿದೆದ್ದೇರ ಏನಾದೀತು? ತಾಯಿಯೇ ಅವಳಿಗೆ ಸರಿಯಾದ ಶಿಕ್ಷೆ ಕೊಟ್ಟಳೆಂದು ಸುಮ್ಮನಾದರು. ತನ್ನ ಗುಡಿಸಲ ಮುಮದೆ ಸುಮ್ಮನೆ ನಾಯಿಯಂತೆ ಊಳಿಡುತ್ತ ಕೂರುತ್ತಿದ್ದಳು. ಯಾರಾದರೂ ಧರ್ಮಾತ್ಮರು ತುತ್ತು ಕೊಟ್ಟರೆ ತಿನ್ನುತ್ತಿದ್ದಳು. ಇಲ್ಲದಿದ್ದರೆ ಅಲ್ಲೇ ಬಿದ್ದಿರುತ್ತಿದ್ದಳು. ಅವಳಿಗೆ ಕರುಣೆ ತೋರಿಸುವಷ್ಟು ನೆಮ್ಮದಿ ಜನಕ್ಕಿರಲಿಲ್ಲ. ಅವರಿಗ್ಯಾರು ಕರುಣೆ ತೋರಿಸುತ್ತಿದ್ದರು?

ಇದ್ದುದರಲ್ಲಿ ಈ ದಿನವೇ ಗೌಡ ಸ್ವಲ್ಪ ಲವಲವಿಕೆಯಿಂದಿದ್ದ. ಇಂದು ಮುತ್ತೈದೆ ಹುಣ್ಣಿವೆಯಾದ್ದರಿಂದ ತಾಯಿ ತಿರುಗಿ ಬಂದು ಗದ್ದಿಗೆಗೊಳ್ಳುವ ದಿನ. ತಾಯಿ ಖಂಡಿತ ಈ ದಿನ ಬರುತ್ತಾಳೆ. ಇಲ್ಲವೆ ಯಾರದಾದರೂ ಮೈ ತುಂಬಿ ತಾನಿರುವ ಠಿಕಾಣವನ್ನಾದರೂ ತಿಳಿಸುತ್ತಾಳೆ. ಶವನಿಂಗನನ್ನೂ ಕರೆತರುತ್ತಾಳೆಂದು ಬಲವಂತವಾಗಿ ನಂಬಿದ್ದ. ಮುಂಜಾನೆಯಿಂದಲೇ ಗುಡಿಯ ದೀಪ ಕಂಬದ ಕಟ್ಟೆಯ ಮೇಲೆ ಕೂತಿದ್ದ. ಅವನೊಟ್ಟಿಗೆ ದತ್ತಪ್ಪನೂ ಕೂತಿದ್ದ.

ಗುಡಿಯ ಕಡೆ ಯಾರು ಸುಳಿದರೂ ಇಲ್ಲ ಮೈ ತುಂಬಿ ಬರುತ್ತಾರೆ, ಇಲ್ಲ, ಮೈ ತುಂಬಿದ ಸುದ್ದಿಯನ್ನಾದರೂ ತರುತ್ತಾರೆಂದು ನೋಡುತ್ತಿದ್ದರು. ಕೂಳು, ನೀರು ಮರೆತು, ದಿಕ್ಕು ದಿಕ್ಕುಗಳನ್ನು ಹಡ್ಡಿ ಹಡ್ಡಿ ನೋಡಿದರು. ಕಣ್ಣುಗಳಲ್ಲಿ ಆಸೆ ಹೊತ್ತಿಸಿಕೊಂಡು ಹುಡುಕಿದರು. ಸಂಜೆಯಾಗಿ ದನಕರು ಮನೆಗೆ ಬಂದವು. ಮುಳುಗುವ ಸೂರ್ಯನೊಂದಿಗೆ ಇವರ ಕಣ್ಣೊಳಗಿನ ಬೆಳಕೂ ನಂದಿ ಕಮ್ಮಿಯಾಯಿತು. ಮೂಡಣದಲ್ಲಿ ಚಂದ್ರ ಮೂಡಿದ. ತಾಯಿ ಬರುವ ಸಮಯ ಮೀರಿತು. ಬೆಳದಿಂಗಳು ಹೆಚ್ಚಾದಂತೆ ಬೂದಿ ಬಣ್ಣಕ್ಕೆ ತಿರುಗಿದ ಊರು ಬಿಳಚಿಕೊಂಡ ಕ್ಷಯರೋಗಿಯಂತೆ ಕಾಣುತ್ತಿತ್ತು. ದತ್ತಪ್ಪ ದೊಡ್ಡದಾಗಿ ನಿಟ್ಟುಸಿರುಬಿಟ್ಟು,

"ಏಳು ಗೌಡಾ"

ಎನ್ನುತ್ತ ಗೌಡನ ಭುಜದ ಮೇಲೆ ಕೈಯಿಟ್ಟ. ಗೌಡ ಸುಮ್ಮನೆ ಎದ್ದ. ಎಲ್ಲಿದ್ದರೂ ಯಾವುದೋ ಮಾಯೆಯಿಂದ ಮುತ್ತೈದೆ ಹುಣ್ಣಿವೆ ದಿನ ಅವತರಿಸಿ ಬರುತ್ತೇನೆಂದ ತಾಯಿ ಮಾತಿಗೆ ತಪ್ಪಿದಳು!

ಬರುತ್ತಿರುವಾಗ ದಾರಿಯಲ್ಲಿ ದತ್ತಪ್ಪ ಒಮ್ಮೆಲೆ ಸ್ಫೂರ್ತಿಗೊಂಡಂತೆ "ಅಂದ್ಹಾಂಗ ಗೌಡಾ, ಲಗಮಿ ಯಾಕೋ ಬರಲಿಲ್ಲಲ್ಲ" ಎಂದ. ತಕ್ಷಣ ಗೌಡನ ಕಣ್ಣು ಹೊಳೆದವು. ಹೌಂದಲ್ಲ. ಎನಿಸಿತು. ಯಾರಿಗೆ ಗೊತ್ತು, ಅವಳ ಕೇರಿಯಲ್ಲಿ ತಾಯಿ ಅವತರಿಸಬಹುದು. "ಬಾ ನೋಡೋಣ"ವೆಂದು ಹೊಲಗೇರಿಯ ಕಡೆ ಧಾವಿಸಿದರು.

ಚಿಮಣಾಳ ಗುಡಿಸಲಲ್ಲಿ ಹೆಂಗಸರು ಕಿಕ್ಕಿರಿದು ನೆರೆದಿದ್ದರು. ತಡೆಯಲಾರದೆ ಇಬ್ಬರೂ ಓಡಿದರು. ಒಳಗೆ ಹೆಂಗಸರು ಸಡಗರ ಮಾಡುತ್ತಿದ್ದರು. ಲಗಮವ್ವನ ದನಿ ಕೇಳಿಸುತ್ತಿತ್ತು. ಹೆಂಗಸರು ಕಲಕಲ ಮಾತಾಡಿಕೊಳ್ಳುತ್ತಿದ್ದರು. ಏನೆಂದು ಕೇಳಿದರೆ ಒಬ್ಬಳಿಂದ ಚಿಮಣಾ ಹೆಣ್ಣು ಹಡೆದಿರುವಳೆಂದು ತಿಳಿಯಿತು. ಸಂಭ್ರಮದಲ್ಲಿದ್ದ ಒಳಗಿನವರಿಗೆ ಹೊರಗೆ ಗೌಡ, ದತ್ತಪ್ಪ ಬಂದದ್ದು ಗೊತ್ತಾಗಲೇ ಇಲ್ಲ. ಒಬ್ಬಳು "ಏ ಏ, ಇದರ ಮೂಗ ಥೇಟ್ ಗುಡಿಸ್ವ್ಯಾನ್ಹಾಂಗ ಐತಿ ನೋಡ" ಎಂದಳು. ಲಗಮವ್ವ "ಅಲ್ಲ ತಗಿ, ಇದರ ಮೂಗ, ಬಾಯಿ, ಚೇರಾಪಟ್ಟಿ ಎಲ್ಲಾ ಥೇಟ್ ಗೌಡನ್ಹಾಂಗ! ಗೌಡನ ರೂಪದಾಗ ಎದ್ದಿ ತಗಧಾಂಗೇತಿ" ಎಂದಳು. ಗೌಡ ನಿರಾಸೆಯಿಂದ ಮನೆ ಕಡೆ ಹೆಜ್ಜೆ ಹಾಕಿದ. ಆ ನಿರಾಸೆಯಲ್ಲೂ ದತ್ತಪ್ಪನ ತುಟಿಯಲ್ಲಿ ಮಂದಹಾಸ ಸುಳಿದಾಡಿತು.

ಇಲ್ಲೀಗಿ ಹರ ಹರ
ಇಲ್ಲೀಗಿ ಶಿವ ಶಿವ
ಇಲ್ಲೀಗಿ ನಮ ಕತಿ ಸಂಪೂರ್ಣವಾಯ್ತು ||
ಇಲ್ಲೀಗಿ ಹರ ಹರ ಇಲ್ಲೀಗಿ ಶಿವ ಶಿವ
ಇಲ್ಲೀಗಿ ನಮ ಕತಿ ಸಂಪೂರ್ಣವಾಯ್ತು ||

## ದೀಪವಾರಿತು

ಮಾರನೇ ದಿನ ಮಂಗಳವಾರ ಮುಂಜಾನೆ ದೇವರೇಸಿ ಗುಡಿಗೆ ಹೋಗಿ ಪೂಜೆ ಮಾಡುತ್ತಿದ್ದ. ದೇವಿಯ ಮೈಮೇಲಿನ ಆಭರಣ ಕಳಚಿ ಮಜ್ಜನ ಮಾಡಿಸಿದ, ಮುಡಿಯುಡಿಸಿದ, ಮತ್ತೆ ತೊಡಿಸಬೇಕೆಂದು ನೋಡಿದರೆ ಆಭರಣಗಳೇ ಇರಲಿಲ್ಲ. ಅಲ್ಲಲ್ಲಿ ಹುಡುಕಾಡಿದ. ಮೊದಲು ಇದ್ದುವೆ? ಇಲ್ಲವೆ? ಎಂದು ನೆನಪು ಮಾಡಿಕೊಂಡ. ಇದ್ದವು. ಮಾತ್ರವಲ್ಲ, ಅವನ್ನು ಕಳಚಿಟ್ಟ ಸ್ಥಳವೂ ನೆನಪಿತ್ತು. ಆದರೆ ಆ ಸ್ಥಳದಲ್ಲಿ ಅವಿರಲಿಲ್ಲ. ಇರಲಾರದೆಂದು ಉಡಿಸಿದ ಸೀರಬಿಚ್ಚಿ ಜಾಡಿಸಿ ಹುಡುಕಿದ. ಸಿಕ್ಕಲಿಲ್ಲ. ಮತ್ತೆ ಉಡಿಸಿ ಮೂರ್ತಿಯ ಹಿಂದೆ ಮುಂದೆ ಹುಡುಕಿದ. ತನ್ನ ಧೋತ್ರದಲ್ಲಿರಬಹುದೇ ಎಂದು ಜಾಡಿಸಿಕೊಂಡ. ಯಾಕೆಂದರೆ ದೇವಿಯ ಸುತ್ತ ಕೆಲವು ಕಿಲಾಡಿ ಭೂತಗಳಿರುತ್ತವಲ್ಲ, ಅವು ಒಮ್ಮೊಮ್ಮೆ ಏನೇನೋ ಮಾಡಬಹುದು. ತನ್ನ ಧೋತರ ಕಚ್ಚೆ ಬಿಚ್ಚಿ ಹುಡುಕುತ್ತಿರುವಾಗ ಯಾರೋ ಕುಲು ಕುಲು ನಕ್ಕಂತಾಯಿತು. ತಿರುಗಿ ನೋಡಿದರೆ ಸುಂದರಿ! ಭೂತವೇ ಇವಳ ರೂಪದಲ್ಲಿ ಬಂದಿದೆಯೋ ಎಂದುಕೊಂಡು ಕೂಡಲೇ ತಾಯಿಯ ಚೌರಿ ಹಿಡಿದ. ಈ ಭೂತ ಮಾಯವಾಗಲಿಲ್ಲ. ಇನ್ನೂ ನಗುತ್ತಿದ್ದಳು. ಸದ್ಯ ಅವಳೇ ಬಾಯಿಬಿಟ್ಟು ಮಾತಾಡಿದಳು. "ನನಗ ಈ ಸರ ಹೆಂಗ ಕಾಣತೈತಿ" ಸರದಲ್ಲಿ ಎಣಿಸಿದರೆ ಹೆಬ್ಬೆರಳು ಗಾತ್ರದ ಇಪ್ಪತ್ತೊಂದು ಕವಡೆಗಳಿದ್ದವು. ಅದು ಅಲಂಕಾರಕ್ಕಾಗಿ ಹಾಕಿದ ಸರವಲ್ಲ. ದೇವಿ ಇಷ್ಟಪಟ್ಟಿದ್ದರೆ ಅಂಥ ಬಂಗಾರದ ಸರವನ್ನೆ ಊರಿನ ಜನ ಹಾಕಬಹುದಿತ್ತು. ಅವಳ ತೂಕದ ಬಂಗಾರದ ಮುಖ ಮಾಡಿಸಿಕೊಟ್ಟವರಿಗೆ ಒಂದು ಸರ ಮಾಡಿಸುವುದೇನು ದೊಡ್ಡದಲ್ಲ. ತಾಯಿ ದೇವತೆಗಳಿಗೆ ಹೆದರಿ ತನ್ನ ಇಪ್ಪತ್ತೊಂದು ಜನ ಮಕ್ಕಳನ್ನು ಸಂಜೆಯವರೆಗೆ ಆಡಬಿಟ್ಟು ಸೂರ್ಯಾಸ್ತಮವಾದೊಡನೆ ಅವರನ್ನು ಕವಡೆಗಳಾಗಿ ಮಾರ್ಪಡಿಸಿ ಸರ ಮಾಡಿ ಕೊರಳಲ್ಲಿ ಧರಿಸುತ್ತಿದ್ದಳು! ಆ ಕವಡೆಗಳ ಸರವಿದು! ಪೂಜೆ ಮಾಡುವಾಗ ತಾಯಿಗೆ ಮಜ್ಜನ ಮಾಡಿಸಿದಂತೆ ಈ ಕವಡೆ ಸರವನ್ನೂ ಒಂದು ಸಲ ನೀರಿನಲ್ಲದ್ದಿ ಮತ್ತೆ ತೊಡಿಸುವ ಕ್ರಮವಿದೆ.

ಸುಂದರಿಗೆ ಇದೆಲ್ಲ ಯಾವ ಲೆಕ್ಕ? ದೇವರೇಸಿ ಗಡಬಡಿಸಿ ದೇವಿಯ ಹಿಂದೋಡಿ ಒದ್ದೆ ಧೋತ್ರ ಸುತ್ತಿಕೊಳ್ಳುತ್ತಿದ್ದ. ಅಷ್ಟರಲ್ಲಿ ದೂರದಿಂದ ದತ್ತಪ್ಪ ಬರುತ್ತಿರುವುದು ಕಾಣಿಸಿತು. ದೇವರೇಸಿಗೆ ಏನು ಮಾಡಬೇಕೆಂದು ತೋಚದಾಯಿತು. ದತ್ತಪ್ಪನು ಮೊದಲೇ ತೀಕ್ಷ್ಣ ಬುದ್ಧಿ. ದೇವಿಗೆ ನಮಸ್ಕರಿಸುವಾಗ ಕತ್ತಿನಲ್ಲಿ ಸರ ಇಲ್ಲದ್ದು ಕಂಡರೆ, ಕಂಡು ಸರ ಎಲ್ಲಿ ಎಂದು ಕೇಳಿದರೆ, ಏನು ಹೇಳುವುದು? ಹೊರಗೆ ಗುಡಿಯನ್ನು ಬಲಗೊಳ್ಳುತ್ತಿದ್ದ ದತ್ತಪ್ಪನಿಗೆ ಕಾಣದಂತೆ ಅವಳ ಹತ್ತಿರ ಹೋಗಿ ಸರ ಕೊಡುವಂತೆ ಕೈಸನ್ನೆಯಿಂದಲೇ ಕೇಳಿದ. ಇವಳೂ ಕೈಸನ್ನೆಯಿಂದಲೇ ಕೊಡುವುದಿಲ್ಲವೆಂದು ಹೇಳುವಷ್ಟರಲ್ಲಿ ದತ್ತಪ್ಪ ಒಳಬಂದ. ದೇವರೇಸಿ ಹಾಗೇ ಅವಳ ಬಾಯಿಮುಚ್ಚಿ ಕುರಿಮರಿಯಂತೆ ಅವಳನ್ನು

ಹಿಡಿದುಕೊಂಡು, ದೇವಿಯ ಮರದ ಮೂರ್ತಿಯ ಕೆಳಗಡೆ ಡೊಗ್ಗಿ ಅಡಗಿದ. ದತ್ತಪ್ಪನಿಗೆ ಇದ್ಯಾವುದೂ ತಿಳಿಯಲಿಲ್ಲ. ತಾನು ತಂದ ಹೂಗಳನ್ನು ದೇವಿಯ ಮೇಲೆ ಚೆಲ್ಲಿ ಅಡ್ಡಬಿದ್ದು ಹೊರಟುಹೋದ.

ಅವ ದೂರ ಹೋದ ಎಂದು ಖಾತ್ರಿಯಾದ ಮೇಲೆ ದೇವರೇಸಿ ಎದ್ದು "ಛೇ, ಎಷ್ಟು ಹೆದರ್ಸಿದಿ. ಕೊಡ ಕೊಡ ಸರ ಕೊಡು" ಅಂದ. ಇಂಥ ಚೇಷ್ಟೆಯನ್ನು ದೇವರೇಸಿಯೇನು, ಆ ಊರಿನ ಯಾರೂ ಸಹಿಸುವುದು ಸಾಧ್ಯವಿಲ್ಲ. ದೇವರೇಸಿಗೆ ಸಿಟ್ಟುಬಂತು. "ಕೊಡ್ಡೀಯೋ…." ಎಂದು ಅನ್ನುವಷ್ಟರಲ್ಲಿ ಯಾವುದೋ ಮಾಯೆಯಿಂದ ಬಸವರಾಜು ಹಾಜರಾದ. ಸುಂದರಿ ಮುಸಿ ಮುಸಿ ನಗುತ್ತ "ಕೊಡೋದಿಲ್ಲ" ಎಂದು ಹೇಳಿ ಇವನ ಹಿಂದಿನ ಜಡೆ ಎತ್ತಿ ಬೆನ್ನಿಗೆ ಅಪ್ಪಳಿಸಿ ಓಡಿಹೋದಳು. ಬಸವರಾಜ ಬಂದ ಹಾಗೇ ಮಾಯವಾದ.

ದೇವರೇಸಿಗೆ ಆಕಾಶವೇ ಕಳಚಿ ತಲೆಮೇಲೆ ಬಿದ್ದ ಹಾಗಾಯಿತು. ಇದೇನಿದು? ಬೆಂಕಿ ಕೆಂಡದಂಥ ದೇವಿಯ ಜೊತೆಗೆ ಚೇಷ್ಟೆಯೇ? ಓಡಿ ಬೆನ್ನುಹತ್ತಿ ಹೋಗಿ ಸರ ಕಸಿದು ತರುವುದು ತರವಲ್ಲ ಎಂದುಕೊಂಡ. ಗಡಿಬಿಡಿಯಿಂದ ಪೂಜೆ ಮಾಡಿದ. ಕತ್ತು ಕಾಣದ ಹಾಗೆ ತಾಯಿಗೆ ಸೀರೆ ಸುತ್ತಿದ. ಎವ್ವಾ ಎಂದು ಅಡ್ಡಬಿದ್ದ. ಕಣ್ಣಲ್ಲಿ ದಳ ದಳ ಕಣ್ಣೀರು ಹರಿಯಿತು. ತಪ್ಪಾಯಿತೆಂದು ಗಲ್ಲ ಬಡಕೊಂಡ. ಕಿವಿಗೆ ಹರಳು ಹಚ್ಚಿಕೊಂಡ. ಸರ ಸಿಕ್ಕಮೇಲೆ ಇವರ ಮುಖ ನೋಡುವುದಿಲ್ಲವೆಂದು ಆಣೇ ಪ್ರಮಾಣ ಮಾಡಿಕೊಂಡ. ಮತ್ತೆ ಮತ್ತೆ ಅಡ್ಡಬಿದ್ದ. ಅವನ ಉರಸಿರಗೋ, ಗಾಳಿಗೋ ಹಚ್ಚೆಟ್ಟ ದೀಪ ಆರಿತು. ಜೀವ ಗಕ್ಕನೆ ಗಂಟಲಿಗೆ ಬಂದು ಹಾದಂತಾಗಿ "ಅಯ್ಯೋ, ಎವ್ವಾ" ಎಂದು ಕುಕ್ಕರಿಸಿದ. ಬಯಿ ಒಣಗಿತು. ಕೈಕಾಲಲ್ಲಿಯ ಶಕ್ತಿ ಉಡುಗಿಹೋಯ್ತು. ತಡವರಿಸಿಕೊಂಡು ಎದ್ದು ಮತ್ತೆ ದೀಪಹಚ್ಚಿ ತನ್ನ ಗುಡಿಸಲಿಗೆ ನಡೆದ.

ಕಂಬಳಿ ಹಾಸಿದವನೇ ದೊಪ್ಪನೇ ಬಿದ್ದ. ಎವ್ವಾ ಎನ್ನುತ್ತಾ ಹೊರಳಾಡಿ ಮುಳು ಮುಳು ಅತ್ತ. ನಾಕು ತಾಸು ಹೊತ್ತೇರಿ ಜ್ವರ ಬಂದು, ಕರಿಮೈ ಕಾದ ಹಂಚಿನಂತೆ ಸುಡುತ್ತಿತ್ತು. ಅತ್ತು ಅತ್ತು ಕಣ್ಣು ಕೆಂಪಗೆ ಕಾದಿದ್ದವು. ಅಂಥ ಜ್ವರದಲ್ಲಿ ಎದ್ದು ಬಸವರಾಜೂನ ಗುಡಿಸಲಿಗೆ ಹೋಗಿ ಬಂದ. ಬಸವರಾಜೂ ಇದ್ದ. ಸುಂದರಿ ಇಲ್ಲವೆಂದೂ ಗುಡಸೀಕರನ ಹೊಲಕ್ಕೆ ಹೋಗಿರುವಳೆಂದೂ, ರಾತ್ರಿ ಬರವಳೆಂದೂ, ಹೇಳಿದ. ಹೊಲಕ್ಕೆ ಹೋಗಿ ಕೇಳುವಂತಿರಲಿಲ್ಲ. ಜನಕ್ಕೆ ಗೊತ್ತಾದರೆ ಕಷ್ಟ. ಈ ಮಧ್ಯೆ ಯಾರು ಯಾವಾಗ ಗುಡಿಯ ಕಡೆ ಹೋಗಿ ತಾಯಿಯ ಕತ್ತಿನಲ್ಲಿ ಸರ ಇಲ್ಲದ್ದನ್ನು ಪತ್ತೆ ಹಚ್ಚುತ್ತಾರೋ ಎಂಬ ಭಯ. ಜ್ವರದಿಂದ ತಲೆ ಸಿಡಿಯತೊಡಗಿತ್ತು. ದೇವಿಯ ಮುಂದಿನ ದೀಪವಾರಿತ್ತು. ತಾನಿಂದು ಸಾಯುವುದೇ ಖಾತ್ರಿ ಎಂದುಕೊಂಡ. ಒಳ್ಳೆಯದೇ, ತನ್ನ ಮೇಲೆ ಹರಲಿ ಬರುವುದಿಲ್ಲ. ಅನ್ಯಾಯವಾಯಿತೇನೋ ಹಿಡಿದು ಸುಂದರಿಯ ಕೆನ್ನೆಗೆರಡು ಬಿಟ್ಟು ಸರ ಕಸಿಯಬೇಕಾಗಿತ್ತು. ಅವರಲ್ಲಿ ಹೆಂಡ ಖಂಡ ತಿಂದದ್ದು ಹೇಲುಚ್ಚೆ ತಿಂದಂತಾಯಿತೆಂದು ಪಶ್ಚಾತ್ತಾಪಪಟ್ಟ. ಈಗ ಬಂದಿದ್ದಾಳೆಂದು ಮಧ್ಯಾಹ್ನ ಇನ್ನೊಮ್ಮೆ ಅವರ ಗುಡಿಸಲಿಗೆ ಹೋದ. ಈಗಲೂ ಬಸವರಾಜ ಇಲ್ಲವೆಂದ. ದೇವರೇಸಿ ಹಾಹೂ ಎನ್ನದೆ ತಿರುಗಿದ. ಹತ್ತು ಹೆಜ್ಜೆ ನಡೆಯುವಷ್ಟರಲ್ಲಿ ತಲೆ ತಿರುಗಿದಂತಾಯಿತು. ಊಟವಿಲ್ಲ, ಬಿಸಿಲು, ಮಾನಸಿಕ ಯಾತನೆ ಬೇರೆ, ಬಂದವನೇ ತನ್ನ ಗುಡಿಸಲ ಮುಂದೆ ಕುತುಕೊಂಡು ವಾಂತಿ ಮಾಡಿಕೊಂಡ. ಕೊನೆಯಲ್ಲಿ ಒಂದಿಷ್ಟು ರಕ್ತ ಬಿತ್ತು. ತಾಯಿ ರಕ್ತ ಕಾರಿಸುತ್ತಿದ್ದಾಳೆ ಎಂದುಕೊಂಡ. ಒಳಗೆ ಹೋಗಿ ತಾಯಿಗೆ ನಮಸ್ಕರಿಸುವಂತೆ ಬೆನ್ನು ಮೇಲಾಗಿ ಹಾಗೇ ಬಿದ್ದುಕೊಂಡ.

## ಬಹಿಷ್ಕಾರ

ಸಾಲದ್ದಕ್ಕೆ ಇದೇ ಸಂದರ್ಭವೆಂದು ಎರಡೆಕರೆ ಹೊಲಾ ಕೇಳಲಿಕ್ಕೆ ಚಿಮಣಾ ಗೌಡನ ಮನೆಗೆ ಹೋದಳು. ದತ್ತಪ್ಪ ಬಹಿಷ್ಕಾರ ಹಾಕಿಬಿಟ್ಟ.

ಮುದುಕಪ್ಪ ಗೌಡನ ಸಾವಿಗೆ ಜನ ಮರುಗಿದರು. ಕಳ್ಳನಲ್ಲ, ಸುಳ್ಳನಲ್ಲ, ಅದೇನೋ ದೇಶಸೇವೆ ಅಂದ, ಚಳುವಳಿ ಅಂದ. ಗಾಂಧಿ ನೇರೂ ಅಂದ. ಅಂದ ಮಾತ್ರಕ್ಕೆ ಹೀಗೆ ಕೊಂದು ಹಾಕುವುದೇ? ಗುಡಸೀಕರ ಬಹುಮಾನದ ಆಸೆಯಿಂದ ಹೀಗೆ ಮಾಡಿದನೆಂದು, ಪೋಜುದಾರ ಇವನಿಗೆ ೫೦೦೦ರೂ. ಕೊಟ್ಟುದುನ್ನು ಕಣ್ಣಾರೆ ಕಂಡೆಬೆಂದು ಕೆಲವರೆಂದರು. ಜನ ಗುಡಸೀಕರನಿಗೆ ಹೆದರಿದರು. ಹೆಸರು ಹೇಳಿದರೆ ಸಾಕು

ಪೋಲೀಸ್ ಪೋಜದಾರ ಅನ್ನುವ ಸೈತಾನನವ. ಅವನನ್ನು ತಡವೋದೂ ಪೋಜುದಾರನಿಗೆ “ಲೇ ಮಗನ” ಎಂದು ಬೈಯುವುದೂ ಸಮ ಎಂದರು.

ಚತುಷ್ಟಯರು ಇದ್ದದ್ದೂ ಆಮೋದಗೊಂಡರು. ಕೊಳವಿ ಮುಂದುಕಪ್ಪನ ಹೆಣ ಒಯ್ದ ಮಾರನೇ ದಿನ ಸುಪ್ರಭಾತದಲ್ಲಿ ಎದ್ದು ನೋಡುತ್ತಾರೆ. ಊರಿಗೂರೆ ಅವರಿಗೆ ಹೆದರುತ್ತಿದೆ. ಕರೆದು ಕರೆದು ಶರಣು ಹೇಳುತ್ತಿದೆ. ಈ ಹದಕ್ಕಾದ ಹೆದರಿಕೆ ಹಾಗೇ ಕ್ಷಣಭಂಗುರವಾಗಬಾರದೆಂದು ಹಂಚಿಕೆ ಹಾಕಿದರು. ಗುಡಸೀಕರನ ಬಗ್ಗೆ ಭಯಂಕರ ಕಥೆ ಕಟ್ಟಿದರು. ಪೋಲೀಸ್ ಪೋಜದಾರ, ಕಲೆಕ್ಟರ, ಮಾಮಲೇದಾರ, ಬೆಳಗಾವಿಯ ಈ ಅಧಿಕಾರಿಗಳೆಲ್ಲ ಗುಸೀಕರನಿಗೆ  ಪರಿಚಿತರೆಂದೂ, ಇವರು ಚೀಟಿ ಕಳಿಸಿದರೆ ಸಾಕು, ಸರಕಾರ ತುದಿಗಾಲಲ್ಲೇ ಮಿಲ್ಟ್ರೀ ಕಳಿಸುತ್ತಾರೆಂದು, ಮುದುಕಪ್ಪನಿಗೆ ಆಶ್ರಯ ಕೊಟ್ಟದ್ದಕ್ಕೆ ಸರಕಾರ ಇಡೀ ಊರು ಸುಟ್ಟುಬರಲು ಪೋಲೀಸ್ ಪಾರ್ಟಿ ಕಳಿಸಿತ್ತೆಂದೂ ಆದರೆ ನಮ್ಮ ಸರಪಂಚರಿಂದಾಗಿ ಮುದುಕಪ್ಪ ಹೋಗಿ ಊರು ಉಳಿಯಿತೆಂದೂ ಹೀಗೆ ಯದ್ವಾ ತದ್ವಾ ಊಹೆಗಳಿಗೆ ಕೈಕಾಲು ಮೂಡಿಸಿ ಕಥೆಮಾಡಿ, ಕಥೆಗೆ ಜೀವ ತುಂಬಿ ಊರ ಕಿವಿಗಳಲ್ಲೇ ಊರ ಕಿವಿಗಳಲ್ಲೇ ಊದಿಬಿಟ್ಟರು.

ಗೌಡ ಮಾತ್ರ ಆಳಾಗಲೇ ಇಲ್ಲ. ಬೆನ್ನಿಗೆ ಬಿದ್ದವನ ಕಾಪಾಡಲಾಗದ ದುಃಖ ಒಂದು ಕಡೆ. ಇದಕ್ಕೆಲ್ಲ ಗುಡಸೀಕರ ಕಾರಣನೆಂಬ ಸಿಟ್ಟು ಇನ್ನೊಂದು ಕಡೆ. ಹೀಗೆ ಇಬ್ಬಂದಿಯಾಗಿ ಕಿಚ್ಚಿನೊಳಗಿನ ಕೇಡೆಯಂತೆ ಚಡಪಡಿಸಿದ. ದೋತರ ಸೆರಗಿನಲ್ಲಿ ಮುಖ ಹುದುಗಿಸಿ ಮುದಿ ಹೆಂಗಸಿನ ಹಾಗೆ ಅತ್ತ. ಬರಬರುತ್ತ ಮುದುಕಪ್ಪ ಸತ್ತದ್ದು ಹಿಂದಾಗಿ, ಶಿವನಿಂಗ ಕಳೆದುಹೋದ ಹೆಂಗಸಿನ ಹಾಗೆ ಅತ್ತ. ಬರಬರುತ್ತ ಮುದುಕಪ್ಪ ಸತ್ತದ್ದು ಹಿಂದಾಗಿ, ಶಿವನಿಂಗ ಕಳೆದುಹೋದ ದುಃಖ ಮುಂದಾಯಿತು. ಕುಂದರಗಿ ಮಠಕ್ಕೆ ಹೋದ ಆಳು ಅಲ್ಲಿದ್ದ ಮಂದಿಯೆಲ್ಲ ಮಾಯವಾದ ಸುದ್ದಿ ತಂದಿದ್ದ. ಊರೂರಿಗೆ ಬೀಗರಿಗೆ ಹೇಳಿ ಕಳಿಸಿದ. ಶಿವನಿಂಗ ಬರಲಿಲ್ಲ. ಶಿವನಿಂಗನ ಸುದ್ದಿ ಬರಲಿಲ್ಲ. ಮೂಕರ್ಜಿಯಲ್ಲಿ ತನ್ನ ಹೆಸರು ಇದ್ದುದಕ್ಕೆ ಹೆದರಿ ಹುಡುಗ ಏನಾದರೂ ಓಡಿದನೋ ನೇಣು ಹಾಕಿಕೊಂಡನೋ ಎಂದೂ ಊಹಿಸಿದ. ಕರಿಮಾಯಿಗೆ ಮರೆಹೊಕ್ಕ. ತಾಯಿಯೇನೋ ತಿರುಗಿ ಬಂದೇ ಬರುತ್ತಾನೆಂದು ಹೇಳಿದಳು. ಮಗನನ್ನು ಕಣ್ಣಾರೆ ಕಾಣುವ ತನಕ ನಂಬದಾದ. ಶಿವಸಾನಿ ಮಗನ ಹೆಸರು ಜಪಿಸುತ್ತ ಕೂಳು, ನೀರುಬಿಟ್ಟು ಬರೀ “ಶಿವನಿಂಗಾ” ಎಂದು ಹಲಬುತ್ತ ಮೂಲೆ ಹಿಡಿದಳು. ಹ್ಯಾಗಿದ್ದವಳು ಒಂದೇ ವಾರದಲ್ಲಿ ಸೊರಗಿ ಸೊರಗಿ ಸಣ್ಣಾದಳು. ಮೂಲೆಯ ಕೋಲಾದಳು. ಕಡ್ಡಿಯಾದಳು. ಸಾಲದ್ದಕ್ಕೆ ಚಿಮಣಾ ಬಂದು ಮನೇ ಮುಂದೆ ದುಂಬಡಿ ಹಾಕಿದಳು. ಅದು ಹೀಗೆ:

ಒಂದು ದಿನ ಗೌಡ ಬೆಳಿಗ್ಗೆದ್ದು ಕೆರೆಯಲ್ಲಿ ಮಿಮದು ಕರಮಾಯಿಗೆ ಅಡ್ಡಬಿದ್ದು ಮನೆಕಡೆ ಬಂದ. ಆಗಷ್ಟೇ ಬೆಳಕಾಗುತ್ತಿತ್ತು. ಅಲ್ಲಲ್ಲಿ ಜನ ಅಂಗಳ ಗುಡಿಸುತ್ತಿದ್ದರು. ಕೋಳಿ ಬಿಡುತ್ತಿದ್ದರು. ದನ ನೀರಿಗೆ ಬಿಡುತ್ತಿದ್ದರು. ಎದ್ದವರು ಗೌಡನಿಗೆ ಶರಣು ಹೇಳುತ್ತಿದ್ದರು. ಆ ರಸ್ತೆ ದಾಟಿ ತನ್ನ ಮನೆಕಡೆ ತಿರುಗಿದ.

ಆ ರಸ್ತೆಯಲ್ಲಿ ಅಷ್ಟು ಚಟುವಟಿಕೆ ಇರಲಿಲ್ಲ. ತನ್ನ ಮನೇ ಮುಂದೆ ನಾಕೈದು ಜನ ಹೆಂಗಸರಿದ್ದರು. ಧಾಪುಗಾಲು ಹಾಕಿದ. ಗೌಡ ಬಂದುದನ್ನು ನೋಡಿ ಹೆಂಗಸರು ಬದಿಗಾದರು. ನೋಡಿದರೆ ಸುಂದರಿ ತೋಲೆ ಬಾಗಿಲು ಹೊಸ್ತಿಲಕ್ಕೆ ಎಡತೊಡೆ ಅನಿಸಿ, ಅದರಗುಂಟ ಎಡಗೈ ಹಬ್ಬಿಸಿ, ಅದಕ್ಕೆ ಬಲಗೈ ಕಟ್ಟಿಕೊಂಡು ಕೂತಿದ್ದಳು. ಗೌಡನಿಗೆ ತಕ್ಷಣ ಏನು, ಎತ್ತ ಹೊತ್ತಾಗಲಿಲ್ಲ. ಒಳಗೆ ತನ್ನ ಹಿರಿಯ ಹೆಂಡತಿ, ನಿಜಗುಣೆವ್ವನ ತಾಯಿ ನಿಂತಿತ್ತು. ಎಲ್ಲರನ್ನೂ ಕುರಿತಂತೆ “ಏನು” ಅಂದ. ಒಬ್ಬ ಅವ್ವಕ್ಕ “ಯಾಡ್ಯೆಕರೆ ಹೊಲಾ ಕೇಳಾಕ ಬಂದಾಳ್ರಿ” ಎಂದಳು. ಗೌಡ ಒಳಕ್ಕೆ ಹೆಜ್ಜೆ ಹಾಕಿದ.

ಗೌಡ ನ್ಯಾರೆ ಮಾಡಿ ಹೊರಕ್ಕೆ ಬಂದಾಗ ಪಡಸಾಲೆಯಲ್ಲಾಗಲೇ ದತ್ತಪ್ಪ ಹಾಜರಾಗಿದ್ದ. ಬಾಳಪ್ಪ ಆಗಷ್ಟೇ ಬಂದ. ಮನೆಯ ಮುಂದೆ ಜನ ಸೇರಿದ್ದರು. ಎಲ್ಲರ ದೃಷ್ಟಿಗಳನ್ನು ನಿವಾರಿಸುತ್ತ ಚಿಮಣಾ ಕೂತಿದ್ದಳು. ಎಸಳು ಮುಖದ ಹುಚ್ಚು ಹುಡುಗಿ. ಕುಣಿಸಿದರೆ ಕುಣಿಯುತ್ತಾಳೆ. ಕುಣಿಯೋದರ ಬೆಲೆ ಏನೆಂದರಿಯದೆ ಅವಳು ಕೂತ ಭಂಗಿ, ಧೈರ್ಯ ಮೊಂಡುತನಗಳೆಲ್ಲ ಅವಳ ಆಕೃತಿಗೆ ಭಾರವಾಗಿ, ಅಸಹಜವಾಗಿ,

ಕಂಡವು, ಇವಳ ಮೇಲೆ ಸಿಟ್ಟಿಗೇಳುವುದೂ ಕಷ್ಟವೆ' ಎಳೇ ಕೂಸು ಬಲಿತವರ ಅಭಿನಯ ಮಾಡಿದಂತಿತ್ತು. ಇಂಥ ಸಂದರ್ಭಗಳಲ್ಲಿ ಯಥಾಪ್ರಕಾರ ಬಾಯಿ ಹಾಕುವವನು ದತ್ತಪ್ಪನೇ.

"ಏನವಾ? ಯಾಕ ಬಂದಿ? ಜಗಳಾ ಮಾಡಾಕ?'' ಎಂದು ದತ್ತಪ್ಪ ಕೇಳಿದರೆ ಆ ಹೊಯ್ಕ್ಮಾಲಿ ಹೇಳುತ್ತಾಳೆ –

"ನಾ ಏನ ಜಗಳ ಮಾಡಾಕ ಬಂದಿಲ್ರಿ. ಗೌಡರು ಯಡ್ಡೆಕೆರೆ ಹೊಲ ಬರಕೊಡ್ಲಿ. ಥಣ್ಣಗ ನಾ ಹೋಗತೇನ.''

ದತ್ತಪ್ಪನಿಗೆ ಹೊಯ್ಕ್ಕಾಯಿತು. ಅಡಡಡ ಎಂದು ಆಶ್ಚರ್ಯ ನಟಿಸುತ್ತಿದ್ದರೆ ಬಾಳಪ್ಪನಿಗೆ ತಡೆಯಲಾಗಲಿಲ್ಲ.

"ಅದೇನ ಅಡಡಡ ಅಂತೀಯೊ? ಈ ರಂಡೀ ಮೂಗ ಮಲಿ ಕೋದ ಅಡವಿಗಟ್ಟಿ ಬರೋಣ್ಣಡಿ.''

ಸುಂದರಿಗೆ ತಡೆಯುವುದಾಗಲಿಲ್ಲ.

"ಯಾಕ? ಈ ಕಡೆ ಹಗುರ ಅಂತೆ ತಿಳಿಕೊಂಡಿರೇನ? ಹೋಗಿ ನಾನೂ ಫೋಜುದಾರನ್ನ ಕರಕೊಂಬರ್ತೇನ.''

"ಫೋಜದಾರಂದರ ಸರಕಾರಲ್ಲವಾ. ಕೋರ್ಟಿಗಿ ಹೋಗಿ ಅಲ್ಲಿಂದ ಬೇಕಾದರ ಜಜ್‌ಮೆಂಟಾಗಿ ಬಂದರ ಕೊಡಾಕ ಬಂದೀತ. ಪೋಲೀಸ್ ಪೋಜದಾರರೆಲ್ಲಾ ಜಜ್‌ಮೆಂಟ್ ಕೊಡತಿದ್ದರೆ ಹೆಂಗ? ನೀ ಬೇಕಾದರ ಕೋರ್ಟಿಗಿ ಹೋಗು.''

ಎಂದ ದತ್ತಪ್ಪ, ಸುಂದರಿ ಬಿಡಲಿಲ್ಲ.

"ಹಿಂತಾ ಮಾತ ಪೋಜುದಾರನ ಮುಂದೆ ಯಾಕ ಬರಲಿಲ್ಲ? ಹೆಣ್ಣ ಬಾಳಿ ನನಗನ್ಯೇ ಮಾಡಿ ಬದಿಕೆನಂತೀರಿ?''

"ಹಂಗಂದರ ಹೋಗಿ ಅದ್ಯಾವ ಪೋಜದಾರನ್ನ  ಕರತರ್ತಿ ತಾ ಹೋಗ.''

ಎಂದ ಇವನೂ ಅಷ್ಟೇ ಒರಟಾಗಿ. ಹೆಂಗಸರ ನಡುವಿದ್ದ ನಿಂಗೂನಿಗೆ ತಡೆಯಲಾಗಲಿಲ್ಲ. ''ಹರೀವತ್ತೆದ್ದ ಇದೇನ ಹಚ್ಚೇಯೆ ನನ್ನ ಸವತಿ. ಬಂದ ಕಾಲಲೆ ಜಾಗಾ ಬಿಡತೀಯೊ? ತುರುಬ ಹಿಡಿದ ಎಳದ ಒಗೀ ಅಂತೀಯೊ?''

"ಯಾಕಲಾ ಗಂಡಿಗ್ಯಾ ಭಾಡ್ಯಾ ಬಾ ಗಂಡಸಿದ್ದರ''

ಎಂದು ಇವಳು ನಿಂತಳು. ಗೌಡನಿಗಿನ್ನೂ ಸಿಟ್ಟು ಬರಲೊಲ್ಲದು. ಗೌಡ ಹೂಂ ಅಂದಿದ್ದರೆ ಅವಳನ್ನು ಹಾಗೇ ಹರಿದು ಚಿಂದಿಮಾಡಲು ಹುಡುಗರು ಸಿದ್ಧವಾಗಿದ್ದರು. ಬೆಳಿಗ್ಗೆದ್ದೊಡನೆ ಈ ಪರಿಯ ಹಗರಣ ಆ ಊರಿಗೆ ಹೇಳಿ ಮಾಡಿಸಿದ್ದಲ್ಲ. ಅಷ್ಟರಲ್ಲಿ ಲಗಮವ್ವ ಬಂದಳು. ಬಸೆಟ್ಟಿ ಬಂದ. ದೇವರೇಸಿ ಬಂದ. ಇನ್ನೇನು ಬೇಕು? ಈಗಲೇ ಇವಳಿಗೆ ಊರಿಂದ ಬಹಿಷ್ಕಾರ ಹಾಕಿಬಿಡೋಣವೆಂದು ಬಾಳು ಹೇಳಿದ. ಬಸೆಟ್ಟಿ ಹೌದೆಂದ. ಈತನಕ ಸುಂದರಿಗೆ ಧೈರ್ಯವಿತ್ತು. ಸರಪಂಚ ಇರೋ ತನಕ ತನಗೆ ಯಾರೇನು ಮಾಡಲಾದೀತೆಂಬ ಹಮ್ಮಿನಲ್ಲಿದ್ದಳು. ಆದರೆ ಈ ಬಹಿಷ್ಕಾರದ ಅಸ್ತ್ರ ಅವಳಿಗೆ ಹೊಸದು. ಹಾಗೆಂದರೇನೆಂದೂ ಅರಿಯಳು, ಏನೋ ಅಪಾಯ ಕಾದಿದೆಯೆಂದು ಹೆದರಿ ಎದ್ದುನಿಂತು,

"ನಾ ಹಡಬಿಟ್ಟಿ ಹೆಂಗಸಲ್ಲ. ಗೌಡನ... ಫಲ...'' ಎಂದು ಹೇಳ ಹೇಳುತ್ತ ಕೂಡಿದ ಮಂದಿಯಲ್ಲಿ ಹೊಟ್ಟೆ ಮುಟ್ಟಿಕಂಡೊಡನೆ ಅವಳಿಗರಿವಾಗದಂತೆ ಕಣ್ಣೀರುಕ್ಕಿ ಗಂಟಲು ತುಂಬಿತು. ಬಿಕ್ಕಿ ಬಿಕ್ಕಿ ಕುಸಿದಳು. ಗೌಡನಿಗೆ ತಡೆಯಲಾಗಲಿಲ್ಲ.

“ಹೌಂದವಾ ನನಗs ಬಸರಾಗೀದಿ ಹೌಂದಲ್ಲೊ? ಹಾಂಗಿದ್ದರ ನಮ್ಮ ಮನ್ಯಾಗ ಇದ್ದುಬಿಡು. ನಿನಗ ಹೊಲಾ ಯಾಕ ಬೇಕು?”

ಈಗ ತಾನು ಕೆಸರಲ್ಲಿ ಸಿಗಬಿದ್ದುದು ಅವಳಿಗೂ ಅರಿವಾಯಿತು. ಇನ್ನು ತನಗಿಲ್ಲಿ ಉಳಿಗಾಲವಿಲ್ಲ.

“ನಾ ಯಾಕ ನಿನ್ನ ಮನ್ಯಾಗಿರ್ಲಿ? ಮನಸ್ಸಿಗಿ ಬಂದಲ್ಲಿರ್ತೇನ.”

ಸುಂದರಿಗೆ ಸಹಾನುಭೂತಿ ತೋರಿಸುವವರು ಒಬ್ಬರೂ ಇರಲಿಲ್ಲ. ಇದೇ ಸಂದರ್ಭವೆಂದು ಗೌಡನನ್ನು ಕೇಳದೆ, ಕೇಳಿದರೆ ಮತ್ತೆ ರಾಡಿಯಾಗುವುದೆಂದು ಬಗೆದು ಬಹಿಷ್ಕಾರ ಘೋಷಿಸಿಯೇ ಬಿಟ್ಟ ದತ್ತಪ್ಪ. ಅಲ್ಲೇ ಇದ್ದೊಂದು ಕುಂಬಳಕಾಯಿಯನ್ನು ಒಡೆದು ಲಗಮವ್ವನಿಂದ ನೀರು ಬಿಡಸಿದ. ಸುಂದರಿ ಅದಕ್ಕಾಗಿ ಏನೋ ಮಾಡಹೋಗಿ ಏನೋ ಆಗಿ ಏನುತ್ತರ ಕೊಡಲೂ ತೋಚದೆ ಗಳಗಳ ಅಳುತ್ತ ಸರಪಮಚಗ ಹೇಳ್ತೇನೆನ್ನುತ್ತ ಅಟ್ಟಸಿಕೊಂಡ ಪ್ರಾಣಿಯ ಹಾಗೆ ಓಡಿದಳು. ಜನ ಇವಳಿಗೆ ಇದೇ ತಕ್ಕ ಪ್ರಾಯಶ್ಚಿತ್ತ ಎಂದರು. ದತ್ತಪ್ಪನಿಗೆ ಹೌದ್ಹೌದೆಂದರು. ಇದೆಲ್ಲ ಹದಿನೈದಿಪ್ಪತ್ತು ಎಣಿಸುವುದರೊಳಗೆ ಮುಗಿದುಹೋಗಿತ್ತು. ಜನ ಚೆದುರಿದ ಮೇಲೆ ಗೌಡ “ಅಲ್ಲಪಾ ಪರವೂರವಳು ಆಕೀ ಮ್ಯಾಲ ಹೆಂಗ ಬಹಿಷ್ಕಾರ ಹಾಕಾಕ ಬರತೈತಿ?” ಅಂದ.

ದತ್ತಪ್ಪ ಸಿಡಿದು,

“ನನ್ನ ಚಿಂತಾಮಣಿ ಸುಳ್ಳ ಹೇಳತದೇನು? ತಗಿ, ತಗಿ, ನಾ ಎನ್ನೂ ಜಳಕ ಮಾಡಿಲ್ಲ?” ಎನ್ನುತ್ತ ಮನೆಗೆ ಹೋದ.

## ಕರಿಮಾಯಿಗೆ ಕಡೇ ಶರಣು

ಗೌಡ ಗುಡಸೀಕರನನ್ನು ನೋಡಿ ದೈನಾಸ ಪಡುತ್ತಿದ್ದರೆ ಅತ್ತ ಕೊಳವಿಯ ಮುದುಕಪ್ಪ ಗೌಡ ಕರಿಮಾಯಿಗೆ ಕಡೇ ಶರಣು ಮಾಡಿದ.

ಇದು ಗುಡಸೀಕರನ ಪ್ರಥಮ ಗೆಲುವಾಗಿತ್ತು. ಆ ದಿನ ಸುಂದರಿ ಫೋಜದಾರನ ಸೇವೆಗೊದಗಿ ತಡಮಾಡಿ ಗುಡಿಸಲಿಗೆ ಬಂದಳು. ಆ ಏಳೂ ಜನ ತಮ್ಮ ಗೆಲವನ್ನು ಭರ್ಜರಿಯಾಗಿ ಅದ್ದೂರಿಯಿಂದ ಒದ್ದೊದ್ದೆಯಾಗಿ ಆಚರಿಸಿದರು. ಆ ಗೆಲುವಿಗೆ ಕಾರಣಳಾದ ಸುಂದರಿಯನ್ನು ಬಸವರಾಜೂನನ್ನು ಗುಟಕಿಗೊಮ್ಮೆ ಸ್ಮರಿಸಲಾಯಿತು. ಸುಂದರಿಗಂತೂ ನೆಲದ ಮೇಲೆ ಕಾಲೂರದಷ್ಟು ಹೌಶಿಯಾಗಿತ್ತು. ತನ್ನ ಸಂಚು ಫಲಿಸಿದ್ದಕ್ಕೆ ಗುಡಸೀಕರ ತನ್ನ ಗುಣಗಾನ ಮಾಡುತ್ತಿದ್ದದ್ದಕ್ಕೆ. ಮೈತುಂಬ ರೋಮಾಂಚನಗೊಂಡಳು. ಕುಡಿತದ ಅಮಲಿನಲ್ಲಿ ಆ ದಿನ ಗೌಡ ಹೇಳಿದ ಮಾತುಗಳನ್ನು ಪುನಃ ಅವನಂತೇ ಹೇಳಿ ಗುಡಸೀಕರನನ್ನು ನಗಿಸಿದಳು.

ಅದೇ ದಿನ ಊರ ಹಿರಿಯರ ಸಭೆ ದತ್ತಪ್ಪನ ನೇತೃತ್ವದಲ್ಲಿ ಸೇರಿತು. ಗೌಡ ಬಂದಿರಲಿಲ್ಲ. ಸುಂದರಿಗೆ ಬಹಿಷ್ಕಾರ ಹಾಕುವದೆಂದು ತೀರ್ಮಾನಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ ಅದೇನೋ ಎಲೆಕ್ಷನ್ ಅಂತಿದ್ದನಲ್ಲ ಅದಕ್ಕೆ ಈ ಸಲ ತಾವೂ ನಿಲ್ಲಬೇಕೆಂದು ಗೊತ್ತುಮಾಡಿಕೊಂಡರು.

ಮಾರನೇ ದಿನ ಮುಂಜಾನೆ ತಮ್ಮ ತೀರ್ಮಾನವನ್ನು ಗೌಡನಿಗೆ ತಿಳಿಸಿದರು. ಗೌಡ ಸುಮ್ಮನಾದ. ಅವರು ಹೋದ ಮೇಲೆ ಗುಡಸೀಕರನನನ್ನು ಕರೆತರಲಿಕ್ಕೆ ಹಳಬನನ್ನು ಓಡಿಸಿದ.

ಹಳಬ ಬಂದಾಗ ಗುಡಸೀಕರ ಸುಂದರಿಯ ಗುಡಿಸಲಲ್ಲಿದ್ದ. ಗೌಡರು ಕರಯುತ್ತಿದ್ದಾರೆಂದು ಹಳಬ ಹೇಳಿದ್ದೇ ತಡ, ಹುಡುಗ ಹುರುಪಾದ. ಬಸವರಾಜೂನ ಭುಜ ಎರಡೆರಡು ಬಾರಿ ಬಾರಿಸಿ "ನೋಡಿದಿ? ಹೇಗೆ ಹಾದಿಗಿ ಬಂದ!" ಎಂದಂದು ಗಟ್ಟಿಯಾಗಿ ನಕ್ಕ. ಸುಂದರಿಗೆ ಕಣ್ಣುಹಾರಿಸಿ ನಕ್ಕ. ಹಾಳಾದವರು ಆ ಚತುಷ್ಟಯರಿರಲಿಲ್ಲ. ಸಾಮೂಹಿಕವಾಗಿ ಚಪ್ಪಾಳೆ ತಟ್ಟಿ ನಗಬಹುದಿತ್ತು. ನಗುವ ಸಂಭ್ರಮದಲ್ಲಿ ಹಳಬ ಕಂಡಿರಲೇ ಇಲ್ಲ. ಕಂಡೊಡನೆ "ನನಗ ಸಡವಿಲ್ಲಾ ಬೇಕಾದವರ ಅಂವಗs ಬಾ ಅಂತ ಹೇಳ" ಎಂದ. ಈ ಸೊಕ್ಕನ್ನು ಹಳಬ ನಿರೀಕ್ಷಿಸಿರಲಿಲ್ಲ. ಆಗಲೆಂದು ಹೋದ. ಗುಡಸೀಕರನ ಸೊಕ್ಕು ಕೆಳಕ್ಕಿಳಿಯದಾಯಿತು. ತಾನೆಂಥ ಮಹತ್ವದ ಯುದ್ಧಗೆದ್ದೆನಲ್ಲ ಎಂದುಕೊಂಡ. ಗೌಡನಲ್ಲಿಗೆ ಹೋಗಬಹುದಾಗಿತ್ತೇನೋ, ಹೋಗಿದ್ದರೆ ಗೌಡನ ಸೋಲನ್ನು ಕಣ್ಣಾರೆ ನೋಡಿ ಕಿವಿಯಾರೆ ಕೇಳಬಹುದಾಗಿತ್ತು. ಯಾಕೆ ಕರೆಸಿದ್ದಾನು? ಊರವರ ಮುಂದೆ ಮೀಸೆ ಮೊಂಡಾದದ್ದು ಒಂದು ಕಡೆ; ಎರಡೆಕರೆ ಜಮೀನು ಕಕ್ಕಬೇಕಾದ್ದು ಇನ್ನೊಂದು ಕಡೆ. ಅಪಸಾತಿ ಮಾಡಿಕೊಳ್ಳೋಣ ಎಂದಿರಬೇಕು. ಮಗನಿಗೆ ಈಗಲಾದರೂ ತಿಳಿಯಿತಲ್ಲ, ತಾನು ಯಾರು ಅಂತ. ಇನ್ನು ಮೇಲಾದರೂ ಬಾಯಿ ಮುಚ್ಚಿಕೊಂಡು ಇದ್ದರೆ ಬರೋಬರಿ. ಇಲ್ಲದಿದ್ದರೆ ಮೂಗಿಗೆ ಮೂಗುದಾರ ಪೋಣಿಸದಿದ್ದರೆ ನನ್ನ ಹೆಸರು ಗುಡೀಕರನೆಂದು ಯಾಕಿರಬೇಕು?

ಹಿಂಗೆಂದು ಒಳಗೊಳಗೇ ಮಾತಾಡಿಕೊಳ್ಳುತ್ತ, ಹೊರಗೆ ನಗುತ್ತ ತೋಟದ ಕಡೆ ಕಾಲು ಹಾಕಿದ. ನಡೆದಾಡುವಾಗ ಕೂಡ ವಿಚಿತ್ರ ಹೌಸಿ ಅವನೊಳಗೆ ಹರದಾಡತೊಡಗಿತ್ತು. ರೆಕ್ಕೆ ಬೀಸಿ ಹಾರಿ ಹೋದಂತೆ ತೋಟಕ್ಕೆ ಹೋದ. ಕಬ್ಬಿನ ತೋಟದಲ್ಲಿ ನಾಲ್ಕೈದು ಮಂದಿ ಆಳುಗಳು ಮೇವು ಬಳಿಯುತ್ತಿದ್ದರು. ಸೀದಾ ಅಲ್ಲಿಗೇ ಹೋದ.

ಅವರ್ಯಾರೂ ಇವನ ಅಭಿಪ್ರಾಯ ಅನುಮೋದಿಸುವವರಾಗಿರಲಿಲ್ಲ. ಇವ ತನ್ನ ಕಾಳಿ ಊದತೊಡಗಿದ. ತನಗೆ ಪರಿಚಿತರೆಂದು ಅಧಿಕಾರಿಗಳ ಕುಗೋತ್ರ ಹೆಸರು ಹೇಳಿದ. ಅವರೊಂದಿಗೆ ತನ್ನ ಸಲಿಗೆಯ ಪ್ರಸಂಗಗಳನ್ನು ಕಥೆಮಾಡಿ ಹೇಳಿದ. ಗೌಡ ಅಪಸಾತಿ ಮಾಡಿಕೊಳ್ಳಲು ಓಡಾಡುತ್ತಿದ್ದುದನ್ನು ದನಿ ಎತ್ತರಿಸಿ ಸ್ವಲ್ಪ ಉದ್ರೇಕಿತನಾಗಿಯೇ ಹೇಳಿದ. ತನ್ನ ಹೇಳಿಕೆಯಲ್ಲಿ ಗೌಡನನ್ನು ಹುಳಮಡಿ ತಾನೊಂದು ಆನೆಯಷ್ಟು ಎತ್ತರಕ್ಕೆ ಬೆಳೆದ. ಅಷ್ಟರಲ್ಲಿ ಗೌಡ ಅಲ್ಲಿಗೇ ಬಂದ. ಸರಪಂಚ ಮಾತಾಡಿಸಲಿಲ್ಲ. ತನಗೇನೂ ಆಗಿಲ್ಲವೆಂಬಂತೆ ಆಳುಗಳೊಂದಿಗೆ ಅದು ಇದು ಬಾತಿಗೆ ಬಾರದ್ದನ್ನಾಡುತ್ತ ನಿಂತ. ಆಳುಗಳಲ್ಲಿ ಒಂದಿಬ್ಬರು ಗೌಡನಿಗೆ ಶರಣು ಹೇಳಿದರು. ಗೌಡ ಬಂದವನು "ತಮ್ಮಾ, ನಿನ್ನ ಜೋಡಿ ಮಾತಾಡಬೇಕು ಗುಡಿಸಲ ಕಡೆ ಬರ್ತೀಯೇನು?" ಎಂದ. ಸರಪಂಚ ತಿರುಗಿ ಕೂಡ ನೋಡದೆ "ಅದೇನ ಮಾತ ಅದಾವ ಇಲ್ಲೇ ಹೇಳಬಹುದಲ್ಲಾ" ಅಂದ. ಗೌಡನ ಮನಸ್ಸು ಮುದುಡಿ ಆ ಮಾತಿನಷ್ಟೇ ಆಯ್ತು. ಆದರೆ ಗುಡಸೀಕರನ ಈ ನಡೆ ಅನಿರೀಕ್ಷಿತವಾಗಿರಲಿಲ್ಲ. ಅಭಿಮಾನವಿಲ್ಲವೆಂದಲ್ಲ. ವಿವೇಕ, ಅದಕ್ಕಿಂತ ಹೆಚ್ಚಾಗಿತ್ತು. "ಆಗಲಿ, ಬಿಡಪಾ, ಇಲ್ಲೇ ಮಾತಾಡೋಣು" ಎಂದು ಅಲ್ಲೇ ಬದುವಿನ ಮೇಲೆ ಕುಳಿತ. ಆಳುಗಳು ಆ ಅಂಚಿಗೆ ಹೋಗುತ್ತೇವೆ ಎಂದು ಹೇಳಿಕೊಂಡು ಎದ್ದುಹೋದರು.

ಗೌಡ ಮಾತು ಶುರುಮಾಡಿದ. "ನೋಡ ತಮ್ಮ, ನಮ್ಮ ಕಾಲ ಮುಗೀತು. ಇಲ್ಲಿ ತಂಕಾ ಒಂದ ಹದ್ದಬಸ್ತೀನಾಗ ಊರ ತಂದ ನಿನ್ನ ಕೈಯಾಗಿಟ್ಟೆವಿ. ನೀ ಕಲತಾಂವ. ಲೋಕಾ ತಿಳಿದಾಂವ..." ಹೇಳುತ್ತ ಗೌಡ ಸ್ವಲ್ಪ ಹೊತ್ತು ಸುಮ್ಮನಾದ. ಸರಪಂಚ ಆಗಲೇ ಅಳ್ಳಳ್ಳಕಾಗಿ ಗುಡಸೀಕರನಾಗಿತ್ತಿದ್ದ. ಗೌಡ ಮತ್ತೆ ಮುಂದುವರಿದ. "ನೀ ಬ್ಯಾರೇ ಅಲ್ಲ, ನನ್ನ ಮಗಾ ಬ್ಯಾರೇ ಅಲ್ಲಪಾ, ನಿನಗ ಹಾಂಗ ತಿಳದ ಪಂಚಾಯ್ತಿ ಮಾಡಪಾ ಅಂತ ಊರ ನಿನ್ನ ಅಂಗೈಯಾಗಿಟ್ಟೆವಿ. ನಾ ನಿನಗ ಏನ ಕೆಟ್ಟ ಮಾಡೀನಿ ಹೇಳೋ ಎಪ್ಪಾ, ನನ್ನ ಕಂಡರ ವೈರೀನ ಕಂಡಾಂಗ ಮಾಡತಿ. ಏನಾರ ತಪ್ಪ ಆಗಿದ್ದರ ಹೇಳು, ನಿನ್ನ ಕಾಲಿಗೆ ತಲೀ ಕಟೀತೀನಿ. ನಿನ್ನ ಜೋಡೀ ಜಗಳ ಮಾಡೋ ವಯಸ್ಸನಂದ? ಇಂದಿಲ್ಲ; ನಾಳೆ ಗೋರ್ಯಾಗ ಇರಾವರು. ನೀವಾದರ ಇದs ಇನ್ನೂ ಚಿಗರವರು. ಹೂ ಕಾಯಿ ಹಣ್ಣಾಗುವರು. ಈ ಊರಿಗೆ ನಮ್ಮಂಥಾ ಮುದುಕರಲ್ಲಪಾ, ನೀ ಬೇಕು, ನಿನ್ನಂತವ ಬೇಕು, ಏನೊ ನಾಲಿಗಿ ತುಂಬ ಹಾಂಗ ಮಾಡ್ರೊ, ಹೀಂಗ ಮಾಡ್ರೊ ಅಂತ ಹೇಳತೀವು. ಕಣ್ಣಿಗಿ ದಿನಾ ಬೆಳಗಾದರ ಗೋರಿ ಕಾಣತೈತಿ, ಅದರ ಅಂಜಿಕ್ಯಾಗ ಏನಾರ ಆಡತಿದ್ದೇನಪಾ, ಬ್ಯಾಡಂದರ ಅದನೂ ಬಿಡತೀವು. ಅದರ ನಮ್ಮ ಮ್ಯಾಲಿನ ಸಿಟ್ಟಲೆ ಊರ್ಯಾಕ ಹಾಳಾಗಬೇಕೊ ಎಣ್ಣಾ? ಗುಡಿಸೀಕರ ಪೂರಾ ಕರಗಿಬಿಟ್ಟಿದ್ದ. ಪಾಪ, ಈ ಮುದುಕನ್ನ ತಾನು ಅಪಾರ್ಥ ಮಾಡಿಕೊಂಡಿದದೇನೆನಿಸಿತು. ಸ್ವಲ್ಪ ಅಂತಃಕರಣ ಬಿಚ್ಚಿ "ಇದನ್ನ ಹೆಂಗ ಮಾಡೋಣೂ" ಅಂತ ಕೇಳಿದರೆ ಸಾಕು. ಮುದುಕ ಉಬ್ಬುವವ.

ಹೆಚ್ಚೇನು ಹಿರಿಯರಿಗೆ ಬೇಕಾದ್ದೂ ಅಷ್ಟೇ. ಹೇಳಿ ಕೇಳಿ ಹೆಗಲು ಬಿದದವರು. ಇನ್ನೆಷ್ಟು ದಿನ ಇದ್ದಾರು? ಇರೋ ತನಕ ಸ್ವಲ್ಪ ಮರ್ಯಾದೆ ಕೊಟ್ಟರೆ ತನಗೇನು ಕೊರತೆ ಬಿದ್ದೀತು? ಅದೊಂದು ಗ್ರಾಮ ಪಂಚಾಯ್ತಿ. ಹೋಗಿ ಕೇಳಿದರೆ ಈಗಲೂ ಎಲೆಕ್ಷನಿಲ್ಲದೆ ಹಾಗೇ ಕೊಡುವುದು ದೂರದ ಮಾತಲ್ಲ. ಗೌಡ ಮುಂದುವರಿಸಿದ:

"ಖರೆ ಹೇಳೋ ತಮ್ಮಾ, ನಾ ಆ ಚಿಮಣಾನ ಬಸರು ಮಾಡಿದ್ದ ಖರೆ ಮಾತ? ನೀ ನಿಮ್ಮಪ್ಪನ ಹೆಸರ ತಗೊಂಡ ಹೌಂದನ್ನು. ನಾ ಇಕ್ಕs ಈಗ ಎರಡೆಕರೆ ಜಮೀನೂ ಕೊಟ್ಟು ಬಿಡತೇನು: ಅಪ್ಪಾ ಸಾಯೋ ಕಾಲದಾಗ ನನ್ನ ಮ್ಯಾಲ ಹಿಂತಾದೊಂದ ಹರಲಿ ಹೊರಸ ಬ್ಯಾಡ."

ಎನ್ನುತ್ತ ಕೂಡಲೇ ಗೌಡ ಕೈಮುಗಿದ. ಇಬ್ಬರ ಬಾಯಿ ಕಟ್ಟಿತು. ಹಮ್ಮು ಕರಗಿ ನೀರಾಗಿ ಹರಿದಂತೆ ಗುಡಸೀಕರನ ಕಣ್ಣೊಳಗಿಂದ ಎರಡು ಹನಿ ಉದುರಿದವು. ತಾನು ಇಲ್ಲವೆ ಬಸವರಾಜು ಇಬ್ಬರಲ್ಲಿ ಒಬ್ಬರ ಕಾರಭಾರಿಗೆ ಸುಂದರಿ ಬಸರಿಯಾದದ್ದು ಖಾತ್ರಿಯಾಗಿತ್ತು. ನಿಂಗೂ ನಿನ್ನೆ ಬಸವರಾಜೂನ ಭಾನಗಡಿ ಹೇಳಿದ್ದ. ಇದರಲ್ಲಿ ಬಸವರಾಜೂನ ಭಾಗವೇ ಹೆಚ್ಚಾದಂತಿತ್ತು. ಇಲ್ಲದಿದ್ದರೆ ಬಸರಿನ ಸುದ್ದಿ ಮೊದಲು ತನಗಾದರು ಹೇಳಬಹುದಿತ್ತೊ? ಗರ್ಭಪಾತದ ಸಂಗತಿಯನ್ನಾದರೂ ತಿಳಿಸಬಹುದಿತ್ತೊ?

ಬಹಳ ಹೊತ್ತಿನ ತನಕ ಇಬ್ಬರೂ ಮಾತಾಡಲಿಲ್ಲ. ಗುಡಸೀಕರ ಇಲ್ಲೀತನಕ ಒಂದು ಮಾತೂ ಆಡಿರಲಿಲ್ಲ. ಏನಾಡಬೇಕೆಂದು ಹೊಳೆಯಲೂ ಇಲ್ಲ ಈಗಲೂ ಗೌಡನೇ ಹೇಳಿದ. "ನೋಡು ತಮ್ಮಾ, ದಿನ ಬೆಳಗಾದರ ಒಬ್ಬರ ಮಾರಿ ಒಬ್ಬರ ನೋಡಾವರು ನಾವು. ನಿನ್ನ ನಿಟ್ಟುಸರಿಗೆ ನಾನs ಕರಗಬೇಕು. ನಂದಕ ನೀ ಕರಗಬೇಕು. ಬೆಳಗಾಂವಿ ಮನಿಶ್ಯಾ ಇಂದಿದ್ದ ನಾಳಿ ಹೋಗಾಂವಪಾ. ಅವರಿಬ್ಬರನ್ನು ಈಗಿಂದೀಗ ಹೊರಗ್ಹಾಕು. ನಿನಗ್ಹೆಂಗ ಬೇಕ ಹಾಂಗ ಊರ ಆಳಿಕೊ. ಖರೆ ಹೇಳ್ತನೋ ಎಪ್ಪಾ. ಸಡ್ಲ ಬಿಟ್ಟರೆ ಆಕೆ ಈ ಊರ ಅಳವೆತ್ತತಾಳ" ಅಂದು ಸುಮ್ಮನಾದ. ಮಾತುಕತೆಗೊಂದು ಮುಕ್ತಾಯವನ್ನಾದರೂ ಕೊಡಬೇಕಲ್ಲ. "ಆಗಲಿ, ನೀವೇನ ಕಾಳಜಿ ಮಾಡಬ್ಯಾಡರಿ, ನಡೀರಿ ಹೋಗೋಣು" ಅಂದ. ಮಾತಿನ್ನೂ ಬಾಯಲ್ಲಿಯೇ ಇತ್ತು. ಢಂ ಢಂ ಎಂದು ಗುಂಡು ಹಾರಿದ್ದು ಕೇಳಿಸಿತು. ಇಬ್ಬರೂ ತಬ್ಬಿಬ್ಬಾದರು. ಮುಖಾಮುಖ ನೋಡಿಕೊಂಡರು. ಗುಡಸೀಕರ ಸದ್ದುಬಂದ ಕಡೆ ಓಡಿದ. ಗೌಡನ ಕೈಕಾಲೇ ಹೋದವು. ಅಲ್ಲೇ ಕುಸಿದ. ಗುಡಸೀಕರ ಓಡಿ ಬಂದಾಗ ಕರಿಮಾಯಿಯ ಗುಡಿಯಲ್ಲಿ ಪೋಲೀಸರು ಓಡಾಡುತ್ತಿದ್ದರು. ಗುಮಡಿನ ಸಪ್ಪಳಕ್ಕೆ ತತ್ತರಿಸಿ ಜೇನು ಹುಟ್ಟೊಂದರ ಕಾಲುಭಾಗ ಕಳಚಿಬಿದ್ದಿತ್ತು. ಜೇನು ಚೆಲ್ಲನೆ ಸುತ್ತ ಸಿಡಿದಿತ್ತು. ಜೇನ್ನೊಣಗಳು ಎದ್ದು ಗುಂಯೆಂದು ಹುಯ್ಯಲೆಬ್ಬಿಸಿ ಪೋಲೀಸರನ್ನು ಅಟ್ಟಿಸಿಕೊಂಡೋಡಿ ಕಚ್ಚುತ್ತಿದ್ದವು...ಫೋಜದಾರ ಗುಡಸೀಕರನನ್ನೂ ಗಮನಿಸದೆ, ಹುಳಗಳ ಕಾಟ ಲೆಕ್ಕಿಸದೇ ವಿಜಯೋನ್ಮಾದದಿಂದ ಕಿರಿಚಿ ಆಜ್ಞೆ ಮಾಡುತ್ತಿದ್ದ. ಜನ ಒಬ್ಬೊಬ್ಬರೇ ಓಡಿಬಂದು ದೂರದಲ್ಲೇ ನಿಂತುಕೊಂಡು ಪಿಳಿಪಿಳಿ ಕಣ್ಣುಬಿಡುತ್ತ ನೋಡುತ್ತಿದ್ದರು. ಕೊಳವಿಯ ಶ್ರೀ ಮುದುಕಪ್ಪ ಗೌಡನ ಹೆಣ ಬೊಕ್ಕಬೋರಲಾಗಿ ಬೆನ್ನು ಮೇಲಾಗಿ ಕರಮಾಯಿಯ ಕಡೆ ಮುಖಮಾಡಿ ತಾಯಿಗೆ ಕೊನೆಯ ಶರಣು ಹೇಳುವಂತೆ ಬಿದ್ದಿತ್ತು. ಹೊಟ್ಟೆಯ ಕೆಳಗೆ ನೆತ್ತರ ಮಡು ನಿಂತಿತ್ತು.

## ಮಾಯವಾದ

ಚಾವಡಿಯಲ್ಲಿ ಹೀಗಾಗುತ್ತಿರಬೇಕಾದರೆ ಇತ್ತ ಚೆನ್ನದ ಕೂಸು ಕಣ್ಮರೆಯಾಯಿತು.

ಸಾಯಂಕಾಲ ನಿಂಗೂನಿಂದ ಸುದ್ದಿ ತಿಳಿದ ಶಿವನಿಂಗ ಹತಾಶನಾಗಿ ಕೈಕಾಲು ಕಳೆದುಕೊಂಡುಬಿಟ್ಟ. ಆ ರಂಡೆ ವಿಶ್ವಾಸಘಾತ ಮಾಡಿದಳು, ಅಂದುಕೊಂಡ. ಈ ಫೋಜದಾರ ಹೋಗಲಿ, ಅವಳನ್ನು ಸಿಗಿದು ಚರ್ಮ ಸುಲಿಸುತ್ತೇನೆ; ಅದಾಗಿ ಈಗ ಊರಿಗೆ ಮುಖ ತೋರಿಸೋದು ಹ್ಯಾಗೆ? ಅವ್ವ ಅಪ್ಪನೆದುರಿಗೆ ಮುಖಕೊಟ್ಟು ಮಾತಾಡೋದು ಹ್ಯಾಗೆ ಗುಡಿಸ್ಯಾ ಒಬ್ಬ ಗಂಡಿಗ್ಯಾ ಅಂದ. ಅವನ ಕಾಲು ಮುರಿದು ಕೈಗೆ ಕೊಡಬೇಕೆಂದ. ಗುಡಿಸ್ಯಾನನ್ನು ಇಷ್ಟು ಬೆಳೆಯಗೊಟ್ಟ ಅಪ್ಪನಿಗೆ ಆಡಿದ. ಬುದ್ಧಿ ಹೇಳದ ದತ್ತಪ್ಪನಿಗೆ ಅಂದ. ಮುದಿಗೊಡ್ಡುಗಳೆಂದು ಬೈದ. ತನ್ನಿಂದಾಗಿ ಗೌಡ ಮನೆತನ ತೋರುಬೆರಳಿಗೆ ಗುರಿಯಾಗುವಂತಾಯಿತಲ್ಲಾ ಎಂದು ಹಣೆ ಹಣೆ ಹೊಡೆದುಕೊಂಡ. ಮನೆಸುತ್ತ ಪೋಲೀಸರು,

ತೋಟದಲ್ಲಿ ಪೋಲೀಸರು. ಎಲ್ಲಿ ಅಡಗಲಿ, ಎಲ್ಲಿ ಈ ಹಾಳು ಮುಖ ಮುಚ್ಚಿಕೊಳ್ಳಲೆಂದು ಬೋನಿಗೆ ಸಿಕ್ಕ ಹುಲಿಯ ಹಾಗೆ ಹಾಯ್ ಹಾಯ್ ಮಾಡುತ್ತ ಹರಿದಾಡಿದ. ಫೋಜದಾರನ ಮುಂದೆ ನಡೆಯುವ ಪಂಚಾಯ್ತಿ ಊರವರೆದುರು ನಿಲ್ಲುವಂಥ ತನ್ನನ್ನ ನೆನೆಸಿಕೊಂಡು ಚಡಪಡಿಸಿದ. ಸ್ವಲ್ಪ ಕತ್ತಲಾದೊಡನೆ ತೋಟದ ಕಡೆ ಹೋದವನು ಹ್ಯಾಗೋ ಪೋಲೀಸರ ಕಣ್ಣುತಪ್ಪಿಸಿ, ಯಾವುದೋ ಮಾಯೆಯಿಂದ ಮಾಯವಾದ.

ರಾತ್ರಿ ಎಷ್ಟಾಗಿತ್ತೋ, ಪೌಳಿಯ ಹಿಂಬದಿಯ ಗೋಡೆ ಹಾರಿ ಕರಿಮಾಯಿ ಗುಡಿಹೊಕ್ಕ. ಬಗ್ಗಿಕೊಂಡೇ ಒಳಗೆ ಸರಿದ. ಒಳಗೆ ಕತ್ತಲಿತ್ತು. ಕರಿಮಾಯಿ ಮೂರ್ತಿಯ ಹಿಂದೆ ಕೂರೋಣವೆಂದು ಸರಿಯುತ್ತಿರುವಾಗ "ಯಾರವರಾ?" ಎಂದು ಕೇಳಿಸಿತು. ಹುಡುಗ ಬೆಚ್ಚಿದ. ಮತ್ತೆ ಯಾರಪ್ಪಾ ನೀನು?" ಎಂದದ್ದು ಕೇಳಿಸಿತು. ದನಿ ಗುರುತು ಹತ್ತಿ ಕೊಳವಿಯ ಮುದುಕಪ್ಪ ಗೌಡನೆಂದು ಗೊತ್ತಾಯಿತು. "ನಾ – ಎಜ್ಜಾ ಶಿವನಿಂಗ" ಎಂದು ಹತ್ತಿರ ಸರಿದ.

"ಯಾಕೋ ತಮ್ಮಾ, ನಿಮ್ಮಪ್ಪ ಏನಾರ ಹೇಳಿಕಳಿಸ್ಯಾನೇನು?"

"ಏನಿಲ್ಲೆಜ್ಜಾ"

"ಮತ್ತ ನೀ ಯಾಕ ಹಿಂಗ ಕಳ್ಳರ್ಹಾಂಗ ಬಂದ್ಯೋ ಹುಡುಗಾ?" ಶಿವನಿಂಗ ಸುಮ್ಮನಾದ. ಮುದುಕಪ್ಪನೂ ಮಾತು ಬೆಳೆಸಲಿಲ್ಲ. ಚಿಮಣೀ ಮಡದ ಕಾಡಿಗೆ ಕಡಕೊಂಡು ಬಿದ್ದಹಾಗೆ ಕತ್ತಲಿತ್ತು. ಊರುಬಿಟ್ಟು ಗುಡಿ ದೂರ ಇದ್ದುದರಿಂದ ಇದ್ದದ್ದೂ ಸಪ್ಪಳ ಕಮ್ಮಿ. ಜೀರುಂಡೆ ಹುಳು ಮಾತ್ರ ಒಂದೇ ಸಮ ಮರ ಕೊರೆದಂತೆ ಜಿರ್‌ರ್ ಎಂದು ಒದರುತ್ತಿತ್ತು. ಜಾಗಾ ಸುರಕ್ಷಿತವೆಂದಾದ ಮೇಲೆ ಎದೆಬಡಿತ ತುಸು ಕಮ್ಮಿಯಾಯಿತು. ಬಹುಶಃ ಪೋಲೀಸರೀಗ ತನ್ನನ್ನು ಹುಡುಕುತ್ತಿರಬಹುದು. ನಾಳೆ ಬೆಳಿಗ್ಗೆ ಅಪ್ಪ ಚರ್ಮ ಸುಲಿಯುವುದು ಖಚಿತ. ಊರುಬಿಟ್ಟು ದೂರ ಹೋಗುವುದೇ ಚಲೋ. ಹೋಗೋ ಮುನ್ನ ಗುಡಿಸ್ಯಾ ಚಿಮಣಾ ಇಬ್ಬರನ್ನೂ ಮುಗಿಸಿ ಹೋಗಿದ್ದರೆ ಬರೋಬರಿ ಆಗುತ್ತಿತ್ತೆಂದು ಯೋಚಿಸಿದ. ಅಷ್ಟರಲ್ಲಿ ಮುದುಕನ ಕೈ ತಾಗಿತು. "ತಮ್ಮಾ" ಎನ್ನುತ್ತ ಮುದುಕ ಶಿವನಿಂಗನಿಗೆ ಇನ್ನಷ್ಟು ಸಮೀಪ ಸರಿದು ಪಿಸುಗುಟ್ಟಿದ.

"ತಮ್ಮಾ ಕುಂದರಗಿ ಮಠ ನೋಡಿದೆಯೇನು?"

"ಹೂಂ"

"ಎಷ್ಟಾಕ್ಕತಿ ಇಲ್ಲಿಂದ?"

"ಯಾಡ ಮೂರ ಹರದಾರಿ ಆದೀತು"

"ಏನ ಮಾಡ್ಲೊ ಹುಡುಗಾ, ನಾಳಿ ನಾ ಹೋಗದಿದ್ದರ ಕೆಲಸ ಕೆಡತೈತಿ. ನನ್ನ ಹಾದೀ ನೋಡಿಕೋತ ಹತ್ತಮಂದಿ ಕೂತಿರತಾರ. ನಿಮ್ಮಪ್ಪ ಯಾರ್‍ನೊ ಕಳಿಸ್ತೇನಂದಿದ್ದ, ಹೋಗಿ ನಿಮ್ಮಪ್ಪಗಾಟ ನೆನಪು ಮಾಡಿ ಬರ್ತಿಯ್ತೇನ?"

"ನಮ್ಮಪ್ಪನಃ ನನ್ನ ಕಳಿಸ್ಯಾನಜ್ಜಾ"

ಎಂದೊಂದು ಸುಳ್ಳುಬಿಟ್ಟ. ಅಲ್ಲದೆ ಆ ಕೆಲಸ ತಾನೇ ಮಾಡಬಹದಲ್ಲಾ, ಊರು ಬಿಡಲಿಕ್ಕೆ ಇದೊಳ್ಳೆ ನೆವ ಸಿಕ್ಕಿತೆಂದುಕೊಂಡ.

“ಎಲೀ ಇವನ, ಮತ್ತ ಕೇಳಿದರ ಹೇಳಿಲಿಲ್ಲಲ್ಲೊ? ಚೆಲೋ ಆತ ಬಾ. ದೇಶಕ್ಕ ನಿಂದೂ ಆsಟ ಸೇವಾ ಸಲ್ಲಲಿ. ಕುಂದರಗಿ ಮಠಕ್ಕ ಹೋಗಿ ಬರ್ತೀಯೇನ?”

“ಅಲ್ಲಿ ಕುಂತವರ್ಯಾರು ನೇರೂ ಗಾಂಧೀಯೇನಜ್ಜ?”

“ಅವರ ಅಂತ ತಿಳಿ”

“ಹೋಗತೇನ ಏನ ಹೇಳೆಜ್ಜಾ”

ಮುದುಕ ಬಲುಭದ್ರವಾಗಿ ಬಚ್ಚಿಟ್ಟುಕೊಂಡಿದ್ದ ಒಂದು ಗಂಟು ಹೊರಗೆ ತೆಗೆದ. ಮೇಲೊಂದು ಚೀಟಿಕೊಟ್ಟು “ಮಠಕ್ಕ ಹೋಗು. ಅಲ್ಲೀ ಪೂಜರಿದ್ದಾನ್ನೋಡು, ಗಡ್ಡದಾಂವ, ಅವನ ಹಂತ್ಯಾಕ ಹೋಗಿ ಮುದುಕಪ್ಪ ಗೌಡ ಕಳಿಸ್ಯಾನಂತ ಹೇಳು. ನಿನ್ನ ಕರಕೊಂಡು ಹೋಗಿ ಅಣ್ಣಾ ಗುರೂಜೀಗಿ ಭೇಟಿ ಮಾಡಸ್ತಾನ, ಕೈಯಾಗ ಈ ಗಂಟಾ, ಚೀಟಿ ಕೊಡು, ನನ್ನ ಆಸೇ ಬಿಡಿರಿ, ಶಿವಾಪುರದ ಕಡೆ ಇನ್ನ ಎಂಟದಿನಾ ಬರಬ್ಯಾಡರಂತ ಹೇಳಿ ಬಾ ಹೋಗು” ಎಂದ. ಮುದುಕನ ದನಿ, ಕೊನೆಕೊನೆಗೆ ನಡುಗಿತು. ಭಾವುಕನಾಗಿ ಶಿವನಿಂಗನ ಕೈಹಿಡಿದು ಎದೆಗವಚಿಕೊಂಡು ಸ್ವಲ್ಪ ಹೊತ್ತು ಮಾತಿಲ್ಲದೆ ಕೂತ. ಅಳುತ್ತಿದ್ದ ಕೂಡ. ಶಿವನಿಂಗನ ಕೈಮೇಲೆ ಒಂದು ಹನಿ ಬಿಸಿ ಕಣ್ಣೀರು ಬಿತ್ತು. ಮುದುಕನ್ನ ಹ್ಯಾಗೆ ಸಮಾಧಾನ ಮಾಡಬೇಕೆಂದು ತಿಳಿಯದಾಯ್ತು. ತಾನು ಹೋಗುವುದಕ್ಕೆ ಅನುಮಾನ ಪಡುತ್ತಿದ್ದೇನೆಂದು ಅಂದುಕೊಂಡನೋ ಎಂದು “ಕಾಳಜೀ ಬಿಡೆಜ್ಜಾ ನಾ ಹೋಗತೀನಿ” ಅಂದ. ಮುದುಕ ಮಾತಾಡಲಿಲ್ಲ. ಶಿವನಿಂಗನನ್ನು ಹಾಗೆ ಬಾಚಿ ತಬ್ಬಿಕೊಂಡ. ಮುದಿಯೆತ್ತು ಕರುವಿನ ಮೈ ನೆಕ್ಕುವ ಹಾಗೆ ಬೆನ್ನಿನ ಮೇಲೆ ಬಹಳ ಹೊತ್ತು ಕೈಯಾಡಿಸಿದ. ಮುದುಕನ ಚಡಪಡಿಕೆ ನೋಡಿ ಇದೇನೊ ಮಹತ್ವದ ಕೆಲಸವೇ ಇರಬೇಕೆಂದುಕೊಂಡ. ಚೆಲ್ಲಿಕೊಂಡ ಹಾಗೆ ಸುಮ್ಮನೇ ಬಿದ್ದುಕೊಂಡ, ಅವನಿಗೆ ಸಮಾಧಾನವಾಗುವ ತನಕ.

“ಅಂಥಾಂಗ ನೀ ಮೊದಲ ಯಾಕ ಹೇಳಲಿಲ್ಲಾ?”

ಶಿವನಿಂಗ ಈಗಲೂ ಸುಮ್ಮನಾದ.

“ನಾನs ಹೋಂದಲ್ಲೊ ಅಂತ ಸಂಶೆ ಬಂತೇನ?”

ಮುದುಕ ಇನ್ನೂ ಮಾತಾಡುತ್ತಲೇ ಇದ್ದ. ‘ನಾ ಹೋಗತೀನೆಜ್ಜಾ’ ಎಂದು ಶಿವನಿಂಗ ಅವಸರ ಮಾಡಿದ. “ಹೂಂ ಈಗ ಹ್ವಾದರs ಪಾಡ. ನಾನೂ ಬರತಿದ್ದೆ. ಈ ಕಣ್ಣೊಂದಪಾ” ಎನ್ನುತ್ತಾ ತನ್ನ ಅಸಹಾಯಕತೆಯ ಬಗ್ಗೆ ಪರಿತಪಿಸಿದ. ಶಿವನಿಂಗನಿಗೆ ಈಗ ನೆನಪಾಯಿತು. ಮುದುಕನಿಗೆ ಇರುಳುಗಣ್ಣೆಂದು. ಎದ್ದು “ನಾ ಹೋಗ್ತೀನೆಜ್ಜಾ” ಎಂದು. ಮುದುಕನಿಗೆ ಏನು ತಿಳಿಯಿತೋ ತಾನೂ ಎದ್ದು ಶಿವನಿಂಗನನ್ನು ಮತ್ತೆ ತಬ್ಬಿಕೊಂಡು “ಪೋಲೀಸರು ಗಿಲ್ಲೀಸರು ಹುಶಾರಪಾ. ಕೊಟ್ಟವನs ಬಂದುಬಿಡು. ಕರಿಮಾಯಿ ಕಾಪಾಡತಾಳ ನೀ ಹೋಗಿ ಬಾ” ಎಂದು. ಶಿವನಿಂಗ ಸರ್ರನೇ ಮಾಯವಾದ.

# ತಗಲಿಕೊಂಡರು

ಇದರ ಪರಿಣಾಮವಾಗಿ ಹಿಂಡು ಹಿಂಡು ಪೊಲೀಸರು ಊರು ಹೊಕ್ಕರು. ಯಾವುದಕ್ಕೋ ಬಂದವರು ಇನ್ನ್ಯಾವುದಕ್ಕೋ ತಗಲಿಕೊಂಡರು.

ಮಾರನೇ ದಿನವೇ ಗುಡಸೀಕರ ಸರಿಕರೊಂದಿಗೆ ಬೆಳಗಾವಿಗೆ ಹೋದ ಮುಂದೆ ಎರಡು ಮೂರು ದಿನ ಬರಲೇ ಇಲ್ಲ. ಇಲ್ಲೀತನಕ ಹಿರಿಯರು ಚತುಷ್ಟಯರನ್ನು ಲೆಕ್ಕಕ್ಕೇ ಹಿಡಿದಿರಲಿಲ್ಲ. ಬಂದೊಡನೆ ಗುಡಸೀಕರನಿಂದ ಬೇರೆ ಇರೋದಕ್ಕೆ ತಾಕೀತು ಮಾಡಬೇಕೆಂದುಕೊಂಡರು. ಶಿವನಿಂಗನಿಗೆ ಹೆದರಿ ಊರುಬಿಟ್ಟಿದ್ದಾರೆಂದೇ ಜನ ಆಡಿಕೊಂಡರು.

ಗುಡಸೀಕರ ಚತುಷ್ಟಯರ ಸಮೇತ ಬಂದಿಳಿದ. ಆಶ್ಚರ್ಯವೆಂದರೆ ಒಬ್ಬರ ಕಣ್ಣ ಬಳಿಯೂ ಚಿಂತೆಯ ಗೆರೆಯಿರಲಿಲ್ಲ. ಸಾಲದ್ದಕ್ಕೆ ಗೆದ್ದವರಂತೆ ಹುಮ್ಮಸ್ಸಿನಿಂದಿದ್ದರು. ಕುದುರೆಗೆ ಹಿಂಸೆ ಮಾಡಿದ್ದು ಅವರಿಗೆ ಸಾಮಾನ್ಯ ವಿಷಯವಾಗಿತ್ತು. ನಿಂಗೂ ತಡೆಯದೆ ಕಳ್ಳನ ಬಳಿಹೋಗಿ "ಮೂಕ ಪ್ರಾಣೀನ್ನ ಹಾಂಗ ಬಡ್ಯಾಕೆ ತಿಳೀಲಿಲ್ಲೇನೊ? ತಡಿ, ನಿಮಗ ಗೌಡ್ರ ಬುದ್ಧಿ ಕಲಸ್ತಾರ" ಎಂದು ಹೇಳಿದಾಗ ಕಳ್ಳ "ಯಾರು ಯಾರಿಗಿ ಬುದ್ಧಿ ಕಲಸ್ತಾರ ನೋಡೀಯಂತ ತಡಿ" ಅಂದಿದ್ದ.

ಮಾರನೇ ದಿನ ಕೋಳಿ ಕೂಗಿ ಬೆಳಗಾಯಿತು. ಝುಮಝುಮು ಥಂಡಿಯ ದಿನಗಳಾದ್ದರಿಂದ ಜನ ಏಳುವುದು ತಡವೇ. 'ಕರಿಮಾಯೀ, ಎಂದು ಮೈಮುರಿದು ಕಣ್ಣು ತಿಕ್ಕುತ್ತ ಹೊರಗೆ ಬಂದರೆ – ರಸ್ತೆಗಳಲ್ಲಿ, ಸಂದಿಗೊಂದಿಗಳಲ್ಲಿ ಬಂದೂಕು ಹಿಡಿದ ಹಿಂಡು ಹಿಂಡು ಪೋಲೀಸರಿದ್ದರು!' ಧಸ್ ಎಂದು ಎದೆ ಹಿಡಿದುಕೊಂಡು 'ಕರಿಮಾಯೀ' ಎಂದವರೇ ಒಳಗೋಡಿ ಬಾಗಿಲಿಕ್ಕಿಕೊಂಡರು. ಇಷ್ಟೊತ್ತಿನಲ್ಲಿ ಊರಲ್ಲಿ ಉರಿಹಚ್ಚಿ ಕಾಸಿಕೊಳ್ಳುವ ಮಕ್ಕಳ ಗಲಾಟೆಯೇನು? ಕೋಳಿಗಳ ಕೂಗಾಟವೇನು, ಹುಡುಗಿಯರು ನೀರು ತರುವ ಸಡಗರವೇನು, ನೋಡುವ ಹುಡುಗರ ಚಡಪಡಿಕೆಯನು, ದೀಡೀ ಮಾತೇನು, ಧಿಮಾಕಿನ ಉತ್ತರಗಳೇನು, ಎಲ್ಲ ಸ್ತಬ್ಧವಾಗಿ ಒಲಗೊಳಗೇ ಪಿಸುಗುಟ್ಟಿ ನಿಟ್ಟುಸಿರಿನಲ್ಲಿ ಮಾತಾಡಿಕೊಂಡರು. ಯಾಕೆಂದು ಯಾರಿಗೂ ತಿಳಿಯದು. ಗೌಡನನ್ನೂ, ಶಿವನಿಂಗನನ್ನೂ ಹಿಡಿಸುವ ಸಲುವಾಗಿ ಗುಡಸೀಕರ ಪೋಲೀಸ್ ಪಾರ್ಟಿ ತಂದಾನೆಂದು ಊಹಿಸಿದರು.

ಇತ್ತ ಗೌಡನ ಮನೆಯನ್ನೂ, ತೋಟವನ್ನೂ, ಪೊಲೀಸರು ಸುತ್ತವರಿದಿದ್ದರು. ಬಾಗಿಲು ತೆರೆದೊಡನೆ ಮನೆ ತಲಾಶ್ ಮಾಡಿದರು. ಅಡಕಲ ಗಡಿಗೆ ಚೆಲ್ಲಿದರು. ಪೇರಿಸಿಟ್ಟ ಧಾನ್ಯದ ಚೀಲ ಚೆಲ್ಲಿದರು. ಅಡ್ಡಬಂದ ಶಿವನಿಂಗನನ್ನು ದೂಕಿ, ಅಟ್ಟದ ಮೇಲಿನ ಹೊಟ್ಟು ಕೆದರಿದರು. ಸುದೈವಕ್ಕೆ ಅಲ್ಲೇ ಇದ್ದ ಪೆಟ್ಟಿಗೆ ತೆರೆಯಲಿಲ್ಲ. ಅದರಲ್ಲಿ ಕರಿಮಾಯಿಯ ಬಂಗಾರದ ಮೂರ್ತಿಯಿತ್ತು. ಮೂಲೆ ಮೂಲೆಯ ಸಾಮಾನು ಚೆಲ್ಲಿ ಚೆಲ್ಲಾಪಿಲ್ಲಿ ದರೋಡೆಯಾದ ಮನೆಮಾಡಿ ಹೊರಗೆ ಹೋಗಿ ಮತ್ತೆ ಕಾವಲು ನಿಂತರು.

ಶಿವನಿಂಗ ತಂದೆಗೆ ಹೇಳಬೇಕೆಂದು ತೋಟಕ್ಕೋಡಿದರೆ ಅಲ್ಲೂ ಅದೇ ಹಾಡು, ಗುಡಿಸಲ ಹೊರಗಿನ ಹೊರಸಿನ ಮೇಲೆ ಪೋಜದಾರ ಕೂತಿದ್ದ. ಕಬ್ಬಿನ ಬೆಳೆ ಹೊಕ್ಕು, ಪೊಲೀಸರು ಹುಡುಕುತ್ತಿದ್ದರು. ಕೈ ಕೈ ಹೊಸೆಯುತ್ತ ಗೌಡ ನಿಂತಿದ್ದ. "ರೂಪಾಯಿ ಪಾಂಚ್ ಹಜಾರ್ ಬಹುಮಾನ ಕೊಡಸ್ತೇನ ಹೇಳ ಗೌಡಾ, ಕೊಳವಿ ಮುದುಕಪ್ಪನ್ನ ಎಲ್ಲಿಟ್ಟೀದಿ?" ಎಂದು ಪೋಜದಾರ ಗದರಿಸುತ್ತಿದ್ದ. "ನಂಗೊತ್ತಿಲ್ಲರೀ" ಎಂದು ಗೌಡ ಹೇಳುತ್ತಿದ್ದ.

ಕಟ್ಟೀ ಫೋಜದಾರನೆಂದರೆ ಆ ಭಾಗದಲ್ಲಿ ಭಾರೀ ಹೆದರಿಕೆಯ ಹೆಸರು. ಆ ಹುದ್ದೆ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಮರಾಯ, ಭಯಂಕರ ಹೆಸರು ಮಾಡಿಕೊಂಡಿದ್ದ. ಚಳುವಳಿಯ ಹದಿನೆಂಟು ಹುಡುಗರ ಕಣ್ಣುಕಿತ್ತು ಮೂವತ್ತಾರು ಕಣ್ಣುಗುಡ್ಡೆಗಳನ್ನು ಗೋಲಿಮಾಡಿ ಇಂಗರೇಜಿಯವರೊಂದಿಗೆ ಆಡಿದ್ದನಂತೆ. ಅವನ ರೂಪ ಇಂಥ ಕತೆಗಳನ್ನು ಸಮರ್ಥಿಸುವಂತಿತ್ತು. ಕರೀ ಮೈ, ದಟ್ಟ ಮೀಸೆ, ನೆಣಕೊಬ್ಬಿನ ಪೊಗರು, ತನಗೆ ಎಲ್ಲರೂ ಅಂಜಬೇಕೆಂಬ ಛಲ, ಮೂಗು ದಪ್ಪ; ಮುಖದಲ್ಲಿ ಕರು ಮಲಗಿದಂತೆ. ಆದ್ದರಿಂದ ಆ ಮೂಗಿಗೆ ತುದಿಯಿಂದ

ನೋಡಿದರೆ ಉಳಿದವರು ಅಲ್ಪರಾಗಿ ಇಲ್ಲವೇ ಅಸ್ಪಷ್ಟವಾಗಿ ಕಣಿಸುವುದು ಸ್ವಾಭಾವಿಕ. ಇವ ಕಾಲಿಟ್ಟ ಊರುಗಳಲ್ಲಿ ಇವನ ಖ್ಯಾತಿ ಹ್ಯಾಗೆ ಹಬ್ಬಿತ್ತೆಂದರೆ ಅಳುವ ಮಕ್ಕಳಿಗೆ ತಾಯಂದಿರು "ಕಟ್ಟಿ ಪೋಜದಾರನ ಕೈಯಾಗ ಕೊಡ್ತಿನ್ನೋಡ" ಎಂದು ಹೆದರಿಸುತ್ತಿದ್ದರಂತೆ! ಅದು ನಿಜವಿದ್ದೀತು; ಯಾಕೆಂದರೆ ಆ ಕರೀಮುಖದಲ್ಲಿ ಅವರ ಬಾಯಿ, ಕಣ್ಣು ಮಾತ್ರ ರಂಗು ಹೊಡೆದಂತೆ ಅಚ್ಚಕೆಂಪಗಿದ್ದವು. ಹೊಸದಾಗಿ ಫೋಜದಾರನಾಗಿದ್ದನಲ್ಲ, ತನ್ನ ಟೊಪ್ಪಿಗೆಯ ಧೂಳನ್ನು ಮೇಲಿಂದ ಮೇಲೆ ಕೊಡಹುತ್ತಿದ್ದ. ಅಷ್ಟೇ ಅಲ್ಲ – ಕಾಲ್ನಡಿಗೆ, ಹೊರಕಡೆಗೆ ಹೊರಟಾಗೆಲ್ಲ ಆ ಟೊಪ್ಪಿಗೆ ತೆಗೆದು ಒಬ್ಬ ಪೋಲಿಸನ, ಕೈಗಿತ್ತು ಬಕ್ಕದಲೆಯಲ್ಲೇ ಹೋಗುತ್ತಿದ್ದ.

ಗುಡಸೀಕರ ಹಿಂದುಮುಂದಿನ ಕಬರಿಲ್ಲದೆ ಮುದುಕಪ್ಪ ಗೌಡನನ್ನು ಹಿಡಿದುಕೊಡುವ ಸೂಚನೆ ಕೊಟ್ಟೊಡನೆ ಅಕಾ ನನ್ನ ಪ್ರಿಯ ಟೊಪ್ಪಿಗೆಗೆ ಒಂದು ತುರಾಯಿ ಬಂತೆಂದು ಬಂದ. ಇಡೀ ದಿನ ಎಲ್ಲಿಯೂ ಮುದುಕಪ್ಪನ ಪತ್ತೆಯಾಗಲಿಲ್ಲ. ಅವನ ಫೋಟೋ ತೋರಿಸಿ ಇವನನ್ನು ಕಂಡೀರೇನೆಂದು ಅನೇಕರನ್ನು ಕೇಳಲಾಯಿತು. ಬೆದರಿಕೆ ಹಾಕಿ ನೋಡಿದರು. ಬಹುಮಾನದ ಆಸೆ ಹಚ್ಚಿ ನೋಡಿದರು. ಎಲ್ಲರೂ ನಾ ಕಂಡಿಲ್ಲ. ನೀ ಕಂಡಿಲ್ಲ. ಕಂಡವರ ಕಣ್ಣು ಕಳೆಯಲೆಂದು ಕರಿಮಾಯಿಯ ಹೆಸರುಗೊಂಡರು ಕೆಲವರು.

ತನಗೂ, ಫೋಜುದಾರನ ಈ ದಾಳಿಗೂ ಸಂಬಂಧವಿಲ್ಲವೆಂಬಂತೆ ಗುಡಸೀಕರ ನಟಿಸಿದ. ಆದರೆ ಮುಚ್ಚಿಕೊಳ್ಳಲು ಸಾಧ್ಯವಾಗಲಿಲ್ಲ. ಆ ಮಧ್ಯಾಹ್ನ ಪೋಲೀಸರಿಗೆ ಗೌಡನ ಮನೆಯಲ್ಲಿ ಊಟವಾದರೆ ಫೋಜುದಾರನಿಗೆ ಗುಡಸೀಕರನ ಮನೆಯಲ್ಲಿ ವ್ಯವಸ್ಥೆಯಾಯಿತು. ಜನ ಮನಸ್ಸಿನಲ್ಲೇ ಅವನನ್ನು ಶಪಿಸಿದರು. ಕರಮಾಯಿಯ ಮೊರೆಹೊಕ್ಕರು.

## ಬೆಕ್ಕಿನ ಬೆದೆ

ನಿಜ ಹೇಳಬೇಕೆಂದರೆ ಕೊಳವಿಯ ಮುದುಕಪ್ಪ ಗೌಡನನ್ನು ಇತ್ತೀಚೆಗೆ ಯಾರೂ ನೋಡಿರಲಿಲ್ಲ. ಗೌಡನೊಂದಿಗೆ ಅವನ ನಂಟುತನವಿದ್ದುದೇನೋ ಜನರಿಗೆ ಗೊತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಮುದುಕಪ್ಪ ಗೌಡ ಒಮ್ಮೆ ಕೂಡ ಶಿವಾಪುರದ ಕಡೆ ಸುಳಿದಿರಲಿಲ್ಲ; ಆತ ಬಂದು ಗೌಪ್ಯವಾಗಿಯೇ ಗೌಡನ ಮನೆಯಲ್ಲಿದ್ದದ್ದು ಗೌಡ, ದತ್ತಪ್ಪ, ಶಿವಸಾನಿ, ಲಗಮವ್ವ ಈ ನಾಲ್ವರಿಗಲ್ಲದೆ ಬೇರೆ ಯಾರಿಗೂ ಗೊತ್ತಿರಲಿಲ್ಲ. ಆದರೆ ಸುಂದರಿ ಪತ್ತೆಹಚ್ಚಿದ್ದು ಇವರಿಗೆ ಗೊತ್ತಿರಲಿಲ್ಲ. ಇದು ಗುಡಸೀಕರನ ಸಂಚೆಂದು ತಿಳಿದಾಗಂತೂ ಗೌಡ, ದತ್ತಪ್ಪ ಹೊತ್ತಿಕೊಂಡುರಿದರು. ಶಿವನಿಂಗನನ್ನು ಮೊನ್ನೆ ತಡೆಹಿಡಿದದ್ದು ತಪ್ಪಾಯಿತೆಂದರು. ಇದೊಂದು ಸಲ ಪಾರಾದರೆ ನೆನಪಿಟ್ಟುಕೊಳ್ಳುವ ಹಾಗೆ ಬುದ್ಧಿ ಕಲಿಸಬೇಕೆಂದರು. ಆ ದಿನ ತಾಯಿ ದೇವರೇಸಿಯ ಮೈತುಂಬಿ ಬಿಕ್ಕಳಿಸಿದಳಂತೆ. ಹೋಗಿ ಕಾಲು ಹಿಡಿಯಲಿಕ್ಕೂ ಸಾಧ್ಯವಾಗದೇ ಹೋಯ್ತು. ಪೋಲೀಸರು ಗೌಡ, ದತ್ತಪ್ಪ ಇಬ್ಬರ ಮೇಲೂ ಕಾವಲಿದ್ದರು. ತಾಯಿ ಏನು ಹೇಳಲಿದ್ದಳೋ ಅವಳ ವಾಕ್ಯಕ್ಕೂ ಎರವಾದರು.

ಇತ್ತಲಾಗಿ ಗುಡಸೀಕರನ ಸಂತೋಷ ಬಹಳ ಹೊತ್ತು ಉಳಿಯಲಿಲ್ಲ. ಸೇಡಿನ ಉದ್ರೇಕದಲ್ಲಿ ಬಸವರಾಜನಿಗೆ ಹಗ್ಗಾ ಕೊಟ್ಟು ಕೈಕಟ್ಟಿಸಿಕೊಂಡಂತಾಗಿತ್ತು. ಇಲ್ಲದಿದ್ದರೆ ಗಾಂಧೀಜಿಯ ಪರಮ ಭಕ್ತನಾಗಿ, ಸ್ವಾತಂತ್ರ್ಯ ಹೋರಾಟಗಾರರನ್ನೇ ಕೈಯಾರೆ ಕೊಡಲೊಪ್ಪಿ ದೇಶದ್ರೋಹ ಮಾಡುವುದೆಂದರೇನು? ಬೆಳಗಾವಿಯಲ್ಲಿದ್ದಾಗ ಚಳುವಳಿ ಸೇರಬೇಕೆಂದದ್ದು ಸುಳ್ಳೆ? ಗಾಂಧೀಜಿಯ ಸಲಹೆಯಂತೆ ಹಳ್ಳಿಗೆ ಬಂದದ್ದು ಸುಳ್ಳೆ ಸುಳ್ಳೇನು? ಶಿವಾಪುರದಲ್ಲಿ ಚಳುವಳಿಯ ಹುಡುಗರಿದ್ದಿದ್ದರೆ ಇವನೇ ಮುಂದಾಳಾಗುತ್ತಿದ್ದ. ತಾನು ಹಲ್ಕಟ್ಟ ದಂಧೆ ಮಾಡಿದೆನೆಂದು ತಿಳಿದದ್ದು ಫೋಜದಾರ ಊಟಕ್ಕೆ ಬಂದಾಗ.

ಊಟಕ್ಕೆ ಕೂತಿದ್ದರಲ್ಲ, ಓಡಾಡಿ ನಿಡುತ್ತಿದ್ದ ಗಿರಿಜಾಳನ್ನು ತೋರಿಸಿ ಪೋಜದಾರ ಇವನ ಕಂಕುಳಕ್ಕೆ ಕೈಹಾಕಿ ಕಣ್ಣು ಮಿಟುಕಿಸಿ "ಗೊಂಬ್ಯಾಗ್ಯಾಳಲ್ಲಾ!"ಎಂದ. ಇವನ ಪಿತ್ಥ ನೆತ್ತಿಗೇರಿತು. ತಡಕೊಂಡು "ಆಕಿ ನನ್ನ ತಂಗಿ" ಎಂದ. ಫೋಜುದಾರ ನಂಬಲಿಲ್ಲ. ಗುಡಸೀಕರ

ತನ್ನ ತಂಗಿಯನ್ನು ಸರಿಯಾಗಿ ಗಮನಿಸಿದ್ದು ಈಗಲೇ ಎಂದು ತೋರುತ್ತದೆ. ಎದೆ ಮೀರಿ ಬೆಳೆದಿದ್ದಳು. ಕುಬಸ ತೊಟ್ಟು ಒಳಗೆ ಬಾಡಿ ಹಾಕಿದ್ದಳು. ಜೋಡು ಹೆಳಲು ಹಾಕಿ ಟೇಪು ಕಟ್ಟಿದ್ದಳು. ನೋಡಿದವರು ಇವಳು ಹಳ್ಳಿಯವಳೆಂದು ಹೇಳುವುದು ಸಾಧ್ಯವೇ ಇರಲಿಲ್ಲ. ಅವಳ ಮೇಲೂ ಸಿಟ್ಟುಬಂತು. ಪೋಜದಾರ ಕೆಂಪು ಕಣ್ಣರಳಿಸಿ ಬೆವರು ಸುರಿಸುವ ಕರೀ ಕೆನ್ನೆಗಳನ್ನು ಕುಣಿಸುತ್ತ ಅನ್ನದ ಅಗಳಗಂಟಿದ ಬಿಳೀ ಹಲ್ಲುಗಳಲ್ಲಿ ನಗುತ್ತ "ಸುಳ್ಳ ಯಾಕ ಹೇಳ್ತಿಯೋ? ಇಂಥಾ ಕೇಸದಾಗ ನಾ ಮುಳುಗಿ ಮುಳುಗಿ ಎದ್ದಾಂವ" ಅಂದ. ಈಗ ಗುಡಸೀಕರನ ಮುಖ ನೋಡಬೇಕಿತ್ತು. ಸಿಟ್ಟು ತಹಬಂದಿಗೆ ತರಲಾರದೆ ತಾಮ್ರದ ತಪ್ಪಲೆಯಂತೆ ಮುಖಮಾಡಿ "ಸಾಹೇಬರ ಒಬ್ಬರ ಮನೀಗಿ ಬಂದಾಗ ಇಂಥಾ ನಡತಿ ಚಿಲೋ ಅಲ್ಲರಿ" ಅಂದ.

ಫೋಜುದಾರನಿಗೂ ಸಿಟ್ಟುಬಂತು. "ನನಗೆ ನಡತಿ ಕಲಸ್ತೀಯೇನೋ? ಬೆಳಗಾವಿ ಚಿಮಣಾನ ನೀ ತಂದಿಟ್ಟುಕೊಂಡಿದ್ದ ನಂಗೊತ್ತಿಲ್ಲಂದಿ?"

ಊಟವಾದ ಮೇಲೆ ಮನಸ್ಸಿಲ್ಲದಿದ್ದರೂ ಪೋಜದಾರನ ಮಲಗುವ ವ್ಯವಸ್ಥೆಯನ್ನು ಮಹಡಿಯ ಮೇಲೆ ಮಾಡಬೇಕಾಯಿತು. ಗುಡಸೀಕರನ ತಡೆದಿಟ್ಟ ಸಿಟ್ಟು ಬಸವರಾಜನ ಮೇಲೆ ಹರಿಹಾಯಿತು. ನಿನ್ನ ಮಾತು ಕೇಳಿ ಇಡೀ ಊರಿಗೆ ನಿವಾಳಿಯಾಗುವ ಪ್ರಸಂಗ ಬಂತು. ಹೆರವರ್ಯಾರೋ, ತನ್ನವರ್ಯಾರೋ ಹೋ ಎಂದು ಹಾರಾಡಿದ. ಮಾತಿಗೆ ಅವಕಾಶ ಕೊಟ್ಟು ಆಮೇಲೆ ಬಸವರಾಜು, ತನ್ನ ಸಹಜ ಬುದ್ಧಿವಂತಿಕೆ ಬಿಚ್ಚಿದ. ಫೋಜದಾರ ನೀಚನೇ, ಇನ್ನೇನು ಸಜ್ಜನನಾಗಿರಬೇಕೆ? ನಮ್ಮ ಕೆಲಸ ಮುಖ್ಯ. ಮುದುಕಪ್ಪನ ಜವಾಬ್ದಾರಿ ನನಗಿರಲಿ. ಈಗ ಇದನ್ನೋದು ತಿಳೀಯುತ್ತದೆ; ನಾ ಯಾರೆಂದು ಎನ್ನುತ್ತ ಕಿಸೆಯಲ್ಲಿಯ ಒಂದು ಕಾಗದ ತೆಗೆದ.

ಅದು ಮೆಹರ್ಬಾನ ಪೋಜದಾರ ಸಾಹೇಬರ ಪಾದಾರವಿಂದಕ್ಕೆ ಚಿಮಣಾ ಸುಂದರಬಾಯಿ ಬರೆದ ವಿನಂತಿಯ ಅರ್ಜಿಯಾಗಿತ್ತು. ಗೌಡ, ಗೌಡನ ಮಗ, ಶಿವನಿಂಗ, ಇಬ್ಬರೂ ಸೇರಿ ತನ್ನನ್ನು ಬಲಾತ್ಕರಿಸಿ ಬಸಿರು ಮಾಡಿದ್ದಾರೆಂದೂ, ತನ್ನ ಹಾಗೂ ಗರ್ಭದ ಕೂಸಿನ ಜೀವನೋಪಾಯಕ್ಕೆ ಆಧಾರ ಮಾಡಬೇಕೆಂದೂ ಚಿಮಣಾ ಕೈಮುಗಿದು ಕೋರಿದ್ದಳು. ಕೆಳಗೆ ಸದರಿ ಅರ್ಜಿದಾರಳ ಸಹಿ ಇತ್ತು. ಶಿವನಿಂಗನ ಹೆಸರೂ ಸೇರಿದ್ದಕ್ಕೆ ಗುಡಸೀಕರನ ಸೇಡಿನ ಹೆಡೆಯಾಡಿ ಸೈಯೆನಿಸಿತು. ಬಾಕಿ ತಾನು ನೋಡಿಕೊಳ್ಳುವುದಾಗಿ ಬಸವರಾಜು ಬಲಗೈ ಭಾಷೆಕೊಟ್ಟ.

ಫೋಜುದಾರ ಏಳುವ ಸಮಯಕ್ಕೆ ಸರಿಯಾಗಿ ಬಸವರಾಜು ಹೋದ. ಹತ್ತುಸಲ ಹಲ್ಲು ಗಿಂಜಿ ಅರ್ಜಿಕೊಟ್ಟ. ಮುದುಕಪ್ಪ ಗೌಡ ಸಿಕ್ಕದಿದ್ದ ನಿರಾಸೆಯಲ್ಲಿದ್ದ ಕಟ್ಟಿ ಸಾಹೇಬರ ಕಣ್ಣು ಪಳ ಪಳ ಹೊಳೆದವು. ಹೆಣ್ಣಿನ ಕೇಸುಗಳೆಂದರೆ ಅವರಿಗೆ ಪಂಚಪ್ರಾಣ. ಊಟಕ್ಕೆ ಕೂತಿದ್ದಾಗ ಚಿಮಣಾಳಂಥವರನ್ನು ನೋಡಿದ್ದ ಬೇರೆ. ಅರ್ಜಿಯನ್ನು ಕೆಳಗಿನ ಚಿಮಣಾಳಿಗೆ ಕೇಳಲೆಂಬಂತೆ ಜೋರಿನಿಂದ ಓದಿದ. ಕೆಳಗಡೆ ಕಟ್ಟೆಯ ಮೇಲೆ ನಿಂಗೂ ಕೂತಿದ್ದವನು ಕೇಳಿ ಗೌಡನ ಮನೆಯ ಕಡೆಗೋಡಿದ.

ರಾತ್ರಿ ಖಾವಂದ ಕಟ್ಟಿ ಪೋಜದಾರ ಸಾಹೇಬ ದರ್ಬಾರು ಕರೆದ. ಹಿರಿಯರು ಬಂದರು. ಕೈಯಲ್ಲಿಯ ಕೋಲನ್ನು ಅತ್ತಿತ್ತ ಆಡಿಸುತ್ತ ಪೋಜದಾರ "ಸುಂದರಾ ಬಾಯೀನ ಕರಸು" ಎಂದ. ಗೌಡನಿಗೆ ಸುಂದರಾಬಾಯಿ ಯಾರೆಂದು ತಿಳಿಯಲಿಲ್ಲ. ಊರಿನಲ್ಲಿ ಆ ಹೆಸರಿನವರು ಯಾರೂ ಇದ್ದಂತಿರಲಿಲ್ಲ. ಅನುಮಾನಿಸುತ್ತ "ಯಾವ ಸುಂದರಾಬಾಯಿ?" ಎಂದು ಹೇಳುತ್ತಿರುವಂತೆಯೇ ದತ್ತಪ್ಪ "ಅದ, ಗುಡಿಸ್ಯಾ ತಂದಿಟ್ಟು ಕೊಂಡಾನಲ್ಲ. ಚಿಮಾಣಾ" ಎಂದ. ಅವಳನ್ನು ಕರೆತರಲು ಹಳಬ ಓಡಿದ, ವಿಷಯವೇನೆಂದು ಗೌಡ, ದತ್ತಪ್ಪ ಇಬ್ಬರಿಗೂ ಹೊಳೆಯಿತು. ಸುಂದರಿ ಬಸಿರಾದ್ದನ್ನು ಯಾರೋ ಮೂಕರ್ಜಿ ಮಾಡಿ ತಿಳಿಸಿದ್ದು ಖಾತ್ರಿಯಾಯ್ತು. ಗೌಡನಿಗೆ ಇದ್ದದ್ದೂ ದಿಗಿಲು. ಹಾಗೇನಾದರೂ ಬಂದಿದ್ದರೆ ನಮ್ಮ ನಾವೆ ತೀರಿಸಿಕೊಳ್ಳಬಹುದಾಗಿತ್ತು. ಯಾವ ಚಂಡಾಲರು ಮೂಕರ್ಜಿ ಕೊಟ್ಟಿದ್ದಾರೋ ಎಂದು ಗೌಡ ಚಿಂತಿಸಿದರೆ ದತ್ತಪ್ಪನಿಗೆ ಒಳಗೊಳಗೇ ಖುಷಿಯಾಗಿತ್ತು. ಗುಡಿಸ್ಯಾ ಇದರಿಂದಾದರೂ ಹಣ್ಣಾಗುತ್ತಾನಲ್ಲಾ ಎಂದು. ಅಷ್ಟರಲ್ಲಿ ಗುಡಸೀಕರ ಚತುಷ್ಟಯರೊಂದಿಗೆ ಬಂದ. ಅವನ ನಿರ್ಮಲ ಮುಖನೋಡಿ ದತ್ತಪ್ಪನಿಗಿನ್ನೂ ನಗೆ ಬಂತ. ದೂರದಲ್ಲಿ ಜನ ಗುಂಪಾಗಿ ನಿಂತಿದ್ದರು, "ಸುಂದರಬಾಯಿ ಬರಲಿಲ್ಲೇನು?" ಎಂದು ಪೋಜದಾರ ಗುಡುಗಿದ. ಸುಂದರಿ ಆಗಲೇ ಬಂದಿದ್ದಳು. ಆದರೆ ಯಾರೂ ಗಮನಿಸಿರಲಿಲ್ಲ. ಜನಗಳಲ್ಲಿ ನಿಂತಿದ್ದ ಬಸವರಾಜೂನನ್ನು

ಗುಡಸೀಕರ ಕರೆದು ಚಾವಡಿಯಲ್ಲಿ ಅವನಿಗಿಷ್ಟು ಕೂರಲು ಸ್ಥಳ ಕೊಟ್ಟ. ಸುಂದರಿ ಬಂದುದನ್ನು ತಿಳಿಸದವನೂ ಗುಡಸೀಕರನೇ, ''ಶಿವನಿಂಗ ಅಂಬಾಂವೆಲ್ಲಿ?'' ಎಂದು ಪೋಜದಾರ ಗುಡುಗಿದ. ಹಳಬ ಮತ್ತೆ ಓಡಿದ. ಶಿವನಿಂಗನಿಗಾಗಿ ಕಾಯದೆ ವಿಚಾರಣೆ ಸುರುವಾಯ್ತು. ಪೋಜುದಾರನ ಮೊದಲನೇ ನುಡಿಗೇ ಎಲ್ಲರಿಗೂ ಆಘಾತವಾಯ್ತು.

"ಏನೋ ಗೌಡಾ, ಊರಿಗಿ ಹಿರ್ಯಾ ಆಗಿ ನೀನs ಇಂತಾ ಹಲಕಟ್ ದಂಧಾ ಮಾಡೋದಾ?''

"ಯಾಕ? ಏನಾತ್ರಿ?''

"ಅರೇದವನ್ಹಾಂಗ ಆಡಬ್ಯಾಡ. ಚಿಮಣಾ ಬಯೀನ ನೀನೂ, ನಿನ್ನ ಮಗ ಕೂಡಿ ಬಸರ ಮಾಡಿದ್ದ ಎಷ್ಟು ದಿನ ಮುಚ್ಚಿಟ್ಟಕೋಬೇಕಂತಿದ್ದಿ?''

ಈ ಮಾತು ಕೇಳಿ ಎಲ್ಲರಿಗೂ ಅಸಮಾಧಾನವಾಯ್ತು. ಕುಸ್ತಿ ಹುಡುಗರಾಗಲೇ ಕುದಿಯ ತೊಡಗಿದ್ದರು. ಗೌಡ ಬಾಯಿ ತೆಗೆಯುವುದರೊಳಗೆ ದತ್ತಪ್ಪನೇ ಮಾತಾಡತೊಡಗಿದ.

"ಏನಂಬೋ ಮಾತರಿ ಇದು? ಕರಕೊಂಬಂದಾಂವ ಗುಡಿಸ್ಯಾ. ಗೌಡರಿಗಿ ಆಕೀ ಹೆಸರ ಸೈತ ಗೊತ್ತಿಲ್ಲ. ಬಸರ ಮಾಡೋದಂದರೇನ್ರಿ?''

"ನಡುವ ಬಾಯಿ ಹಾಕಾಕ ನೀ ಯಾರಲೆ?''

ಸಿಟ್ಟು ಎಲ್ಲರ ನೆತ್ತಿಗೇರಿತು. ಪೋಜುದಾರನಿಗೆ ಇನ್ನೂ ಹೆಚ್ಚು. ತನ್ನ ಗಡಸುದನಿಗೆ ಅಧಿಕಾರದ ಮದ ಬೆರೆಸಿ, ಮಾತಿಗೊಮ್ಮೆ ಲೇ ಎನ್ನುತ್ತ ಒದರಾಡತೊಡಗಿದ. ''ಗೌಡ ಮಾಡಿಲ್ಲದೇ ಹೋದಲ್ಲಿ ಸ್ವಥಾ ಅರ್ಜಿ ಯಾಕ ಹಾಕಲಿಲ್ಲ?'' ಅಂದ. ''ಪರವೂರವಳ ಬಗ್ಗೆ ತಾ ಯಾಕೆ ಅರ್ಜಿ ಹಾಕಬೇಕೆಂದು'' ಗೌಡ ಕೇಳಿದ. ''ಪರವೂರದವಳಾದ ಮಾತ್ರಕ್ಕೆ ಅನ್ಯಾಯ ಆಗಬಹುದೋ'' ಎಂದು ಪೋಜದಾರ ಕೇಳಿದ. ''ಅದು ಕರೆತಂದವರ ಜವಾಬ್ದಾರಿ'' ಎಂದು ಗೌಡ ಹೇಳಿದ. ''ಅವಳನ್ನು ಕರೆತಂದವರ್ಯಾರು, ಆಕೆ ಜೊತೆ ವ್ಯವಹಾರ ಇದ್ದವರ್ಯಾರು ಅಂತ ಊರಮತೂರು ಗೊತ್ತಿದ್ದ ವಿಚಾರ. ವಿಚಾರಿಸಬಹುದಲ್ಲ'' ಎಂದು ದತ್ತಪ್ಪ ಹೇಳಿದ. ಇಷ್ಟೆಲ್ಲ ಮಾತು ಚಕಮಕಿಯ ಕಿಡಿಯಂತೆ ಹಾರಿ ಹೋಗುತ್ತಿದ್ದರು. ತನ್ನ ಕೈಕೆಳಗಿನ ಗೌಡ ಕುಲಕರ್ಣಿಗಳಿಂದ ಈ ರೀತಿಯ ಅವಧೇಯತೆಯನ್ನು ಪೋಜದಾರ ನಿರೀಕ್ಷಿಸಿರಲಿಲ್ಲ. ಮುಖದ ಮೇಲೆ ಸ್ಪಷ್ಟವಾಗಿ ಮಾತಾಡತೊಡಗಿದ್ದರು. ಪೋಜದಾರನಿಗೆ ತನ್ನ ಮೀಸೆ ಬೋಳಿಸಿ ಕೈಗಿಟ್ಟಷ್ಟು ಅವಮಾನವಾದಂತಾಗಿತ್ತು. ಬುಸುಗುಡಲಾರಂಭಿಸಿದ. ''ನೀನೇನಂತಿ?'' ಎಂದು ಗುಸೀಕರನತ್ತ ತಿರುಗಿದ. ಗುಡಸೀಕರ ಎದ್ದು ಚಾವಡಿಯ ಮಧ್ಯೆ ಬಂದು,

"ಮೆಹರ್ಬಾನ್ ಪೋಜದಾರ ಸಾಹೇಬರೇ, ಊರ ಹಿರಿಯರೆ, ಅಣ್ಣ ತಮ್ಮಂದಿರೆ, ಅಕ್ಕ ತಂಗಿಯರೆ...''

ಎಂದು ಭಾಷಣ ಸುರುಮಾಡಿದ. ಪೋಜದಾರನಿಗೆ ವಿಶ್ರಾಂತಿ ಬೇಕಿತ್ತೆಂದು ತೋರುತ್ತದೆ. ಅವನನ್ನು ತಡೆಯಲಿಲ್ಲ. ಇನ್ನು ಗುಡಸೀಕರನನ್ನು ತಡೆಯುವವರ್ಯಾರು? ಅದೇ ಗೊತ್ತಲ್ಲ. ''ಇಂಡಿಯಾ ದೇಶ ಹಳ್ಳಿಗಳ ದೇಶದಿಂದ ಸುರುವಾಗಿ ಪಂಚಯ್ತಿಯವರೆಗೆ ಬಂದು, ತಾನು ಊರು ಮುಂದೆ ತರೋದಕ್ಕೆ ಪ್ರಯತ್ನಿಸಿದ್ದು, ಹಿರಿಯರು ಅವನ ಕಾಲಹಿಡಿದು ಹಿಂದೆಳೆದದ್ದು, ಪಂಚಾಯ್ತಿ ಹಿಂದಿರುಗಿಸಲೆಂದು ಕೇಳಿದ್ದು, ಎಲೆಕ್ಷನ್ ಆಗಲೆಂದು ತಾ ಹೇಳಿದ್ದು... ಇತ್ಯಾದಿ ಇತ್ಯಾದಿ. ಪೋಜದಾರನ ತಾಳ್ಮೆ ತಪ್ಪಿ ''ಲಗು ಮುಗಸಪಾ'' ಎಂಬ ಸೂಚನೆ ಬಂತು ''ತನ್ನನ್ನು ಎಲೆಕ್ಷನ್ನಿನಲ್ಲಿ ಸೋಲಿಸೋದಕ್ಕೆ ಗೌಡ ಇಂಥ ಅಪವಾದ ತನ್ನ ಮೇಲೆ ಹೊರಿಸುತ್ತಿದ್ದಾನೆ ಎಂದು ಹೇಳಿದ. ಕೂಡಿದವರು ತಂತಮ್ಮಲ್ಲಿ ತಲೆಗೊಂದು ಮಾತಾಡಿಕೊಂಡರು. ಬೇಕಾದರೆ ಪೋಜದಾರನೇ ಇವರನ್ನು ನಿಯಂತ್ರಿಸಲೆಂದು ಗೌಡ ಸುಮ್ಮನಾದ. ದತ್ತಪ್ಪನೂ ಸುಮ್ಮನುಳಿದ. ಅಷ್ಟರಲ್ಲಿ ಕುಡಿದ ಮಂದಿಯೊಳಗಿಂದ ನಿಂಗೂ ಜಿಗಿದು ಬಂದು ಪೋಜುದಾರನ ಎದುರು ನಿಂತ. ಒರಟು ದನಿಯ ಹೆಣ್ಣು ವೇಷದ ಇವನನ್ನು ನೋಡಿ ಆ ಬಿಗಿ ವಾತಾವರಣದಲ್ಲೂ ಪೋಜುದಾರನಿಗೆ ಮೋಜೆನಿಸಿತು. ಆವೇಶ ಬಂದವನಂತೆ ಎತ್ತರದ ದನಿಯಲ್ಲಿ''

ಅಲ್ಲಪಾ ಸರಪಂಚಾ, ನೀನs ಆಕಿನ್ನ ತಂದ ಇಟ್ಟಕೊಂಡಿದೀ. ದಿನಾ ಆಕೀ ಸೀರೀ ಸೆರಗಿನ್ಯಾಗ ಉಳ್ಯಾಡತಿ, ಗೌಡ್ರ ಬಸರ ಮಾಡ್ಯಾರಂತ, ಹೇಳಾಕೆ ಬಂದಿ. ಮ್ಯಾಲ ಶಿವನಿಂಗನ ಹೆಸರೂ ಸೇರಿಸಿದಿ. ಇಳೀಬಾರದ? ಯಾರಾದರೂ ನಂಬೂ ಮಾತs ಇದು? ನೋಡೋಣು, ಈ ಮಂದ್ಯಾಗ ಒಬ್ಬರ ಯಾಯಾಗಾದರೂ ಈ ಮತ ಹೋಂಡಸು, ಗಂಡಸಂತೀನಿ.''

ಅಂದ. ಇಂಥ ಮಾತನ್ನು ಗುಡಸೀಕರ ಮೊದಲೇ ನಿರೀಕ್ಷಿಸಿದ್ದನೆಂದು ತೋರುತ್ತದೆ. ''ಯಾರ ಬಾಯಾಗ ಯಾಕ ಹೊಂಡಸಬೇಕೊ? ಆಕೀ ಗೌಡನ ತೊಡೀಮ್ಯಾಲ ತಲೀ ಇಟ್ಟ ಮಲಗದ್ದ ಖುದ್ದ ನಾನs ನೋಡೀನಿ. ಬೇಕಂದರ ಕೇಳ ಬಸವರಾಜೂನ.''

ಓತಿಕ್ಯಾತಿಗೊಂದು ಬೇಲೀ ಸಾಕ್ಷಿ. ಈಗ ಗೌಡ ಬಾಯಿಬಿಡಲೇ ಬೇಕಾಯಿತು. ಎದ್ದುನಿಂತು ಫೋಜುದಾರನ ಕಡೆಗೊಮ್ಮೆ, ಜನರ ಕಡೆಗೊಮ್ಮೆ ಮುಖಮಾಡಿ, ಆಗಾಗ ಎರಡೂ ಕೈ ಜೋಡಿಸುತ್ತ, ಅಂದಿನ ಘಟನೆಯನ್ನು ವಿವರಿಸತೊಡಗಿದ. ಗೌಡನಿಗೆ ಈ ರೀತಿ ತಡೆಯುವ ಅವಕಾಶ ಕೊಡುವುದು ಗುಡಸೀಕರನಿಗೆ ಬೇಕಿರಲಿಲ್ಲ. ಫೋಜದಾರ ಗೌಡನನ್ನು ತಡೆಯುವ ಗೋಜಿಗೆ ಹೋಗಲೇ ಇಲ್ಲ. ಗೌಡನ ಪ್ರತಿ ಮಾತಿಗೂ ಸತ್ಯದ ಹೊಳಪಿತ್ತು, ಹರಿವಿತ್ತು. ಸತ್ಯವೇ ಹಾಗೆ. ಜನರ ಕಣ್ಣಲ್ಲಂತೂ ಗುಡಸೀಕರ ಪುಡಿ ಪುಡಿಯಾಗಿಬಿಟ್ಟ. ಆಗಾಗ ತಡೆಯುವುದಕ್ಕೆ ಯತ್ನಿಸಿ ಸೋತ. ಗೌಡ ಕೊನೆಗೆ –

''ನೋಡ್ರಿ, ಸಾಹೇಬರ ಆದದ್ದ ಹಿಂಗ. ಈ ಮಾತಿಗೆ ಎರಡಿದ್ದರ ಕರಿಮಾಯಿ ನನ್ನ ನಾಲಿಗೆ ಸೀಳಲಿ. ಬೇಕಾದರ ದತ್ತೂನ ಕೇಳ್ರಿ. ಲಗಮವ್ವನ ಕೇಳ್ರಿ. ಗುಡಿಸ್ಯಾನ ಮ್ಯಾಲ ನಮಗ್ಯಾಕ್ರಿ ಸಿಟ್ಟು ಬರಬೇಕು! ಸಿಟ್ಟಿದ್ದರ ನಾವs ಕರದ ಪಂಚಾಯ್ತಿ ಅವನ ಕೈಯಾಗಿಡತಿದ್ದವ?''

ಎಂದ. ಇದನ್ನು ಕೇಳಿ ಮಂದಿಯ ಅಂಚಿಗಿದ್ದ ಲಗಮವ್ವನೇನು ಅನೇಕರು ಕರಗಿ ಕಣ್ಣೀರು ತಂದರು.

ಹಿಂದಿನ ಎಲ್ಲ ಕೇಸುಗಳಲ್ಲಿಯಂತೆ ಇಲ್ಲಿಯೂ ತಾನೇ ಸೋಲುತ್ತಿದ್ದೇನೆಂದು ಗುಡಸೀಕರನಿಗನ್ನಿಸಿತು. ಸ್ವಥಾ ಫೋಜದಾರನೂ ಆರ್ದ್ರನಾಗಿದ್ದಂತೆ ತೋರಿತು. ಕೂಡಲೇ ಆವೇಶ ತಾಳಿ ಹೆದರಿದವರು ಕಿರಿಚಿ ಮಾತಾಡುವಂತೆ ಒದರಿದ:

''ಇಂಥ ಬಣ್ಣದ ಮಾತು ಮೆಹರ್ಬಾನ ಸಾಹೇಬರ ಮುಂದ ಆಡ್ತೀಯೇನೋ ಗೌಡಾ? ಅವರಿಗೆಲ್ಲಾ ತಿಳೀತೈತಿ. ಸಾಹೇಬರs ಬೇಕಾದ್ರ ಸುಂದರಾಬಾಯಿ ಇಲ್ಲೇ ಇದ್ದಾಳ ಆಕೀನ್ನs ಕೇಳ್ರಿ ಹೇಳತಾಳ ಇವನ ಅವತಾರ.''

ಕೆಲದಿನಗಳ ಹಿಂದೆ ಬಸವರಾಜು ತನ್ನಿಂದ ಬಸಿರಿಳಿಯುವ ಮದ್ದು ಒಯ್ದ ಕಾರಣ ಸ್ಪಷ್ಟವಾಯ್ತು ನಿಂಗೂನಿಗೆ. ಆ ಉದ್ರೇಕದಲ್ಲಿ ಗಪ್ಪನೆ ಫೋಜದಾರನ ಮುಂದೆ ಕೂತು ನೆಲ ಬಾರಿಸುತ್ತ,

''ಸಾಹೇಬರ ಇದರ ಹಕೀಕತೆಲ್ಲಾ ನನಗ ತಿಳೀತ್ರಿ'' ಅಂದ. ಇವನ ಮಾತು ಕೇಳುವ ತಾಳ್ಮೆ ಫೋಜದಾರನಿಗಿರಲಿಲ್ಲ.

''ಬಾಯ್ಮುಚ್ಚತಿಯೋ? ಇಲ್ಲಾ ಲಗಾಸಂತಯೋ?''

''ಕೇಳಿದಮ್ಯಾಲ ಬೇಕಾದರೆ ಲಗಾಸರಿ. ಹಲಿವುಳಿಯೋ ಮದ್ದ ಬಸವರಾಜೂಗ ಸ್ವಥಾ ನಾನ ಕೊಟ್ಟದ್ನಿ. ಅಂದs ಚಿಮಣಾಗ ಕೊಟ್ಟಿದ್ದ. ಗೌಡರ ಹೇಳಿದ್ದೆಲ್ಲಾ ಅಂದs ನಡದೈತ್ರಿ.''

ಕೂಡಿದ ಮಂದಿಗೆಲ್ಲ ಖಾತ್ರಿಯಾಗಿ ಬಿಟ್ಟಿತ್ತು. ಗುಡಸೀಕರನ ಪಿತ್ಥ ನೆತ್ತಗೇರಿತು. ''ಸ್ವಥ ಬಸರದಾಕೀನ ಬಿಟ್ಟ ಇದೆಲ್ಲ ಸಾಕ್ಷಿ ಕೇಳಾಕ ಹತ್ತಿದಿರಿ?''

ಎಂದು ಪೋಜದಾರನಿಗೆ ಸಿಟ್ಟು ಮಾಡಿದ, ಪೋಜದಾರನಿಗೂ ತನ್ನ ಅಧಿಕಾರದ ನೆನಪಾಯಿತು.

“ಯಾಕಲೇ ಹಲಿವುಳಿಯೋ ಮದ್ದ ಕೊಡೋದ ಬೇಕಾಯ್ದೇಶೀರುನ್ನೋದ ಗೊತ್ತಿಲ್ಲಾ? ಮೊದಲ ನಿನ್ನs ಜೇಲಿಗಿ ಹಾಕತೀನ ತಡಿ’ ಆಮ್ಯಾಲ ನೋಡಿಕೊಳ್ತೀನಿ? ಎಲ್ಲಿ ಆ ಹೆಂಗಸು?”

ಎಂದು ಸುಂದರಿಯನ್ನು ಮುಂದೆ ಕರೆತರುವಂತೆ ಸನ್ನೆ ಮಾಡಿದ. ಈತನಕ ಮೂಲೆಯಲ್ಲಿ ಹುದುಗಿದ ಸುಂದರಿ ಮುಂದೆ ಬಂದಳು. ಪೋಜದಾರನ ಕೌತುಕವೆಲ್ಲ ಸೋರಿಹೋಯಿತು. ಇವಳು ಇಂದು ಮಧ್ಯಾಹ್ನ ಊಟ ನೀಡಿದವಳಾಗಿರಲಿಲ್ಲ. ಉಳಿದವರೆಲ್ಲ ಉಸಿರು ಬಿಗಿಹಿಡಿದು ಅವಳನ್ನೇ ನೊಡುತ್ತಿದ್ದರು. ಆಕೆ ಗುಡಸೀಕರನಂತೆ ಹೇಳುವುದರಲ್ಲಿ ಸಂಶಯವಿರಲಿಲ್ಲ. ದಿನಾ ಅವನ ಅನ್ನ ಉಂಡವಳು, ಮೈಯುಂಡುವಳು ಇನ್ನು ಹ್ಯಾಗೆ ಹೇಳ್ಯಾಳು? ಕೆಲವರಾಗಲೇ ಗೊಣಗಿದರು ಕೂಡ. ಅದು ಪೋಜದರನಿಗೆ ನಿಲುಕಲೇ ಇಲ್ಲ. ಈ ಮದ್ಯೆ ನಿಂಗೂ ಯಾವಾಗಲೋ ಮಾಯವಾಗಿದ್ದ. ಸುಂದರಿ ಮುಂದೆ ಬಂದು ತಲೆಬಾಗಿ ನಿಂತಳು.

“ಏನs ಬರೋಬರಿ ಹೇಳ, ನೀ ಬಸರಾದದ್ದ ಯಾರಿಗೆ?” ಏನು ಹೇಳುತ್ತಾಳೆಂದು ಎಲ್ಲರೂ ತುಟಿ ಬಿಗಿಹಿಡಿದು ನಿಂತರು. ಸುಂದರಿ ಮೆಲ್ಲಗೆ “ಗೌಡಗ” ಎಂದು ಹೇಳಿ ಗೌಡನ ಕಡೆ ಬೆರಳುಮಾಡಿ ತೋರಿಸಿ ಮತ್ತೆ ತಲೆ ಕೆಳಗೆ ಹಾಕಿದಳು. ಇದು ಸಮೀಪದವರಿಗೆ ಕೇಳಿಸಿತು, ದೂರಿದ್ದವರಿಗೆ ಕೇಳಿಸಲಿಲ್ಲ. ತಂತಮ್ಮಲ್ಲೇ ಏನಂದ್ಲು ಏನಂದ್ಲೆಂದು ಗೊಂದಲ ಹಾಕುತ್ತಿರುವಾಗ ಗಲಮವ್ವ “ಥೂ, ಬಕ್ಕಿಗಿ ಬೆದಿ ಕಲಿಸೋ ರಂಡೆ” ಎಂದು ಕರ್‌ರ್ಕ್ಕೆಂದು ಲಟಿಕೆ ಮುರಿದಳು. ಎಲ್ಲರ ಅಸಮಾಧಾನಕ್ಕೆ ಕೊಳ್ಳಿಯಿಟ್ಟಂತಾಗಿ “ಛೇ ಛೇ ಹಾಹೋ” ಸುರುವಾಯಿತು. ಪೋಜದಾರ ಬಾಯಿ ಹಾಕಲಿಲ್ಲ. ಇದ್ದುದರಲ್ಲಿ ಗುಡಸೀಕರ ಹುರುಪಾದ. ಚತುಷ್ಟಯರು ಕೈಕಟ್ಟಿಕೊಂಡು, ತುಟಿ ಹೊಲಿದುಕೊಂಡು, ಸಾಲೆ ಮಕ್ಕಳಂತೆ ಕುಳಿತಿದ್ದರು. ಅವರ ಪೈಕಿ ಸ್ವಲ್ಪ ಲವಲವಿಕೆಯಿದ್ದವನು ಕಳ್ಳ. ಅದಕ್ಕೆ ಕಾರಣವಿತ್ತು. ಈಗಷ್ಟೇ ನಿಂಗೂ ಧೈರ್ಯದ ಮಾತಾಡಿ ಹೋಗಿದ್ದನಲ್ಲ. ಅಷ್ಟೂ ಜನರಿಗಿಲ್ಲದ ಅವನ ಧೈರ್ಯ, ಪೇಟೆ ಸೂಳೆಯರಂಥ ಅವನ ಹಾವಭಾವ, ನೋಡಿ ಕಳ್ಳ ಭಲೆ ಭಲೆ ಎಂದು ಜೊಲ್ಲು ಸುರಿಸಿದ. ಎದೆಗಾರಿಕೆಯ ಸಪಾಟಾದ ಅವನೆದೆಗೆ ಉಬ್ಬು ಮೂಡಿಸುವ ವ್ಯವಸ್ಥೆ ಮಾಡಿದರೆ ಅವಳ ರೂಪ ಹೇಗಾಗುವುದೆಂದು ಧ್ಯಾನಿಸುತ್ತಿದ್ದ. ಈಗ ಅವನ ಹಂಬಲದ ಸುದ್ದಿ ಯಾಕೆ?

ಜನ ಬೇಕಾಬಿಟ್ಟೆ ಮಾತಾಡಿಕೊಮಡರು. ಪೋಜುದಾರ ಜನರನ್ನು ಸುಮ್ಮನಾಗಿಸುವ ಗೋಜಿಗೆ ಹೋಗಲೇ ಇಲ್ಲ. ಹಾಹೊ ಗದ್ದಲದಲ್ಲಿಯೇ ಯಾರಿಗೆ ಕೇಳಿಸ್ತೋ, ಯಾರಿಗಿಲ್ಲವೋ ತನ್ನ ತೀರ್ಮಾನ ಒದರಿಬಿಟ್ಟ. ಗೌಡ ಸುಂದರಿಗೂ, ಅವಳ ಕೂಸಿಗೂ ಎರಡೆಕರೆ ಜಮೀನು ಬರೆದು ಕೊಡತಕ್ಕದ್ದು. ಇಷ್ಟು ಹೇಳಿ ಥಟ್ಟನೆ ಎದ್ದುಹೋದ.

## ಆಡಿಕೊಂಡರು, ಹಾಡಿಕೊಂಡರು

ಸುಂದರಿಯನ್ನು ಕಳಿಸಿದೊಡನೆ ದತ್ತಪ್ಪ ಗೌಡನೊಂದಿಗೆ ಅವನ ಮನೆಗೆ ಹೋದ. ವಿಷಯ ಇಬ್ಬರಿಗೂ ಗೊತ್ತಾಗಿತ್ತು. ಆ ಹುಡುಗ ತನ್ನ ಮನೆಗೆ ಬೇಲಿ ಹಚ್ಚಿ ಹೆಂಟಾ ಬಡಿಯುತ್ತಾನೆಂದು ಮಾತಾಡಿಕೊಂಡರು. ಅವನಿಗೆ ತಿಳುವಳಿಕೆ ಹೇಳಲು ಸಾಧ್ಯವಾಗದ್ದಕ್ಕೆ ಗೌಡ ಮರುಗಿದ. ಆ ಮುದುಕಿಗಾದರೂ ಬುದ್ಧಿ ಇರಬಾರದೆ? ಮಗ ಹೇಳಿದ ಹಾಗೆ ಕುಣಿಯೋದಕ್ಕೆ ಇದು ವಯಸ್ಸೆ? ಎಂದ. ಯಾರಿಗೂ ಬುದ್ಧಿ ಕಲಿಸುವ ದಾರಿ ಚಿಂತಾಮಣಿಯ ದತ್ತಪ್ಪನಿಗೆ ಅರಿದಲ್ಲ.

ನೋಡೂ, ಅವಗ ಬುದ್ಧಿ ಕಲಿಸಾಕ ಒಂದ ಹಾದಿ ಅದ. ನಿನ್ನ ಕಬೂಲಿದ್ದರ….”ಅದೇನಪಾ?”

“ಸುಂದರೀನ ಬಸರ ಮಾಡ್ಯಾನಂತ ಒಂದ ಮೂಕರ್ಜಿ ಹೆಟ್ಟಿದರ ನೋಡಪಾ, ಹುಡುಗ ನಾವ ಹೇಳಿಧಾಂಗ ಕೇಳಿಕೊಂತ ಬಿದ್ದಿರತಾನ.”

ಉಪಾಯವೇನೋ ಬರೋಬರಿ. ಆದರೆ ರಾಡಿ ಸೋಸಬೇಕಲ್ಲ? ಪೋಲೀಸರು ಬರೋದು, ಗುಡಸೀಕರನನ್ನು ಹೊಡೆಯೋದು, ನ್ಯಾಯ ಮಾಡೋದು, ಪಂಚಾತಿ ಅನ್ನೋದು ಸಾಕ್ಷಿ ನೀ ಹೇಳು, ನಾ ಹೇಳು – ಈ ಗದ್ದಲ ಸೋಸುವುದಿರಲಿ ಮುದುಕಪ್ಪ ಗೌಡ ಸರ್ಕಾರದ ಕಣ್ಣುತಪ್ಪಿಸಿ ತನ್ನ ಮನೆಯಲ್ಲಿದ್ದಾಗ ಪೊಲೀಸರು ಬರೋದು ತಮ್ಮ ಹಿತದೃಷ್ಟಿಯಿಂದ ಕೂಡ ಒಳ್ಳಯದಲ್ಲ. ಏನೋ ಮಾಡಹೋಗಿ ಏನೇನೋ ಆಗುವ ಬಾಬತ್ತಿವೆಯಲ್ಲ. "ಬ್ಯಾಡ ತಗಿ" ಅಂದ. ದತ್ತಪ್ಪನಿಗೆ ಕೂಡಲೇ ಖಾತ್ರಿಯಾಯ್ತು. ಮುದುಕಮ್ಮನಿಗೆ ಬುದ್ಧಿ ಹೆಳಿದರೋ? ಮುದುಕಿ ಮಾತು ಕೇಳ್ಯಾಳು, ಹುಡುಗ ಕೇಳಬೇಕಲ್ಲ? ಅವರವರ ಕರ್ಮ ಎಂದು ಇಬ್ಬರೂ ಸುಮ್ಮನಾದರು. ಅಲ್ಲಿಗದು ಮುಗಿಯಿತೊ?

ಜನರ ಬಾಯಲ್ಲಿ ಚಿಗಿಯಿತು. ದಿನಕ್ಕೊಂದು ಚಂದಾಗಿ ಗುಸುಗುಸು ಸುರುವಾಯಿತು. ಮುಂಗಾರಿ ಬೆಳೆ ಬಂದು ಒಂದು ನಿಲುಗಡೆಗೆ ಬಂದುದರಿಂದ ಚಾಡಿ ಹೇಳುವುದಕ್ಕೆ ಅವರಿಗೆ ಸಮಯವೂ ಇತ್ತು. ಆಡಿಕೊಂಡು ನಗಾಡಿದರು, ಚತುಷ್ಟಯರನ್ನು ಕೀಟಲೆ ಮಾಡಿದರು. ವ್ಯಂಗ್ಯದ ಪದ ಕಟ್ಟಿ ಹಾಡಿದರು. ಆದರೆ ಆ ಪದಗಳು ಗುಡಸೀಕರನಿಗಾಗಲಿ, ಬಸವರಾಜನಿಗಾಗಲಿ ತಿಳಿಯಲೇ ಇಲ್ಲ. ಚತುಷ್ಟಯರಿಗೆ ತಿಳಿಯುತ್ತಿತ್ತು. ಅವರು ಹೇಳಲಿಲ್ಲ. ಹೀಗಾಗಿ ಹಾಡಿನ ಚಮತ್ಕಾರಕ್ಕೆ ಇವರು ನಕ್ಕರು. ತಿಳಿಯದ ಇವರ ದಡ್ಡತನಕ್ಕೆ ಹುಡುಗರು ನಕ್ಕರು.

ಸುಂದರಿ ಕರ್ಮವೆಂದು ಬಸುರನ್ನೊಪ್ಪಿಕೊಂಡಳು. ಮದ್ದಿನಿಂದ ಮೈ ನಿಶ್ಯಕ್ತಿಯಾಗಿತ್ತು. ಗುಡಿಸಲಿನಲ್ಲಿದ್ದುಕೊಂಡೇ ಇವರ ಮಾತು ಕೇಳುತ್ತಿದ್ದಳು. ಆ ಘಟನೆ ನಡೆದಾಗಿನಿಂದ ಗುಡಸೀಕರನ ಚೇರಾಪಟ್ಟಿಯಲ್ಲಿ ಬದಲಾಗಿತ್ತು. ಬರುತ್ತಿರಲಿಲ್ಲ. ಬಂದರೂ ತಪ್ಪಿಕೂಡಾ ತನ್ನ ಕಡೆ ನೋಡುತ್ತಿರಲಿಲ್ಲ. ನೋಡಿದರೂ ಅವನ ಕಣ್ಣಲ್ಲಿ ಕೋಪವಿರುತ್ತಿತ್ತು. ಬಸವರಾಜು ಮೊದಲಿನಂತೆಯೇ ಮತಾಡುತ್ತಿದ್ದ. ಒಮದೆರಡು ಕೊಡ ನೀರು ತರುತ್ತಿದ್ದ. ಅನ್ನ ಬೇಯಿಸುತ್ತಿದ್ದ. ತಾನೂ ತಿಂದು ಇವಳಿಗೂ ಹಾಕುತ್ತಿದ್ದ.

ಗುಡಸೀಕರನ ತಾಯಿಗೆ ಮಾತ್ರ ಮನೆ ನಡುಗಂಬ ತನ್ನ ನೆತ್ತಿಯ ಮೇಲೆ ಕಡಕೊಂಡು ಬಿದ್ದಷ್ಟು ಸಂಕಟವಾಯ್ತು. ಸುದ್ದಿಗಳೋ ದಿನಕ್ಕೊಂದು ಪರಿ ಬರುತ್ತಿದ್ದವು. ಮಗ ಕದ್ದು ಮದುವೆಯಾಗಿದ್ದಾನಂತೆ. "ಹೌಂದೇನ ಎವ್ವಾ?" ಎಂದೊಬ್ಬ ಮಗಳು ಕೇಳಿದರೆ, ಮೊಮ್ಮಗನ ಹೆಸರಲೇ ಆಸ್ತಿ ಮಾಡ್ಯಾನಂತ "ಹೌಂದೇನ ಎಕ್ಕಾ?" ಎಂದೊಬ್ಬ ತಂಗಿ ಕೇಳುತ್ತಿದ್ದಳು. ಸಕಾಲಕ್ಕೆ ಮದುವೆ ಮಾಡಿದ್ದರೆ ಇದೆಲ್ಲ ಯಾಕಿರುತಿತ್ತೆಂದು ಮುದುಕಿಯೊಬ್ಬಾಕೆ ಹೇಳದೆ ಬಿಡಲಿಲ್ಲ. ಮಗನೊಂದಿಗೆ ಇದನ್ನೆಲ್ಲ ಬಾಕಿ ಉಳಿಸದಂತೆ ಮಾತಾಡಬೇಕೆಂದರೆ ಅವನು ಸದಾ ಹುಬ್ಬುಗಂಟು ಹಾಕಿಕೊಂಡೇ ಇರುತ್ತಿದ್ದ. ಮುದುಕಿ ಬಾಯಿ ಬಿಟ್ಟರೆ ಗದರುತ್ತಿದ್ದ. ಗೌಡ, ದತ್ತಪ್ಪ ಯಾಕೊಮ್ಮೆ ಬುದ್ಧಿ ಹೇಳಬಾರದೆಂದಳು – ಅವರ ಮಾತು ಮಗ ಕೇಳುವುದಿಲ್ಲವೆಂದು ಗೊತ್ತಿದ್ದೂ, ಸತ್ತ ಗಂಡನ ನೆನೆದು ಅತ್ತಳು. ಓಣಿಯ ಅವ್ವಕ್ಕಗಳ ಮುಖ ಎದುರಿಸಲಾರದೇ ಮುದುಕಿ ಅಡಿಗೆ ಮನೆಯಲ್ಲಿ 'ಕರೀಮಾಯೀ' ಎಂದು ಕೈಹೊತ್ತು ಕೂತಳು.

ಅಣ್ಣ ಊಟಕ್ಕೆ ಮಾತ್ರ ಮನೆಗೆ ಬರುತ್ತಿದ್ದು ಉಳಿದೆಲ್ಲ ಸಮಯ ತೋಟದಲ್ಲೇ ಕಳೆಯುತ್ತಿದ್ದುದರಿಂದ ಮೊದಮೊದಲು ಆಗೀಗ ಬರುತ್ತಿದ್ದ ಬಸವರಾಜು ಸಮಯ ಸಾಧಿಸಿ ಹೆಚ್ಚೆಚ್ಚು ಸಲ ಹೆಚ್ಚೆಚ್ಚು ಹೊತ್ತು ಬರಲಾರಂಭಿಸಿದ್ದರಿಂದ ಗಿರಿಜಾ ಸನ್ನಿವೇಶದ ಅಸಲು ಪ್ರಯೋಜನವನ್ನು ಬಡ್ಡಿಸಮೇತ ಪಡೆದಳು.

## ಅಡ್ಡಮಳೆ

ಶಿವನಿಂಗ ಗೌಡನ ಮಗನೆಂದಲ್ಲ; ಸ್ವಂತ ಛಾತಿ ಇದ್ದವನು. ಯಾರಿಗೊಂದು ಅಂದವನಲ್ಲ, ಆಡಿಸಿಕೊಂಡವನಲ್ಲ, ತಾನುಂಟೋ ತನ್ನ ಹೊಲ ಮನೆಯುಂಟೋ, ಎದುರಾಡಿದವನಲ್ಲ, ಕಣ್ಣೆತ್ತಿ ಒಬ್ಬರ ಮುಖ ದಿಟ್ಟಿಸಿ ನೋಡಿದವನಲ್ಲ, ವಾಚಾಳಿಯಲ್ಲ, ಮುಂಗುಲಿ, ಗುಬ್ಬಿ, ಗಿಳಿಗಳನ್ನು ಹಿಡಿದು ಸಾಕುವುದರಲ್ಲಾಯಿತು. ಹಕ್ಕಿ ಹಾಗೂ ಕಾಡುಪ್ರಾಣಿಗಳಂತೆ ಕೂಗುವುದರಲ್ಲಾಯಿತು; ಮರಹತ್ತಿ ಕೋತಿಗಳಂತೆ ನೆಗೆದಾಡುವುದರಲ್ಲಾಯಿತು. ಹಕ್ಕಿ ಹಾಗೂ ಕಾಡುಪ್ರಾಣಿಗಳಂತೆ ಕೂಗುವುದರಲ್ಲಾಯಿತು; ಮರಹತ್ತಿ ಕೋತಿಗಳಂತೆ ನೆಗೆದಾಡುವುದರಲ್ಲಾಯಿತು, ಅದಕ್ಕೇ ಅವನ ತಾಯಿ ಶಿವಸಾನಿ, 'ಇವನೆಂದು ಮನುಷ್ಯರೊಳಗೆ ಬೆರೆಯುತ್ತಾನೋ!' ಎಂದುಕೊಳ್ಳುತ್ತಿದ್ದಳು.

ಹೆಂಗಸರನ್ನು ಕಂಡಾಗಲಂತೂ ಹುಡುಗ ಆಮೆಯ ಥರ ಒಳಗೊಳಗೆ ಇಂಗಿ ಸಂಕೋಚಗೊಳ್ಳುತ್ತಿದ್ದ. ಕೆರೆಯಲ್ಲಿ ಮುಳುಗುತ್ತಿದ್ದ ಸುಂದರಿಯನ್ನು ಬದುಕಿಸಿದಾಗ ಕೆಲವರು ಗುಡಸೀಕರನ ಮೇಲೆ ಸಿಟ್ಟಿನಿಂದ ಹಾಗೆ ಮಾಡಬಾರದಿತ್ತು ಎಂದಿದ್ದರು. ಆದರೆ ದತ್ತಪ್ಪ ಭೇಶ್ ಅಂದಿದ್ದ. ಎಷ್ಟೆಂದರೂ 'ಗೌಡನ ಬೀಜ' ಎಂದಿದ್ದಳು. ಲಗಮವ್ವ.

ತನ್ನ ಜೀವ ಉಳಿಸಿದ ಧೀರ ಬಾಲಕನನ್ನು ಸುಂದರಿ ಆಗಾಗ ಧ್ಯಾನಿಸುತ್ತಿದ್ದಳು. ಗುಡಸೀಕರನ ತೋಟದ ಕಡೆ ಹೋದರೆ, ಪಕ್ಕದಲ್ಲೇ ಅವರ ತೋಟ, ಅಲ್ಲಿರುತ್ತಿರಲಿಲ್ಲ. ಊರಲ್ಲಿ ಹಾದಾಡುವಾಗಲೂ, ನೀರು ತರುವಾಗಲೂ ಯಾವಾಗಲೂ ಹೊರಬಿದ್ದಾಗಲೂ ಹುಡುಕಿದ್ದಳು. ಊರ ಬಾಲೆಯರಿಗೇ ಅಪರೂಪವಾದ ಹುಡುಗ ಇವಳಿಗೆಲ್ಲಿ ಸಿಕ್ಕಾನು? ಸುದ್ದಿಯವನಲ್ಲ, ಬೇಲಿ ಜಿಗಿದವನಲ್ಲ, ತೋರುಬೆರಳಿಗೆ ಗುರಿಯಾದವನಲ್ಲ, ಅವ್ವಾ ಎಂಥಾ ಗಂಭೀರ ಇದ್ದಿದ್ದಾನ! ಎಂದುಕೊಂಡಿದ್ದಳು. ಇನ್ನೇನು ಬೇಡ, ಒಮ್ಮೆ ಸಿಕ್ಕರೆ 'ಎಪ್ಪಾ ಉಪಕಾರಾತೊ' ಎಂದಾದರೂ ತನ್ನ ಕೃತಜ್ಞತೆ ಹೇಳುವ ಮನಸ್ಸಾಗಿತ್ತು. ಆ ಅವಕಾಶವೂ ಸಿಕ್ಕಿತು.

ಒಂದು ದಿನ ಇನ್ನೂ ಇಳಿಹೊತ್ತಾಗಿರಲಿಲ್ಲ. ಆಕಾಶದಲ್ಲಿ ಅಡ್ಡಮಳೆಯ ದಟ್ಟ ಮೋಡಗಳು ಕಟ್ಟಿ ಸೂರ್ಯನನ್ನು ಮುಚ್ಚಿ, ಗುಡ್ಡದೋರೆಯಲ್ಲಿ ನೆಲ ಕಂಡು ಹುಬ್ಬು ಹಾರಿಸುವಂತೆ ಮಿಂಚುತ್ತಿದ್ದವು. ಕೊಯ್ಲಿಗೆ ಸಿದ್ಧವಾಗಿ ಬೆಳೆದ ಮಾಗಿ ಹಾಗೇ ನಿಂತಿತ್ತು. ಇನ್ನೇನು ನಾಕಾರು ದಿನಗಳಲ್ಲಿ ದೀಪಾವಳಿ ಹಬ್ಬವಾಗಿ ಬೆಳೆ ಕೈಗೆ ಬರಬೇಕಷ್ಟೆ. ಈಗ ಮಳೆಯಾದರೆ ಕೈಗೆ ಬಂದೂ ಬಾರದ ಹಾಗೆ. ರೈತರು ಹಿಂಡುಗಟ್ಟಿ ಹೊಲಗಳಿಗೆ ಹೋಗುವುದು ಈಗ ಕಡಿಮೆ. ಹೋದರೂ ಒಬ್ಬಿಬ್ಬರು ಮೇವಿಗೆ, ಕಾಯಿಪಲ್ಲೆಗೆ, ದನ ಮೇಯಿಸಲಿಕ್ಕೆ ಹೋಗಬೇಕಷ್ಟೆ. ಮೋಡ ಕಟ್ಟಿದೊಡನೆ ರೈತರು ಹುಬ್ಬಿಗೆ ಕೈಹಚ್ಚಿ ಆಕಾಶದ ಕಡೆ ದೈನಾಸದಿಂದ ನೋಡಿದನು. ತಂಗಾಳಿ ಸೂಸತೊಡಗಿತ್ತು. ಶೀಗೀ ಹುಣ್ಣಿಮೆಯ ಬುಟ್ಟಿಯೊಳಗಿಂದ ಬರುವ ಚಳಿಗಾಳಿ ಇದಾಗಿರಲಿಲ್ಲ. ಮಳೆ ಬರುವುದೇ ಖಾತ್ರಿಯಾಗಿ ಹಳಹಳಿಸುತ್ತ ರೈತರು ದನ ಬಿಚ್ಚಿಕೊಂಡು ಊರ ಕಡೆ ತೆರಳಿದರು. ಗುಡಿಸಲು ಕಟ್ಟಿದ್ದವರು ಅಲ್ಲೇ ಉಳಿದರು. ಈ ಅಡ್ಡಮಳೆಯಿಂದಾಗಿ ಕರಿಮಾಯಿಯ ಕೋಟ ಸ್ಪಷ್ಟವಾಗಿತ್ತು. ತೋಟದ ಗುಡಿಸಲಲ್ಲಿ ಶಿವನಿಂಗ ಒಬ್ಬನೇ ನಾರಿನಿಂದ ಹುರಿ ಹೊಸೆಯುತ್ತ ಕೂತಿದ್ದ. ಪಕ್ಕದ ಗುಡಸೀಕರನ ತೋಟದಲ್ಲಿ ಚಿಮಣಾ ಇದ್ದಂತಿತ್ತು. ಸಿನೆಮಾ ಹಾಡು ಗೊಣಗುತ್ತಿದ್ದಳೆಂದೂ ತೋರುತ್ತದೆ. ಅಥವಾ ಅದು ಚಿಮಣಾಳ ಹಾಡೇ ಆಗಿರಬೇಕಿರಲಿಲ್ಲ. ಯಾಕೆಂದರೆ ಬಸವರಾಜೂನ ರೇಡಿಯೋ ಕೂಡ ಹಾಡುತ್ತಿದ್ದುದು ಹಾಗೇ, ಇದ್ದಕ್ಕಿದ್ದಂತೆ ಹಾಡು ನಿಂತಿತು. ಹಾಡಿದರು, ಹಾಡದಿದ್ದರೂ ಅದರಿಂದ ಇವನಿಗೇನಾಗಬೇಕಾಗಿದೆ? ಹೊಸೆಯುತ್ತ ಕೂತ.

ಅಷ್ಟರಲ್ಲಿ ಸಮೀಪ ನಿಂತು ಯಾರೋ ತನ್ನನ್ನು ಗಮನಿಸುತ್ತಿದ್ದರೆನಿಸಿತು. ಕತ್ತೆತ್ತಿ ನೋಡಿದ. ಎದುರಿಗೆ ಚಿಮಣಾ ನಿಂತಿದ್ದಳು. ಹೊಯ್ಕಾಯಿತು. ಗಂಟಲೊಣಗಿ ಎದೆ ಧಸ್ಸೆಂದಿತು. ಬಂದವಳು ಯಾರೇ ಆಗಿರಲಿ ತನ್ನ ಗುಡಿಸಲಿಗೆ ಬಂದಿರೋಣದರಿಂದ ಮಾತಾಡಿಸಬೇಕಾದವನು ತಾನಲ್ಲವೆ? ಹಿಡಿದ ಹುರಿ ಕೈಯಲ್ಲೇ, ಮೂಡಿದ ಮಾತು ಗಂಟಲಲ್ಲೇ, ಹೊಯ್ಕಿನ ಭಂಗಿಯಲ್ಲೇ ಹಾಗೇ ಕೂತ. ಹುಡುಗನ ಬೆರಗಿಗೆ ಚಿಮಣಾ ಕುಲುಕುಲು ನಕ್ಕಳು.

"ಒಬ್ಬನs ಏನ ಮಾಡಾಕ ಹತ್ತೀದಿ?" ಅಂದಳು. ಶಿವನಿಂಗ ಮಾತಾಡಲಿಲ್ಲ. ಕೈ ಮುಂದೆ ಮಾಡಿ ಹುರಿತೋರಿಸಿದ ಅಷ್ಟೆ, "ಅಲೀ ನೋಡೋಣು" ಎನ್ನುತ್ತ ಅವನ ಬಳಿಗೆ ಹೋದಳು. ತಕ್ಷಣ ಹಾವು ಕಂಡಂತೆ ದೂರ ಸಿಡಿದ. ಚಿಮಣಾ ಖಿಖ್ಖೆಂದು ನಕ್ಕಳು. ಎಂಥಾ ಹುಚ್ಚು ಹುಡುಗ ಎಂದುಕೊಂಡಳು. ಆ ಹುಚ್ಚುತನ ಸೂಜಿಗಲ್ಲಿನಂತೆ ಅವಳನ್ನೆಳೆಯಿತು. ಹುಡುಗ ತಬ್ಬಿಬ್ಬಾಗಿ ಇನ್ನೂ ದೂರ ನಿಂತಿದ್ದ. ಇವನನ್ನು ಮುಟ್ಟುವುದಿರಲಿ ಮಾತಿಗೆಳೆಯುವುದೂ ಕಷ್ಟ. ಅವಳು ನಿಂತಷ್ಟೂ ಇವನ ಪೆದ್ದುತನ ಹೆಚ್ಚಿತು. ಪೆದ್ದುತನ ಕಂಡಷ್ಟೂ ಇವಳ ಉಮೇದಿ ಉಕ್ಕಿತು.

"ಅಲ್ಲಾ, ಹೊಲದಾಗ ಸೇಂಗಾ ಇದ್ದರ ಸುಟ್ಟುಕೊಡಬಾರದ?" ಎಂದಳು. ಶಿವನಿಂಗ ತೋಟದ ಅಂಚಿನ ಕಡೆ ಕೈಮಾಡಿ ತೋರಿಸಿ ಈಗಲೇ ಸುಟ್ಟುಕೊಡಬೇಕೆಂದು ಉತ್ಸಾಹದಿಂದ ಆ ಕಡೆ ನಡೆದ. ಚಿಮಣಾ ಅವನ ಹಿಂದಿನಿಂದಲೇ ನಡೆದಳು. ಈಗ ಓಡತೊಡಗಿದ. ಚಿಮಣಾ ಒಂದು

ಹೆಜ್ಜೆ ಹಾಕಿದರೆ, ಇವನು ಹತ್ತು ಹೆಜ್ಜೆ ಧಾವಿಸುತ್ತಿದ್ದ. ತೋಟಕ್ಕಂಟಿ ಹಳ್ಳಿ, ಹಳ್ಳದಾಚೆ ಜೋಳದ ಹೊಲ, ಹೊಲದಂಚಿಗೆ ಸೇಂಗಾ ಬೆಳೆ – ಸುಮಾರು ಹತ್ತು ಕೂರಿಗೆ ನೆಲವನ್ನು ಹೀಗೆ ಕ್ರಮಿಸಿದರು.

ಶಿವನಿಂಗ ಪಸಪಸ ಹತ್ತು ಬಳ್ಳಿ ಕಿತ್ತ. ಕಾಯಿ ಹರಿದ. ಓಡಿಹೋಗಿ ಕೊರೆ ಬೇಲಿ ತಂದ, ಕೂಡಿಟ್ಟು ಮೇಲೆ ಸೇಂಗಾ ಸುರಿದ. ಬೆಂಕಿಗಾಗಿ ಸುತ್ತ ನೋಡಿದ. ದೂರ ಮರಡಿಯ ಓರೆಯಲ್ಲಿ ಹೊಗೆ ಹಾಯುತ್ತಿತ್ತು. ಓಡಿಹೋದ. ಹುಡುಗನ ಕಾಲಲ್ಲಿ ಕುದುರೆ ಗೆರೆಯಿದ್ದುವೋ ಏನೋ! ನೋಡು ನೋಡುವದರಲ್ಲಿ ಗುರಿಮುಟ್ಟಿದ. ಚಕಪಕ ಮಿಂಚಿನ ವೇಗದಲ್ಲಿ ಸಂಚರಿಸಿ ಕುಳ್ಳು ಬೆಂಕಿ ತಂದು ಹಚ್ಚಿದ. ದೂರ ಕೂತುಕೊಂಡು ಇವನನ್ನೇ ನೋಡುತ್ತಿದ್ದ ಚಿಮಣಾ "ಅದ್ಯಾಕ ಅಲ್ಲಿ ಬೆಂಕಿ?" ಎಂದು ಮರದಡಿಯ ಕಡೆ ಕೈಮಾಡಿ ಕೇಳಿದಳು. ಕೇಳಿಸಿತೋ, ಕೇಳಿಸಿಲ್ಲವೋ ಎಂಬಂತೆ "ಲಗಮವ್ವನ ಸೆರೇದ ಭಟ್ಟಿ" ಅಂದ. ಸೆರೆ ಅಂದೊಡನೆ ಅವಳ ಬಾಯಿ ನೀರೂರಿತು. "ಹೋಗಿ ಸೊಲಪ ಕುಡದ ಬರೋಣು ಬಾರಲಾ" ಎಂದಳು. ಇಷ್ಟು ಕೇಳಿದ್ದೇ ಯಾಕೆಂಬುದಿಲ್ಲ, ಏನೆಂಬುದಿಲ್ಲ, ಶಿವನಿಂಗ ಆ ಕಡೆ ಓಡತೊಡಗಿದ. ಇವಳಿಗಾಶ್ಚರ್ಯವಾಯ್ತು. ಅಷ್ಟು ದೂರ ಹೋದ ಮೇಲೆ ಸೆರೆ ತರಲಿಕ್ಕೆ ಓಡಿದನೆಂದು ಗೊತ್ತಾಯ್ತು. ಇವಳು ಬೆನ್ನಹತ್ತಿದಳು. ಸಕಾಲಕ್ಕೆ ಇವಳು ಅಲ್ಲಿ ಮುಟ್ಟದಿದ್ದರೆ ಕಾಯ್ದ ಇಡೀ ಹರವಿಯನ್ನೇ ಹೊತ್ತು ತರುತ್ತಿದ್ದನೋ ಏನೋ!

ಮೆಳೆಯ ಮರೆಯಲ್ಲಿ ತಗ್ಗಿನಲ್ಲೊಂದು ಹರವಿಯಿಟ್ಟು ಬೆಂಕಿ ಹಚ್ಚಲಾಗಿತ್ತು. ಹರವಿಯ ಮೇಲೆ ದೊಡ್ಡ ಹರಿವಾಣ ಮುಚ್ಚಲಾಗಿತ್ತು. ಅದು ಲಗಮವ್ವನ ಸೆರೇದ ಭಟ್ಟಿ. ಹೇಳಿಕೊಂಡರಾಯ್ತೆಂದು ಹರವಿ ಬಗ್ಗಿಸಿ ಹರಿವಾಣ ತುಂಬಿದ. ಭಕ್ತಿಯಿಂದ ಸುಂದರಿಗೆ ಕೊಟ್ಟ. ಹದವೇರಿ ಸುಮಾರು ಹೊತ್ತಾಗಿದ್ದರಿಂದ, ಅಪರೂಪ ರುಚಿಯ ಉಗುರು ಬೆಚ್ಚಗಿನ ದೇಸೀ ಸೆರೆ ನಾಲಗೆಗೆ ಅಪ್ಯಾಯಮಾನವಾಗಿ ಗಟಗಟ ಹೀರಿದಳು. ಹೀರಿ ಮತ್ತೆ ಒಡ್ಡಿದಳು. ಮತ್ತೆ ತುಂಬಿದ. ಮತ್ತೂ ತುಂಬಿದ. ಮೂರಕ್ಕೆ ಡರ್‌ರ್ ಎಂದು ಗಂಡಸಿನಂತೆ ಢರಿಕೆ ತೇಗಿ ನೀ ಕುಡಿ ಎಂದು ಸನ್ನೆ ಮಾಡಿದಳು ಒಲ್ಲೆನೆಂದ.

ಸೇಂಗಾ ಸುಟ್ಟಲ್ಲಿಗೆ ಬಂದು ಗುಡುಗುಟ್ಟುವ ಮೋಡವೆನ್ನದೆ ಎದುರಿಗಿನ ಹುಡುಗನನ್ನು ನೋಡದೆ, ಎರಡೂ ಕಾಲು ಅರಹಾಕಿದಂತಿಟ್ಟು, ಅಂದರೆ ಕರಿಮಾಯಿಯ ಭಂಗಿಯಲ್ಲಿ ಕೂತು, ಪಚಪಚ ಸೇಂಗಾ ತಿಂದಳು. ಶಿವನಿಂಗನ ನೆನಪಾಯ್ತು. ಅವನ ಕಡೆ ತೇಲುಗಣ್ಣಾಡಿಸಿದಳು. ತಿನ್ನದೆ, ತಿನ್ನುವುದನ್ನೇ ನೋಡುತ್ತ ಕೂತಿದ್ದವನು ಈಗ ನಾಚಿ ಮುಖ ಕೆಳಗೆ ಹಾಕಿದ. ಇನ್ನೇನು ನಾಳೆಯೋ, ನಾಡಿದ್ದೋ ಪ್ರಾಯ ಬರಬೇಕು. ಎಳಸು ಎಳಸಾಗಿ ಜಾತ್ಯಾ ಹೋರಿಯಂತೆ ಬೆಳೆದಿದ್ದ. ಗೆರೆ ಬರೆದಂತೆ ಚಿಗುರುಮೀಸೆ; ಈಗಷ್ಟೇ ಒಡೆದ ಹಾಗೆ. ಕೆನ್ನೆ ಮುಖ ಮಿರಿಮಿರಿ ಮಿಂಚಿ ಗೌಡನ ಪ್ರಾಯ ನೆನಪಿಸುತ್ತಿದ್ದ. ಇಷ್ಟಗಲ ಹೊಳೆ ಹೊಳೆವ ಕದ್ದುನೋಡುವ ಬೆರಗಿನ ಕಣ್ಣಿನ ಚೆಲುವನ್ನು ನೋಡಿ ನಕ್ಕು ಎರಡೂ ಕೈ ಮೇಲೆತ್ತಿ ಹಾ ಎಂದು ಆಕಳಿಸಿ ಮೇಲೆದ್ದಳು. ಮಳೆ ಸಣ್ಣಾಗಿ ಹನಿಯತೊಡಗಿತು.

ಶಿವನಿಂಗ ಮುಂದೆ ಮುಂದೆ ನಡೆದ. ಇವಳಿಗೋ ಸಮತೋಲ ಉಳಿಯಲೊಲ್ಲದು, ನಡಿಯಲಾರೆ, ನಿಲ್ಲಲಾರೆ; ತೂರಾಡುತ್ತ, ತಪ್ಪು ಹೆಜ್ಜೆಯಿಡುತ್ತ ನಡೆದಳು. ಅಷ್ಟು ದೂರ ನಡೆಯುತ್ತಿದ್ದವನು ಬಿದ್ದಾಳೆಂದು ಮತ್ತೆ ಹಿಂದೆ ಬರುತ್ತಿದ್ದ. ನಿಲ್ಲುತ್ತಿದ್ದ. ದೊಡ್ಡ ಹನಿಯ ಮಳೆ ಜೋರಾಗಿ ಸುರಿಯತೊಡಗಿತು. ಹುಡುಗ ಓಡುತ್ತಿದ್ದ, ಹಿಂದಿರುಗಿ ನಿಲ್ಲುತ್ತಿದ್ದ. ಇಬ್ಬರೂ ಆಗಲೇ ಒದ್ದೆಯಾಗಿದ್ದರು.

ಸೇಂಗಾ ಬೆಳೆ ದಾಟುವುದು ಕಷ್ಟವಾಗಲಿಲ್ಲ. ಜೋಳದ ಬೆಳೆಯಲ್ಲಿ ಹೊಕ್ಕಾಗ ಸಮತೋಲ ಹಿಡಿಯಲಾರದೆ ಬೆಳೆಯ ಮೇಲೆ ಬೀಳುತ್ತ ಏಳುತ್ತ ನಡೆದಳು. ಮೊದಲೇ ಎರೇ ನೆಲ, ನೀರು ಹರಿದಾಡಿ ಕೆಸರು ಜಾರಿಕೆಯಾಗಿತ್ತು. ಸರ್ರನೆ ಜಾರಿ, "ಎವ್ವಾ" ಎಂದು ಬಿದ್ದಳು. ಶಿವನಿಂಗ ಓಡಿಬಂದು. ದೂರದಲ್ಲೇ ನಿಂತ. ಸೀರೆ ಕೆಸರಾಗಿತ್ತು. ಸಾವರಿಸಿಕೊಂಡೆದ್ದಳು. ಮೇಲೆ ಮಳೆ ಸುರಿಯುತ್ತಿತ್ತು.. ಒಳಗೆ ಹೊಟ್ಟೆಯಲ್ಲಿ ಸೆರೆ ನೆತ್ತಿಗೇರಿ ತುಳುಕುತ್ತಿತ್ತು. ಹಾಗೇ ನೆತ್ತಿಯ ಮೇಲೆ ಎರಡೂ ಕೈಹೊತ್ತು ತಪ್ಪು ಹೆಜ್ಜೆ ಹಾಕುತ್ತಲೇ "ಎಲ್ಲಿ ಕಾಣೆಲ್ಲಿ ಕಾಣೆ" ಎಂದು ಹಾಡು ತೊದಲುತ್ತಲೇ ಕುಣಿಯತೊಡಗಿದಳು. ಸುತ್ತಲ ಬೆಳೆ ಅವಳ ಕುಣಿತದ ಧಡಪಡಿಕೆಗೆ ಅತ್ತಿತ್ತ ವಾಲಿತು. ಎದೆ ಸೆರಗು ಜಾರಿ ಸೊಂಟಕ್ಕಂಟಿದ ಸೀರೆ ಇನ್ನೇನು ಕಳಚಲಿತ್ತು. ಶಿವನಿಂಗ ಗಾಬರಿಯಾಗಿ ಹಿಂದುರುಗಿ ಗುಡಿಸಲ ಕಡೆ ಓಡುವುದಕ್ಕೆ ಒಂದೆರಡು ಹೆಜ್ಜೆ ಧಾಪುಗಾಲು ಹಾಕಿದ್ದ.

ಅಷ್ಟರಲ್ಲೇ ಸುಂದರಿ ಓಡಿಹೋಗಿ ಜೋರಿನಿಂದ ಅವನ ಸೊಂಟದ ಮೇಲೆ ಬಿದ್ದಳು. ಹುಡುಗ ಅನಿರೀಕ್ಷಿತ ಒದೆಗೆ ತತ್ತರಿಸಿ ಬಕ್ಕಬರಲೆ ಬೆನ್ನುಮೇಲಾಗಿ ಬಿದ್ದು ಕೆಸರು ಮುಕ್ಕಿದ. ಗಕ್ಕನೆ ಅಂಗಾತ ಹೊರಳಿ ಚಿಮಣಾಳನ್ನು ನೋಡಿ ಅವಕ್ಕಾದ! ಸೀರೆ ಜಾರಿತ್ತು. ತುಂಬಿಕೊಂಡ ಕೆಂಪು ಕೆಂಪಾದ ತೊಡೆಯ, ಒತ್ತೊತ್ತಿ ತಿಟಗುಡುವ ಕೆಂಪು ಚಡ್ಡಿಯ ತಳ್ಳಿಕೊಂಡು ಉಬ್ಬಿದ ದುಂಡುದುಂಡಾದ ನಿತಂಬ, ಸಣ್ಣ ನಡು, ಬಿಗಿದ ಕುಬಸದ ಕಟ್ಟಿಗೊಗ್ಗದ ಉಬ್ಬಿದೆದೆ – ಹೂನಗೆ ನಗುತ್ತ ತೊದಲಿ ಹಾಡುತ್ತ ತೇಲುಗಣ್ಣು ಮೇಲುಗಣ್ಣಾಗಿ ಕುಣಿಯುತ್ತಿದ್ದಳು. ಮೈಯಲ್ಲಿ ಬೆಂಕಿ ಹರಿದಾಡಿ ಸೊಂಟದಿಕ್ಕಟ್ಟಿನ ಹುರಿ ಬಿಗಿದು ಅಳ್ಳಳ್ಳಾಯ ಹೋರಿ ಹುಡುಗ ಹೊಸ ಸಡಗರಕ್ಕೆ ತಳ್ಳಂಕಗೊಂಡ. ಕಣ್ಣಿ ಕಿತ್ತಂತೆ ಒಂದೆರಡು ಬಾರಿ ಹುಕಿಯಿಂದುಕ್ಕುವಷ್ಟರಲ್ಲಿ ಚಿಮಣಾ ಅವನೆದೆಯ ಮೇಲೆ ಕೆಸರುಗಾಲೂರಿ ಹೊಸಕುವಾಗ ಜೋಲಿತಪ್ಪಿ ಬಿದ್ದಳು. ಹುಡುಗ ಏಳಬೇಕೆಂದಿದ್ದ. ಗಪ್ಪನೆ ತೆಕ್ಕೆಹಾದಳು. ಗಿಣಿ ಜೋಳದ ತೆನೆಗೆ ಜೋತುಬಿದ್ದು ತಿನ್ನುವಂತೆ ಎಳೆದೆಳೆದು ಕೆನ್ನೆ ಕಚ್ಚಿದಳು. ಇಬ್ಬರ ರಭಸಕ್ಕೆ ಸುತ್ತಲ ಜೋಳದ ಬೆಳೆ ಕಡಕಡಕಡ ಮುರಿಯಿತು.

ಮೋಡ ಒಡೆದವರಂತೆ ಖಡ್‌ಖಡಲ್ ಗರ್ಜಿಸಿ, ಘರ್ಷಿಸಿ ಗುಡಗಿ ಮಳೆ ಬಿತ್ತು. ಇಡೀ ಮುಗಿಲು ಹಾಗೇ ಹರಿದುಬಿದ್ದಂತೆ ಧೋಧೋಧೋ ಒಂದೇ ಸವನೆ ನೀರು ಸುರಿಯಿತು. ನೀರು ಬೇರಿನ ಸಂದಿಗೊಂದಿಗಿಳಿದು ಹರಿದಾಡಿತು. ರಭಸ ತಡೆಯದೆ ಬೆಳೆ ಚಡಪಡಿಸಿ ಒಲೆದಾಡಿತು. ಬೆಳೆಗೆ ಏನಾದರಾಗಲಿ ಮುಗಿಲು ಮೋಡ ಖಾಲಿಯಾಗುವ ತನಕ ಸುರಿಯಿತು. ನೆಲ ಕಣ್ಣುಮುಚ್ಚುವಷ್ಟು ತೃಪ್ತವಾಯಿತು.

ಖಬರು ಬಂದಾಗ ಸುಂದರಿ ಬಾಡಿದ ಎಳೆಬಾಳೆಯ ಸೊಪ್ಪಾಗಿದ್ದಳು. ಸೊಂಟದ ಹುರಿ ಸಡಿಲಾಗಿ ಸಣ್ಣಗೆ ನೋಯತ್ತಿತ್ತು. ತೇಗುಸಿರು ನಿಂತಿರಲಿಲ್ಲ. ಹುಲಿಯ ಬಾಯಿಂದ ತಪ್ಪಿಸಿಕೊಂಡು ಬಂದ ಹಾಗೆ ಮೈತುಂಬ ಗಾಯಗಳಾಗಿದ್ದವು. ಎದ್ದು ಕೆಸರು ಮೆತ್ತಿದ ಸೀರೆಯನ್ನೇ ಸುತ್ತಿಕೊಂಡಳು. ಶಿವನಿಂಗ ತಪ್ಪುಮಾಡಿದವನಂತೆ ಅಳುಮುಖ ಮಾಡಿಕೊಂಡು ಮುದ್ದೆಯಾಗಿ ದೂರ ಕೂತಿದ್ದ. ಕೆಳದುಟಿ ನೆತ್ತರಾಡಿತ್ತು. ಕೆನ್ನೆ, ಕತ್ತಿನ ಮೇಲೆ ಹಲ್ಲಿನ ಗುರುತು ಮೂಡಿದ್ದವು. ಬೆರಗಿನ ಎಳೆತನದಲ್ಲೊಬ್ಬ ಗಡುಸು ಗಂಡಸನನ್ನು ಸೃಷ್ಟಿಸಿದ ತೃಪ್ತಿಯಿಂದ ಮಾತಾಡದೆ ಮುಂದೆ ನಡೆದಳು. ಈತ ಮಂದಿ ನೋಡ್ಯಾರೆಂದು ಬಾಗಿ ಬೆನ್ನು ಹತ್ತಿದ.

ಜೋಳದ ಬೆಳೆ ದಾಟಿ ಬಂದರು. ಹಳ್ಳ ತುಂಬಿ ಹರಿಯುತ್ತಿತ್ತು. ಶಿವನಿಂಗ ಮುಂದಾಗಿ ದಾಟಿದ. ಎದೆಮಟ ನೀರಿತ್ತು, ಸೆಳೆವಿತ್ತು. ಇವಳಿನ್ನೂ ಈಚೆ ದಡದಲ್ಲೇ ಇದ್ದಳು. ಅವಳಿಗೂ ಭಯ. ಕುಡಿದ ಮತ್ತಿನ್ನೂ ಇಳಿದಿರಲಿಲ್ಲ. ನೆತ್ತಿ ಭಾರವಾಗಿತ್ತು. ಕೈ ಹಿಡಿದು ದಾಟಿಸೆಂಬಂತೆ ಸನ್ನೆ ಮಾಡಿದಳು. ಶಿವನಿಂಗ ಸುಮ್ಮನೇ ನಿಂತ. "ಯಾರ ಮುಂದ ಹೇಳಾಣಿಲ್ಲ ಬಾ" ಎಂದಳು. ಸುತ್ತ ಮಂದಿ ಇಲ್ಲದ್ದನ್ನು ಖಾತ್ರಿ ಮಾಡಿಕೊಂಡು ಬಂದ ಕೈ ಹಿಡಿದ. ಹೌಹಾರಿದಂತೆ ಅಭಿನಯಿಸಿ "ಎತ್ತಿಕೊಂಡು ದಾಟಿಸಲ್ಲಾ" ಎನ್ನುತ್ತಾ ತಾನೇ ಅವನನ್ನು ಬಗ್ಗಿಸಿ ಹೆಗಲ ಮೇಲೆ ಕೂತಳು. ಅವಸರವಾಗಿಯೇ ದಾಟತೊಡಗಿದ. ಸುಂದರಿ ಅವನ ಕೆನ್ನೆಯ ಮೇಲಿನ ಹಲ್ಲಿನ ಗುರುತುಗಳನ್ನು ನೇವರಿಸುತ್ತಿದ್ದಳು. ಇನ್ನೇನು ದಾಟಲಿದ್ದರು ಅಷ್ಟರಲ್ಲಿ ಯಾರೋ ದೂರದಲ್ಲಿ "ಏ ಶಿವನಿಂಗಾ" ಎಂದು ಕರೆದದ್ದು ಕೇಳಿತು. "ಎಪ್ಪಾ ಯಾರೋ ಬಂದ್ರೋ" ಎಂದವನೇ ಅವಳನ್ನಲ್ಲೇ ಚೆಲ್ಲಿ ಚೆಂಗನೇ ಹಾರಿ ಕಬ್ಬಿನ ತೋಟದಲ್ಲಿ ಮಾಯವಾದ.

## ಬಾರೊ ಬಾರೊ ನಮ್ಮಯ್ಯಾ

ಕೇಳಬೇಕೇ? ಮಾರನೇ ದಿನ ಸೂರ್ಯ ನೆತ್ತಿಗೆ ಬರುವುದರೊಳಗಾಗಿ ಹೊಲಗೇರಿಯಾಚೆ, ಲಗಮವ್ವನ ಗುಡಿಸಲದಿಂದ ಸ್ವಲ್ಪ ದೂರದಲ್ಲೇ ಹೊಸ ಗುಡಿಸಲೆದ್ದಿತು. ಸ್ವತಃ ಗುಡಸೀಕರನೇ ಮುಂದೆ ನಿಂತು ಆದರ ಹುವೇನವೇ ನೋಡಿಕೊಂಡ. ಒಂದಿಬ್ಬರು ಆಳುಗಳನ್ನು ಹೆಚ್ಚಾಗಿ ಹಚ್ಚಿಸಿ ಹಸನು ಮಾಡಿಸಿದ. ಜನ ಇದನ್ನು ಅಷ್ಟಾಗಿ ಗಮನಿಸಲಿಲ್ಲ. ದುರ್ಗಿ ಮಾತ್ರ ಲಗಮವ್ವನ ಕಣ್ಣು ತಪ್ಪಿಸಿ ಆಗಾಗ ಏನೋ ನೆಪಗಳಿಂದ ಹೊರಬಂದು ಗುಡಸೀಕರನನ್ನೇ ಆಸೆಬುರುಕಿಯಾಗಿ ನೋಡುತ್ತಿದ್ದಳು. ತನ್ನ ಕಡೆ ಒಂದು ಸಲವಾದರೂ ನೋಡಲೆಂದು ಹಿಂದೆ ಮುಂದೆ

ಸುಳಿದಾಡಿದಳು. ಹಾದುಹೋಗುತ್ತಿದ್ದ ಅವ್ವಕ್ಕಗಳನ್ನು ಸ್ವಲ್ಪ ಏರುದನಿಯಲ್ಲೇ ಮಾತಾಡಿಸಿ ವಿನಾಕಾರಣ ಕುಲುಕುಲು ನಕ್ಕಳು. ಇವಳ ಈ ಹಗುರನಡೆ  ಲಗಮವ್ವನಿಗೆ ತಿಳಿದು ಗದರಿಕೊಂಡಳು ದುರ್ಗಿ ವಿಧಿಯಿದಲ್ಲದೆ ಒಳಸೇರಬೇಕಾಯ್ತು.

ಬಂದಂದಿನಿಂದ ಚಿಮಣಾ ಹಾಗೂ ಬಸವರಾಜು ಗುಡಸೀಕರನ ತೋಟದಲ್ಲೇ ಇದ್ದರು. ಈಗ ಅವರ ಬಿಡಾರ ಸಿದ್ಧವಾಯಿತಲ್ಲ. ಮಧ್ಯಾಹ್ನದ ಉರಿಬಿಸಿಲು, ಮೃಗ ಮಳೆಯ ಗುರುತು ಒಡೆದಿರಲಿಲ್ಲ. ದನಕರುಗಳು ಮರದ ನೆರಳಿಗೆ ನಿಂತು ಬಾಯಿಬಿಡುತ್ತಿದ್ದವು ಕೆರೆಯಲ್ಲಿ ಈಜು ಬಿದ್ದ ಮಕ್ಕಳು ದನಗಳ ಹಾಗೆ ಅಲ್ಲೇ ಆಡುತ್ತ ಹೊರಗೆ ಬರಲು ನಿರಾಕರಿಸುತ್ತಿದ್ದವು. ಭಾವುಕ ಭಕ್ತರೀಗ ಗುಡಿಗೆ ಹೋಗಿದ್ದರೆ ಕರಿಮಾಯಿಯ ಮುಖದಲ್ಲೂ ತಿಳಿ ಬೆವರು ಕಾಣಬಹುದಿತ್ತು. ಅರ್ಥಾತ್ ಅಂಥಾ ಬಿಸಿಲಿತ್ತು. ಇಂಥಾ ಉರಿ ಉರಿ ಬಿಸಿಲಿನಲ್ಲಿ ತೋಟದಿಂದ ಚಿಮಣಾ ಮತ್ತು ಬಸವರಾಜು ಕಳ್ಳನ ನೇತೃತ್ವದಲ್ಲಿ ಬಂದು ತಮಗಾಗಿ ತಯಾರಾಗಿದ್ದ ಗುಡಿಸಲು ಹೊಕ್ಕರು.

ಅವರು ಬಂದು ಹೊಕ್ಕದ್ದರಿಂದ ಕೆಲವು ಚಿಮಣಾ ಭಕ್ತರು ಬಂದರು. ಯಾರೂ ಬೆದರಿಸಲಿಲ್ಲವಾದ್ದರಿಂದ ಅಲ್ಲೇ ನಿಂತರು. ಗುಡಸೀಕರ ಇನ್ನೂ ದೇಖರೇಖಿ ಮಾಡುತ್ತ ನಿಂತಿದ್ದಾನೆ. ಚತುಷ್ಟಯರು ಓಡಾಡುತ್ತಿದ್ದಾರೆ. ಭಕ್ತರು ಜೋಡಿಯಾಗಿ ಪರಸ್ಪರ ಭುಜಗಳ ಮೇಲೆ ಕೈಯೂರಿ ಜೊಲ್ಲು ಸುರಿವ ಮಾತಾಡುತ್ತಿದ್ದಾರೆ. ಅಷ್ಟರಲ್ಲಿ ಗುಡಿಸಲ ಒಳಗಿನಿಂದ ಸಂಗೀತ ಕೇಳಿಸಿತು. ಹೊರಗಿನ ಎಲ್ಲರ ಕಿವಿ ನಿಮಿರಿದವು. ಕೆಲಸ ಮಾಡುತ್ತಿದ್ದವರು ಗಪ್‌ಚಿಪ್, ಗೊಂಬೆಗಳ ಹಾಗೆ, ಕೆಲಸದವರು ಕೈಕಾಲು ಮೈ ಹಾಗೆ ಹಾಗೇ ಬರೆದಂತೆ ನಿಶ್ಚಲ ನಿಂತರು. ಚತುಷ್ಟಯರೂ ಕುತೂಹಲದಿಂದ ಸ್ತಬ್ಧರಾದರು. ಹೋಗಿ ನೋಡೋವೆಂದರೆ ಗುಡಸೀಕರ ಇರೋವಾಗ ತಾವು ಒಳಗೆ ಹೋಗೋದು ಹ್ಯಾಗೆ, ಇದ್ದುದರಲ್ಲಿ ಗುಡಸೀಕರನೊಬ್ಬನಿಗೇ ಅದೇನೆಂದು ಗೊತ್ತಿತ್ತು. ಅಷ್ಟರಲ್ಲಿ ಒಳಗಡೆಯಿಂದ ಚಿಮಣಾ ಬಂದು ಚಾದಂಗಡಿಯ ಬಾಗಿಲಲ್ಲಿ ನಿಂತಳು.

ನಮ್ಮ ಕಥೆಯಲ್ಲಿ ಕಾಲಿಟ್ಟ ಹೊಸ ನಾಯಕಿಯನ್ನು, ಕರಿಮಾಯಿಗೆ ಕೈಮುಗಿದು ಸ್ವಾಗತಿಸೋಣ. ಊರಿನಲ್ಲಿ ಹೊಸ ಗಾಳಿ ಸುಳಿಯಲೆಂದು ಕೂಸುಗಳ ಆರೋಗ್ಯ ಕೆಡದಿರಲೆಂದು, ಹಚ್ಚಿದ ಎಳೆ ದೀಪ ಕಳೆಯದಿರಲೆಂದು ಹಾರೈಸೋಣ.

ಬಂದಳಲ್ಲ, ನೋಡಿದರೆ ಎಂಥ ಅಪರೂಪದ ರೂಪ! ದಟ್ಟವಾಗಿ ಕಾಡಿಗೆ ಹಚ್ಚಿದ ಬಟ್ಟಲಗಣ್ಣು; ಎಸಳು ಮೂಗು, ನಕ್ಕು ನಕ್ಕು ಈಗಷ್ಟೇ ಸುಮ್ಮನಾದ, ಇಲ್ಲವೇ ನಗಲಿದ್ದಾಳೆನಿಸುವಂಥ ತುಟಿಗಳು, ಚೂಪುಗದ್ದ, ಮೇಲೆ ಎಳೆ ಬೆವರಿನಿಂದ ಹಣೆಗಂಟಿದ ಸುರುಳಿ ಸುರುಳಿ ಮುಂಗುರುಳು – ಒಮ್ಮೆ ನೋಡಿದರೆ ಸಾಕು ಕಣ್ಣು ತುಂಬುತ್ತವೆ; ಎದೆ ಕೂಡ. ಸದ್ಯಕ್ಕೆ ಒಂದೇ ಒಂದು ಸಣ್ಣ ಹೋಲಿಕೆಯಿಂದ ಆಕೆಯ ವರ್ಣನೆಯನ್ನು ಮುಗಿಸಬಹುದು; ಬಂಗಾರದ ಮುಖ ಹಾಕಿದಾಗಿನ ಕರುಮಾಯಿಯ ವಿಗ್ರಹ ಇದೆಯಲ್ಲ; – ನೀವು ಭಾವುಕರಾಗಿ ನೋಡಿದರೆ ಚಿಮಣಾ ಹಾಗೆ ಕಾಣಿಸುತ್ತಿದ್ದಳು. ಆದರೆ ಆ ಊರಿನ ಯಾರಿಗೂ ಈ ಹೋಲಿಕೆ ಹೊಳೆಯುವುದು ಸಾಧ್ಯವಿರಲಿಲ್ಲ.

ಚಿಮಣಾಳ ಹಿಂದಿನಿಂದ ಬಸವರಾಜು, ಅವಳೊಂದಿಗೆ ಬಂದಿದ್ದವನು, ಎಡಗೈಯಲ್ಲಿ ಸಣ್ಣ ರೇಡಿಯೋ ಹಿಡಿದುಕೊಂಡು ಹೊರಬಂದ. ಬಣ್ಣಬಣ್ಣದ ಉದ್ದ ತೋಳಿನ ಅಂಗಿ ತೊಟ್ಟಿದ್ದ. ಕೆಳಗೆ ಸೊಂಟದಿಂದ ಅಂಗಾಲಿನ ತನಕ ಇನ್‌ಶರ್ಟ್ ಮಾಡಿ ಪ್ಯಾಂಟು ಹಾಕಿದ್ದ ಪಾದ ಮುಚ್ಚುವ ಹಾಗೆ ಬೂಟು ಹಾಕಿದ್ದ. ಎಡಗೈಯಲ್ಲಿ ರೇಡಿಯೋ ಇತ್ತು. ಬಲಗೈಯಲ್ಲಿ ಸಿಗರೇಟಿತ್ತು. ಸೇದುತ್ತ ಆಗಾಗ ಮೂಗು ಬಾಯಿಗಳಿಂದ ನಾಜೂಕಾಗಿ ಹೊಗೆಬಿಡುತ್ತಿದ್ದ. ಹಾಗೆ ಬಿಟ್ಟಾಗ ಹೊಗೆ ಚಕ್ರಗಳ ಸಣ್ಣ ದೊಡ್ಡ ಸರಪಳಿ ಹೊರಬರುತ್ತಿತ್ತು. ಈಗ ಎಲ್ಲರೂ ತನ್ನನ್ನೇ ನೊಡುತ್ತಿದ್ದಾರೆಂದು ಅವನಿಗೆ ಗೊತ್ತಿತ್ತು. ತಾನು ಎಲ್ಲಿಗೆ ಹೋದರೆ ಅಲ್ಲಿ ಬೆನ್ನುಹತ್ತತ್ತಾರೆಂದು ಅವನಿಗೆ ಗೊತ್ತಿತ್ತು. ಅದಕ್ಕೇ ಆತ ಎದುರಿನ ಗುಡಸೀಕರನನ್ನು ಮಾತಾಡಿಸಲಿಲ್ಲ. ತನ್ನ ಪಾಡಿಗೆ ತಾನು ರೇಡಿಯೋ ಹಾಡು ಕೇಳುತ್ತ ಊರು ನೋಡುವವನಂತೆ ಹೊರಟ. ಅಲ್ಲಿದ್ದವರು ಬೆರಗೋ, ಹುಯ್ಯೋ ಹೋ ಎನ್ನುತ್ತ ವಶೀಕರಣಕ್ಕೆ ಒಳಗಾದವರಂತೆ ಬೆನ್ನಹತ್ತಿದರು.

ಮಂದಿಯ ಕಲ್ಪನೆಗೆ ದೊಡ್ಡ ಆಘಾತವಾಗಿತ್ತು. ಸಣ್ಣ ಪೆಟ್ಟಿಗೆ ಇಷ್ಟು ಚೆನ್ನಾಗಿ ಹಾಡುವುದೆಂದರೇನು ಕೆಲವು, ಪೆಟ್ಟಿಗೆಯಲ್ಲಿ ಕಿರುಬೆರಳ ಗಾತ್ರದ ಜನ ಇದ್ದಾರೆಂದು ಹುಡುಗರು, ಇದೆಲ್ಲ ಯಂತ್ರವೆಂದು ಬಲಿತವರು, ಹೌಂದು, ಮಲೆನಾಡಿನಲ್ಲಿ ಯಂತ್ರ ಮಂತ್ರ ಮಾಡುವವರಿರುತ್ತಾರೆಂದು,

ಇದು ಅವರ ಕರಾಮತ್ತು ಎಂದು ಇನ್ನು ಕೆಲವರು, ಇಂಗರೇಜಿಯವರ ಜಾದೂಗಾರಿಕೆಯೆಂದು ತಿಳಿದವರು – ಒಂದೇ ಎರಡೇ ಹತ್ತು ಹೆಜ್ಜೆ ಬೆನ್ನು ಹತ್ತುವುದರೊಳಗೆ ಒಬ್ಬೊಬ್ಬನ ತಲೆಯಲ್ಲಿ ಕನಿಷ್ಠ ಹತ್ತೆಂಟು ಕಲ್ಪನೆ ಹುಟ್ಟಿ ತೇಲಿ ಮುಳುಗತೊಡಗಿದವು. ಎಲ್ಲರ ಕಲ್ಪನೆಗಳು ಏಕದಂ ಕ್ರಿಯಾಶೀಲವಾದವು. ಎಲ್ಲರೂ ಈಗ ಎರಡಾಗಿದ್ದರು: ರೇಡಿಯೋ ಕೇಳಲು ಕಿವಿಯಾದರು, ಬಸವರಾಜನನ್ನು ನೋಡಲು ಕಣ್ಣಾದರು.

ಸನ್ನಿವೇಶದ ಸರಿಯಾದ ಲಾಭ ಪಡೆದವರು ಚತುಷ್ಟಯರು. ಎಷ್ಟೆಂದರೂ ಬಸವರಾಜು ತಾವು ಕರತಂದವನಲ್ಲವೆ? ಅವನ ಬಗ್ಗೆ ಎಲ್ಲಿಲ್ಲದ ಅಭಿಮಾನ ಮೂಡಿತು. ಕಳ್ಳ ಒಂದೆರಡು ಸಲ, ಹೋಗುತ್ತಿದ್ದ ಬಸವರಾಜನ ಭುಜದ ಮೇಲೆ ಕೈಹಾಕಲು ನೋಡಿದ. ಅದು ಸಾಧ್ಯವಾಗದ್ದಕ್ಕೆ ತಂತಾನೆ 'ನಮ್ಮ ದೋಸ್ತಿ' ಎಂದು ಹೇಳಿಕೊಂಡು ನಕ್ಕ. ಜನರ ಅಜ್ಞಾನಕ್ಕೆ ಚತುಷ್ಟಯರಿಗುಂಟಾದ ಮರುಕ ಅಷ್ಟಿಷ್ಟಲ್ಲ. ಏನೇನೋ ಮಾತಾಡಿಕೊಂಡು, ಕಲ್ಪನೆಗಳನ್ನೋಡಿಸಿಕೊಂಡು ಹೋಗುತ್ತಿದ್ದ ಜನರಿಗೆ ಅವರೇ ತಿಳುವಳಿಕೆ ಹೇಳಬೇಕಾಯಿತು. ಗುಡಸೀಕರ ಹಿಂದೆ ಇದನ್ನು ವರ್ಣಿಸಿ ಇದರ ಹೆಸರು 'ರೇಡವೇ' ಎಂದು ಹೇಳಿದ್ದನ್ನು ಜ್ಞಾಪಿಸಿಕೊಂಡು ಆ ಜ್ಞಾನವನ್ನು ಎಲ್ಲರಿಗೂ ಅಭಿಮಾನಪೂರ್ವಕ ಹಂಚುತ್ತಿದ್ದರು. ಅಲ್ಲದೆ ಬೆಂಬತ್ತಿದ ಗುಂಪಿನಲ್ಲಿ ಹೆಜ್ಜೆಗೊಬ್ಬೊಬ್ಬ ಹೊಸಬ ಸೇರಿಕೊಳ್ಳುತ್ತಿದ್ದ. ಹೆಜ್ಜೆಗೊಮ್ಮೆಮ್ಮೆ ಹೊಸದಾಗಿ ವಿವರಿಸುತ್ತಿದ್ದರು. ಆಶ್ಚರ್ಯವೆಂದರೆ ಉದರಿಯಿಲ್ಲದ ಮೆರೆಮಿಂಡ ಈ ದಿನ ಪುಷ್ಕಳ ಉದಾರಿಯಾಗಿಬಿಟ್ಟ. ಗುಂಪಿನ ಇಬ್ಬರಿಗೆ ಸಿಗರೇಟಿನ ತುಂಡು ಕೊಟ್ಟು ಹೊತ್ತಿಸಿಕೊಳ್ಳಲು ಕಡ್ಡೀಪೆಟ್ಟಿಗೆ ಕೂಡ ಕೊಟ್ಟ.

ಅಕಸ್ಮಾತ್ ಘಟಿಸಿದ ಸಾವಿನ ಸುದ್ದಿಯಷ್ಟೇ ತೀವ್ರವಾಗಿ ಬಸವರಾಜೂನ 'ರೇಡವೇ' ಸುದ್ದಿ ಊರಲ್ಲಿ ಹಬ್ಬಿತು. ಹುಡುಗರು, ತರುಣರು, ಮುದುಕರು ಹೀಗೆ ಮೊದಮೊದಲು ಹತ್ತಿಪ್ಪತ್ತಿದ್ದ ಗುಂಪು ಬರುಬರುತ್ತ ನೂರಾರಾಯ್ತು. ಬಸವರಾಜನಿಗೆ ಪ್ರಾರಂಭದಲ್ಲಿ ದಿಗಿಲಾಯಿತಾದರೂ ಮುಂದೆ ವಿಚಿತ್ರ ಖುಷಿಯಾಗತೊಡಗಿತ್ತು. ಸಿಗರೇಟು ಹೆಚ್ಚಗಿಯೇ ಸೇದಿದ. ಇನ್ನಷ್ಟು ಹೊಗೆಚಕ್ರ ಬಿಟ್ಟ. ಅದು ಅದೃಶ್ಯ ಯಂತ್ರವೊಂದರ ಉರುಳುವ ಚಕ್ರಮಾಲೆಯಂತೆ ಕಾಣುತ್ತಿತ್ತು. ಊರು ಸುತ್ತಿ ಗುಡಿಸಲಿಗೆ ಬಂದ. ಅಂತೂ ಹೊಸ ಚಹದಂಗಡಿಯ ನವೀನ ಪ್ರಾರಂಭ ಈ ರೀತಿ ಆಯ್ತು.

ಅದು ಅಡ್ಡವಾರವಾದುದರಿಂದ, ಕರಿಮಾಯಿ ಮೈತುಂಬ ಬೇಕಾಗಿದ್ದಿರಲಿಲ್ಲ. ಆದರೆ ಅ ದಿನ ಸಂಜೆ ಕರಿಮಾಯಿ ಮೈತುಂಬಿದಳು. ಕೂಡಲೇ ಗೌಡನಿಗೆ, ಹಿರಿಯರಿಗೆ ಕರೆಹೋಯಿತು. ಎಲ್ಲ ಬಂದರು. ತಾಯಿ ವಿಚಿತ್ರವಾಗಿ ಬಿಕ್ಕುತ್ತಿದ್ದಳು. ಬಿಕ್ಕುತ್ತ ಸಂಕಟಪಡುತ್ತಿದ್ದಳು. "ತಾಯೀ ಯಾಕ ಅಳಾಪ ಮಾಡತಿ? ಅದೇನೈತಿ ನಿನ್ನ ಮಕ್ಕಳ ಮುಮದ ಹೇಳಬಾರದ?" ಎಂದ ಗೌಡ. ಆದರೂ ತಾಯಿ ಬಾಯಿ ಬಿಡಲಿಲ್ಲ. ಬರೀ ದುಃಖ ಮಾಡಿದಳು. ಬಿಕ್ಕಿದಳು. ಕಣ್ಣೀರು ಸುರಿಸಿದಳು. ಬಾಯಿ ಬರಲೆಂದು ಬಂಡಾರೆಸೆದರು. ಒಂದೆರಡು ಸಾರಿ ಅಳುವ ಮುದಕಿ ಹಾಗೆ ದನಿತೆಗೆದಳು. ಮತ್ತೆ ಕಣ್ಣೀರು ಸುರಿಸಿದಳು, ಬಿಕ್ಕಿದಳು. ಬಾಯಿ ಮಾತ್ರ ಬಿಡಲಿಲ್ಲ. ಗೌಡ ದಿಂಡುರುಳಿ ಕಾಲು ಹಿಡಿದ. ಹಿರಿಯರೂ ಹಿಡಿದರು. ಹರಕೆ ಕೂಡ ಹೊತ್ತರು. ಅಂತೂ "ಹರಿಕಿ ಹೊತ್ತವರ ಹೊತ್ತೀಗಿ ಆಗಾಕಿ" ಎಂಬ ತಾಯಿಯ ವರ್ಣನೆ ಇಂದು ಹುಸಿಯಾಯಿತು.

## ಎತ್ತಣಿಂದೆತ್ತವಯ್ಯ

ಆ ಊರಿನ ಜನಗಳ ತಲೆಯಲ್ಲೀಗ ಬೆಳೆ, ಭೂಮಿಗಳನ್ನು ಬಿಟ್ಟು ಬೇರೆ ವಿಚಾರ ಸುಳಿಯುವುದೇ ಸಾಧ್ಯವಿಲ್ಲ. ಪ್ರಕೃತಿಯೇನೋ ಸಮೃದ್ಧವಾಗಿ ಕೊಟ್ಟುಬಿಟ್ಟಿತ್ತು. ಮಳೆಯನ್ನು, ಬೆಳೆಯನ್ನು, ಕಳೆಯನ್ನು ಕೂಡ, ಬೆಳೆಕಳೆ ಬೇರ್ಪಡಿಸಬೇಕು. ಸಮೃದ್ಧಿಯನ್ನು ಹತೋಟಿಯಲ್ಲಿಟ್ಟುಕೊಂಡು ಗಟ್ಟಿಮುಟ್ಟಾದದ್ದಕ್ಕೆ, ಬೆಳೆಯುವ ಅವಕಾಶ ಕಲ್ಪಿಸಬೇಕು. ಮೈಕೈ ಮುರಿದು ಈಗ ದುಡಿದರೇ ಉಂಟು, ಇಲ್ಲದಿದ್ದರಿಲ್ಲ. ದಿನ ಹೆಚ್ಚುಕಮ್ಮಿಯಾದರೆ ಬೆಳೆ ಕೈಬಿಟ್ಟಂತೆ ಲೆಕ್ಕ. ಸಣ್ಣ ದೊಡ್ಡವರೆನ್ನದೇ, ಹೆಂಗಸು ಗಂಡಸೆನ್ನದೇ ಎಲ್ಲರೂ ಹೊಲಗಳಿಗೆ ಹೋಗುತ್ತಿದ್ದರು. ಬೆಳಗಿಂದ ರಾತ್ರಿಯ ತನಕ ಮೈಬಗ್ಗಿಸಿ ರಟ್ಟೆಮುರಿದು ದುಡಿಯುತ್ತಿದ್ದರು. ಇನ್ನು ಹರಟೆ ಹೊಡೆಯುವುದೆಲ್ಲಿ ಬಂತು? ಸರಿಯಾಗಿ ಮೈತುರಿಸಿಕೊಂಡೇನೆಂದರೂ ಸಮಯವಿರಲಿಲ್ಲ ಯಾರಿಗೂ. ಹಾಗೆ ದುಡಿದು ಕತ್ತಲೆ ಮಾಡಿ ಮನೆಗೆ ಬಂದರೆ ಹಸಿದ ಹೊಟ್ಟೆಗಿಷ್ಟು

ತಂಗಳೋ, ಬಿಸಿಯೋ ಕೂಳು ಬಿದ್ದರಾಯ್ತು. ಆಮೇಲೆ ನೆಲ ಸಿಕ್ಕೀತೋ, ಇಲ್ಲವೋ ಅಂತ ಸಿಕ್ಕಸಿಕ್ಕಲ್ಲಿ ಸಿಕ್ಕ ಹಾಗೆ ಬಿದ್ದು ಗೊರಕಿ ಹೊಡೆಯುತ್ತಿದ್ದರು. ಈಗ ದುಡಿಯದವರೆಂದರೆ ಗುಡಸೀಕರ, ಬಸವರಾಜು ಮತ್ತು ಚಿಮಣಾ – ಮೂವರೇ.

ಗುಡಸೀಕರನ ಹೊಲದ ಕೆಲಸ ಆಳುಗಳು ಮಾಡುತ್ತಿದ್ದರು. ಬಸವರಾಜನಿಗಂತೂ ಸಿಗರೇಟು ಸೇದುವುದು, ರೇಡವೇ ಕೇಳುವುದು, ಗುಡಸೀಕರನ ತೋಟದ ಕಡೆ ಅಡ್ಡಾಡಿ ಬರುವುದು ಇಷ್ಟು ಬಿಟ್ಟರೆ ಬೇರೆ ಕೆಲಸವಿರಲಿಲ್ಲ. ಅವನ ಬೆಳಗಾವಿಉ ಪ್ರತಾಪ ಕೇಳುವುದಕ್ಕೆ ಈಗ ಒಬ್ಬನೂ ಸಿಕ್ಕುತ್ತಿರಲಿಲ್ಲ. ಜನ ಎಲ್ಲ ಮಲಗಿ ನಿದ್ರಿಸುತ್ತಿದ್ದರೆ ಈ ಮೂವರೇ ಭೂತಗಳ ಹಾಗೆ ಎಚ್ಚೆತ್ತಿದ್ದು, ಏನೇನೋ ಹಲಬುತ್ತಿದ್ದರು. ಚಿಮಣಾಳ ಪೂರ್ವ ವೃತ್ತಾಂತವೂ ಅಸ್ಪಷ್ಟವಾಗೇ ಇದೆ. ಬಸವರಾಜು ಮತ್ತು ಚಿಮಣಾ ಇಬ್ಬರೇ ಮಾತಾಡಿದಾಗಿನ ಕೆಲವು ಸಂಭಾಷಣೆಗಳಿಂದ ಅವಳ ಜೀವನ ಹೀಗಿತ್ತೆಂದು ತಿಳಿಯುತ್ತದೆ: ಅವಳ ಹೆಸರು ಸುಂದರಿಯೆಂದು. ಅಲತಗಿ ಸೀತವ್ವನ ಬಳಿ ಚಿಮಣಾ ವೃತ್ತಿ ಕಲಿತಳಂತೆ. ಆದರೆ ಸುತ್ತಲಿನ ಯಾವುದೇ ಹಳ್ಳಿಗೆ ಬಯಲಾಟಕ್ಕೆ ಬಂದವಳಲ್ಲ. ಹೆಸರು ಮಾಡಿಕೊಂಡವಳಲ್ಲ. ಸುಂದರವಾದ ಮೈಯೊಂದೇ ಸದ್ಯಕ್ಕೆ ಅವಳಿಗಿದ್ದ ಚಿಮಣಾ ಲಕ್ಷಣ. ವಯಸ್ಸಿನ ಮದ ನೆತ್ತಿಗೇರಿದ ದುರ್ಬಲ ಕ್ಷಣದಲ್ಲಿ ಬಸವರಾಜೂನ ವಶವಾಗಿರಬೇಕು. ಸೀತವ್ವನ ಮನೆ ಬಿಟ್ಟು ಒಂದೆರಡು ನಾಟಕ ಕಂಪನಿ ಸೇರಿದ್ದಳಂತೆ. ಸಿನೆಮಾ ನೋಡಿದ್ದಳಂತೆ, ಗಳಿಸಿದ್ದಳಂತೆ. ಗಳಿಸಿದ್ದನ್ನು ಉಂಡುಟ್ಟು ಖರ್ಚುಮಾಡಿದ್ದಳಂತೆ. ಅಂಥಾ ಚಿಕ್ಕ ವಯಸ್ಸಿನಲ್ಲೇ ಅವಳು ಉಂಗುಟಕ್ಕೆ ಹಾಕಿ ಹರಿದ ಹೆಚ್ಚಿನ ಸೀರೆಗಳ ಸಂಖ್ಯೆಯೇ ಒಂದು ಡಜನ್ನಾಗಿತ್ತಂತೆ!

ಬೆಳಗಾವಿಯಲ್ಲಿದ್ದಂಥ ಹಲ್‌ಚಲ್ ಭಾವನೆಗಳಿಗೆ ಇಲ್ಲಿ ಅವಕಾಶವಿರಲಿಲ್ಲ. ಉಟ್ಟು ತಿರುಗಲಿಕ್ಕಿಲ್ಲ, ನಗಾಡಿ ಮೆರೆದಾಡುವಂತಿಲ್ಲ. ಹಾಕಿಕೊಟ್ಟ ಚಹದಂಗಡಿ ಸರಿಯಾಗಿ ನಡೆಯಲಿಲ್ಲ. ಒಂದೆರಡು ಸಲ ಬಸವರಾಜನಿಗೆ ತನ್ನ ಅಸಮಾಧಾನ ತಿಳಿಸಿದಳು. ಅವನು ತಾಳು ವ್ಯವಹಾರ ಮುಗಿಯಲಿ ಎಂದು ಹೇಳುತ್ತಲೇ ಇದ್ದ. ಆ ವ್ಯವಹಾರ, ಅದೇನಿತ್ತೋ, ಬಹುಶಃ ತಾನು ಇಷ್ಟು ದಿನ ಇಲ್ಲಿ ಇದ್ದದ್ದಕ್ಕೆ ಗುಡಸೀಕರನಿಂದ ಪ್ರತಿಫಲ ವಸೂಲಿ ಮಾಡುವುದೇ ಇದ್ದೀತೆಂದು ಭಾವಿಸಿದ್ದಳು.

ಇನ್ನೂ ಜಾಸ್ತಿ ಬೇಸರವಾದದ್ದು ಸದಾ ತನ್ನನ್ನು ಗುಡಿಸಲಿನಲ್ಲಿ ಕೊಳೆ ಹಾಕಿದ್ದಕ್ಕೆ. ಕಣ್ಣಿಬಿಚ್ಚಿದ್ದ ಮಣಕಿನಂತೆ ಅಡ್ಡಾಡಿದವಳು. ರಸಿ ಉಂಡು ತಿರುಗಿದವಳು. ಇಲ್ಲಿ ಸದಾ ಒಲೆಯ ಗುಡಸೀಕರನ ಕೈಹಿಡಿದ ಹೆಂಡತಿಯೆ? ಇವನು ಹಾಕಿದ ಕೂಳಿಗೆ ಹೇಳಿದಂತೆ ಕೇಳಿಕೊಂಡು ಒಲ್ಲದ ಮನಸ್ಸಿನಿಂದ ಯಾಕಿರಬೇಕು? ಗುಡಸೀಕರ ಬಾಯಿ ತುಂಬ ಬಡಿವಾರ ಆಡುತ್ತಿದ್ದ. ತಾಕತ್ತಿಲ್ಲದೆ ಮೈಪರಚಿಕೊಳ್ಳುತ್ತಿದ್ದ. ಹೆಂಗಸರ ಹಾಗೆ ಚಾಡಿ ನುಡಿಯುತ್ತಿದ್ದ. ಹೊಂಚುತ್ತಿದ್ದ. ಇಷ್ಟು ದುಡ್ಡು, ವಯಸ್ಸು, ಅಂತಸ್ತು ಇದ್ದವನು ಹ್ಯಾಗಿರಬೇಕು? ಔದಾರ್ಯವಿದೆ, ವ್ಯರ್ಥ ಸೋರುತ್ತದೆ. ಮಾನ, ಮರ್ಯಾದೆ ದುಡ್ಡಿನಿಂದ ಸಿಗುವುದೆಂದು ಭ್ರಮಿಸಿದವ. ಅಥವಾ ಅದೂ ನಿಜವಿದ್ದೀತು, ಕೆಲವರಿಗೆ. ತನಗಲ್ಲ. ದಿಲ್‌ದಾರ್‌ತನಕ್ಕೆ ದುಡ್ಡು ಬೇಕು. ಹಾಗಂತ ದುಡ್ಡು ಸುರಿದು ದಿಲ್‌ದಾರನೆಂದೆನಿಸಿಕೊಳ್ಳುವುದೂ ಕ್ಷುದ್ರತನ. ಅದು ನಡವಳಿಕೆಯ ಮೇಲೆ ಒತ್ತಡ ಹೇರುವ ನೆತ್ತರಲ್ಲೇ ಇದ್ದಿರಬೇಕು. ಅಥವಾ ಸುತ್ತು ಬಳಸಿ ಯಾಕೆ? ಗುಡಸೀಕರ ತಾನು ಹತ್ತಬಯಸುವ ಕುದುರೆಯಲ್ಲ. ಬಸವರಾಜನೇನೋ ಗಂಡಸು ಖರೆ. ಆದರೆ ಅವನು ಅದಕ್ಕೂ ಬೆಲೆ ಕೇಳುತ್ತಿದ್ದ.

ಆದರೆ ಜಾತ್ಯಾ ಕಸಬೇರಿಗೂ, ಇವಳಿಗೂ ವ್ಯತ್ಯಾಸವಿತ್ತು. ದುಡ್ಡಿಗಾಗಿ ಇವಳೊಮ್ಮೆಯೂ ಕಾಳಜಿ ಮಾಡಲಿಲ್ಲ. ಬರುತ್ತದೆ, ಹೋಗುತ್ತದೆ. ಅಥವಾ ಅದು ಬರೋದೇ ಹೋಗೋದಕ್ಕೆ. ಬಂದ ಗಿರಾಕಿ ಕೊಟ್ಟರೆ ಕೈ ಒಡ್ಡಿದಳು. ಕೊಡದಿದ್ದರೆ ಸುಮ್ಮನಾಗುತ್ತಿದ್ದಳು. ಕೊಟ್ಟಾಗ ಖುಷಿಪಡಲಿಲ್ಲ. ಕೊಡದಿದ್ದಾಗ ಕೊರಗಲಿಲ್ಲ. ಅವಳ ಈ ಸ್ವಭಾವ ಬಸವರಾಜುನಿಗೆ ಬಹಳ ಅನುಕೂಲವಾಗಿತ್ತು. ಗಿರಾಕಿಗಳ ಕೊಡು ಕೊಳ್ಳುವ ವ್ಯವಹಾರ ತಾನು ನೋಡಿಕೊಂಡು ಹಸಿದ ಮೈಯನ್ನಷ್ಟೇ ಇವಳ ಬಳಿಗೆ ಕಳಿಸುತ್ತಿದ್ದ. ಅವನಿಗೆ ಬಂದ ಗಿರಾಕಿಯ ಜೇಬು ಕಾಣಿಸುತ್ತಿತ್ತು. ಇವಳಿಗೆ ಮೈ ಕಾಣುತ್ತಿತ್ತು. ಇವಳ ತೊಡೆಗೆ ಈಡಾಗುವ ಸೊಂಟ ಈ ಭೂಮಿಯ ಮೇಲೆ ಹುಟ್ಟಿಲ್ಲವೆಂದೇ ಅವನ ತೀರ್ಮಾನ. ಅದನ್ನೇ ಮುಂದೆಮಾಡಿ ಶೋಷಿಸುತ್ತಿದ್ದ. ಅವಳೋ ಅತೃಪ್ತ ಜೀವ. ತನಗೇನು ಬೇಕೆಂಬುದು ಗೊತ್ತಲ್ಲದೇ ಹುಡುಕುತ್ತಿದ್ದಳು.

ಈಗೀಗ ಗುಡಸೀಕರನ ಮೈ ಆಕರ್ಷಣೆ ನಂದಿತ್ತು. ''ಸರಪಂಚರು'' ಎಂದು ಬಹುವಚನದಲ್ಲಿ ಮಾತಾಡಿಸುತ್ತಿದ್ದವಳು ಈಗ ನೇರವಾಗಿ ಗುಡಸೀಕರನೆಂದು ಏಕವಚನದಲ್ಲೇ ಮಾತಾಡಿಸುತ್ತಿದ್ದಳು. ಅದು ಅವನ ಅಹಂಕಾರಕ್ಕೆ ಭಾರೀ ಪೆಟ್ಟಾಗಿತ್ತು. ಇದು ಕೂಡದೆಂದು ತಾನೇ ಅವಳಿಗೆ ಹೇಳಬೇಕೆಂದರೆ ಅದು ಹಗುರು ಬಾಯಿಯ ಹೆಂಗಸು. ನಾಲಗೆ ಬಿಗಿಹಿಡಿದು ಗೊತ್ತಿಲ್ಲ. ಸಟ್ಟನೇ ಏನಾದರೂ ಆಡಿಬಿಡುತ್ತಿತ್ತು. ಅದಕ್ಕೇ ಅವನು ಬಸವರಾಜುಗೆ ಹೇಳಿದ. ಇದು ಗೊತ್ತಾಗಿ ಇನ್ನೂ ಹೆಚ್ಚು ಅವನನ್ನು ನೋಯಿಸುತ್ತಿದ್ದಳು. ಒಮ್ಮೆ ಗುಡಸೀಕರ ಚತುಷ್ಟಯರೊಂದಿಗೆ ಕೂತಿದ್ದಾಗ ಕಳ್ಳ ಇವಳನ್ನೇ ಕದ್ದು ನೋಡುತ್ತಿದ್ದ. ಇವಳೂ ಪ್ರೋತ್ಸಾಹಿಸಿದಳು. ಕೊನೆಗೆ ಎಲ್ಲರ ಎದುರಿನಲ್ಲೇ ''ಯಾಕೋ ಕಳ್ಳ ಹಂಗ ನೋಡತಿ ಬೇಕೇನ ಬಾ'' ಎಂದಳು. ಗುಡಸೀಕರನ ಪಿತ್ಥ ನೆತ್ತಿಗೇರಿತು.

"ಯಾಕs ರಂಡೇ ಇದೇನ ಸೂಳೇರ ಮನಿ ಅಂತ ತಿಳಿದೇನ? ಹೇಳಿಧಾಂಗ ಕೇಳಿಕೊಂಡ ಸುಮ್ಮನ ಬಿದ್ದಕೊ''

ಎಂದ. ಇವಳೇನು ಕಮ್ಮಿ?

"ಯಾಕಲಾ ಭಾಡಕೌ? ನನ್ನ ಕೈಹಿಡಿದ ಮದಿವ್ಯಾದಿ? ರೊಕ್ಕಾ ಎಣಿಸಿಕೊಂಡ ತಂದಿ? ಇದ ಅನ್ನಾಣ ಅಂದಿ; ಇನ್ನೊಮ್ಮಿ ಹಿಂತಾ ಮಾತ ಅಂದರ ನಿನ್ನ ಕುರಿ ಮುರಧಾಂಗ ಮುರದೇನು.''

ಕೇಳಬೇಕೆ? ಏನು ಮಾಡುತ್ತಿದ್ದೇನೆಂದು ತಿಳಿಯದೆ ಗುಡಸೀಕರ ಕಾಲ್ಮರಿ ಹಿಡಿದು ಎದ್ದುನಿಂತ. ಇವಳು 'ಹೊಡಿ' ಎಂದು ಎದ್ದಳು. ಬಸವರಾಜು ಬರದಿದ್ದರೆ ಎಲ್ಲಿ ಮುಗಿಯುತ್ತಿತ್ತೋ! ಸದ್ಯ ಹೇಳಿಕಳಿಸಿದಂತೆ ಬಂದು ಇಬ್ಬರನ್ನೂ ಸಮಾಧಾನ ಮಾಡಿದ. ಆ ದಿನವೇ ಬಸವರಾಜೂನನ್ನು ಮನೆಗೆ ಕರೆದೊಯ್ದು, ಇನ್ನೂರು ರೂಪಾಯಿ ಕೊಟ್ಟು ಈಗಿಂದೀಗ ಇವಳನ್ನು ಬೆಳಗಾವಿಗೆ ಕಳಿಸಿಕೊಡೆಂದು ಹಟ ಹಿಡಿದ. ಆ ಇನ್ನೂರು ಕಿಸೆಗೆ ಹಾಕಿ ಮಾತುಗಳಿಂದ ಭರ್ತಿಮಾಡಿದ. ಹಾದಿಬೀದಿಯ ಸೂಳೆಯರಿಗೆ ಗೌಡ ಔದಾರ್ಯ ತೋರಿಸಬಲ್ಲನಾದರೆ ಚಿಮಣಾಳಿಗೆ ನೀಯಾಕೆ ತೋರಿಸಬಾರದು? ಅದು ದೊಡ್ಡದಲ್ಲ, ಅಥವಾ ಅದು ನಿನಗೆ ತಿಳಿಯುತ್ತದೆ; ಏನೋ ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟು ಹೀಗೆ ಮಾಡಿದ್ದಾಳು. ಒಂದು ವೇಳೆ ಅವಳನ್ನು ಬೆಳಗಾವಿಗೆ ಕಳಿಸಿದರೆ 'ಇವನೇನು ಇವಳನ್ನಾಳುತ್ತಾನೆ?' ಅಂತ ದತ್ತಪ್ಪ ಹೇಳಿದ್ದು ನಿಜವಾಗಿ ಬಿಡುತ್ತದೆ. ಅದೂ ಬೇಡವದರೆ ಎಲೆಕ್ಷನ್ ಗೆಲ್ಲಲು ನಮಗವಳು ಬೇಕೇ ಬೇಕು – ಇತ್ಯಾದಿ.

ಒಂದು ದಿನ, ಮಧ್ಯಾಹ್ನ ಆಗಷ್ಟೇ ತಿರುಗಿತ್ತು. ಚಿಮಣಾ ನೀರು ತರಲಿಕ್ಕೆ ಕೊಡ ತಗೊಂಡು ಕೆರೆಗೆ ಹೋದಳು. ಅಂಥ ಅಪವೇಳೆಯಲ್ಲಿ ಅಲ್ಲಿ ಯಾರಿದ್ದಾರೆ? ನೀರು ಹೊಡೆದು ಕೊವನ್ನೇನೋ ತುಂಬಿದಳು. ದೊಡ್ಡ ಕೊಡ, ಹೊರಲಾಗಲಿಲ್ಲ. ಹೀಗೆ ಯಾರಿಲ್ಲದಾಗ ಒಬ್ಬಳೇ ಬಂದವಳಲ್ಲ. ಯಾರಾದರೂ ಬಂದಾರಂದು ಕಾಯ್ದಳು. ಯಾರೂ ಬರಲಿಲ್ಲ. ಕೈಕಾಲು ಮುಖ ತಿಕ್ಕಿ ತಿಕ್ಕಿ ತೊಳೆದುಕೊಂಡಳು. ಅದೇನು ದುರ್ಬುದ್ಧಿ ಬಂತೋ, ಇಲ್ಲೇ ದಂಡೆಯಲ್ಲಿ ಈಜೋಣವೆಂದು ಇಳಿದು ನಾಕೆಂಟು ಹೆಜ್ಜೆ ಹೋದಳು. ಕಾಲ ನೆಲೆತಪ್ಪಿ ಕುಸಿದಳು. ಗಾಬರಿಯಿಂದ ಕೈಕಾಲು ಬಡಿಯುತ್ತ ಅಯ್ಯೋ ಎವ್ವಾ, ಎಪ್ಪಾ ಎನ್ನುತ್ತ ಚೀರಾಡುತ್ತ ಆಳದ ಕೆಳಗಿಳಿಯುತ್ತಿದ್ದಳು. ಗೌಡನ ಮಗ ಶಿವಲಿಂಗ ದೂರದಲ್ಲಿದ್ದವನು ಚೀರಾಟ ಕೇಳಿ ಓಡಿ ಬಂದು, ಬಂದವನೇ ಕೆರೆಗೆ ಧುಮುಕಿದ. ಚಿಮಣಾ ಇನ್ನೂ ನಡುನೀರಿಗೆ ಹೋಗಿರಲಿಲ್ಲವಾದ್ದರಿಂದ ಅವಳನ್ನು ಬದುಕಿಸುವುದು ತೊಂದರೆಯಾಗಲಿಲ್ಲ. ಶಿವಲಿಂಗ ಅವಳ ಸೋರುಮುಡಿ ಹಿಡಿದೆಳೆದ. ಅವಳೋ ಗಾಬರಿಯಾಗಿ ಶಿವಲಿಂಗನನ್ನು ತಬ್ಬಿ ನಡುವಿನತ್ತಲೇ ಎಳೆಯುತ್ತಿದ್ದಳು. ಇದ್ದೆಲ್ಲ ಬಲಪ್ರಯೋಗಿಸಿ ಅವಳ ಹಿಡಿತ ತಪ್ಪಿಸಿ ಎಳೆದ. ಹಾಗೇ ಹಿಡಿದುಕೊಂಡು ಈಜುತ್ತ ದಂಡೆಗೆ ತಂದು ಡಬ್ಬು ಮಲಗಿಸಿ ಬೆನ್ನ ಮೇಲೆ ಭಾರ ಹಾಕಿದ. ನೀರು ಹೊರಬಂತು. ಅಷ್ಟರಲ್ಲಿ ಬಸೆಟ್ಟಿ, ಮೆರೆಮಿಂಡ ಬಂದರು. ಎಲ್ಲರೂ ಸೇರಿ ಉಪಚರಿಸಿ ಮರಳಿ ಗುಡಿಸಲಕ್ಕೊಯ್ದು ಬಿಟ್ಟುಬಂದರು.

ಸ್ವಲ್ಪವೇ ಕೈತಪ್ಪಿದ್ದರೆ, ಶಿವಲಿಂಗ ಬರುವುದು ತಡವಾಗಿದ್ದರೆ ಚಿಮಣಾಳ ಕತೆ ಇಂದಿಗೇ ಮುಕ್ತಾಯವಾಗುತ್ತಿತ್ತು. ಈ ಯೋಚನೆ ಬಸವರಾಜನ ಒಳಗಿಗೆ ಇಳಿಯಲೇ ಇಲ್ಲ. ಅವನ ತಲೆಯಲ್ಲಿ ಬೇರೆ ಹುಳ ಕೊರೆಯುತ್ತಿತ್ತು. ನಿಂಗೂನಿಗೆ ಹೇಳಿ ಕಳಿಸಿದ್ದ. ನಿರ್ಲಿಪ್ತನಾಗಿ ಒಳಗೆ ಹೋಗಿ ಬೇಹೂಶ್ ಆಗಿ ಬಿದ್ದಿದ್ದ ಚಿಮಣಾಳ ಮೇಲೊಂದು ಬಟ್ಟೆ ಹೊದಿಸಿದ. ನಿಂಗೂ ಕರೆದದ್ದು ಕೇಳಿಸಿ ಹೊರಗೆ ಬಂದ.

ಆಗಲೇ ಸಂಜೆಯಾಗಿತ್ತು. ಹೊಲಗಳಿಂದ ರೈತರು ಬರುತ್ತಿದ್ದರು. ಆದರೆ ಯಾರೂ ಗುಡಿಸಲ ಕಟ್ಟೆಯ ಮೇಲೆ ನಿಂಗೂ ಮತ್ತು ಬಸವರಾಜು ಅನ್ಯೋನ್ಯವಾಗಿ ಕೂತದ್ದನ್ನು ಗಮನಿಸಲಿಲ್ಲ. ಜನರ ಹಾದಾಟ ಕಮ್ಮಿಯಾಗೋ ತನಕ ಬಸವರಾಜು ಏನೇನೋ ಹರಟೆ ಹೊಡೆದ. ನಿಂಗೂವಿಗೆ ಪ್ರಿಯವಾದ ಅನೇಕ ಸಂಗತಿಗಳನ್ನು ವರ್ಣಿಸಿದ. ನಿಂಗೂ ದಾಡಿ ಮಾಡಿಕೊಳ್ಳದ ಬಗ್ಗೆ ಆಕ್ಷೇಪಿಸಿದ. ಆತ ನ್ಯಾಯವಾಗಿ ಮಾಡಬೇಕಾದ "ಹೇರ್ ಸ್ಟೈಲ್" ಬಗ್ಗೆ ಮಾತಾಡಿದ. ಆಗಲೇ ರಾತ್ರಿಯಾಗಿ ಜನಸಂಚಾರ ಕಮ್ಮಿಯಾಗಿತ್ತು. ಒಳಗೆ ಕರೆದೊಯ್ದು ಕಪ್ಪು ತುಂಬ ಭಿರಂಡಿ ಕೊಟ್ಟ. ಕುಡಿದ ಮೇಲೆ ಒಳಗಿನ್ನೂ ದೀಪ ಹಚ್ಚಿದ್ದಿಲ್ಲ. ನಿಂಗೂನ ಕೆನ್ನೆಯ ಮೇಲೆ ಕೈತುರಿಸಿದ. ತಾನು ಹುಲಿಯ ಜೊತೆ ಆಟವಾಡತ್ತಿದದೇನೆಂಬುದು ಬಸವರಾಜುನಿಗೆ ಈ ತನಕ ಗೊತ್ತಾಗಿರಲಿಲ್ಲ. ಕೆನ್ನೆ ತುರಿಸಿದ್ದಷ್ಟೇ ತಡ ನಿಂಗೂ ಬೆದೆ ಬಂದ ಪ್ರಾಣಿಯಂತಾದ. ಬಸವರಾಜೂನನ್ನು ಹಿಡಿದೆಳೆದಡರಿ ಇಕ್ಕಟ್ಟಿನ ಸಂಕಟಕ್ಕೆ ಬಾಯಿ ಬಂದು ಬಾಯಿ ಬಾಯಿ ಬಿಟ್ಟಂತಾಗಿ ಕೆಡವಿಕೊಂಡು ಬಿಟ್ಟ. ಬಸವರಾಜು ಲಬೊ ಲಬೊ ಹೊಯ್ಕುಳ್ಳುವುದೊಂದು ಬಾಕಿ. ಇಬ್ಬರೂ ಧಾಂಡಿಗ ಕುಳಗಳು ಕುಸ್ತಿ ಹಿಡಿದಂತೆ ಶಬ್ದವಾಗುವುದನ್ನು ಕೇಳಿ ಚಿಮಣಾಳಿಗೆ ಎಚ್ಚರವಾಗಿ ಯಾರವರಾ? ಎಂದಳು. ಇಬ್ಬರೂ ಮನುಷ್ಯರೊಳಗೆ ಬಂದರು.

ದೀಪ ಹಚ್ಚಿ ಅವನನ್ನು ದೂರ ಕೂರಿಸಿಕೊಂಡು ಯಾರಿಗೂ ಹೇಳುವುದಿಲ್ಲವೆಂಬ ಬಗ್ಗೆ ಆಣೆ ಪ್ರಮಾಣ ಮಾಡಿಸಿಕೊಂಡು ಬಸವರಾಜು ಎಲ್ಲಾ ಬಿಚ್ಚಿ ಹೇಳಿದ:

ಗುಡಸೀಕರನನ್ನು ನೋಡಿ ದುರ್ಗಿ ಪುಳಕಿತಳಾಗೋದನ್ನು ಬಸವರಾಜು ಗಮನಿಸಿದ್ದ. ಗುಡಸಲಿಗೆ ಅವ ಬಂದೊಡನೆ ಅವಳು ಸೊಮಡಿ ಸುಟ್ಟ ಬೆಕ್ಕಿನ ಹಾಗೆ ತನ್ನ ಗುಡಿಸಲ ಹಿಂದೆ ಮುಂದೆ ಏನೇನೋ ನೆವ ಒಡ್ಡಿ ಅಡ್ಡಾಡುತ್ತ ಎತ್ತರದ ದನಿಯಲ್ಲಿ ಲಗಮವ್ವನೊಂದಿಗೆ ಮತಾಡುತ್ತ ವಿನಾಕಾರಣ ನಗುತ್ತ ಕೂರದೆ ನಿಲ್ಲದೆ ಲಗಮವ್ವನೊಂದಿಗೆ ಮಾತಾಡುತ್ತ ಹಾರಾಡುತ್ತ ಪಾತರಗಿತ್ತಿಯಾಗುತ್ತಿದ್ದಳು. ಆತ ಇದ್ಯಾವುದನ್ನೂ ಗಮನಿಸಿರಲಿಲ್ಲ, ಒಂದು ದಿನ ಎಳೇ ಹುಡುಗನೊಬ್ಬನಿಂದ ಮಡಚಿದ ಎಲಡಿಕೆ ಕೊಟ್ಟು ಸರಪಂಚನಿಗೆ ಕೊಡುವಂತೆ ಹೇಳಿ ಕಳಿಸಿದ್ದಳು. ಅದು ತಪ್ಪಿ ಬಸವರಜುನಿಗೆ ಸಿಕ್ಕಿತು. ಬಿಚ್ಚಿ ನೋಡಿದರೆ ಎಲೆಯ ಮೇಲೆ ಸುಣ್ಣದಿಂದ X ಈ ಆಕಾರ ಬರೆಯಲಾಗಿತ್ತು.

ಈ ದಿನ ಚಿಮಣಾ ಕೆರೆಗೆ ಹೋದಳಲ್ಲ. ಬಸವರಾಜು ಒಬ್ಬನೇ ಬಾಗಿಲಿಕ್ಕಿಕೊಂಡು ಒಳಗೇ ಮಲಗಿದ್ದ. ತೋಟಕ್ಕೆ ಹೊರಟಿದ್ದ ಗುಡಸೀಕರ ಹಾಗೇ ಗುಡಿಸಲ ಮೇಲೆ ಹಾದು ಹೋಗೋಣವೆಂದು ಬಮದ. ಚಿಮಣಾ ಇರಲಿಲ್ಲವಲ್ಲ. ಸ್ವಲ್ಪ ಹೊತ್ತು ಕೂತಿದ್ದು, ಎದ್ದು ಹೋದ. ತನ್ನ ಗುಡಿಸಲಲ್ಲಿದ್ದ ದುರ್ಗಿಗೆ ಸರಪಂಚ ಬಂದದ್ದು ಕಂಡಿತ್ತು. ಚಿಮಣಾ ಇಲ್ಲದ್ದು ಗೊತ್ತಿತ್ತು. ಕೂಡಲೇ ಒಳಗೆ ಹೋದಳು. ಮತ್ತೆ ಹೊರಬಂದಳು. ಗುಡಸೀಕರ ಎದ್ದು ಹೋದುದನ್ನು ಅವಳು ಗಮನಿಸಲೇ ಇಲ್ಲ. ಒಳಗಡೆ ಇದ್ದಾನೆಂದೇ ತಿಳಿದು ಮುತ್ತುಗದ ಎಲೆಯಲ್ಲಿ ಸುಣ್ಣದಿಂದೊಂದು ಮಂಡಲ ಬರೆದು, ಅದರಲ್ಲೊಂದು ಚುಕ್ಕೆಯಿಟ್ಟು ಮೂರು ಮಲ್ಲಿಗೆ ಹೂವಿಟ್ಟು ಮಡಿಚಿ ಗುಡಿಸಲಲ್ಲಿ ಎಸೆದು ಓಡಿದ್ದಳು, ಇದೂ ಸಹಜವಾಗಿ ಬಸವರಾಜನಿಗೇ ಸಿಕ್ಕಿತು. ಶಹರದಲ್ಲಿ ಬೆಳೆದ ಅವನಿಗೆ ಈ ಸಂಕೇತಗಳ ಅರ್ಥ ಬಗೆಹರಿಯಲಿಲ್ಲ.

ಇಂಥ ಆಪ್ತ ವಿಷಯಗಳನ್ನು ಹಂಚಿಕೊಳ್ಳಲು ಅವನಿಗ್ಯಾರೂ ಇರಲಿಲ್ಲ. ಚತುಷ್ಟಯರು ಲಾಯಖ್ಖಲ್ಲ. ಈಗೀಗ ನಿಂಗೂ ಇವನಿಗೆ ಹತ್ತಿರವಾಗುತ್ತಿದ್ದ, ಹೊಲಕ್ಕೆ ಹೋದಾಗ ಒಮ್ಮೊಮ್ಮೆ ನಿಂಗೂನ ಗುಡಿಸಲ ಕಡೆಗೂ ಹೋಗುತ್ತಿದ್ದ. ಆದ್ದರಿಂದ ಅವನನ್ನು ಕರೆಸಿದ್ದ. ಈಗ ಇದರ ಅರ್ಥವೇನೆಂದು ಕೇಳಿದ.

"ಯಾಕ? ಯಾರುದರ ಹುಡುಗಿ ಗಂಟ ಬಿದ್ದೈತೇನ?" ಎಂದು ನಿಂಗೂ ಮತ್ಸರದಿಂದ ಕೇಳಿದ.

“ನನಗೆಲ್ಲೋ ಮಾರಾಯ ಗುಡಸೀಕರಗ ಗಂಟ ಬಿದ್ದಾಳ.”

“ಯಾರವಳು?”

ಎಂದು ನಿಂಗೂ ಪೀಡಿಸಿ ಕೇಳಿದಾಗ ದುರ್ಗಿಯ ಹೆಸರು ಹೇಳಿದ. “ಕೊನೆಗೆ ಹುಣ್ಣಿಮೆಗೆ ಒಂದು ದಿನ ಮುಂಚೆ ಮೂರೂ ಸಂಜೆ ಗುಡೀ ಹಿಂದ ಬಾ” ಎಂಬುದಾಗಿ ಅದರರ್ಥ ಒಡೆದು ಹೇಳಿದ. “ ಹಾಗಿದ್ದರೆ ಇದಕ್ಕೆ ಒಪ್ಪಿಗೆ ಸೂಚಿಸುವುದು ಹ್ಯಾಗೆ?” ಎಂದ ಬಸವರಾಜು. ಸರಪಂಚ ಅವಳ ಕಡೆಗೊಂದು ಅಡಕೆ ಎಸೆದರೆ ಅದೇ ಒಪ್ಪಿಗೆ ಎಂದ ನಿಂಗೂ ಎದ್ದು “ಮನೀ ಕಡೆ ಬಾ” ಎಂದು ಬಸವರಾಜನಿಗೆ ಹೇಳಿ ಹೋದ.

ಆ ದಿನ ರಾತ್ರಿ ನಿದ್ದೆಯಿಲ್ಲದೆ ಮಗ್ಗುಲಿನಿಂದ ಮಗ್ಗುಲಿಗೆ ಹೊರಳಾಡಿದವರು, ಬಸವರಾಜೂ, ಚಿಮಣಾ ಮತ್ತು ದುರ್ಗಿ ಮೂವರೇ. ಚಿಮಣಾ ಅಂದಿನ ಘಟನೆಯಿಂದ ಬೆಚ್ಚಿ ಬಿದ್ದಿದ್ದಳು. ಬಸವರಾಜನ ಲೆಕ್ಕಾಚಾರದ ಮನಸ್ಸಿನಲ್ಲಿ ಚಕಮಕಿಯ ಕಿಡಿ ಹಾರ ತೊಡಗಿದ್ದವು. ಈ ತನಕ ಚಿಮಣಾಳನ್ನು ಹಿಂಡಿ ಹಿಂಡಿ ಪ್ರಯೋಜನ ಪಡೆದಿದ್ದ. ಈಗವಳು ಹಿಂಡಿದರೆ ರಸವೊಸರದಷ್ಟು ಒಣಗಿದ್ದಳು. ಅವಳನ್ನು ನಿವಾರಿಸಬೇಕಾಗಿತ್ತು. ಅದೂ ಉಪಾಯವಾಗಿ, ಲಾಭ ಸಿಕ್ಕುವಂತೆ. ಒಣಗಿದ್ದುದು ಉರುವಲಾಗಬೇಕು. ಇಲ್ಲಾ ಹೊಟ್ಟಾಗಬೇಕು. ಉರುವಲದಿಂದ ಒಲೆ ಉರಿಯುತ್ತದೆ. ಗುಡಸೀಕರನ ಒಲೆ ಈ ಉರುವಲದಿಂದ ಉರಿಯುವುದು ಸಾಧ್ಯವಿರಲಿಲ್ಲ. ಹೊಟ್ಟು ಹಾಕಿದರೆ ಹಿಂಡದ ದನ ಹೈನ ಕೊಡತ್ತದೆ.

ದುರ್ಗಿಗಾದರೆ ವಿಚಿತ್ರ ಕಾತರ. ಅದು ಮೈ ಕಾತರವೋ, ಮನಸ್ಸಿನ ಕಾತರವೋ ಹೇಳುವುದೇ ಬಿಗಿಯೆಂಬಷ್ಟು ಮೈ ಬಿಗಿದಿತ್ತು. ಮುಗ್ಧ ಹುಡುಗಿ, ಹಸೀ ಮಣ್ಣಿನಂತಿದ್ದಳು. ಹೇಗೆ ಮಿದ್ದಿದ್ದರೆ, ಹೇಗೆ ನಾದಿದರೆ ಹಾಗೆ ಹದ, ಹಾಗೆ. ಆಕಾರ ತಕ್ಕೊಳ್ಳಲು ಸಿದ್ಧಳಾದವಳು. ಅಬಾಯಿಯ ಖಾಸ ಮಗಳಲ್ಲ. ಸವದತ್ತಿಯ ಜೋಗತಿ ಎಲ್ಲವ್ವನ ಮಗಳು. ಅವಳು ಸಾಯುವ ಮುನ್ನ ದುರ್ಗಿ ಹತ್ತು ವರ್ಷದಾಕೆ. ಆಗಿನಿಂದಲೇ ತನ್ನ ಚಿಕ್ಕವ್ವ ಅಂದರೆ ಅಬಾಯಿಯ ಮನೆಯಲ್ಲೇ ಇದ್ದಳು. ಇನ್ನೇನು ವರ್ಷಾರು ತಿಂಗಳಲ್ಲಿ ಜೋಗತಿ ಬಿಡಬೇಕೆಂದು ಅಬಾಯಿ ಹೊಂಚಿದ್ದಳು. ಅಷ್ಟರಲ್ಲೇ ಇವಳು ಗುಡಸೀಕರನ ಹೆಸರಿನಲ್ಲಿ ಒಂಟಿಗಾಲಲ್ಲಿ ನಿಂತಿದ್ದಳು. ಮಧ್ಯೆ – ಬಸವರಾಜು ಪ್ರಯೋಜನದ ಲೆಕ್ಕ ಹಾಕುತ್ತಿದ್ದ. ಎಲ್ಲಿಂದೆಲ್ಲಿಗೆ ಸಂಬಂಧ?

## ಮೃಗಯಾ ವಿಹಾರ

ಚಹದಂಗಡಿಯ ಅದ್ಧೂರಿಯ ಆರಂಭ ನೋಡಿದಿರಲ್ಲ. ವ್ಯಾಪಾರ ವೃದ್ಧಿಯಾಗಲಿಲ್ಲ. ಜನ ಆ ಬಗ್ಗೆ ತಲೆಕೆಡಿಸಿಕೊಳ್ಳಲೂ ಇಲ್ಲ. ತಿರುಗಾ ಮುರಗಾ ಗುಡಸೀಕರನೇ ಹೋಗಿ ಚಹ ಕುಡಿಯುತ್ತಿದ್ದ. ಚತುಷ್ಟಯರು, ಅದೂ ಪುಕ್ಕಟೆ ಸಿಕ್ಕರೆ ಆಗಾಗ ಒಂದೊಂದು ಗುಟುಕು ಕುಡಿಯುತ್ತಿದ್ದರು. ಅವರಿಗೆ ಸಿಕ್ಕುತ್ತಿದ್ದುದು ಕೂಡ ನಾಲ್ಕು ಜನಕ್ಕೆ ಕೂಡಿ ಒಂದು ಕಪ್ಪು. ಆ ಒಂದು ಕಪ್ಪಿನಲ್ಲೇ ಹಂಚಿಕೊಂಡು ಕುಡಿದವರಿಗೆ ಅದೇನು ಚಟ ಹತ್ತೀತು? ಕುಡಿದರೆ ಅದು ನಶೆಯಾಗುವ ಬಾಬತ್ತಲ್ಲ. ಆದ್ದರಿಂದ ಅದು ಸಿಕ್ಕರೂ ಸೈ, ಬಿಟ್ಟರೂ ಸೈ; ಸಿಕ್ಕಾಗ ಉಬ್ಬಲಿಲ್ಲ; ಸಿಗದಾಗ ಸೊರಗಲಿಲ್ಲ, ಹಾಗಿದ್ದರು.

ವ್ಯಾಪಾರವಾಗಲಿಲ್ಲವಾದ್ದರಿಂದ ತಾವೇಕೆ ಇಲ್ಲಿರಬೇಕೆಂದು ಚಿಮಣಾಳಿಗೂ ಅನ್ನಿಸಲಿಲ್ಲ. ಬಸವರಾಜನಿಗೂ ಅನ್ನಿಸಲಿಲ್ಲ. ಆದರೆ ಗುಡಸೀಕರ ಹಾಗು ಚಿಮಣಾಳ ಸಂಬಂಧ ರಹಸ್ಯವಾಗಿ ಉಳಿಯಲಿಲ್ಲ. ಗುಡಸೀಕರ ಹಾಗೆ ಬಯಸಿದರೂ ಆಡಿಕೊಳ್ಳುವವರು ಆಡಿಕೊಂಡರು. ಬಾಯಿ ಸೋತು ಸುಮ್ಮನಾದರು. ಗುಡಸೀಕರನ ತಾಯಿಗೆ ಇದರಿಂದ ಚಿಂತೆಯಾಯಿತಷ್ಟೇ. ಒಂದೆರಡು ಸಲ ತಾನೇ ಬುದ್ಧಿಹೇಳಿ ನೋಡಿದಳು. ಆಗೆಲ್ಲ ಗುಡಸೀಕರ ಸಿಡಿಯುತ್ತಿದ್ದ. ಹಿರಿಯರಿಲ್ಲದ ಮನೆ, ಮಗ ಮನೆಹಾಳಾದನಲ್ಲಾ ಎಂದು ಆ ಮುದುಕಿ ಕೊರಗಿತು. ಮಗನಿಗೆ ಬುದ್ಧಿ

ಹೇಳಿರೆಂದು ಗೌಡನಿಗೂ, ದತ್ತಪ್ಪನಿಗೂ ಕೈಮುಗಿದಳು. ಈಗವನು ತಮ್ಮನ್ನು ಮಿರಿದವನೆಂದು ಅವರು ಹೇಳುತ್ತಲೂ ತನ್ನ ನಶೀಬನ್ನೇ ಬಯ್ದುಕೊಂಡು ಸುಮ್ಮನಾದಳು.

ಈಗ ಮೀಟಿಂಗಿನ ಸ್ಥಳ ಬದಲಾಗಿತ್ತು. ಸರಿರಾತ್ರಿಯ ತನಕ ಗುಡಿಸಲಲ್ಲೇ ಮೀಟಿಂಗ್ ಮಾಡಿ, ಚತುಷ್ಟಯರು ಮನೆಗಳಿಗೆ ಹೋಗುತ್ತಿದ್ದರು. ಬಸವರಾಜು ಮುಂಚಿನ ಪಂಚಾಯ್ತಿ ಆಫೀಸಿನಲ್ಲಿ ಒಬ್ಬನೇ ಮಗಲುತ್ತಿದ್ದ. ಬೆಳಿಗ್ಗೆ ಸೂರ್ಯೋದಯದ ಮುಂಚೆಯೇ ಎದ್ದು ಗುಡಿಸಲಿಗೆ ಹೋಗುತ್ತಿದ್ದ. ಅಷ್ಟರಲ್ಲೇ ಗುಡಸೀಕರ ಮನೆಗೆ ಹೋಗಿರುತ್ತಿದ್ದ.

ಗುಡಸೀಕರನಿಗೆ ಮುಂಚಿನ ಮೂರು ತಿಂಗಳು ಒಟ್ಟಾರೆ ನಿರಾಸೆಯಾಗಿತ್ತು. ಗೌಡನ ಬಗೆಗಿನ ಅಸಮಾಧಾನದಿಂದ ನಾಟಕವನ್ನಾಡಿಸಿದ್ದ ನಿಜ. ಆದರೆ ಅದರಲ್ಲಿ ಆ ಮೂಲಕ ಹಳ್ಳಿಗರ ಮನಸ್ಸನ್ನು ಗೆದ್ದು ತನ್ನ ಸುಧಾರಣೆಗಳನ್ನು ತರಬೇಕೆಂಬ, ಹಳ್ಳಿಗರ ಕಲಾಭಿರುಚಿ ಸುಧಾರಿಸಬೇಕೆಂಬ ಹಂಬಲವಿತ್ತು. ಚಹದಂಗಡಿ ಸುರುಮಾಡೋದೆಂದರೆ ತನ್ನ ಹಳ್ಳಿಯನ್ನು ಬೆಳಗಾವಿಯಾಗಿಸುವ ಪ್ರಥಮ ಹೆಜ್ಜೆಯೆಂದೂ ನಂಬಿದ್ದ. ಚಿಮಣಾ ಹರಿಜನಳೆಂಬುದು, ಚಿಮಣಾವೃತ್ತಿ ಹರಿಜನರದೆಂದು ಅವನಿಗೂ ತಿಳಿದ ವಿಚಾರವೇ. ಆದರೆ ಹರಿಜನಳಾದ ಲಗಮವ್ವ ಸೆರೆಕೊಟ್ಟರೆ ಕುಡಿಯುವ ಜನ, ಚಿಮಣಾ ಚಹಾ ಕೊಟ್ಟರೆ ಯಾಕೆ ಕುಡಿಯಬಾರದು? ಜನ ಕುಡಿಯಲಿಲ್ಲ. ಅದಕ್ಕೆ ಕಾರಣ ಗುಡಸೀಕರನ ನಿರಾಸೆಗೆ ಇದೂ ಕಾರಣವಾಗಿತ್ತು.

ಜನಕ್ಕೆ ಬೇಡದ ಸುಧಾರಣೆಗಳನ್ನು ತಂದೇನು ಪ್ರಯೋಜನ? ಈ ಹುಂಬರ ಜೊತೆ ಎಷ್ಟಂತ ಕೆಸರಲ್ಲಿ ಗುದ್ದಾಡೋದು? ಎಂದೂ ಅನಿಸುತ್ತಿತ್ತು. ಅದಕ್ಕೆ ತಕ್ಕಂತೆ ಚತುಷ್ಟಯರೂ ನಿರೀಕ್ಷೆಯಷ್ಟು ನಡೆಯಬಲ್ಲವರಾಗಿರಲಿಲ್ಲ. ಆದರೆ ಬರಬರುತ್ತ ಹೊಸ ಆಶಾಕಿರಣ ಮೂಡತೊಡಗಿತ್ತು. ತನ್ನ ಹಾಗೂ ಚಿಮಣಾಳ ಸಂಭಂಧದ ಬಗ್ಗೆ ಜನ ಆಡಿಕೊಳ್ಳುವುದು ಅವನಿಗೂ ಗೊತ್ತಿತ್ತು. ಆದರೆ ಅನೇಕರು ಭಾವಿಸುವಂತೆ ಅವನಿಗೂ ಆ ಬಗ್ಗೆ ಅಭಿಮಾನ ಮೂಡಿತ್ತಷ್ಟೆ. ಅಲ್ಲದೆ ಯಾರೋ ಒಬ್ಬಿಬ್ಬರು ಈ ಬಗ್ಗೆ ಹಗುರಾಗಿ ಮಾತಾಡಿದಾಗ ಗೌಡ "ಗಂಡಸು ಮಾಡಿದ್ದರೂ ಮಾಡಿದ್ದಾನ ಬಿಡ್ರೊ" ಎಂದಿದ್ದನಂತೆ. ಅದು ಇವನ ಕಿವಿಗೆ ಬಿದ್ದು ಕಿವಿಯ ಬಳಿ ಒಂದೆರಡು ಕೊಂಬು ಮೂಡಿದ ಅನುಭವವಾಗಿತ್ತು. ಅವನ ಭುಜಕ್ಕೆ ಶಕ್ತಿ ಬಂದದ್ದು, ನಿಜ ಹೇಳಬೆಕೆಂದರೆ ಚಿಮಣಾಳಿಂದಲ್ಲ, ಬಸವರಾಜೂನಿಂದ.

ಅವನ ದುರ್ಬಲ ಕ್ಷಣಗಳಲ್ಲೆಲ್ಲ ಬಸವರಾಜು ಪಕ್ಕಕ್ಕಿರುತ್ತಿದ್ದ. ಅವನ ವ್ಯಕ್ತಿತ್ವದ ಖಾಲಿ ಸ್ಥಳವನ್ನು ಹೊಗಳಿಕೆಯಿಂದ ಭರ್ತಿಮಾಡುತ್ತಿದ್ದ. ಸೋಲುಗಳನ್ನು ಗೆಲುವಾಗಿಸುತ್ತಿದ್ದ. ಬಸವರಾಜು ಎಷ್ಟು ಕಲಿತಿದ್ದನೋ ಗೊತ್ತಿಲ್ಲ; ಅಂತೂ ಇಬ್ಬರೂ ಸಹಪಾಠಿಗಳಷ್ಟು ಹತ್ತಿರವಾದರು. ಹಳ್ಳಿ ಸುಧಾರಣೆಯ ಬಗ್ಗೆ ಇಬ್ಬರ ಆದರ್ಶ, ಅಭಿಪ್ರಾಯಗಳು ಒಂದೇ ಆಗಿದ್ದವು. ಅಥವಾ ಪರಸ್ಪರರು ಹೇಗೆ ಹೊಂದಾಣಿಕೆ ಮಾಡಿಕೊಂಡರೋ ಕೆಲವೇ ದಿನಗಳಲ್ಲಿ ಇಬ್ಬರೂ ಒಂದಾಗಿದ್ದರು. ಕುಡಿದಾಗಂತೂ ಇಬ್ಬರೂ ತಬ್ಬಿಕೊಳ್ಳುವುದೇನು, ಒಬ್ಬನ ಎಂಜಲು ಇನ್ನೊಬ್ಬ ತಿನ್ನುವುದೇನುಲ ಪರಸ್ಪರರಿಗಾಗಿ ಪ್ರಾಣ ಕೊಡಲು ಆಣೆಯಿಡುವುದೇನು! ಈ ತನಕ ಗುಡಸೀಕರನಿಗೆ ಇಂಥ ಒಬ್ಬ ಸ್ನೇಹಿತನೂ ಸಿಕ್ಕಿದ್ದಲ್ಲ.

ಬಸವರಾಜನಿಂದಾಗಿ ಈಗ ಗುಡಸೀಕರನಿಗೆ ಎಲೆಕ್ಷನ್ನಿನಲ್ಲಿ ಹೊಸ ಕುತೂಹಲ ಹುಟ್ಟಿತು. ಬಸವರಾಜು ಮಹಾ ಮಾತುಗಾರ. ಈ ಎಲೆಕ್ಷನ್ ಗೆಲುವು ಹೇಗೆ ತಮ್ಮ ಆದರ್ಶಗಳ ಗೆಲುವಾಗುವುದೆಂದು ಭಾಷಣ, ಸಂಭಾಷಣ, ತರ್ಕಗಳಿಂದ ಖಾತ್ರಿಮಾಡಿದ. ಗಾಂಧೀಜಿಯವರಂಥ ಆದರ್ಶಗಳು ಗೌಡ, ದತ್ತಪ್ಪನಿಗೆ ಕನಸು ಮನಸ್ಸಿನಲ್ಲಿಯಾದರೂ ಹೊಳೆಯುವುದು ಸಾಧ್ಯವೆ? ಹೋಗಲಿ, ಆ ಹೆಸರಾದರೂ ಕೇಳಿಬಲ್ಲರೆ ಇವರು? ಒಬ್ಬನಿಗೊಂದು "ಸೀರಿಯಸ್ ಅಜಾರಿ" ಆಯಿತೆನ್ನೋಣ; ಕರಿಮಾಯಿಯ ಭಂಡಾರ ಬಳಿದುಕೊಂಡರೆ ಹೋಗುತ್ತದೋ? ಒಬ್ಬ ಬಸುರಿಯ ಹೆರಿಗೆ ಕಷ್ಟವಾಯಿತೆನ್ನೋಣ; ಕರಿಮಾಯಿ ಉಳಿಸಬಲ್ಲಳೋ? ಮೂಢನಂಬಿಕೆಗಳಿಂದ ಯಾರಾದರೂ ಬದುಕಿದ್ದು ಉಂಟೋ? ಛೇ ಛೇ ಇದೆಲ್ಲ ಆಗೋ ಮಾತಲ್ಲ. ಹೋಗೋ ಮಾತಲ್ಲ, ಊರೆಂದ ಮೇಲೆ ಒಂದು ಆಸ್ಪತ್ರೆ, ಒಂದು ಹೈಸ್ಕೂಲು ಬೇಡವೋ? ಹೆಬ್ಬೆಟ್ಟೊತ್ತುವ ಗೌಡನಿಂದ ಇವನ್ನು ತರುವುದು ಸಾಧ್ಯವೋ? ಬೆಳಗಾವಿಯನ್ನು ನೋಡಬಾರದೆ? ಇಂದಿದ್ದ ಬೆಳಗಾವಿ ನಾಳಿಗಿಲ್ಲ. ಆ ಥರಾ "ಡೆವಲಪ್" ಆಗ್ತಾ ಇದೆ. ಬೆಳಗಾವಿ ಎತ್ತ ಹೋಗುತ್ತಿದೆ, ಈ ಜನ ಎತ್ತ ಹೋಗುತ್ತಿದ್ದಾರೆ? ಜನಕ್ಕೇನು, ಹೇಳಿ ಕೇಳಿ ಮೂಢನಂಬಿಕೆಯವರು.

ಮೊದಮೊದಲು ಡೆವಲಪ್ಪಿನ ಅಗತ್ಯ ತಿಳಿಯಲಿಕ್ಕಿಲ್ಲ. ಬರಬರುತ್ತ ಅವರಿಗೇ ಗೊತ್ತಾಗುತ್ತದೆ. ಹಾಗಂತ ಅವರಿಗೇ ಗೊತ್ತಾಗಲೆಂದು ಬಿಟ್ಟರೆ ಹೇಗೆ? ಗೊತ್ತಗೋ ಹಾಗೆ ಮಾಡಬೇಕು. ಈ ಎಲೆಕ್ಷನ್ ಗೆದ್ದರೆ ಇದನ್ನೆಲ್ಲ ತಾವು ಮಾಡಿ ತೋರಿಸುತ್ತೇವೆಂದು ಹೇಳಬೇಕು – ಇತ್ಯಾದಿ.

ಇಂಥ ಮಾತು ಕೇಳಿದರೆ ಗುಡಸೀಕರನಿಗೆ ಹೇಗಾಗಬೇಡ? ಆಳದಲ್ಲಿ ಹುದುಗಿದ ಆದರ್ಶಗಳನ್ನೆಲ್ಲ ಹೊಡೆದೆಬ್ಬಿಸಿ ಹೊರಕ್ಕೆ ತಂದ. ಸೋಲು ಆದರ್ಶವಾದಿಗಲ್ಲದೆ ಇನ್ನಾರಿಗೆ ಬರಬೇಕು? ಗಾಂಧೀಜಿ ಎಷ್ಟು ಸಲ ಸೋತಿಲ್ಲ? ಈ ಎಲೆಕ್ಷನ್ ಗೆಲ್ಲಲೇ ಬೇಕೆಂದು ತೀರ್ಮಾನಿಸಿದ.

ಬಸವರಾಜೂನ ಪೂರ್ವಾಶ್ರಮ ಏನಿತ್ತೋ ಗೊತ್ತಿಲ್ಲ. ಚಳುವಳಿಯಲ್ಲಿದ್ದವನೆಂದು ಅವನೇ ಹೇಳಿ ಕೊಂಡಿದ್ದನಷ್ಟೆ. ಈ ಊರಿನಲ್ಲಿ ಮಾತ್ರ ಪಸಂದಾಗಿ ಹೊಂದಿಕೊಂಡುಬಿಟ್ಟ. ಕಪ್ಪು ಚಾಳೀಸಿನೊಳಗಿಂದಲೇ ಜನರ ಗುಟ್ಟುಗಳನ್ನು ಗಮನಿಸಿದ್ದ, ದೌರ್ಬಲ್ಯಗಳನ್ನು ಪತ್ತೆಹಚ್ಚಿದ್ದ. ಅವರನ್ನು ಸಂತೋಷಗೊಳಿಸುವ ಮಾತು, ವಿಧಾನಗಳನ್ನು ಕಂಡುಕೊಂಡಿದ್ದ. ಎಲ್ಲರನ್ನೂ ದೊಡ್ಡವರೋ, ಚಿಕ್ಕವರೋ ಬಹವಚನದಲ್ಲಿ ಮಾತಾಡಿಸುತ್ತಿದ್ದ. ಎಲ್ಲಕ್ಕಿಂತ ಹೆಚ್ಚಾಗಿ ಗುಡಸೀಕರನಿಗೆ ಗೊತ್ತಾಗದ ಒಂದು ರಹಸ್ಯ ದೌರ್ಬಲ್ಯ ಅವನಿಗೆ ತಿಳಿದಿತ್ತು! ಈ ಜನಗಳ ಜಿವಕೇಂದ್ರ ಕರಿಮಾಯಿ – ಎಂದು.

ಬಸವರಾಜೂನ ರೇಡವೇ ಜನಪ್ರಿಯವಾಗಿತ್ತು. ಹಾಗೇ ಅವನ ಉಡುಪೂ, ನಡೆನುಡಿಯೂ, ಮಾತುಗಾರ ಬೇರೆ. ಬೆಳಗಾವಿಯನ್ನು ರಸವತ್ತಾಗಿ ಕೇಳಿದವರ ಬಾಯಲ್ಲಿ ನೀರು ಸೋರುವ ಹಾಗೆ ವರ್ಣನೆ ಮಾಡುತ್ತಿದ್ದ. ಹೋಟಲಂತೆ, ತಮಾಷಾ ಅಂತೆ, ಸಿನಿಮಾ ಅಮತೆ, ಕಾಲೇಜು ಹುಡುಗಿಯರಂತೆ, ಇಂಗರೇಜಿ ಮಡ್ಡಮ್ಮಗಳಂತೆ – ಛೇ, ಛೇ ಇದನ್ನು ಕೇಳಿದ ಎಳೆಯರಿಗೆ ತಮ್ಮ ಊರು ಬೆಳಗಾವಿಯಾಗುವ ತನಕ ಕಾಯುವುದು ಅಸಾಧ್ಯವೆಂದು ಹೊಳೆದಂತಾಗುತ್ತಿತ್ತು. ಹೆಚ್ಚೇನು ಆತ ತರುಣರಿಗೆ ಮಾದರಿಯಾದ. ನಿಂಗೂನಂಥ ನಿಂಗೂ ಕೂಡ ಮನಸ್ಸಿನಲ್ಲೇ ಇವನನ್ನು ಕೂಡುತ್ತಿದ್ದ.

ಬಸವರಾಜು ತನಗಾದ ವೀಡಿ ರೋಗದ ಬಗ್ಗೆ ಒಮ್ಮೆ ಮಾತಾಡಿದ. ಚತುಷ್ಟಯರು ವೀಡಿ ಅಂದರೆ ಬಹಳ ದೊಡ್ಡ ಮಂದಿಗೆ ಆಗುವ ರೋಗವೆಂದು ಬಗೆದು, "ಅಯ್ಯೋ ಆ ರೋಗ ನಮಗೆ ಬರಬಾರದೇ?" ಎಂದು ಹಳಹಳಿಸಿದರು. ಬೇಕೆಂದೇ ಕೆಮ್ಮಿ "ಯಾಕೋ ಕೆಮ್ಮುತ್ತಿ?" ಎಂದು ಯಾರಾದರೂ ಕೇಳಿದರೆ "ಹಿಂಗ, ನನಗ ಸೊಲ್ಪ ವೀಡಿ ಆಗೇತಪಾ" ಎಂದು ಸುಳ್ಳು ಸುಳ್ಳೇ ಹೇಳುತ್ತಿದ್ದರು. ಅಷ್ಟಕ್ಕೇ ಬಿಡದೆ, ಬಸವರಾಜು ಹೇಳಿದ ರೋಗಗಳನ್ನು ಎಂಟೆಂಟು ದಿನ ಅಭಿನಯಿಸುತ್ತಿದ್ದರು.

ಗುಡಸೀಕರನಂತೂ ಬಸವರಾಜನನ್ನು ದುಡ್ಡಿನಷ್ಟು ಗಟ್ಟಿಯಾಗಿ ನಂಬಿದ್ದ. ಆದ್ದರಿಂದ ಸಹಜವಾಗಿಯೇ ಬಸವರಾಜೂನಿಗೆ ಆ ಮನೆಯ ಬಳಕೆ ಜಾಸ್ತಿಯಿತ್ತು. ವಾರದಲ್ಲಿ ಮೂರು ನಾಲ್ಕು ಸಲ ಊಟಕ್ಕೆ ಹೋಗುತ್ತಿದ್ದ. ಮಗನ ಮೇಲಿನ ಇವನ ಪ್ರಭಾವ ನೋಡಿದ ಮುದುಕಿ "ಮದವೆಯ ಬಗ್ಗೆ ನೀನಾದರೂ ಹೇಳಪ್ಪಾ!" ಎಂದು ಬಸವರಾಜನಿಗೇ ಹೇಳಿದಳು. ಇವನೂ ಹೇಳಿದ. ಏನೂ ಆಗಲಿಲ್ಲ. ಕೊನೆಗೆ ಹೋಗಲಿ, ಮನೆಯಲ್ಲಿ ಬೆಳೆದುನಿಂತ ತಂಗಿಯ ಮದುವೆಯನ್ನಾದರೂ ಮಾಡಲಿಕ್ಕೆ ಹೇಳಪ್ಪಾ" ಎಂದಳು.

ಅದೂ ನಿಜ. ಮದುವೆಯ ಅಗತ್ಯ ಗುಡಸೀಕರನಿಗಿಂತ ಗಿರಿಜಳಿಗೆ ಹೆಚ್ಚಾಗಿತ್ತು. ಕೊಯ್ಲಿಗೆ ಬಂದ ಫಸಲಿನಂತೆ ಬೆಳೆಯುವುದಕ್ಕೆ ಬಯಲೆನ್ನದೆ ಇಕ್ಕಟ್ಟೆನ್ನದೆ ಸಿಕ್ಕ ಸಿಕ್ಕಲ್ಲಿ ಅವಕಾಶವಾದಲ್ಲೆಲ್ಲ ನೋಡಿದವರ ಕಣ್ಣುತುಂಬುವಂತೆ ಬೆಳೆದು ತುಂಬಿಕೊಂಡಿದ್ದಳು. ಆ ಹುಡುಗಿಗೆ ಮೊದಲೇ ಬೆಕ್ಕಿನ ಕಣ್ಣು ಬೇರೆ. ಆಕಾರದಲ್ಲಿ ಚಿಕ್ಕವು. ಅರೆದೆರೆದ ಆ ಮಾದಕ ಕಣ್ಣುಗಳಿಂದಾಗಿ ಸದಾ ಹರೆಯದ ನಶೆಯಲ್ಲಿದ್ದಂತೆ ತೋರುತ್ತಿದ್ದಳು. ಹುಡುಗರ ದೃಷ್ಟಿ ಕೂತರೂ ಸಾಕು, ಗಿಣಿ ಕೂತ ಜೋಳದ ತೆನೆಯಂತೆ ಮೈತೂಗಿ ತೂಗಿ ತುಳುಕಾಡುತ್ತಿದ್ದಳು. ಅದೆಂಥ ಹೊಸ ಹಂಬಲ ಮೈಯಲ್ಲಿ ಹುಟ್ಟಿಕೊಂಡಿತ್ತೋ, ಅಷ್ಟು ದೂರದಲ್ಲಿ ಹುಡುಗರು ಹಾದುಹೋಗುತ್ತಿದ್ದರೆ ಕಣ್ಣಿಗಿಂತ ಮುನ್ನ ಮೈಗೆ ಕಾಣಿಸಿ, ಮೈತುಂಬಾ ಮುಳ್ಳೆದ್ದು ಇಕ್ಕಟ್ಟಿನ ಆಸೆಗಳು ಒಡಮುರಿದು ಹರಿದಾಡಿ ಈ ಸಣ್ಣ ಹುಡುಗಿಯನ್ನು ನಡುಗಿಸಿ ನಡುಗಿಸಿ ಘಾಸಿಮಾಡುತ್ತಿದ್ದವು. ಬಸವರಾಜುವಿನ

ಒಡನಾಟ ಆ ಮನೆಗೆ ಜಾಸ್ತಿಯಾಯ್ತಲ್ಲ. ಸಹಜವಾಗಿಯೇ ಇವನ ಮೈಯ ಅತ್ತರೆಣ್ಣೆಯ ವಾಸನೆ ಅವಳ ಮೈ ಪುಳಕಕ್ಕೆ ಮಂದಾನಿಲದಂತೆ ಹಿತಕರವಾಗಿತ್ತು. ಇದೆಲ್ಲ ಅವಳ ಅರಿವಿಗೆ ಗೊತ್ತಿಲ್ಲದೆ ಮೈ ಕೊಬ್ಬಿಗೆ ಮಾತ್ರ ಗೊತ್ತಾಗಿ ಆದದ್ದು.

ಮೊದಲೇ ಹಾಡಲೋ ಹಾದರ ಮಾಡಲೋ ಎಂಬಂಥ ವಯಸ್ಸು. ಸ್ವಲ್ಪ ಹೆಚ್ಚಾಗಿಯೇ ನಗುತ್ತಿದ್ದಳು; ವಿನಾಕಾರಣ ಬಳುಕುತ್ತಿದ್ದಳು. ಈತ ತೋಟದ ಕಡೆ ಬಂದರೆ ಅವಳೂ ಬರುತ್ತಿದ್ದಳು. ಕಣ್ಣಿಂದ ತಿಂದವಳಂತೆ ನೋಡುತ್ತಿದ್ದಳು. ಒಂದು ದಿನ ಒಬ್ಬ ಹೆಣ್ಣಾಳನ್ನು ಕಳಿಸಿ ಇವನ ರೇಡವೇ ಇಸಿದುಕೊಂಡು ಕೇಳಿದಳು. ಬೇಟೆಗಾರನಿಗೆ ಪ್ರಾಣಿಗಳ ಸ್ವಭಾವ, ಹಂಗಾಮಿಗೆ ತಕ್ಕ ಅವುಗಳ ಚಲನವಲನ ತಿಳಿದಂತೆ ಅವನಿಗೆ ಅವಳ ಮೈಮನಸ್ಸಿನ ತುದಿಬುಡ ತಿಳಿದಿತ್ತು. ಜಾತ್ಯಾ ಬೇಡನಮತೆ ಅವನೂ ಹೊಂಚುತ್ತಿದ್ದ.

ಒಂದು ದಿನ ಮಧ್ಯಾಹ್ನ ಬಸವರಾಜು ಗುಡಸೀಕರನೊಂದಿಗೆ ಊಟಮಾಡಿ ಅವರ ಮನೆಯಲ್ಲಿಯೇ ಮಲಗಿದ್ದ. ಅಷ್ಟರಲ್ಲಿ ಎಲ್ಲಿಂದಲೋ ಮುದ್ದೆ ಮಾಡಿದ ಕಾಗದದ ಉಂಡೆಯೊಂದು ಅವನ ಮೇಲೆ ಬಿತ್ತು. ತಕ್ಷಣ ಎದ್ದುಕೂತು, ಗುಡಸೀಕರನ ಕಡೆ ನೋಡಿದ. ಅವ ಪಲ್ಲಂಗದ ಮೇಲೆ ಗೊರಕೆ ಹೊಡೆಯುತ್ತಿದ್ದ. ಮೇಲಿದ್ದವನಿಗೆ ಈ ಕೆಳಗಿನ ವ್ಯಾಪಾರ ತಿಳಿಯುವಂತೆಯೂ ಇರಲಿಲ್ಲ. ಬಸವರಾಜು ಕಳ್ಳಬೆಕ್ಕಿನಂತೆ ಸುತ್ತ ಕಣ್ಣಾಡಿಸಿದ. ಜಿನೆಯ ಮೇಲೆ ಬರೀ ಮುಖ ಮಾತ್ರ ತೋರುತ್ತ ನಿಂತಿದ್ದ ಗಿರಿಜಾ ಕಿಲಕ್ಕನೇ ನಕ್ಕು ಕೆಳಗಿಳಿದಳು. ಬೇಟೆ ಸಿಕ್ಕಿತೆಂದುಕೊಂಡ. ಕೆಳಕ್ಕಿಳಿದು ಬಂದ. ಕೆಳಗೆ ಹೊಡ ಬಾಗಿಲಲ್ಲಿ ಗಿರಿಜಾ ನಿಂತಿದ್ದಳು. ಮುದುಕಿಯಿರಲಿಲ್ಲ. "ತೋಟದ ಕಡೆ ಹೋಗ್ತೇನಿಂತ ಗುಡಸೀಕರಗ ಹೇಳ್ರಿ" ಎಂದು ಹೇಳುತ್ತ ಕಣ್ಣು ಹೊಡೆದು ನಡೆದ. ಗಿರಿಜಾಳ ಎದೆ ನಗಾರಿಯಂತೆ ಬಡಿದುಕೊಳ್ಳಲಾರಂಭಿಸಿತು.

ನಾಗರಪಂಚಮಿ ಹಬ್ಬವಾಗಿ ಹೋಗಿತ್ತು. ಚಿಗುರಲೋ ಎಲೆ ಬಿಡಲೋ ಎಂಬಂತೆ ಎಲ್ಲ ಕಡೆ ಹಸಿರು ಹುಚ್ಚುಚ್ಚಾಗಿ ಹಸರಿಸಿತ್ತು. ಮೈಕೈ ಭಾರವಾಗಿ ಕಣ್ಣಂಚಿನಲ್ಲಿ ಕನಸು ಕಾಣೂವ ಚಿಕ್ಕ ಪ್ರಾಯದ ಎಳೆಯರಂತೆ ಭೂಮಿ ಕಾನಿಸುತ್ತಿತ್ತು. ಒಂದೇ ಒಂದು ದೇಟು ಮುಟ್ಟುವ ಮನಸ್ಸಾಗುವುದಿಲ್ಲ. ಈಗ ಎಸಳನ್ನು ಎಷ್ಟು ಹಿಡಿದರೆ ಅಷ್ಟು ಬಾಡುತ್ತದೆ. ಹುಲ್ಲಿನ ಮೇಲೆ ಕಾಲಿಟ್ಟು ನಡೆಯಬೇಕಲ್ಲಾ ಎಂಬ ಕೊರಗು. ಬೇಲಿಯ ಮೇಲಿನ ಬಣ್ಣಬಣ್ಣದ ಹೂಗಳೆದು ಕುಣಿದಾಡುವಂತೆ ಚಿಟ್ಟೆಗಳು ಹುಟ್ಟಿ ಹಾರಾಡತೊಡಗಿದ್ದವು. ಹಸರಿನ ಈ ಸಮೃದ್ಧಿಯನ್ನು ನೋಡಿದರೆ ಈಗ ಕಲ್ಲೆದೆ ಮೃದುವಾಗುತ್ತದೆ. ಮನಸ್ಸು ಬೆರಗಾಗುತ್ತದೆ. "ಛೇ ಕರಿಮಾಯಿ ದೊಡ್ಡವಳು" ಎನಿಸುತ್ತದೆ. ಒಬ್ಬ ಜನಪದ ಕವಿ ಹಾಡಿದಂತೆ ಸಾಯುವುದೇ ನಿಜವಾದರೆ ಸಾವು ಈಗಲೇ ಇಲ್ಲೇ ಬರಲಿ – ಎನಿಸುತ್ತದೆ.

ಸೊಂಟದೆತ್ತರ ಇಂಥ ಬೆಳೆ ಹಸರಿನಲ್ಲಿ ಗಿರಿಜಾ ಹಿಂಡನಗಲಿದ ಜಿಂಕೆಯಂತೆ, ಹೆಜ್ಜೆ ಸಪ್ಪಳಕ್ಕೂ ಕಣ್ಣಗಲಿಸಿ, ಹೆದರುತ್ತ ತೋಟದ ಕಡೆ ಹೊರಟಿದ್ದಳು. ಇನ್ನೂ ಕೈ ಮಾರು ಹೊತ್ತಿತ್ತು. ಹೊಲದಿಂದ ಬರುವ ದನಕರುಗಳ ಕಾಲಧೂಳಿ ಸೂರ್ಯಕಿರಣದಲ್ಲದ್ದಿ ಕರಿಮಾಯಿಯ ಬಂಡಾರೆಸೆದಂತೆ ಕಾಣುತ್ತಿತ್ತು. ಮೇದು ಬಂದು ಗೂಡು ಸೇರುತ್ತಿದ್ದ ಗುಬ್ಬಿಗಳ ಹಿಂದು ಗಿಡ ಗಿಡಕ್ಕೆ ಮರ ಮರಕ್ಕೆ ಗುಂಪು ಗುಂಪಾಗಿ ಮುತ್ತಿ, ತಮ್ಮ ಸ್ಥಳವನ್ನು ಇನ್ನೊಬ್ಬರು ಆಕ್ರಮಿಸಿದ್ದಕ್ಕೋ, ಹಸರಿನ ಸಂಭ್ರಮಕ್ಕೋ ಯದ್ವಾತದ್ವಾ ಕಿರುಚಿತ್ತಿದ್ದವು.

ಅವರ ತೋಟ ದೂರವೇನೂ ಇರಲಿಲ್ಲ. ಅವಳ ಬಗ್ಗೆ ಯಾರಿಗೂ ಸಂದೇಹ ಬರಬೇಕಾದ್ದಿರಲಿಲ್ಲ. ಭಯ, ಸಂಭ್ರಮ, ಕಲ್ಪನೆ ಬೆರೆತ ಮನಸ್ಸಿನಿಂದ ತೇಕುಸಿರು ಬಿಡುತ್ತ ತೋಟದ ಬಾವಿಯ ಬಳಿ ಬಂದಳು. ಯಾರೂ ಇರಲಿಲ್ಲ. ಪಕ್ಕದ ಹೊಲದಲ್ಲಿಯ ಜೋಳ ಅಲುಗಾಡಿಸಿತು. ನೋಡಿದರೆ ಆಳದಲ್ಲಿ ಬಸವರಾಜು ಮುಗುಳುನಗುತ್ತ ನಿಂತಿದ್ದವನು ಕೈಮಡಿ ಕರೆಯುತ್ತಿದ್ದ. ಸ್ವಲ್ಪ ಅಧೈರ್ಯವಾಯಿತು. ಓಡಿಬಿಡಲೇ ಎಂದುಕೊಂಡಳು. ಬಸವರಾಜು ಒಂದು ಚೆಂಡು ಹೂ ತಗೊಂಡು ಜೋರಿನಿಂದ ಇವಳ ಕಡೆ ಎಸೆದ. ಹೂಬಾಣ ಹುಡುಗಿಯ ಎದೆಗೇ ನೆಟ್ಟು ಒಂದು ಹೆಜ್ಜೆಯಿಟ್ಟು ಮತ್ತ ನಿಂತಳು. ಮತ್ತೊಂದು ಹೂವು ಎಸೆದ. ಸೊಂಟಕ್ಕೆ ತಾಗಿ ತೊಡೆ ನಡುಗಿ ಒಂದೊಂದೇ ಹೆಜ್ಜೆಯಿಟ್ಟು ಅವನ ಬಳಿ ಹೋದಳು ಹುಲಿ ಹಾರಿ ಜಿಂಕೆಮರಿಯನ್ನು ಮುರಿಯಿತು. ಗುದಮುರಿಗೆಗೆ ಎಳೆ ಜೋಳದ ಬೆಳೆ ಥರಥರ ನಡುಗಿತು.

# ಈ ವರೆಗಿನ ಹೇಳತೇನ ಕೇಳ: ಸಾವಿರದ ನೆರಳು – ೧೯೭೯: ಸಾವಿರದ ಶರಣವ್ವ ಕರಿಮಾಯಿ ತಾಯೇ

ಮುಂಗೋಳಿ ಕೂಗ್ಯಾವು ಮೂಡsಣ ಬೆಳಗಿ
ತಂಗ್ಯಾಳಿ ಬೀಸ್ಯಾವು ತವರಿ ಹೂವರಳಿ
ಹೂಹೂವಿನೊಳಗೊಂದು ಕೈಲಾಸವರಳ್ಯಾವು
ಕೈಲಾಸ ಕೈಮುಗಿದು ಭೂಲೋಕಕಿಳಿದಾವು
ಸಾವಿರದ ಶರಣವ್ವ ಕರಿಮಾಯಿ ತಾಯೆ ||

ಬಂಡಾರ ಮೈಯವಳೆ ಬಂಗಾರ ಮುಖದವಳೆ
ಸೂಸುನಗೆಯಲಿ ಜಗದ ಲೇಸ ತುಳುಕಿಸಿದವಳೆ
ಒಲೆದು ಕೂಡಿದಿ ತಾಯಿ ಕುಲದಾಚೆಯವನ
ಬಸಿರಾಗಿ ಎದುರಿಸಿದಿ ದೇವ ದಾನವರನ್ನ
ಈರೇಳು ಭುಜದವರ ಏಳೇಳು ಶಿರ ತರಿದು
ಕೊರಳೀಗಿ ಹೂಹಾರ ಧರಿಸಿಕೊಂಡವಳೇ
ಸಾವಿರದ ಶರಣವ್ವ ಕರಿಮಾಯಿ ತಾಯೆ ||

ಮೂರು ಲೋಕಕ ಅಧಿಕ ನಿನ್ನ ಕಾರಣಿಕ
ಮುಖ್ಯರ ಶಿಖಿ ಹಿಡಿದು ಹಾಕಿದಿ ನೆಲಕ
ಗುಂಡ ತೇಲಿಸಿದೆವ್ವ ಬೆಂಡ ಮುಳುಗಿಸಿದಿ
ಗಂಡಗಂಡರನೆಲ್ಲ ಹೆಂಡಿರ ಮಾಡಿ
ಹೆಂಡೀರ ಭಂಡಾಟಕೆದುರಾಗಿ ನಿಲ್ಲsದೆ
ರಂಡೀ ಹುಣಿವೀ ದಿನ ಮಿಂಡ್ಯಾದೆ ತಾಯೇ
ಸಾವಿರದ ಶರಣವ್ವ ಕರಿಮಾಯಿ ತಾಯೆ ||

ಬಾಗೀದ ಭಕ್ತರಿಗಿ ಬೇಡಿದ್ದ ಕೊಟ್ಟವಳೆ
ಗೆಜ್ಜೀಕಾಲಿನ ಮಗನ ಬಂಜೀ ಉಡಿಗಿಟ್ಟವಳೆ
ಕಲ್ಲೀನ ಎದೆಯೊಳಗ ಹುಲ್ಲು ಚಿಗುರಿಸಿದವಳೆ
ಬೇಲೀಯ ಮುಳ್ಳೀಗೆ ನೀಲೀ ಹೂ ಕೊಟ್ಟವಳೆ
ಬೆಣ್ಣೆ ಸುಣ್ಣದ ಗುರುತ ತೋರೀಸಿಕೊಟ್ಟವಳೆ
ಸುಣ್ಣsದ ನೀರಾಗ ಜೀವಾ ಕೊಟ್ಟವಳೆ
ಸಾವಿರದ ಶರಣವ್ವ ಕರಿಮಾಯಿ ತಾಯೆ ||

**(ಕರಿಮಾಯಿ)**

# ಕರಿಮಾಯಿಗೆ ಕಡೇ ಶರಣು

ಗೌಡ ಗುಡಸೀಕರನನ್ನು ನೋಡಿ ದೈನಾಸ ಪಡುತ್ತಿದ್ದರೆ ಅತ್ತ ಕೊಳವಿಯ ಮುದುಕಪ್ಪ ಗೌಡ ಕರಿಮಾಯಿಗೆ ಕಡೇ ಶರಣು ಮಾಡಿದ.

ಇದು ಗುಡಸೀಕರನ ಪ್ರಥಮ ಗೆಲುವಾಗಿತ್ತು. ಆ ದಿನ ಸುಂದರಿ ಫೋಜದಾರನ ಸೇವೆಗೊದಗಿ ತಡಮಾಡಿ ಗುಡಿಸಲಿಗೆ ಬಂದಳು. ಆ ಏಳೂ ಜನ ತಮ್ಮ ಗೆಲವನ್ನು ಭರ್ಜರಿಯಾಗಿ ಅದ್ಧೂರಿಯಿಂದ ಒದ್ದೊದ್ದೆಯಾಗಿ ಆಚರಿಸಿದರು. ಆ ಗೆಲುವಿಗೆ ಕಾರಣಳಾದ ಸುಂದರಿಯನ್ನು ಬಸವರಾಜೂನನ್ನು ಗುಟಕಿಗೊಮ್ಮೆ ಸ್ಮರಿಸಲಾಯಿತು. ಸುಂದರಿಗಂತೂ ನೆಲದ ಮೇಲೆ ಕಾಲೂರದಷ್ಟು ಹೌಶಿಯಾಗಿತ್ತು. ತನ್ನ ಸಂಚು ಫಲಿಸಿದ್ದಕ್ಕೆ ಗುಡಸೀಕರ ತನ್ನ ಗುಣಗಾನ ಮಾಡುತ್ತಿದ್ದದ್ದಕ್ಕೆ. ಮೈತುಂಬ ರೋಮಾಂಚನಗೊಂಡಳು. ಕುಡಿತದ ಅಮಲಿನಲ್ಲಿ ಆ ದಿನ ಗೌಡ ಹೇಳಿದ ಮಾತುಗಳನ್ನು ಪುನಃ ಅವನಂತೇ ಹೇಳಿ ಗುಡಸೀಕರನನ್ನು ನಗಿಸಿದಳು.

ಅದೇ ದಿನ ಊರ ಹಿರಿಯರ ಸಭೆ ದತ್ತಪ್ಪನ ನೇತೃತ್ವದಲ್ಲಿ ಸೇರಿತು. ಗೌಡ ಬಂದಿರಲಿಲ್ಲ. ಸುಂದರಿಗೆ ಬಹಿಷ್ಕಾರ ಹಾಕುವದೆಂದು ತೀರ್ಮಾನಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ ಅದೇನೋ ಎಲೆಕ್ಷನ್ ಅಂತಿದ್ದನಲ್ಲ ಅದಕ್ಕೆ ಈ ಸಲ ತಾವೂ ನಿಲ್ಲಬೇಕೆಂದು ಗೊತ್ತುಮಾಡಿಕೊಂಡರು.

ಮಾರನೇ ದಿನ ಮುಂಜಾನೆ ತಮ್ಮ ತೀರ್ಮಾನವನ್ನು ಗೌಡನಿಗೆ ತಿಳಿಸಿದರು. ಗೌಡ ಸುಮ್ಮನಾದ. ಅವರು ಹೋದ ಮೇಲೆ ಗುಡಸೀಕರನನನ್ನು ಕರೆತರಲಿಕ್ಕೆ ಹಳಬನನ್ನು ಓಡಿಸಿದ.

ಹಳಬ ಬಂದಾಗ ಗುಡಸೀಕರ ಸುಂದರಿಯ ಗುಡಿಸಲಲ್ಲಿದ್ದ. ಗೌಡರು ಕರಯುತ್ತಿದ್ದಾರೆಂದು ಹಳಬ ಹೇಳಿದ್ದೇ ತಡ, ಹುಡುಗ ಹುರುಪಾದ. ಬಸವರಾಜೂನ ಭುಜ ಎರಡೆರಡು ಬಾರಿ ಬಾರಿಸಿ "ನೋಡಿದಿ? ಹೇಗೆ ಹಾದಿಗಿ ಬಂದ!" ಎಂದಂದು ಗಟ್ಟಿಯಾಗಿ ನಕ್ಕ. ಸುಂದರಿಗೆ ಕಣ್ಣುಹಾರಿಸಿ ನಕ್ಕ. ಹಾಳಾದವರು ಆ ಚತುಷ್ಟಯರಿರಲಿಲ್ಲ. ಸಾಮೂಹಿಕವಾಗಿ ಚಪ್ಪಾಳೆ ತಟ್ಟಿ ನಗಬಹುದಿತ್ತು. ನಗುವ ಸಂಭ್ರಮದಲ್ಲಿ ಹಳಬ ಕಂಡಿರಲೇ ಇಲ್ಲ. ಕಂಡೊಡನೆ "ನನಗ ಸಡವಿಲ್ಲಾ ಬೇಕಾದವರ ಅಂವಗs ಬಾ ಅಂತ ಹೇಳ" ಎಂದ. ಈ ಸೊಕ್ಕನ್ನು ಹಳಬ ನಿರೀಕ್ಷಿಸಿರಲಿಲ್ಲ. ಆಗಲೆಂದು ಹೋದ. ಗುಡಸೀಕರನ ಸೊಕ್ಕು ಕೆಳಕ್ಕಿಳಿಯದಾಯಿತು. ತಾನೆಂಥ ಮಹತ್ವದ ಯುದ್ಧಗೆದ್ದೆನಲ್ಲ ಎಂದುಕೊಂಡ. ಗೌಡನಲ್ಲಿಗೆ ಹೋಗಬಹುದಾಗಿತ್ತೇನೋ, ಹೋಗಿದ್ದರೆ ಗೌಡನ ಸೋಲನ್ನು ಕಣ್ಣಾರೆ ನೋಡಿ ಕಿವಿಯಾರೆ ಕೇಳಬಹುದಾಗಿತ್ತು. ಯಾಕೆ ಕರೆಸಿದ್ದಾನು? ಊರವರ ಮುಂದೆ ಮೀಸೆ ಮೊಂಡಾದದ್ದು ಒಂದು ಕಡೆ; ಎರಡೆಕರೆ ಜಮೀನು ಕಕ್ಕಬೇಕಾದ್ದು ಇನ್ನೊಂದು ಕಡೆ. ಅಪಸಾತಿ ಮಾಡಿಕೊಳ್ಳೋಣ ಎಂದಿರಬೇಕು. ಮಗನಿಗೆ ಈಗಲಾದರೂ ತಿಳಿಯಿತಲ್ಲ, ತಾನು ಯಾರು ಅಂತ. ಇನ್ನು ಮೇಲಾದರೂ ಬಾಯಿ ಮುಚ್ಚಿಕೊಂಡು ಇದ್ದರೆ ಬರೋಬರಿ. ಇಲ್ಲದಿದ್ದರೆ ಮೂಗಿಗೆ ಮೂಗುದಾರ ಪೋಣಿಸದಿದ್ದರೆ ನನ್ನ ಹೆಸರು ಗುಡೀಕರನೆಂದು ಯಾಕಿರಬೇಕು?

ಹಿಂಗೆಂದು ಒಳಗೊಳಗೇ ಮಾತಾಡಿಕೊಳ್ಳುತ್ತ, ಹೊರಗೆ ನಗುತ್ತ ತೋಟದ ಕಡೆ ಕಾಲು ಹಾಕಿದ. ನಡೆದಾಡುವಾಗ ಕೂಡ ವಿಚಿತ್ರ ಹೌಸಿ ಅವನೊಳಗೆ ಹರದಾಡತೊಡಗಿತ್ತು. ರೆಕ್ಕೆ ಬೀಸಿ ಹಾರಿ ಹೋದಂತೆ ತೋಟಕ್ಕೆ ಹೋದ. ಕಬ್ಬಿನ ತೋಟದಲ್ಲಿ ನಾಲ್ಕೈದು ಮಂದಿ ಆಳುಗಳು ಮೇವು ಬಳಿಯುತ್ತಿದ್ದರು. ಸೀದಾ ಅಲ್ಲಿಗೇ ಹೋದ.

ಅವರ್ಯಾರೂ ಇವನ ಅಭಿಪ್ರಾಯ ಅನುಮೋದಿಸುವವರಾಗಿರಲಿಲ್ಲ. ಇವ ತನ್ನ ಕಾಳಿ ಊದತೊಡಗಿದ. ತನಗೆ ಪರಿಚಿತರೆಂದು ಅಧಿಕಾರಿಗಳ ಕುಗೋತ್ರ ಹೆಸರು ಹೇಳಿದ. ಅವರೊಂದಿಗೆ ತನ್ನ ಸಲಿಗೆಯ ಪ್ರಸಂಗಗಳನ್ನು ಕಥೆಮಾಡಿ ಹೇಳಿದ. ಗೌಡ ಅಪಸಾತಿ ಮಾಡಿಕೊಳ್ಳಲು ಓಡಾಡುತ್ತಿದ್ದುದನ್ನು ದನಿ ಎತ್ತರಿಸಿ ಸ್ವಲ್ಪ ಉದ್ರೇಕಿತನಾಗಿಯೇ ಹೇಳಿದ. ತನ್ನ ಹೇಳಿಕೆಯಲ್ಲಿ ಗೌಡನನ್ನು ಹುಳಮಡಿ ತಾನೊಂದು ಆನೆಯಷ್ಟು ಎತ್ತರಕ್ಕೆ ಬೆಳೆದ. ಅಷ್ಟರಲ್ಲಿ ಗೌಡ ಅಲ್ಲಿಗೇ ಬಂದ. ಸರಪಂಚ ಮಾತಾಡಿಸಲಿಲ್ಲ. ತನಗೇನೂ ಆಗಿಲ್ಲವೆಂಬಂತೆ

ಆಳುಗಳೊಂದಿಗೆ ಅದು ಇದು ಬಾತಿಗೆ ಬಾರದ್ದನ್ನಾಡುತ್ತ ನಿಂತ. ಆಳುಗಳಲ್ಲಿ ಒಂದಿಬ್ಬರು ಗೌಡನಿಗೆ ಶರಣು ಹೇಳಿದರು. ಗೌಡ ಬಂದವನು "ತಮ್ಮಾ, ನಿನ್ನ ಜೋಡಿ ಮಾತಾಡಬೇಕು ಗುಡಿಸಲ ಕಡೆ ಬರ್ತೀಯೇನು?" ಎಂದ. ಸರಪಂಚ ತಿರುಗಿ ಕೂಡ ನೋಡದೆ "ಅದೇನ ಮಾತ ಅದಾವ ಇಲ್ಲೇ ಹೇಳಬಹುದಲ್ಲಾ" ಅಂದ. ಗೌಡನ ಮನಸ್ಸು ಮುದುಡಿ ಆ ಮಾತಿನಷ್ಟೇ ಆಯ್ತು. ಆದರೆ ಗುಡಸೀಕರನ ಈ ನಡೆ ಅನಿರೀಕ್ಷಿತವಾಗಿರಲಿಲ್ಲ. ಅಭಿಮಾನವಿಲ್ಲವೆಂದಲ್ಲ. ವಿವೇಕ, ಅದಕ್ಕಿಂತ ಹೆಚ್ಚಾಗಿತ್ತು. "ಆಗಲಿ, ಬಿಡಪಾ, ಇಲ್ಲೇ ಮಾತಾಡೋಣು" ಎಂದು ಅಲ್ಲೇ ಬದುವಿನ ಮೇಲೆ ಕುಳಿತ. ಆಳುಗಳು ಆ ಅಂಚಿಗೆ ಹೋಗುತ್ತೇವೆ ಎಂದು ಹೇಳಿಕೊಂಡು ಎದ್ದುಹೋದರು.

ಗೌಡ ಮಾತು ಶುರುಮಾಡಿದ. "ನೋಡ ತಮ್ಮ, ನಮ್ಮ ಕಾಲ ಮುಗೀತು. ಇಲ್ಲಿ ತಂಕಾ ಒಂದ ಹದ್ದಬಸ್ತೀನಾಗ ಊರ ತಂದ ನಿನ್ನ ಕೈಯಾಗಿಟ್ಟೆವಿ. ನೀ ಕಲತಾಂವ. ಲೋಕಾ ತಿಳಿದಾಂವ..." ಹೇಳುತ್ತ ಗೌಡ ಸ್ವಲ್ಪ ಹೊತ್ತು ಸುಮ್ಮನಾದ. ಸರಪಂಚ ಆಗಲೇ ಅಳ್ಳಳ್ಳಕಾಗಿ ಗುಡಸೀಕರನಾಗಿತ್ತಿದ್ದ. ಗೌಡ ಮತ್ತೆ ಮುಂದುವರಿದ. "ನೀ ಬ್ಯಾರೇ ಅಲ್ಲ, ನನ್ನ  ಮಗಾ ಬ್ಯಾರೇ ಅಲ್ಲಪಾ, ನಿನಗ ಹಾಂಗ ತಿಳದ ಪಂಚಾಯ್ತಿ ಮಾಡಪಾ ಅಂತ ಊರ ನಿನ್ನ ಅಂಗೈಯಾಗಿಟ್ಟೆವಿ. ನಾ ನಿನಗ ಏನ ಕೆಟ್ಟ ಮಾಡೀನಿ ಹೇಳೋ ಎಪ್ಪಾ, ನನ್ನ ಕಂಡರ ವೈರೀನ ಕಂಡಾಂಗ ಮಾಡತಿ. ಏನಾರ ತಪ್ಪ ಆಗಿದ್ದರ ಹೇಳು, ನಿನ್ನ ಕಾಲಿಗೆ ತಲೀ ಕಟೀತೀನಿ. ನಿನ್ನ ಜೋಡೀ ಜಗಳ ಮಾಡೋ ವಯಸ್ಸನಂದ? ಇಂದಿಲ್ಲಿ; ನಾಳೆ ಗೋರ್ಯಾಗ ಇರಾವರು. ನೀವಾದರ ಇದs ಇನ್ನೂ ಚಿಗರವರು. ಹೂ ಕಾಯಿ ಹಣ್ಣಾಗುವರು. ಈ ಊರಿಗೆ ನಮ್ಮಂಥಾ ಮುದುಕರಲ್ಲಪಾ, ನೀ ಬೇಕು, ನಿನ್ನಂತವ ಬೇಕು, ಏನೊ ನಾಲಿಗಿ ತುಂಬ ಹಾಂಗ ಮಾಡ್ರೊ, ಹೀಂಗ ಮಾಡ್ರೊ ಅಂತ ಹೇಳತೀವು. ಕಣ್ಣಿಗಿ ದಿನಾ ಬೆಳಗಾದರ ಗೋರಿ ಕಾಣತೈತಿ, ಅದರ ಅಂಜಿಕ್ಯಾಗ ಏನಾರ ಆಡತಿದ್ದೇನಪಾ, ಬ್ಯಾಡಂದರ ಅದನೂ ಬಿಡತೀವು. ಅದರ ನಮ್ಮ ಮ್ಯಾಲಿನ ಸಿಟ್ಟಲೆ ಊರ್ಯಾಕ ಹಾಳಾಗಬೇಕೊ ಎಣ್ಣಾ? ಗುಡಿಸೀಕರ ಪೂರಾ ಕರಗಿಬಿಟ್ಟಿದ್ದ. ಪಾಪ, ಈ ಮುದುಕನ್ನ ತಾನು ಅಪಾರ್ಥ ಮಾಡಿಕೊಂಡಿದದೇನೆನಿಸಿತು. ಸ್ವಲ್ಪ ಅಂತಃಕರಣ ಬಿಚ್ಚಿ "ಇದನ್ನ ಹೆಂಗ ಮಾಡೋಣೂ" ಅಂತ ಕೇಳಿದರೆ ಸಾಕು. ಮುದುಕ ಉಬ್ಬುವವ. ಹೆಚ್ಚೇನು ಹಿರಿಯರಿಗೆ ಬೇಕಾದ್ದೂ ಅಷ್ಟೇ. ಹೇಳಿ ಕೇಳಿ ಹೆಗಲು ಬಿದದವರು. ಇನ್ನೆಷ್ಟು ದಿನ ಇದ್ದಾರು? ಇರೋ ತನಕ ಸ್ವಲ್ಪ ಮರ್ಯಾದೆ ಕೊಟ್ಟರೆ ತನಗೇನು ಕೊರತೆ ಬಿದ್ದೀತು? ಅದೊಂದು ಗ್ರಾಮ ಪಂಚಾಯ್ತಿ. ಹೋಗಿ ಕೇಳಿದರೆ ಈಗಲೂ ಎಲೆಕ್ಷನಿಲ್ಲದೆ ಹಾಗೇ ಕೂಡುವುದು ದೂರದ ಮಾತಲ್ಲ. ಗೌಡ ಮುಂದುವರಿಸಿದ:

"ಖರೆ ಹೇಳೋ ತಮ್ಮಾ, ನಾ ಆ ಚಿಮಣಾನ ಬಸರು ಮಾಡಿದ್ದ ಖರೆ ಮಾತ? ನೀ ನಿಮ್ಮಪ್ಪನ ಹೆಸರ ತಗೊಂಡ ಹೌಂದನ್ನು. ನಾ ಇಕ್ಕs ಈಗ ಎರಡೆಕರೆ ಜಮೀನೂ ಕೊಟ್ಟು ಬಿಡತೇನು: ಅಪ್ಪಾ ಸಾಯೋ ಕಾಲದಾಗ ನನ್ನ ಮ್ಯಾಲ ಹಿಂತಾದೊಂದ ಹರಲಿ ಹೊರಸ ಬ್ಯಾಡ."

ಎನ್ನುತ್ತ ಕೂಡಲೇ ಗೌಡ ಕೈಮುಗಿದ. ಇಬ್ಬರ ಬಾಯಿ ಕಟ್ಟಿತು. ಹಮ್ಮು ಕರಗಿ ನೀರಾಗಿ ಹರಿದಂತೆ ಗುಡಸೀಕರನ ಕಣ್ಣೊಳಗಿಂದ ಎರಡು ಹನಿ ಉದುರಿದವು. ತಾನು ಇಲ್ಲವೆ ಬಸವರಾಜು ಇಬ್ಬರಲ್ಲಿ ಒಬ್ಬರ ಕಾರಭಾರಿಗೆ ಸುಂದರಿ ಬಸರಿಯಾದದ್ದು ಖಾತ್ರಿಯಾಗಿತ್ತು. ನಿಂಗೂ ನಿನ್ನೆ ಬಸವರಾಜೂನ ಭಾನಗಡಿ ಹೇಳಿದ್ದ. ಇದರಲ್ಲಿ ಬಸವರಾಜೂನ ಭಾಗವೇ ಹೆಚ್ಚಾದಂತಿತ್ತು. ಇಲ್ಲದಿದ್ದರೆ ಬಸರಿನ ಸುದ್ದಿ ಮೊದಲು ತನಗಾದರು ಹೇಳಬಹುದಿತ್ತೊ? ಗರ್ಭಪಾತದ ಸಂಗತಿಯನ್ನಾದರೂ ತಿಳಿಸಬಹುದಿತ್ತೊ?

ಬಹಳ ಹೊತ್ತಿನ ತನಕ ಇಬ್ಬರೂ ಮಾತಾಡಲಿಲ್ಲ. ಗುಡಸೀಕರ ಇಲ್ಲೀತನಕ ಒಂದು ಮಾತೂ ಆಡಿರಲಿಲ್ಲ. ಏನಾಡಬೇಕೆಂದು ಹೊಳೆಯಲೂ ಇಲ್ಲ ಈಗಲೂ ಗೌಡನೇ ಹೇಳಿದ. "ನೋಡು ತಮ್ಮಾ, ದಿನ ಬೆಳಗಾದರ ಒಬ್ಬರ ಮಾರಿ ಒಬ್ಬರ ನೋಡಾವರು ನಾವು. ನಿನ್ನ ನಿಟ್ಟುಸರಿಗೆ ನಾನs ಕರಗಬೇಕು. ನಂದಕ ನೀ ಕರಗಬೇಕು. ಬೆಳಗಾಂವಿ ಮನಿಶ್ಯಾ ಇಂದಿದ್ದ ನಾಳಿ ಹೋಗಾಂವಪಾ. ಅವರಿಬ್ಬರನ್ನು ಈಗಿಂದೀಗ ಹೊರಗ್ಹಾಕು. ನಿನಗ್ಹಂಗ ಬೇಕ ಹಾಂಗ ಊರ ಆಳಿಕೊ. ಖರೆ ಹೇಳ್ತನೋ ಎಪ್ಪಾ. ಸಡ್ಲ ಬಿಟ್ಟರೆ ಆಕೆ ಈ ಊರ ಅಳವೆತ್ತತಾಳ" ಅಂದು ಸುಮ್ಮನಾದ. ಮಾತುಕತೆಗೊಂದು ಮುಕ್ತಾಯವನ್ನಾದರೂ ಕೊಡಬೇಕಲ್ಲ. "ಆಗಲಿ, ನೀವೇನ ಕಾಳಜಿ ಮಾಡಬ್ಯಾಡರಿ, ನಡೀರಿ ಹೋಗೋಣು" ಅಂದ. ಮಾತಿನ್ನೂ ಬಾಯಲ್ಲಿಯೇ ಇತ್ತು. ಢಂ ಢಂ ಎಂದು ಗುಂಡು ಹಾರಿದ್ದು ಕೇಳಿಸಿತು. ಇಬ್ಬರೂ ತಬ್ಬಿಬ್ಬಾದರು.

ಮುಖಾಮುಖ ನೋಡಿಕೊಂಡರು. ಗುಡಸೀಕರ ಸದ್ದುಬಂದ ಕಡೆ ಓಡಿದ. ಗೌಡನ ಕೈಕಾಲೇ ಹೋದವು. ಅಲ್ಲೇ ಕುಸಿದ. ಗುಡಸೀಕರ ಓಡಿ ಬಂದಾಗ ಕರಿಮಾಯಿಯ ಗುಡಿಯಲ್ಲಿ ಪೋಲೀಸರು ಓಡಾಡುತ್ತಿದ್ದರು. ಗುಮಡಿನ ಸಪ್ಪಳಕ್ಕೆ ತತ್ತರಿಸಿ ಜೇನು ಹುಟ್ಟೊಂದರ ಕಾಲುಭಾಗ ಕಳಚಿಬಿದ್ದಿತ್ತು. ಜೇನು ಚೆಲ್ಲನೆ ಸುತ್ತ ಸಿಡಿದಿತ್ತು. ಜೇನ್ನೊಣಗಳು ಎದ್ದು ಗುಂಯೆಂದು ಹುಯ್ಯಲೆಬ್ಬಿಸಿ ಪೋಲೀಸರನ್ನು ಅಟ್ಟಿಸಿಕೊಂಡೋಡಿ ಕಚ್ಚುತ್ತಿದ್ದವು...ಪೋಜದಾರ ಗುಡಸೀಕರನನ್ನೂ ಗಮನಿಸದೆ, ಹುಳಗಳ ಕಾಟ ಲೆಕ್ಕಿಸದೇ ವಿಜಯೋನ್ಮಾದದಿಂದ ಕಿರಿಚಿ ಆಜ್ಞೆ ಮಾಡುತ್ತಿದ್ದ. ಜನ ಒಬ್ಬೊಬ್ಬರೇ ಓಡಿಬಂದು ದೂರದಲ್ಲೇ ನಿಂತುಕೊಂಡು ಪಿಳಿಪಿಳಿ ಕಣ್ಣುಬಿಡುತ್ತ ನೋಡುತ್ತಿದ್ದರು. ಕೊಳವಿಯ ಶ್ರೀ ಮುದುಕಪ್ಪ ಗೌಡನ ಹೆಣ ಬೊಕ್ಕಬೋರಲಾಗಿ ಬೆನ್ನು ಮೇಲಾಗಿ ಕರಮಾಯಿಯ ಕಡೆ ಮುಖಮಾಡಿ ತಾಯಿಗೆ ಕೊನೆಯ ಶರಣು ಹೇಳುವಂತೆ ಬಿದ್ದಿತ್ತು. ಹೊಟ್ಟೆಯ ಕೆಳಗೆ ನೆತ್ತರ ಮಡು ನಿಂತಿತ್ತು.

## ಕರಿಮಾಯಿಯ ಚರಿತ್ರೆ

ಊರ ಚರಿತ್ರೆಯಂತೆಯೇ ಕರಿಮಾಯಿಯ ಚರಿತ್ರೆಯೂ ಅಸ್ಪಷ್ಟವಾಗಿಯೇ ಇದೆ. ಸಿಕ್ಕುವ ಲಗಮವ್ವನ ಹಾಡು, ದತ್ತಪ್ಪನ ಚಿಂತಾಮಣಿ ಹಾಗೂ ಕರಿಮಾಯಿಯ ಹಾಲೀ ಇರುವ ಆರಾಧನೆ, ಆಚರಣೆಗಳ ವಿವರಗಳಿಂದ ಅವಳ ಚರಿತ್ರೆ ಹೀಗಿರಬಹುದೆಂದು ತಿಳಿಯುತ್ತದೆ:

ಅನಾದಿ ಕಾಲದಲ್ಲಿ ಧರಣಿಯ ಮೇಲೆ, ದೇವ ದಾನವರ "ವಿದ್ದ"ದಿಂದಾಗಿ ಪಾಪ ಅಧಿಕವಾಯಿತು. ಮಳೆ ಬೀಳದ ಹಾಗೆ, ಬೆಳೆ ಏಳದ ಹಾಗಾಗಿ ಲೋಕದ ಮಂದಿಗೆ ಸಂಕಟವೂ ಜಡೆಮುನಿ ಮುಂತಾದ ಸಾಧು ಸತ್ಪುರುಷ ಸಜ್ಜನ ಋಷಿಮುನಿಗಳ ಜಪತಪಕ್ಕೆ ಕಂಟಕವೂ ಉಂಟಾಯಿತು. ಆಗ ಭೂಮಿತಾಯಿ ಶಿವಪಾರ್ವತಿಯರ ಬಳಿ ಹೋಗಿ ಕಾಪಾಡಬೇಕೆಂದು ಸೆರಗೊಡ್ಡಿ ಬೇಡಿದಳು. ಕೂಡಲೇ ಶಿವನು ತನ್ನ ಹಣೆಯ ಬೆವರನ್ನು ಸೀಟಿ ಭೂಮಿಯ ಮೇಲೆ ಚೆಲ್ಲಿದನು. ಆ ಕ್ಷಣವೇ ಅದೊಂದು ಅದ್ಭುತವಾದ ಸ್ತ್ರೀ ರೂಪ ತಾಳಿತು. ಅವಳೇ ಕರ್ರೆವ್ವ ತಾಯಿ.

ಆಗ ಬಿರುಬೇಸಿಗೆ. ಬಿಸಿಲಿನ ಧಗೆ ತಡೆಯದೆ ಕರ್ರೆವ್ವ ನೀರಡಿಸಿದಳು, ನೀರಿಗಾಗಿ ಹುಡುಕುತ್ತಿರುವಾಗ "ಅಯ್ಯೋ, ಕಾಪಾಡ್ರೋ, ಗಂಡಸಾದರ ಶಿವ ಅಂದೇನು, ಹೆಂಗಸಾದರೆ ಪಾರ್ವತಿ ಅಂದೇನು, ಕಾಪಾಡ್ರೋ" ಎಂಬ ಸ್ವರ ಕೇಳಿಸಿತು. ಕರ್ರೆವ್ವ ಹೋಗಿ ನೋಡಿದರೆ ಒಬ್ಬ ಮುನಿ ದೈತ್ಯರಿಗೆ ಹೆದರಿ ಓಡಿ ಹೋಗುವಾಗ ಕಲ್ಲೆಡವಿ ಆಳವಾದ ಬಾವಿಯಲ್ಲಿ ಬಿದ್ದಿದ್ದ, ಅವನನ್ನು ಹೇಗೆ ಕಾಪಾಡಬೇಕು? ಕೊನೆಗೆ ಸುತ್ತ ಯಾರೂ ಇಲ್ಲದ್ದನ್ನು ನೋಡಿ, ಉಟ್ಟ ದಟ್ಟಿಯನ್ನೇ ಕಳೆದು ಬಾವಿಯಲ್ಲಿಳಿಬಿಟ್ಟಳು, "ಕಣ್ಣುಮುಚ್ಚಿ ದಟ್ಟಿ ಹಿಡಿ. ನಾ ತಗಿ ಅಂಬೋ ತನಕ ಕಣ್ಣು ತೆಗೀಬೇಡ: ತಗಿದರೆ ಸಿಗಿದೇನೆಂದು" ಹೇಳಿದಳು. ಅವನು ಬಿಟ್ಟ ದಟ್ಟೆಯ ಆ ತುದಿ ಹಿಡಿದ. ಈ ತುದಿಯಿಂದ ಎಳೆದಳು.

ಮೇಲೆ ಬಂದನೋ ಇಲ್ಲವೋ, ಮುನಿಯ ಚಪಲಕ್ಕೇನೆನ್ನೋಣ – ಕಣ್ಣು ತೆರೆದ, ಎದುರಿಗೆ ಬೆತ್ತಲೆ ಮಾಯೆ! ಚಿತ್ತ ಚಂಚಲವಾಗಿ ಚೆಲ್ಲಿಹೋಯಿತು. ತಕ್ಷಣ ಕರ್ರೆವ್ವ ತನ್ನ ಕಠಾರಿಯಿಂದ ನೆಲದ ಮೇಲೆ ಏಳು ಅಡ್ಡಗೆರೆ ಕೊರೆದು, "ದಾಟಿ ಬಂದರೆ ಮೀಟಿ ಒಗೆದೇನು" ಎಂದಳು ಜಡೆಮುನಿಗಳು ಹೆರಿದರೆಂದು ತೋರುತ್ತದೆ: ಸುಮ್ಮನೆ ನಿಂತರು. ಕರ್ರೆವ್ವ ಸೀರೆ ಉಟ್ಟಾದ ಮೇಲೆ ಜಡೆಮುನಿ ಆಕೆ ಕೊರೆದ ಏಳೂ ಗೆರೆಗಳಲ್ಲಿ ತನ್ನ ರಕ್ತ ಸುರಿಸಿದನೆಂದೂ, ಅವು ನೆತ್ತರ ನದಿಯಾಗಿ ಹರಿದವೆಂದೂ ಅಷ್ಟೂ ನದಿ ದಾಟಿ ಬಂದು ಕರ್ರೆವ್ವನ್ನು ವರಿಸಿದನೆಂದು ಅವಳಿಗೆ 'ಕರಿಮಾಯಿ' ಎಂದು ಹೆಸರಿಟ್ಟು ಮದುವೆಯಾದನೆಂದು ತಿಳಿಯುತ್ತದೆ.

ಇವರು ಬಾಳ್ವೆ ಮಾಡಿದ್ದು ಜಂಬೂ ದ್ವೀಪದ ಶ್ರೀರಾಮ ಕ್ಷೇತ್ರದ ಮೇಲನಾಡಿನ ಶಿವಾಪುರದ ಬಳಿಯ ಅಡವಿಯಲ್ಲಿ! ಈಗ ಈ ದಂಪತಿಗಳಿಗೆ ಇಬ್ಬಗೆಯ ಶತ್ರುಗಳು ಹುಟ್ಟಿಕೊಂಡರು. ಕರ್ರೆವ್ವ ದೈತ್ಯರ ಕುಲದವಳಾಗಿ ದೇವಕುಲದ ಜಡೆಮುನಿಯನ್ನು ಮದುವೆಯಾದುದು ತಪ್ಪೆಂದು ದೈತ್ಯರು ಸಾಧಿಸಿದರು. "ಈ ಶೂದ್ರಕನ್ಯೆ"ಯನ್ನು ಮದುವೆಯಾಗಿ ಜಡೆಮುನಿ ತಮ್ಮ 'ಉಚ್ಚಕುಲ'ವನ್ನು ಕುಲಗೆಡಿಸಿದುದರಿಂದ ಇಬ್ಬರನ್ನೂ ಸಂಹರಿಸಿ ಬಿಡಬೇಕೆಂದು ದೇವತೆಗಳು ಛಲ ಹಿಡಿದರು. ಆಗ ಕರಿಮಾಯಿ ತುಂಬು ಗರ್ಭಿಣಿ.

ಒಂದು ದಿನ ಜಡೆಮುನಿ ತಪಸ್ಸು ಮಾಡುತ್ತಿರಬೇಕಾದರೆ ಕರಿಮಾಯಿ ನೀರಿಗೆ ಹೋಗಿರಬೇಕಾದರೆ ದೇವತೆಗಳು ಬಂದು ಕುಲಗೆಟ್ಟ ಜಡೆಮುನಿಯನ್ನು ಕೊಂದರು. ಅಂದು ಹುಣ್ಣಿಮೆ. ಕರಿಮಾಯಿ ಆ ದಿನ ವಿಧವೆಯಾದುದರಿಂದ ಆ ದಿನಕ್ಕೆ ರಂಡಿ ಹುಣ್ಣಿಮೆಯೆಂದು ಹೆಸರಾಯಿತು. ದೇವತೆಗಳು ಅಲ್ಲಿಗೂ ತೃಪ್ತರಾಗದೆ ಜಡೆಮುನಿಯ ಸಂತಾನವನ್ನು ನಾಶಪಡಿಸಬೇಕೆಂದು ಕರಿಮಾಯಿಯ ಗರ್ಭಕ್ಕೆ ಗುರಿಯಿಟ್ಟು ಹೊರಟರು. ಕರಿಮಾಯಿ ತುಂಬಿದ ಗರ್ಭ ಹೊತ್ತುಕೊಂಡು ದೇವತೆಗಳನ್ನು ಎದುರಿಸಲಾರದೆ ಅಡವಿ ಪಾಲಾದಳು. ತ್ರಿಕಾಲ ಜ್ಞಾನಿಗಳಾದ ದೇವತೆಗಳಿಗೆ ಕರಿಮಾಯಿಯಿರುವ ಠಿಕಾಣ ಗೊತ್ತಾಯಿತು. ಅವಳಿಗೆ ಅನ್ನ ನೀರು ಸಿಕ್ಕದ ಹಾಗೆ ಮಾಡಿದರು. ತಾಯಿ ಕಲ್ಲು ಕುದಿಸಿ ತಿಂದಳು. ಮುಳ್ಳು ಬೇಯಿಸಿ ತಿಂದಳು.

ಅಟ್ಟಿಸಿಕೊಂಡು ಬಂದ ದೇವತೆಗಳನ್ನು ನಿವಾರಿಸಿ ಪಾರಾಗಿ ಮಾವಿನ ತೋಪಿನಲ್ಲಿ ಹುದುಗಿಕೊಂಡು ಕೂತಿದ್ದಳು. ಜೋತುಬಿದ್ದ ಹುಳಿ ಮಾವಿನ ಗೊಂಚಲು ನೋಡಿ, ಬಯಕೆ ಮೂಡಿ ಬಾಯಿ ನೀರೂರಿತು. ಅವು ಕೈಗೆಟಕುವಂತಿರಲಿಲ್ಲ. ಹೋಗಿ ಕಷ್ಟಪಟ್ಟು ಕಲ್ಲಿನ ಮೇಲೆ ಕಲ್ಲು ಪೇರಿಸಿ, ಅದರ ಮೇಲೆ ಹತ್ತಿ ಇನ್ನೇನು ಮಾವಿನ ಗೊಂಚಲು ಸಿಕ್ಕಿತೆಂಬಾಗ "ಕಾಯಿ ಹರಿದೀಯೇ ಹಾದರಗಿತ್ತಿ" ಎಂಬ ದನಿ ಕೇಳಿಸಿತು. ನೋಡಿದರೆ ಒಂದು ಕಡೆ ದೇವತೆಗಳು ಬಿಲ್ಲು ಬಾಣ ಹಿಡಿದು ತನ್ನ ಗರ್ಭಕ್ಕೆ ಗುರಿಯಿಟ್ಟು ನಿಂತಿದ್ದಾರೆ! ಹಾ ಎನ್ನುವುದರೊಳಗೆ ಸಾವಿರದೊಂದು ಬಾಣಗಳು, ಸಾವಿರದೊಂದು ಗದೆಗಳು ಕರಿಮಾಯಿಯ ಗರ್ಭಕ್ಕೆ ತಾಗಿ, ತಾಯಿ ಕಿಟಾರನೆ ಕಿರಿಚಿಕೊಂಡಳು.

ಕಳಚಿದ ಗರ್ಭವನ್ನು ಉಡಿಯಲ್ಲಿ ಕಟ್ಟಿ ಸೊಂಟಕ್ಕೆ ಬಿಗಿದುಕೊಂಡಳು. ಅವಳ ಕಿರುಚುವಿಕೆ ಕೇಳಿ ಕೈಲಾಸದ ಶಿವ ನಡುಗಿ ತನ್ನ ನಂದಿಯನ್ನೂ ಪಾರ್ವತಿ ತನ್ನ ಹುಲಿಯನ್ನೂ ಇವಳ ಬಳಿಗೆ ಓಡಿಸಿದರು. ಕರಿಮಾಯಿ ಹುಲಿಯೇರಿ ದೇವ ದಾನವರನ್ನು ಅಟ್ಟಿಸಿಕೊಂಡು ಹೊಕ್ಕಲ್ಲಿ ಹೊಕ್ಕು, ಹರಿದಲ್ಲಿ ಹರಿದು ಬೇಟೆಯಾಡಲಾರಂಭಿಸಿದಳು. ಆರಾರು ಗಾವುದಕ್ಕೊಂದು ಹೆಜ್ಜೆಯನ್ನಿಟ್ಟು ದುರುಳರ ಮೇಲೆ "ವಿದ್ದ" ಹೂಡಿದಳು. ಕಾರಂಬೋ ಕತ್ತಲೆನ್ನದೆ, ಬೊರೆಂಬೋ ಮಳೆ ಗಾಳಿಯೆನ್ನದೆ 'ಕಟ್ಟಿರೋ ಕಳ್ಳ ಲೌಡಿಮಕ್ಕಳ'ನ್ನೆಂದು ಮೆಟ್ಟಿಮೆಟ್ಟಿ ಕೊಂದಳು. ದೇವತೆಗಳು ಹೆದರಿ ದೇವಲೋಕ ಸೇರಿದರು. ದೈತ್ಯರೋ ಮಾಯಾವಿಗಳು. ಅವರ ಒಂದು ಹನಿ ರಕ್ತ ಬಿದ್ದಲ್ಲಿ ಸಾವಿರಾರು ದೈತ್ಯರಿದ್ದರು. ಕರಿಮಾಯಿಗೆ ಏನು ಮಾಡಬೇಕೆಂದು ತೋಚದಂತಾಯ್ತು. ಕೊನೆಗೆ ತನ್ನ ನಾಲಗೆಯನ್ನೇ ಭೂಮಿಯ ಮೇಲೆ ಚಾಚಿ ದೈತ್ಯರ ಸಂಹರಿಸಿದಳು. ರಕ್ತ ಬೀಳುಬೀಳುತ್ತಿದ್ದಂತೆ ನೆಕ್ಕಿದಳು. ತಾಯಿಯ ಮಹಿಮೆ, ಬಿದ್ದ ರಕ್ತ ಜೇನುತುಪ್ಪವಾಯಿತು! ಅಷ್ಟೂ ದೈತ್ಯರ ಶಿರ ತರಿದು ಶಿವನ ಬಳಿಗೆ ಹೋದಳು. "ಗಂಡನ ಜೀವ, ಮಕ್ಕಳ ಜೀವ ಕೊಡುವಿಯೊ? ನಿನ್ನನ್ನೇ ಮುಕ್ಕಲೋ? " ಎಂದು ಕೇಳಿದಳು. ಶಿವ ಹೆದರಿ ಉಡಿಯಲ್ಲಿಯ ಇಪ್ಪತ್ತೊಂದು ಪಿಂಡಗಳಿಗೆ ಜೀವ ಬರಿಸಿದ. ಅವು ಇಪ್ಪತ್ತೊಂದು ಮಕ್ಕಳಾದವು, ಜಡೆಮುನಿಗೂ ಜೀವ ಬಂತು. ಆದಿನ ಕರಿಮಾಯಿ ಮುತ್ತೈದೆಯಾಗಿ ಕುಂಕುಮ ಹಚ್ಚಿಕೊಂಡಳು. ಅದಕ್ಕೆ ಮುತ್ತೈದೆ ಹುಣ್ಣಿಮೆಯೆಂದು ಈಗಲೂ ಹೇಳುತ್ತಾರೆ.

ಕರಿಮಾಯಿ ಮಕ್ಕಳು ಹಾಗೂ ಗಂಡನೊಂದಿಗೆ ತಿರುಗಿ ಭೂಲೋಕಕ್ಕೆ ಬಂದುದೇನೋ ಆಯಿತು. ಆದರೆ ಅವಳಿಗೆ ದುರುಳ ದೇವತೆಗಳ ಭಯ ಇದ್ದೇ ಇತ್ತು. ಆದ್ದರಿಂದ ಮಕ್ಕಳನ್ನು ಸಂಜೆಯ ತನಕ ಆಡಬಿಟ್ಟು ಸೂರ್ಯಾಸ್ತವಾದೊಡನೆ ಅವರನ್ನು ಕವಡೆಗಳಾಗಿ ಪರಿವರ್ತಿಸಿ ಸರ ಮಾಡಿ ಕತ್ತಿನಲ್ಲಿ ಧರಿಸಿಕೊಳ್ಳುತ್ತಿದ್ದಳು. ಅದರ ಗುರುತಿನ ಇಪ್ಪತ್ತೊಂದು ಕವಡೆಗಳ ಸರವೊಂದು ಮೂರ್ತಿಯ ಕತ್ತಿನಲಿ ಈಗಲೂ ಇದೆ, ಮುಂದೆ ನುಂಗಿದ ದೈತ್ಯರನ್ನು ಕಾರಿಕೊಂಡಳೆಂದೂ, ಅವರು ಜೇನುಹುಳುಗಳಾಗಿ ಹೊರಬಂದು ಅವಳ ಗಣಂಗಳಾದರೆಂದೂ ಕಥೆಯಿದೆ. ಗುಡಿಯಲ್ಲಿ ಮೂರು ಹೆಜ್ಜೇನಿನ ಹುಟ್ಟುಗಳಂತೂ ಈಗಲೂ ಇವೆ.

ಇಲ್ಲೀಗಿ ಹರ ಹರ ಇಲ್ಲೀಗಿ ಶಿವ ಶಿವ
ಇಲ್ಲೀಗಿ ನಮ ಕತಿ ಸಂಪೂರ್ಣವಾಯ್ತು

ಎಂದು ಲಗಮವ್ವನ ಹಾಡು ಇಲ್ಲಿಗೆ ಮುಗಿಯುತ್ತದೆ. ಮುಂದಿನ ಕಥಾಭಾಗ ಹೆಳವರು ಹೇಳುವ ಗೌಡನ ವಂಶಾವಳಿಯಲ್ಲಿದೆ.

ಇತ್ತ ಜಂಬೂ ದ್ವೀಪದ ಶ್ರೀರಾಮ ಕ್ಷೇತ್ರದ ಮೇಲನಾಡಿನ ಶಿವಾಪುರದಲ್ಲಿ ಆದಿಗೌಡ ಮಂದಿಮಾರ್ಬಲ ದಂಡುದಳವಾಯಿ ಕೋಟಿಕೊತ್ತಳ ಸಹಿತ ರಾಜ್ಯವಾಳುತ್ತಿದ್ದ. ಅವನ ಬಳಿ ಸಾವಿರದೊಂದು ಹಿಂಡುವ ಆಕಳಗಳಿದ್ದವು, ತುಂಬಿದ ಭಂಡಾರವಿತ್ತು. ತುಳುಕುವ ತಿಜೋರಿಯಿತ್ತು. ಹೌಂದೆನ್ನುವ ಮಂತ್ರಿ, ಬಾಗುವ ಪ್ರಜೆಗಳಿದ್ದರು. ಏನಿದ್ದರೇನು? ಮಕ್ಕಳ ಫಲಪುತ್ರಸಂತಾನವಿರಲಿಲ್ಲ. ಅಂಗೈಯಲ್ಲಿ ತಲೆಯಿಟ್ಟು ರಾಜರಾಣಿ ಭಾರೀ ದೊಡ್ಡ ದುಃಖ ಮಾಡಿದರು.

ಹೀಂಗಿರಲಾಗಿ ಸಾವಿರದೊಂದು ಆಕಳು ದಿನಾ ಗಂಗಾಳ ಮಾತ್ರ ಹಿಂಡಿದವು. ಯಾಕೆಂದು ವಿಚಾರಿಸಲಾಗಿ ಸಾವಿರದೊಂದನೆ ಕೆಂದಾಕಳು ಹಿಂಡಲಿಲ್ಲವೆಂದಾಯಿತು. ಅದರ ಮೇಲೆ ನಿಗಾ ಇಟ್ಟ ರಾಜ ಅದರ ಹಿಂದಿನಿಂದಲೇ ಕಾಡಿಗೆ ಹೋದ. ನೋಡಲಾಗಿ ಒಂದು ಹುತ್ತದ ಮೇಲೆ ಹಾಲು ಕರೆಯುತ್ತಿತ್ತು. ಅದನ್ನು ಅಗಿಸಿದ. ಒಳಗೆ ಕರಿಮಾಯಿ ಕಾಣಿಸಿ "ನಿಲ್ಲೋದಕ್ಕೊಂದು ನೆಲಿ ಮಾಡು: ನೀ ಮಣ್ಣ ಮುಟ್ಟಿದರ ಚಿನ್ನ ಮಾಡತೀನಿ" ಎಂದಳು. ಈಗಿರುವ ದೇವೀ ಗುಡಿಯನ್ನು ಆಗಲೇ ಕಟ್ಟಿಸಿದ್ದು, ಗುಡಿ ಕಟ್ಟಿಸಿದ ಮೇಲೆ ರಾಜ ಮುಟ್ಟಿದ್ದೆಲ್ಲ ಚಿನ್ನ,ರನ್ನವಾಯಿತು. ಪಾವು ಬೆಳೆಯುವಲ್ಲಿ ಪಲ್ಲ ಬೆಳೆಯಿತು. ಸೇರು ಬೆಳೆಯುವಲ್ಲಿ ಹೇರು ಬೆಳೆಯಿತು. ವರ್ಷ ತುಂಬುವುದರೊಳಗಾಗಿ ರಾಣಿ ಗಂಡು ಹಡೆದಳು. ಆಗಲೇ ರಾಜ ತಾಯಿಗೆ ಚಿನ್ನದ ಮುಖ ಮಾಡಿಸಿದ. ಅದು ಈಗಲೂ ಇದೆ. ಶೀಗೆ ಹುಣ್ಣಿಮೆ ದಿನ ಈ ಮುಖ ಹಾಕಿ ಸಮೃದ್ಧಿ ಉತ್ಸವ ಆಚರಿಸುವ ಪದ್ಧತಿ ಇದೆ. ಇಂದಿನ ತನಕ ಆ ವಂಶದಲ್ಲಿ ನೂರು ಜನ ಗೌಡರಾದರು. ಅವರ ಪೈಕಿ ಇತ್ತೀಚಿನ ಕೆಲವರ ಹೆಸರುಗಳು ಮಾತ್ರ ಹೆಳವರ ಹಾಡಿನಲ್ಲಿವೆ. ಕೊನೆಯವನೇ ಪರಗೌಡ; ನೂರಾ ಒಂದನೇಯವ.

ಕರಿಮಾಯಿ "ಬಂಗಾರ ಮುಖದವಳು" ಎಂದು ವಿಶೇಷಣ ಬಂದುದೇ ಆದಿಗೌಡ ಮಾಡಿಸಿದ ಈ ಬಂಗಾರದ ಮುಖದಿಂದ. ಇದನ್ನು ಮಾಡಿದವನ ಹೆಸರಾಗಲಿ, ಊರಾಗಲಿ ಗೊತ್ತಾಗಿಲ್ಲ. ದಾಖಲೆಗಳೂ ಇಲ್ಲ. ಮೂರು ಕೊಪ್ಪರಿಗೆ ಚಿನ್ನದ ಕಸ, ಕಸರು ಸೋಸಿ ತೆಗೆದಾಗ ಒಂದು ಕೊಡ ಅಸಲು ಚಿನ್ನ ಸಿಕ್ಕಿತು. ಅದರಿಂದಾದ ಮೂರ್ತಿಯಿದು. ಕೆಲವರ ಪ್ರಕಾರ ತಂತಾನೇ ಉದ್ಭವಿಸಿದ್ದು. ನಂಬಿಕೆಗೆ ತಕ್ಕ ಹಾಗೆ ಆ ಬಂಗಾರದ ಮುಖವೂ ಅಷ್ಟೇ ಸುಂದರವಾಗಿದೆ.

## ನೆತ್ತಿಯ ಸೀಳಿದಂತೆ

ಹಗಲು ಹೊತ್ತಿನಲ್ಲಿ ಚತುಷ್ಟಯರ ಪ್ರಚಾರ ಕಾರ್ಯ ನಡೆದರೆ, ರಾತ್ರಿ ಹೊತ್ತು ಬಸವರಾಜೂನ ಸಂಚುಗಳು ನಡೆಯುತ್ತಿದ್ದವು. ಹಳ್ಳಿಯ ಕೊಳ್ಳೀ ಬೆಳಕಿನಲ್ಲಿ ಅವು ಜನಗಳ ಕಣ್ಣಿಗೆ ಬೀಳುತ್ತಿರಲಿಲ್ಲ.

ಮುಂಗಾರಿ ಬೆಳೆ ಬಂದಾಗಿತ್ತು. ಹಿಂಗಾರಿಯಿನ್ನೂ ಹೊಲಗಳಲ್ಲಿತ್ತು. ಈಗ ದೇವರೇಸಿಗೆ ಮೈತುಂಬ ಕೆಲಸ. ಓಡಾಡಿ ಆಯ ತರಬೇಕಿತ್ತು. ಸಂಜೆಯ ತನಕ ಕಣದಿಂದ ಕಣಕ್ಕೆ ಅಲೆದಾಡಿ ಗುಡಿಸಲಿಗೆ ಬಂದರೆ, ಕಂಬಳಿ ಚೆಲ್ಲಿಕೊಂಡು ಬಿದ್ದರೆ ಸಾಕಾಗಿತ್ತು. ಆದರೆ ಎಷ್ಟಂದರೂ ಚಪಲದ ಬಾಯಿ, ಕಂಠಮಟ ಕುಡಿಯಬೇಕೆನಿಸಿ ಒಣಗುತ್ತಿತ್ತು. ಒತ್ತ ಲಗಮವ್ವನಿಗೂ ಆಯ ಸಂಗ್ರಹಿಡುವ ಕೆಲಸ. ಭಟ್ಟಿಯಿಳಿಸುವುದು ಅವಳಿಂದ ಸಾಧ್ಯವಿರಲಿಲ್ಲ. ಅವಳು ಅಡಿಗೆ ಮಾಡಿಕೊಳ್ಳುವುದೇ ಅಪರೂಪವಾಗಿತ್ತು. ಹೊಲಗಳಲ್ಲಿ ರೈತರು ಕೊಡುವ ರೊಟ್ಟಿಯಿಂದಲೇ ತೃಪ್ತಳಾಗುತ್ತಿದ್ದಳು. ಇಷ್ಟು ದಿನ ಗುಡಿಸಲಲ್ಲಿ ದುರ್ಗಿಯಿರುತ್ತಿದ್ದಳು. ಲಗಮವ್ವ ಬೇಕೆನಿಸಿದರೆ ಒಂದು ರೊಟ್ಟಿ ಸಡಿಸಿಕೊಳ್ಳುತ್ತಿದ್ದಳು. ಈಗ ದುರ್ಗಿಯ ಬಳಕೆ ಕಮ್ಮಿಯಾಗಿತ್ತು.

ಇತ್ತ ದಿನ ಅಲ್ಲ. ಕಾಲವಲ್ಲ, ಧೀನ್ ಅಂದ ಹಾಗೆ ಸುಂದರಿಯ ಸಡಗರ ಕಟ್ಟುಮೀರಿತ್ತು. ಗುಡಸೀಕರ ಮತ್ತೆ ಸಿಕ್ಕ ಸಂಭ್ರಮದಲ್ಲಿ ಮೈಮರೆತು ಖಬರಗೇಡಿಯಾಗಿದ್ದಳು. ಅವಳನ್ನು ಹಿಡಿಯುವುದೇ ಕಷ್ಟವಾಗಿ ಕಣ್ಣಿ ಬಿಚ್ಚಿದ ಉಡಾಳ ದನದಂತೆ ಮೈ ಉಮೇದಿಯನ್ನು ಕೇರಿಯ ತುಂಬ ತುಳುಕಿದಳು. ನೆಲ ಗುಡಿಸುವ ಹಾಗೆ ನೆರಿಗೆ ಹೊಡೆದು ಇಪ್ಪತ್ತು ರೂಪಾಯಿಯ ಶಾಪೂರಿ ಸೀರೆ ಉಟ್ಟು ಮೆರೆದಳು. ಬಾಡಿಯ ಎದೆಯಲ್ಲೆರಡು ಚೂಪಾದ ಚೂರಿ ಇಟ್ಟುಕೊಂಡು ಗುಡಸೀಕರನ ಕಣ್ಣಿರಿದಳು. ಸೊಂಟಕ್ಕೆ ಬೆಂಕಿ ಹಚ್ಚಿದಳು. ಮೂಗಿನ ದಿಗರಿನಲ್ಲಿ ಕೆಳಗಿನ ನೆಲ ಮರೆತಳು.

ಜನ ಕುಕ್ಕದಿರಲಿಲ್ಲ. ಆದರೆ ಹೇಳಿ ಕೇಳಿ ಸೂಳೆಯಾದ್ದರಿಂದ, ಅದೂ ಪರವೂರವಳಾದ್ದರಿಂದ ಅನ್ನುವಷ್ಟು ಅಂದು ಸುಮ್ಮನಾದರು. ಆದರೆ ಮೂಗಿನ ಮೂಗುತಿಯಲ್ಲೇ ನದರ ನೆಟ್ಟ ಸುಂದರಿಗೆ ಈ ಮಾತು ಕೇಳಿಸಲಿಲ್ಲ. ಚೈನಿಯ, ಪ್ರೇಮದ, ಕಾಮದ, ಸುಖದ ಉನ್ಮಾದದಲ್ಲಿ ಹುಚ್ಚು ಕುದುರೆಯಾಗಿದ್ದಳು. ಏರಿದವನ ಖರೆ, ಖೊಟ್ಟೆ, ತಿಳಿಯದೆ, ಗೊತ್ತುಗುರಿ ಗೊತ್ತಿಲ್ಲದೆ ಮೂಗಿನ ಮುಂದಿನ ದಿಕ್ಕಿಗೆ, ಎದುರು ತಗ್ಗಿರಲಿ, ದಿನ್ನೆಯಿರಲಿ, ಏಳಲಿ, ಬೀಳಲಿ, ಓಟಕ್ಕೆ ಸಿದ್ಧವಾಗುತ್ತಿದ್ದಳು. ಆದರೆ ಅವಳಿಗೂ ತಿಳಿದಿರಲಿಲ್ಲ. ತನ್ನ ನಿಜವಾದ ಸವಾರ ಯಾರೆಂದು.

ಇತ್ತ ಬಸವರಾಜು ಜಾತ್ಯಾ ಕಮ್ಮಾರನಂತೆ ಕುಲುಮೆಯಲ್ಲಿ ಅನೇಕ ಕಬ್ಬಿಣ ಹಾಕಿ ಕಾಸುತ್ತಿದ್ದ. ಚತುಷ್ಟಯರಿಂದ ತಿದಿ ಊದಿಸುತ್ತಿದ್ದ. ಇದ್ದಿಲು ಹಾಕುತ್ತಿದ್ದ. ಕಬ್ಬಿಣ ಕಾದೊಡನೆ ಗುಡಸೀಕರನಿಂದ ಹೊಡೆಸಿ ಏನೋ ಸಾಮಾನು ಮಡುತ್ತಿದ್ದ. ಆದರೆ ಮಾಡಿದ ಸಾಮಾನು ಯಾರಿಗೆ ಯಾವ ಕೆಲಸಕ್ಕೆ ಉಪಯೋಗ ಬೀಳುತ್ತದೆಂಬುದು ಮಾತ್ರ ಬೇರೆಯವರಿಗೆ ತಿಳಿಯುತ್ತಲೇ ಇರಲಿಲ್ಲ. ಅವನ ಕುಲುಮೆಯಲ್ಲಿ ಅನೇಕ ದಿನಗಳಿಂದ ಬಿದ್ದಿದ್ದ ಸಲಾಕೆಯೊಂದಿತ್ತು. ಹೊಸ ಮಿದು ಕಬ್ಬಿಣವೊಂದು ಬಂದು ಸೇರಿತ್ತು. ಅದೇನು ಸಾಮಾನು ಮಾಡುತ್ತಾನೋ ನೋಡೋಣ.

ಒಂದು ದಿನ ದೇವರೇಸಿ ಹೊಲದಿಂದ ಮೂರು ಸಂಜೆಗೇ ಬಂದ. ಬಸವರಾಜು ಮೆತ್ತಗೆ ದೇವರೇಸಿಯ ಗುಡಿಸಲಲ್ಲಿ ಕಾಲಿಟ್ಟ. ನೋಡ ನೋಡುತ್ತಿದ್ದಂತೇ "ತಾಯೀ" ಎಂದು ಬಂದವನೇ ಕಾಲು ಹಿಡಿದ. ಅವನ ಬಗ್ಗೆ ದೇವರೇಸಿಗೇನೂ ಸಿಟ್ಟಿರಲಿಲ್ಲ. ಅಸಮಾಧಾನವೂ ಇರಲಿಲ್ಲ. ಆದರೆ ಆತ ತನ್ನ ಗುಡಿಸಲಿಗೆ ಬಂದಾನೆಂದು ಕನಸು ಮನಸಿನಲ್ಲಿಯೂ ಧೇನಿಸದವನಲ್ಲ. ತಾನಾಗಿ ಗುಡಿಸಲಿಗೆ ಬಮದನಲ್ಲ, ಬಂದವನು ಕಾಲು ಹಿಡಿದನಲ್ಲ, ದೇವರೇಸಿಗೆ ಸಂತೋಷವೇ ಆಯ್ತು. ಇಂಗರೇಜಿ ಕಲಿತವರು ತನ್ನನ್ನು ನಿರ್ಲಕ್ಷ್ಯ ಮಾಡುತ್ತಾರೆಂದು ಮನಸ್ಸಿನಲ್ಲಿ ಸ್ವಲ್ಪ ಅಸಮಾಧಾನ ಕೂಡ ಇತ್ತು. ಗುಡಸೀಕರ ಒಮ್ಮೆಯೂ ಇವನ ಕಾಲು ಮುಟ್ಟಿರಲಿಲ್ಲ. ತಾಯೀ ಅಮದಿರಲಿಲ್ಲ. ಈತನಾದರೆ ಗುಡಸೀಕರನಿಗಿಂತ ಸ್ವಲ್ಪ ಹೆಚ್ಚು ಕಲಿತಿರಬೇಕೆಂದೇ ಅನೇಕರು ಮಾತಾಡಿಕೊಂಡಿದ್ದರು. ಈಗ ಇವನೇ ಬಂದು ಕಾಲುಹಿಡಿದು, ಕೊಡಬೇಕಾದ ಗೌರವ ಕೊಟ್ಟಿದ್ದನಲ್ಲ, ಆ ಮಾತು ನಿಜವೆನ್ನಿಸಿತು. ಆದರೆ ಕೂಡಲೇ ಏನು ಮಾಡಬೇಕು? ಏನು ಮಾತಾಡಬೇಕೆಂದು ತೋಚಲಿಲ್ಲ. ಎದ್ದು ಹೋಗಿ ಮೂಲೆ ನೆಲುವಿಗಿದ್ದ ಬಂಡಾರ ಚೀಲತಂದು ಅವನ ಹಣೆಗಂಟಿಸಿ ಕೂತ. ಬಸವರಾಜು ಕೈಮುಗಿದೇ ಕೂತ. "ತಾಯೀ ನಮ್ಮ ಗುಡಿಸಲ ತನಕ ಪಾದಾ ಬೆಳೆಸಿ, ನಮ್ಮ ಸೇವಾ ಒಪ್ಪಿಸಿಕೋಬೇಕು" ಅಂದ. ದೇವರೇಸಿಗೆ ಇನ್ನೂ ದಿಗಿಲು. ಅವನ ಬರವಿನ ಹಾಗೆ ಅವನ ಈ ಮಾತನ್ನೂ ಆತ ನಿರೀಕ್ಷಿಸಿರಲಿಲ್ಲ. ಹೂಂ ಎನ್ನಬೇಕೆ? ಇಲ್ಲ ಅನ್ನಬೇಕೆ? ಈ ಅಡ್ಡದಿನ ಅಡ್ಡ ವೇಳೆಯಲ್ಲಿ ಸೇವೆ ಒಪ್ಪಿಸಿಕೊಳ್ಳೋದಂದರೇನು? ಗುಡಿಸಲ ತನಕ ಬರಬೇಕಂತ ಅಲ್ಲವೇ ಹೇಳಿದ್ದು? ಹೋಗಿ ಅದೇನು ಸೇವೆಯೋ ನೋಡೋಣವೆಂದುಕೊಂಡು "ಆಗಲಿ" ಅಂದ. ಬಸವರಾಜು ಎದ್ದುನಿಂತ ಕೈ ಮುಗಿದುಕೊಂಡೇ, ಅವನು ಹೋಗದೆ ಅಲ್ಲೇ ನಿಂತದ್ದನ್ನು ನೋಡಿ ಬಹುಶಃ ಈಗಲೇ ಬಾ ಅಂತಿದ್ದಾನೆಂದು ದೇವರೇಸಿಯೂ ಎದ್ದ. ಬಸವರಾಜು ಮುಂದೆ ಹೊರಟ. ದೇವರೇಸಿ ಬೆನ್ನುಹತ್ತಿದ.

ಕಂಬಳಿ ಹಾಸಿತ್ತು. ತಾಯಿ ಗದ್ದಿಗೆಗೊಂಡಳು. ಬಸವರಾಜು ಒಳ ಹೊರಗೆ ಓಡಾಡುತ್ತ, ಸಂಭ್ರಮ ಮಾಡುತ್ತ ಒಂದು ಹರಿವಾಣ ತುಂಬ ವಿಸ್ಕಿ ಸುರಿದು ತಾಯಿಗಿತ್ತ. ತಾಯಿಗೆ ಹಿಗ್ಗೋ ಹಿಗ್ಗು. ಈಗ ಹದಿನೈದಯ ದಿನಗಳಿಂದ ಮುಟ್ಟಿರಲಿಲ್ಲವಲ್ಲ, ಕುಡಿಯೋದನ್ನ ಬಿಟ್ಟು ವರ್ಷವಾದಂತಾಗಿತ್ತು. ಅಲ್ಲದೆ ಈ ತನಕ ಕುಡಿದದ್ದು ಕಂಟ್ರಿ ಸೆರೆ; ಅದೂ ಲಗಮವ್ವ ಮಡಿದ್ದು. ಇದಾದರೆ ಥಳ ಥಳ ಹೊಳೆಯುವ ಬಣ್ಣದ ಬಾಟ್ಲೆಯಲ್ಲಿಟ್ಟದ್ದು, ತನ್ನದುರಿಗೇ ಅದನ್ನು ಒಡೆದದ್ದು. ಮುಂದಿಡುವುದೇ ತಡ ತಾಯಿ ಒಂದೇ ಗುಟುಕಿಗೆ ತಳಕ್ಕೊಂದು ಹನಿ ಕೂಡ ಬಿಡದೆ ಮುಗಿಸಿದಳು. ಕರುಳಿನಲ್ಲಿ ಭಗ್ಗನೇ ಬೆಂಕಿ ಹೊತ್ತಿದಂತಾಗಿ ಕಿವಿ, ಮೂಗು ಬಾಯಿಗಳಲ್ಲಿ ಬಿಸಿ ಗಾಳಿ ಸೂಸಿತು. ಆಮೇಲೆ ಒಳಗೆ ಹೋಗಿ ಹರಿವಾಣದ ತುಂಬ ಖಂಡದ ಪಲ್ಯ, ಏಳೆಂಟು ರೊಟ್ಟಿ ತಂದು ಮುಂದಿಟ್ಟ, ತಾಯಿಯ ಕಣ್ಣರಳಿ, ಮೂಗರಳಿ, ಆ ಈ ನೋಡದೆ ಪಟಪಟ ತಿನ್ನತೊಡಗಿದಳು.

ನೀರು ಕೂಡ ಬೆರಸದೆ ಇಡೀ ಬಾಟ್ಲಿ ವಿಸ್ಕಿಯನ್ನು ಒಂದೇ ಗುಟುಕಿಗೆ ಸೇವಿಸಿದಾಗ ಬಸವರಾಜು ಕಣ್ಣಗಲಿಸಿ ಆಶ್ಚರ್ಯ ಸೂಚಿಸಿದ್ದರೆ ಚಿಮಣಾ ಕಣ್ಣರಳಿಸಿ ನಾಲಿಗೆ ಕಚ್ಚಿಕೊಂಡು ಹೊಯ್ಕಾಲಿ ಹೊಯ್ಯಗೊಂಡಳು. ಈಗ ದೇವರೇಸಿ ಪ್ರಾಣಿಗಳ ಹಾಗೆ ಸಪ್ಪಳ ಮಾಡುತ್ತ ಖಂಡ

ತಿನ್ನುವುದನ್ನು ನೋಡಿ ಬಸವರಾಜು ಮುಗುಳುನಕ್ಕ. ಒಳಗಿದ್ದ ಸುಂದರಿ ಈಶ್ಶೀ ಎಂದು ಕಿಸ್ಸಕ್ಕನೆ ನಕ್ಕಳು. ದೇವರೇಸಿ ಮಾತ್ರ ಇದಾವುದರ ಪರಿವೆಯಿಲ್ಲದೆ ತಿನ್ನುತ್ತಿದ್ದ.

ಮೈಯಲ್ಲಿ ಸೊಂಟದ ಧೋತ್ರ ಬಿಟ್ಟರೆ ಒಂದು ಚೂರು ಬಟ್ಟೆಯಿರಲಿಲ್ಲ. ಖಂಡ ಹೆಂಡ ಎರಡೂ ಸೇರಿ ಮೈಮೇಲೆ ಧಾರಾಕಾರ ಬೆವರು ಸುರಿಯುತ್ತಿತ್ತು. ಮೊದಲೇ ಕರ್‍ರಗೆ ಕಬ್ಬಿಣದಂತಿದ್ದ ಮೈ, ಬೆವರಿನಿಂದ ಇನ್ನಷ್ಟು ಹೊಳೆಯತೊಡಗಿತ್ತು. ಆ ಮೈಕಟ್ಟಿಗೆ ಅರವತ್ತು ವರ್ಷ ಬಹಳವಾಯ್ತು. ಎದೆ, ರಟ್ಟೆಯ ಮಾಂಡಖಂಡ ಗಟ್ಟಿಗೊಂಡು ಹುರಿಯಾಗಿದ್ದವು. ಹಿಂದೆ ಮಾರುದ್ದ ಜಡೆ, ಮುಂದೆ ಗಡ್ಡ, ಹೆಂಗಸಲ್ಲದ ಗಂಡಸಲ್ಲದ ಆ ಆಕೃತಿ ವಿಶೇಷ ನೋಡಿ ಬಸವರಾಜನಿಗೆ ಮೋಜೆನಿಸಿತು. ಸುಂದರಿಗೂ ಮುಂದೆ ಬಂದು ದೇವರೇಸಿಯಿಂದ ನೋಡಿಸಿಕೊಳ್ಳಬೇಕೆಂದಳು. ತಾನು ಹೇಳದ ಹೊರತು ಹೊರಗೆ ಬರಕೂಡದೆಂದು ಬಸವರಾಜು ಹೇಳಿದ್ದ, ಸುಮ್ಮನಿದ್ದಳು ಬಹುಶಃ ಖಾರ ಜಾಸ್ತಿಯಾಗಿರಬೇಕು ಪಲ್ಯಕ್ಕೆ. ದೇವರೇಸಿಯ ಮೂಗು ಸೋರಿ ಕಣ್ಣೀರೂ ಅದರೊಂದಿಗೆ ಬೆರೆತು, ಬೆವರುಗೈಯಿಂದಲೇ ಅದನ್ನೆಲ್ಲ ಒರೆಸಿಕೊಳ್ಳುತ್ತ ಉಂಡ. ಉಂಡ ಮೇಲೆ ಗುಡಿಸಲು ನಡುಗಿ, ಪಕ್ಕದ ಗುಡಿಸಲ ಮಕ್ಕಳು ಹೆದರಿ ಚೀರುವ ಹಾಗೆ ಡರ್‍ರ್‍ರ್ ಎಂದು ಢರಿಕೆ ತೇಗಿದ, ಸುಂದರಿಗೆ ಅಸಹ್ಯವಾಯ್ತು.

ಊಟವಾದ ಮೇಲೆ ಬಸವರಾಜು ಮತ್ತು ಸುಂದರಿ ಇಬ್ಬರೂ ಒಳಗೊಳಗೇ ನಗುತ್ತ ತಾಯಿಗೆ ಅಡ್ಡಬಿದ್ದರು. ತಾಯಿ ಅವರ ಹಣೆಗೆ ಬಮಡಾರ ಹಚ್ಚಲಿಲ್ಲ. ಹರಕೆ ನುಡಿಯಲಿಲ್ಲ. ತೇಲುಗಣ್ಣು ಮಾಡಿಕೊಂಡು 'ತಾಯೀ' ಎನ್ನುತ್ತ ಎದ್ದಳು. ತೂಕ ತಪ್ಪಿತು. ಬಸವರಾಜು ಹೋಗಿ ಹಿಡಿದುಕೊಂಡು ಅವಳ ಗುಡಿಸಲು ತನಕ ಹೋಗಿ ಬಿಟ್ಟುಬಂದ.

ಆ ದಿನ ರಾತ್ರಿ ದೇವರೇಸಿಗೆ ಯಾರೋ ನೆತ್ತಿಯ ಮೇಲೆ ಕೊಡ್ಲಿಯಿಂದ ಏಟು ಹಾಕಿದಂತೆ ಕನಸಾಯಿತು. ಗಡಬಡಿಸಿ ಎದ್ದು ಕುತ. ಬಿಕ್ಕಲಾಗಲಿಲ್ಲ. ಕನಸಿನ ಅರ್ಥವೂ ತಿಳಿಯಲಿಲ್ಲ. ಆದರೆ ಮಾರನೇ ದಿನದಿಂದ ತಾಯಿಯ ಕೃಪಾದೃಷ್ಟಿ ಬಸವರಾಜೂನ ಗುಡಿಸಲ ಕಡೆ ಬೀಳತೊಡಗಿತು. ಬಸವರಾಜು ನಿರಾಸೆಗೊಳಿಸಲಿಲ್ಲ.

## ಊರು ಬೀದಿಗಿಳಿಯಿತು

ರಂಡಿ ಹುಣ್ಣಿವೆ'ಯಿನ್ನೂ ನಾಕು ದಿನ ಇತ್ತು. ಅಂದು ಮಧ್ಯಾಹ್ನ ಬೇಸಿಗೆಯಂಥ ಬಿಸಿಲು ಬಿದ್ದು ದನಕರು ಕರೆಯಲ್ಲಿ ಬಿದ್ದು ತಂಪಿನ ಅಮಲಿನಲ್ಲಿದ್ದವು. ಹೊಲಗಳಲ್ಲಿದ್ದವರು ಒಣ ಕನಿಕೆಯ ಗೂಡು, ಮರ, ಮರೆಯ ನೆರಳುಗಳಲ್ಲಿ ಆಶ್ರಯ ಪಡೆದಿದ್ದರು. ಭೂಮಿ ಸೀಮೆಯ ಸುತ್ತಮುತ್ತ ಎತ್ತ ನೋಡಿದರೂ ಬಿಸಿಲುಗುದುರೆಗಳ ಓಟ ಕಾಣಿಸುತ್ತಿತ್ತು. ಊರಿನಲ್ಲಿ ಜನ ಕಟ್ಟೆಗಳ ಮೇಲೆ, ಪಡಸಾಲೆಯಲ್ಲಿ ತಂಪಾಗಿ ಕೂತಿದ್ದರು. ಉರಿ ಬಿಸಿಲಿನ ಪ್ರತಾಪ ಎಷ್ಟು ತೀವ್ರವಾಗಿತ್ತೆಂದರೆ ಮಾತಾಡುವುದಕ್ಕೆ ಕೂಡ ಮನಸ್ಸಾಗುತ್ತಿರಲಿಲ್ಲ. ಹೀಗಾಗಿ ಹಗಲಾದರೂ ರಾತ್ರಿಯಷ್ಟೇ ಊರು ನಿಶ್ಯಬ್ದವಾಗಿತ್ತು.

ಅಷ್ಟರಲ್ಲಿ ಊರವರು ಹಿಂದೆಂದೂ ಕೇಳರಿಯದ, ಊಹಿಸಬರದ, ಕಲ್ಪಿಸಬರದ ವಿಕಾರ ಸ್ವರ ಕಿವಿಯಲ್ಲಿ ಗೂಟ ಜಡಿದಂತೆ, ಇಡೀ ಊರು ಸಿಡಿದು ಸ್ಫೋಟಗೊಂಡಂತೆ, ಗುಡ್ಡ ಉರುಳಿ ಮೈಮೇಲೆ ಬಿದ್ದಂತೆ ಕೇಳಿಸಿ ಊರಿಗೂರೇ ಕೆಲವು ಕ್ಷಣ ದಿಗ್ಭ್ರಮೆಗೊಂಡಿತು. ಮಲಗಿದ್ದವರು ದುಃಸ್ವಪ್ನ ಕಂಡಂತೆ ಚಕ್ಕನೆ ಎದ್ದು ಕೂತರು. ಕೆರೆಯಲ್ಲಿದ್ದ ದನಗಳು ಬೆದರಿ, ಹೊರಗೋಡಿದವು. ಅನೇಕರ ಸೀರೆ ಧೋತ್ರಗಳು ಒದ್ದೆಯಾದವು. ಮಕ್ಕಳು ಕಿಟಾರನೆ ಕಿರುಚಿದವು. ಲಗಮವ್ವ ಹೇಳಿದ್ದು ನಿಜವೇ ಎನ್ನುವುದಾದರೆ, ಕರಿಮಾಯಿಯ ಮೂರ್ತಿ ಈ ದನಿ ಕೇಳಿ ಗಕ್ಕನೆ ಹಾರಿ ಕುಪ್ಪಳಿಸಿ, ಮುರಿದ ಕೈ ಜಾರಿ ಕೆಳಗೆ ಬಿತ್ತಂತೆ! ಲಗಮವ್ವ ಅದನ್ನು ಮತ್ತೆ ಅವಳ ಕೈಯಲ್ಲಿಟ್ಟು ನೋಡಿದಾಗ ಮೂರ್ತಿ ಸಣ್ಣದಾಗಿ ಬೆವರಿತ್ತಂತೆ! ಕೆರೆಯ ಸುತ್ತಲಿನ ಗಿಡಮರಗಳಲ್ಲಿ ಕೂತ ಹಕ್ಕಿ ಪಕ್ಕಿಗಳು ಏನೋ ಆಘಾತವಾದಂತೆ ಕಿರ್‍ರ್ ಎಂದು ಕಿರುಚುತ್ತ ಹಾರಾಡತೊಡಗಿದವು! ಏನೇನೂ ಅತಿಶಯೋಕ್ತಿಯಿಲ್ಲದೆ ವರ್ಣಿಸಬೇಕೆಂದರೆ ಮನೆಗಳಲ್ಲಿ ಒಬ್ಬರೂ ಉಳಿಯದೆ ಊರಿಗೆ ಊರೇ ಹೊಟ್ಟೆ

ತೊಳಸಿ ವಾಂತಿ ಮಾಡಿಕೊಂಡಂತೆ ಎಲ್ಲ ಜನ ಹಿರಿಕಿರಿಯರೆನ್ನದೆ, ಗಂಡು ಹೆಣ್ಣೆನ್ನದೆ ಬೀದಿಗೆ ಬಂದರು! ಮೊದ ಮೊದಲು ಅದರ ದನಿ ಮಾತ್ರ ಕೇಳಿಸಿ, ಅನಂತರ "ನಿಮ್ಮ ಹೋಟು ಯಾರಿಗೆ? ಗುಡಸೀಕರ ಸಾಹೇಬರಿಗೆ" ಎಂಬ ಶಬ್ದಗಳು ಕೇಳಿದ್ದರಿಂದ ಸ್ವಲ್ಪ ನೆಮ್ಮದಿಗೊಂಡು ದನಿಬಂದ ಕಡೆಗೆ ಕೂತ ನಿಂತವರೆಲ್ಲ ನುಗ್ಗಿದರು. ಗುಡಸೀಕರ ಮೈಕ್ ತರಿಸಿ ಮಟ ಮಟಾ ಮಧ್ಯಾಹ್ನದ ಹೊತ್ತಿನಲ್ಲಿ ಮಾರಾಯಾ, ಕರಿಮಾಯಿ ಅವನ ಹೊಟ್ಟೆ ತಣ್ಣಗಿಡಲಿ, ಚುನಾವಣೆಯ ಪ್ರಚಾರ ಒದರಿಸುತ್ತಿದ್ದ.

ಆ ದಿನ ಯಾರ ಬಾಯೊಳಗೆಲ್ಲ ಅದೇ ಮಾತು. ಉದ್ರೇಕಕರ ಕತೆಗಳಿಂದ, ಸುದ್ದಿಗಳಿಂದ, ಸಪ್ಪಳದಿಂದ, ಉರಿ ಬಿಸಿಲಿನಿಂದ ಊರು ದುಮುಗುಟ್ಟಿತು. ದುರ್ದೈವವೆಂದರೆ ಒಬ್ಬರ ಮಾತು ಒಬ್ಬರಿಗೆ ಕೇಳಿಸುತ್ತಿರಲಿಲ್ಲ. ಕಿರಿಚಿ, ಅಭಿನಯಿಸಿ, ಗಂಡಸರು ಗುಂಪುಗೂಡಿ, ಹೆಂಗಸರು ಹೊರಕಡೆಗೆ ಹೋದಲ್ಲಿ ಮಾತಾಡಿಕೊಂಡರು. ಹಿರಿಯರೂ ಕೂಡ ಹೆಂಗಸರಂತೆ ಆಡಿಕೊಂಡರು. ಮೈಕ್ ಶಬ್ದವನ್ನು ಒಂಯ್ಕ್ ಒಂಯ್ಕ್ ಎಂದು ಅಣಕಿಸಿದರು. ಇದಕ್ಕೆಲ್ಲಾ ಎಷ್ಟು ಖರ್ಚು ಬಂದಿರಬಹುದೆಂದು ಅಂದಾಜು ಹಾಕಿದರು. ಅವರಪ್ಪ ಮಂದಿಯ ಗೋಣು ಮುರಿದು ಕೂಡಿದಿದ್ದನ್ನೆಲ್ಲ ಮಗ ಕಕ್ಕಲೆಂದರು. ಎಲ್ಲರೂ ಆ ದಿನ ತಡವಾಗಿ ಮಲಗಿದರು.

ಹಳೆಯ ಪಂಚರೀಗ ಚಿಂತೆ ಮಾಡಲೇಬೇಕಾಯಿತು. ಈ ತನಕ ಅವರಿಗೆ ತಮ್ಮ ಗೆಲುವಿನಲ್ಲಿ ಭರವಸೆಯೇನೋ ಇತ್ತು. ಆದರೆ ಎದುರಿನವರ ಪ್ರಚಾರ ತಂತ್ರಕ್ಕೆ ತಲೆಬಾಗದೆ ವಿಧಿಯಿರಲಿಲ್ಲ. ಹೆಂಗಸರಲ್ಲಿ ಬಾಡಿ ಹಂಚಿ ಆಣೆ ಮಾಡಿಸಿದ ಸುದ್ದಿ ಕಿವಿಗೆ ತಲುಪಿತ್ತು. ಹುಣ್ಣಿಮೆಯ ಮಾರನೆ ದಿನ ಚುನಾವಣೆಯಿದ್ದುದೊಂದೆ ಅವಿರಿಗಿದ್ದ ಧೈರ್ಯ. ಆ ದಿನ ಹೆಂಗು ಬಂಗಾರದ ಮೂರ್ತಿ ಏಳುತ್ತದೆ. ದೇವರ ಕಾರಣಿಕವಾಗುತ್ತದೆ. ಕರಿಮಾಯಿ ಊರಿಗೊಂದು ಆಜ್ಞೆ ಕೊಟ್ಟೇ ಕೊಡುತ್ತಾಳೆ. ಅಂದರೆ ಅದು ತಮ್ಮ ಪರವಾಗೇ ಇರುತ್ತದೆಂದು ಇವರ ನಂಬಿಕೆ. ಹಾಗೆಂದು ಸುಮ್ಮನೆ ಕೂರುವುದ್ಯಾಕೆಂದು ಭೇಟಿಯಾದವರಿಗೆ ತಮ್ಮ 'ಮರದ ಗುರುತಿಗೆ ಹೋಟ ಹಾಕ್ರೆಪಾ' ಎಂದು ಅವರೂ ಹೇಳತೊಡಗಿದರು.

ಇತ್ತ ಗುಡಸೀಕರನಿಗೆ ಹುಣ್ಣಿಮೆಯ ಭಯ ಇರಲಿಲ್ಲವೆಂದಲ್ಲ. ಯಾಕೆಂದರೆ ನಿಂತ ಐವರಲ್ಲಿ ದೇವರೇಸಿಯೂ ಒಬ್ಬ. ಆದರೆ ಆ ಕಾಳಜಿ ನಿಮ್ಮದಲ್ಲ, ನನ್ನದೆಂದು ಬಸವರಾಜು ಹೇಳಿರಲಿಲ್ಲ.

## ಕುದುರೆಯ ಕೆಣಕಿದರು

ಚುನಾವಣೆ ಅನಿವಾರ್ಯವಾಗಿತ್ತು. ಗುಡಸೀಕರನಿಗಂತೂ ಊರೊಳಗಿನ ತನ್ನ ಸ್ಥಾನಮಾನ ಮಂದಿಗಲ್ಲ, ತನಗೇ ಖಾತ್ರಿಯಾಗಬೇಕಿತ್ತು. ಹಿರಿಯರ ಔದಾರ್ಯದಿಂದ ದೊರೆತ ಸರಪಂಚಗಿರಿಯ ಸುಖ ಕಂಡುಂಡದ್ದದಾಗಿತ್ತು. ಇವು ಪೂರಕ ವಿಚಾರಗಳು; ಅಥವಾ ಹೊತ್ತಿದ ಬೆಂಕಿಯಲ್ಲಿ ಆಗಾಗ ಬೀಳುತ್ತಿದ್ದ ಹುಲ್ಲಿನ ಗರಿಗಳು. ಮುಖ್ಯವಾಗಿ ಸುಂದರಿಯನ್ನು ಗೌಡ ಕೂಡಿದ್ದು ಹುಡುಗನ ಆಳದಲ್ಲಿ ಹುಣ್ಣು ಮಾಡಿತ್ತು. ಚಡಪಡಿಸಿದ, ಒದ್ದಾಡಿದ, ದಿನಕ್ಕಿಂತ ಹೆಚ್ಚು ಕುಡಿದ, ಹೆಚ್ಚು ಸೇದಿದ, ವೀರಾವೇಶದಿಂದ ಹೊಗೆಬಿಟ್ಟ, ಚತುಷ್ಟಯರನ್ನು ಕರೆದು 'ಗಂಡಿಗ್ಯಾಗೋಳ್ರಾ' ಎಂದು ಬೈದ. ಚತುಷ್ಟಯರಿಗೇನೋ ಸುದ್ದಿ ಗೊತ್ತಾಯ್ತು. ಆದರೆ ಅವರು ನಂಬಲಿಲ್ಲ. ಹಾಗಂತ ಆಡಿಕೊಳ್ಳಲಿಲ್ಲ. ಅವನ ಕಾಟ ತಡೆಯಲಾರದೆ ಗುಡಸೀಕರನೊಂದಿಗೆ ಅಷ್ಟು ಜನ ಒಮ್ಮೆ ಸೇರಿ ಒಮ್ಮೆ ಗೌಡನ ಮುದಿ ಕುದುರೆ ಗುಡಸೀಕರನ ತೋಟ ಹೊಕ್ಕು ಮೇಯುತ್ತಿದ್ದಾಗ ಅಟ್ಟಿಸಿಕೊಂಡು ಹೋಗಿ ಹೊಡೆದರು, ಕಡಿದರು, ಕಲ್ಲು ಹೇರಿದರು. ಕೊನೆಗೆ ಕೆರೆಯ ಕೆಸರಲ್ಲಿ ಸಿಕ್ಕಿಕೊಳ್ಳುವಂತೆ ಮಾಡಿದರು. ಸಾಲದೆಂದು ನಿಸ್ಸಹಾಯಕವಾಗಿ ಒದ್ದಾಡುತ್ತಿದ್ದ ಆ ಪ್ರಾಣಿಯ ಪೃಷ್ಠದಲ್ಲಿ ಉದ್ದನೆಯ ಗೂಟ ಜಡಿದ ಗುಡಸೀಕರ.

ಸಂಜೆಯೇ ಗೌಡನಿಗೆ ಸುದ್ದಿ ತಿಳಿಯಿತು. ಅಭಿಮಾನ ಕೆರಳಿತು. ಬಾಯಿಯಿಲ್ಲದ ಪ್ರಾಣಿಗೆ ಈ ರೀತಿ ಚಿತ್ರಹಿಂಸೆ ಮಾಡುವುದೆಂದರೇನು? ಸುತ್ತ ಹದಿನಾಲ್ಕು ಹಳ್ಳಿಯಲ್ಲಿ ಈತನಕ ಯಾರೂನೂ ಗೌಡನ ಎದುರಿಗೆ ನಿಲ್ಲುವ ಧೈರ್ಯ ಮಾಡಿರಲಿಲ್ಲ. ಹಾದಿ ಬೀದಿಯ ಹುಡುಗರು ಹೀಗೆ ಮಾಡುವಂತಾಯಿತಲ್ಲ. ದಿನೇ ದಿನೇ ಇವನ ಉರವಣಿಗೆ ಜಾಸ್ತಿಯಾಯಿತೇ ವಿನಾ ತಿಳುವಳಿಕೆ ಮೂಡಲಿಲ್ಲ. ತನ್ನ ಸಹನೆಯಿಂದ ಬುದ್ಧಿ ಕಲಿಯಲಿಲ್ಲವಲ್ಲ. ಕೂಡಲೇ ದತ್ತಪ್ಪನಿಗೆ ಕರೆಹೋಯ್ತು.

ಕುದುರೆಯನ್ನು ಕೆಸರಲ್ಲಿ ಸಿಕ್ಕಿಸಿದ ಸುದ್ದಿ ಆಗಲೇ ಕುಸ್ತಿ ಹುಡುಗರಿಗೆ ತಿಳಿದು ಓಡಿದ್ದರು. ಕೆಲವರು ಅದನ್ನು ಗಳ ಹಾಕಿ ಎತ್ತುವ ಪ್ರಯತ್ನದಲ್ಲಿದ್ದರೆ, ಇನ್ನೂ ಕೆಲವರು ಗುಡಸೀಕರನನ್ನೂ, ಚತುಷ್ಟಯರನ್ನೂ ಹುಡುಕುತ್ತಿದ್ದರು.

ಹೊತ್ತು ಮುಳುಗಿ ಆಗಷ್ಟೆ ಕತ್ತಲಾಗಿತ್ತು. ಗೌಡ, ದತ್ತಪ್ಪ ಆ ವಿಷಯವಾಗೇ ಮಾತಾಡುತ್ತ ಕುಳಿತಿದ್ದರು. ಅಷ್ಟರಲ್ಲಿ ಹುಡುಗರು ಕುದುರೆಯನ್ನು ನಿಧಾನವಾಗಿ ನಡೆಸಿಕೊಂಡು ಬಂದರು. ಅದರ ತೊಡೆ ಗಡಗಡ ನಡುಗುತ್ತಿದ್ದವು. ಮೈತುಂಬ ಬಾಸಳೆದ್ದು, ಕುಂಡಿ ನೆತ್ತರಾಡಿತ್ತು. ಕುದುರೆ ನಿಲ್ಲಲಾರದೆ ಮುಂಗಾಲೂರಿ ಕುಸಿದು ಬಿದ್ದುಬಿಟ್ಟಿತು. ಗೌಡ ಕೋಪದಿಂದ ನಡುಗಿದ. ದತ್ತಪ್ಪನ ಕಣ್ಣಲ್ಲಿ ನೀರಾಡಿ ಚಟ್ಟನೇ ಎದ್ದು "ಎಲ್ಲಿದ್ದಾರ ಆ ಹೊಲ್ಯಾರು?" ಅಂದ. ಗೌಡ ತಕ್ಷಣ ಎದ್ದ.

ಗುಡಸೀಕರನ ತಾಯಿ ಆಗಷ್ಟೆ ಲಾಟೀನಿನ ಗ್ಲಾಸು ಒರೆಸಿ ದೀಪ ಹಚ್ಚಿ ತೂಗು ಹಾಕುತ್ತಿದ್ದಳು. ಕಿವಿಯ ಮೇಲೆ ಸಿಡಿಲಪ್ಪಳಿಸಿದಂತೆ "ಎಲ್ಲಿದ್ದೀಯಲೇ ಗುಡಿಸ್ಯಾ?" ಎಂದು ಕೇಳಿಸಿತು. ನೋಡಿದರೆ ಇಡೀ ಬಾಗಿಲು ತುಂಬಿಕೊಂಡು ಗೌಡ ನಿಂತಿದ್ದ. ಮುದುಕಿಗೆ ತುದಿಬುಡ ಒಂದೂ ತಿಳಿಯದೆ ಏನೂ ಮಾತಾಡಬೇಕೆಂದೂ ತೋಚದೇ "ಬರ್ರಿ ಎಪ್ಪಾ" ಎನ್ನುತ್ತಾ ಉತ್ತರಕ್ಕೂ ಕಾಯದೆ "ಏ ಗಿರ್ಜಾ" ಎಂದು ಕೀರಲಿ, ಕುಸಿಯುತ್ತಿದ್ದ ತೊಡೆ ಸಾವರಿಸಿಕೊಂಡು ಒಳಸರಿದು ಬಾಗಿಲಿಗೆ ಒರಗುವಷ್ಟರಲ್ಲಿ ಗೌಡ: "ನಿನ್ನ ಮಗಾ ಎಲ್ಲಿದ್ದಾನಬೇ?" ಎಂದ. ಗೌಡನ ಕೋಪವನ್ನು ಹಿಮದೆಂದೂ ಕಂಡರಿಯದ ಮುದುಕಿಗೆ ಏನಾಯಿತೆಂದು ತಿಳಿಯುವ ಮೊದಲೇ ಗೌಡ ಮುದುಕಿಗೆ ಸಮೀಪ ಬಂದಿದ್ದ. ಹಿಂದೆ ದತ್ತಪ್ಪ ನಿಂತಿದ್ದ. ತನ್ನ ಮಗ ಏನೋ ಅನಾಹುತ ಮಾಡಿದ್ದಾನೆಂದೂ, ಈಗ ಸಿಕ್ಕರೆ ಅವನನ್ನು ಮುರಿಯುವರೆಂದೂ ಭಯವಾಗಿ ತಕ್ಷಣ ತಲೀಮೇಲಿನ ಸೆರಗನ್ನು ನೆಲಕ್ಕೆ ಒಡ್ಡಿ, "ಎಪ್ಪಾ, ಅವ ನನ್ನ ಮಗ ಅಲ್ಲ; ನಿನ್ನ ಮಗ ಅಂತ ತಿಳಿ" ಎಂದು ತಲೆ ಬಾಗಿದಳು. ಗೌಡ ಮನುಷ್ಯರೊಳಗೆ ಬಂದ. ಅಲ್ಲೇ ಮೇವಿನ ಪೆಂಟೆಯ ಮೇಲೆ ಕುಸಿದ. ದತ್ತಪ್ಪ ನಡೆದುದನ್ನೆಲ್ಲ ಹೇಳಿದ. ಮುದುಕಿಯೂ ಬೈದಳು. ನೀವೇ ಬುದ್ಧಿ ಹೇಳಬೇಕೆಂದು ಅಂಗಲಾಚಿದಳು.

ಆಡುವ ಮಾತಿನ್ನೂ ಬಾಯಲ್ಲೇ ಇದೆ; ಹಾಸಿದ ಸೆರಗು ಹಾಗೇ ಇದೆ. ಗುಡಸೀಕರ ಧಡಪಡಿಸಿ ಅಟ್ಟಿಸಿಕೊಂಡು ಬಂದ ಬೇಟೆಯ ಹಾಗೆ ಬಂದು ಅಡಿಗೆ ಮನೆಗೆ ದೌಡಯಿಸಿದ. ಗುರಿಯಿಟ್ಟ ಬಾಣದ ಹಾಗೆ ಶಿವಲಿಂಗ ಬೆನ್ನುಹತ್ತಿದ. ಏನು ಎತ್ತ ತಿಳಿಯದಲೇ, ಕೂತವರು ಮೇಲೇಳುವ, ಮೊದಲೇ ಗುಡಸೀಕರ ಅಡಿಗೆ ಮನೆಯಲ್ಲಿ ಕಿಟಾರನೆ ಕಿರಿಚಿದ. ಗಿರಿಜಾ, ಮುದುಕಿ ಏನಾಯಿತೆಂದು ತಿಳಿಯದಲೇ ಲಬೊಲಬೊ ಹೊಯ್ಕೊಳ್ಳುತ್ತ ಒಳನುಗ್ಗುವ ಮೊದಲೇ ಗೌಡ ಧಾವಿಸಿದ್ದ. ಗುಡಸೀಕರ ಒದರುತ್ತ ಹೊರಗೆ ಬಂದ. ಹಿಡಿದ ಗೌಡನನ್ನು ಶಿವನಿಂಗ ತಳ್ಳಿ ಹಾ ಎನ್ನುವುದರಲ್ಲಿ ಹಾರಿಬಂದು ಓಡುತ್ತಿದ್ದ ಗುಡಸೀಕರನನ್ನು ತೆಕ್ಕೆಹಾದು ಹಿಡಿದುಕೊಂಡು ಅಮಾತ ಎತ್ತಿ ನೆಲಕ್ಕೆ ರಪ್ಪನೆ ಅಪ್ಪಳಿಸಿದ. ಪಕ್ಕದ ಗೋಡೆ ಗೂಟ ಲಟಕ್ಕನೆ ಮುರಿದು ವಿಲಿವಿಲಿ ಒದ್ದಾಡುತ್ತಿದ್ದ ಗುಡಸೀಕರನನ್ನು ಒದ್ದು ಬೆನ್ನು ಮೇಲಾಗಿ ಚೆಲ್ಲಿ ಪ್ಯಾಂಟಿಗೆ ಕೈ ಹಾಕಿದ. ಇಷ್ಟೆಲ್ಲ ರೆಪ್ಪೆ ತೆಗೆದಿಕ್ಕುವುದರೊಳಗೆ ಆಗಿಬಿಟ್ಟಿತ್ತು. ಮುದುಕಿ "ಎಪ್ಪಾ" ಎಂದು ಒದರುತ್ತ ಓಡಿಬಂದು ಮಗನ ಮೇಲೆ ಸಾಗರ ಬಿತ್ತು. ಒಳಗಿನಿಂದ ಗೌಡ "ಏ ಶಿವನಿಂಗಾ" ಎಂದು ಕಿರುಚಿದ. ದತ್ತಪ್ಪ ಓಡಿಹೋಗಿ ತೆಕ್ಕೆ ಹಾದ. ಅವನೊಂದಿಗೆ ಇನ್ನಷ್ಟು ಜನ ಬಂದು ಶಿವನಿಂಗನನ್ನು ಹಿಡಿದರು. ಊರಿಗೂರೇ ಅಲ್ಲಿ ಸೇರಿತ್ತು.

## ಬೆಂಕಿಯ ಹೊಂಡ

ಇದು ವಿಚಿತ್ರ ಹಂಗಾಮು, ಮಹಾನವಮಿಯ ಅಮವಾಸ್ಯೆಯಿಂದ ಶೀಗಿ ಹುಣ್ಣಿಮೆಯ ತನಕ ರೈತರಿಗೇನೂ ಕೆಲಸವಿರುವುದಿಲ್ಲ. ಕಳೆ ತೆಗೆಯಬೇಕಾದ್ದಿಲ್ಲ; ಬೆಳೆಯ ಕಾಳಜಿ ಮಾಡಬೇಕಾದ್ದಿಲ್ಲ. ಬೆಳೆಯ ಗಂಟಲಲ್ಲಿದ್ದ ಕಾಳು ಈ ಅವಧಿಯಲ್ಲೇ ಹೊರಕ್ಕೆ ಬರುತ್ತದೆ. ಈಗ ಭೂಮಿಯನ್ನು ನೋಡುವುದೇ ಚಂದ – ತುಂಬು ಬಸರಿಯ ಹಾಗೆ ಕಾಣಿಸುತ್ತದೆ. ನಿಜ ಹೇಳಬೇಕೆಂದರೆ ಬಸರಿಯಂತಹ ಸುಂದರಿ ಈ ಪ್ರಪಂಚದಲ್ಲೇ ಇಲ್ಲ. ಹೆಣ್ಣು ನಿಮಗೆ ಮಾಯೆ ಅನಿಸುವುದೇ ಆವಾಗ. ಅತ್ಯಂತ ಅದ್ಭುತವಾದ, ಮಾತಿಗೆ ಮೀರಿದ ಮಾದಕತೆ, ತೃಪ್ತಿ ಅವಳ

ಅಂಗಾಂಗಗಳಲ್ಲಿ ಮೂಡಿರುತ್ತದೆ. ಆ ದಿವ್ಯ ಸೌಂದರ್ಯದ ಎದುರು ಮನುಷ್ಯ ಮಗುವಾಗುತ್ತಾನೆ. ಭೂಮಿಯ ಈಗಿನ ಸೌಂದರ್ಯವೂ ಅಂಥದೇ, ಗರ್ಭದ ನಿಧಿ ಚಡಪಡಿಸುವುದನ್ನು ಸಂತೋಷಿಸುತ್ತ, ಮೌನವಾಗಿರುವ ಈಗಿನ ಭೂಮಿಯನ್ನು ನೋಡಿ 'ದೇವರನ್ನು ಕೊಂಡಾಡೋಣ' ಎನಿಸುತ್ತದೆ.

ಈಗ ಮುಟ್ಟಾದ ಹೆಂಗಸರು ಹೊಲದ ಕಡೆ ಸುಳಿಯಬಾರದು. ಗಂಡಸರು ಹಾದರ ಮಾಡಬಾರದು. ಕಾಲ್ಮರಿ ಹಾಕಿಕೊಂಡು ಮೆಣಸಿನ ಹೊಲದಲ್ಲಾಗಲಿ, ಬಳ್ಳಿಗಳಲ್ಲಾಗಲೀ ಹಾಯಬಾರದು.

ಇದು ರೈತರಿಗೂ ಗೊತ್ತು. ಆದ್ದರಿಂದಲೇ ಬಸುರಿಯ ಬಯಕೆಯನ್ನೀಡೇರಿಸುವಂತೆ ಥರಾವರಿ ಅಡಿಗೆ ಮಾಡಿಕೊಂಡು ಹೊಲಗಳ ತುಂಬ ಚೆರಗ ಚೆಲ್ಲಿ ಬರುತ್ತಾರೆ. ಈಗಿನ ಆಕಾಶ ಬಲು ಶುಭ್ರ; ಹಗಲಾಗಲಿ, ರಾತ್ರಿಯಾಗಲಿ, ಹಗಲಾದರೆ ಹಸನಾದ ಬಿಸಿಲು, ಸೂರ್ಯ ನಕ್ಕ ಹಾಗೆ. ರಾತ್ರಿಯಾದರೆ ಆಕಾಶದ ತುಂಬ ಹುರಿದರಳು ಚೆಲ್ಲಿದಂತೆ ನಕ್ಷತ್ರಗಳು ಇಕಾ ನನ್ನ ಬೆಳಕು, ಅಕಾ ನಿನ್ನ ಮಿಣುಕು! ಸಾಲದ್ದಕ್ಕೆ ಮೆತ್ತಗೆ ಒತ್ತೊತ್ತಿ ಮುತ್ತುವ ಥಂಡಿ.

ಥಂಡಿ ಎಂದೊಡನೆ ವಿರಹಿಗಳ ಪ್ರೇಮ, ಪ್ರೇಮಿಗಳ ಕಾಮ, ಕಾಮಿಗಳ ಭೋಗ ಜಾಸ್ತಿಯೆಂಬಂಥ ವರ್ಣನೆಗಳನ್ನು ಕೇಳಬೇಡಿರಿ. ಅದೆಲ್ಲ ಬಾತಿಗೆ ಬಾರದ ಕಾವ್ಯಗಳಲ್ಲಿ, ಕಾವ್ಯಗಳ ಅರಮನೆಗಳಲ್ಲಿ ಮಾಡುವುದಕ್ಕೆ ಕೆಲಸವಿಲ್ಲದ ನಗರಗಳಲ್ಲಿ ನಡೆದೀತು. ಯಾವುದಕ್ಕೂ ಒಂದೊಂದು ಋತುಮಾನವಿದೆ. ಇದಂತೂ ಕುಚೇಷ್ಟೆಗಳಿಗೆ ಹೇಳಿ ಮಾಡಿಸಿದ ಹಂಗಾಮಲ್ಲ.

ಈಗ ದೇವರೇಸಿಯ ಮುಖ ನೋಡುವುದೇ ಚಂದ. ಹಿಂದೆ ಮೊಳಕಾಲ ಮಟ ಉದ್ದನೆಯ ಜಡೆಬಿಟ್ಟುಕೊಂಡು ಹಣೆತುಂಬ ಬಂಡಾರ ಬಳಿದುಕೊಂಡು ಒಂದು ಹೆಗಲಿಗೆ ಗೊಂಗಡಿ ಇನ್ನೊಂದಕ್ಕೆ ಬಂಡಾರ ಚೀಲ ತೂಗು ಬಿಟ್ಟುಕೊಂಡು ಉಧೋ ಎಂದು ಹೊರಡುತ್ತಾನೆ. ಊರ ಸೀಮೆಯ ಗುಂಟ ಭಂಡಾರ ಚೆಲ್ಲುವುದೇ ಅವನ ಕಾರ್ಯಕ್ರಮ. ಹೊಲಹೊಲಕ್ಕೆ ಹೋಗಿ ಆತ ಹೆಂಗಸಿನ ಥರ ಕೂತು 'ಹಂಗ ಮಗನ ಹಿಂಗ ಮಗನ' ಎನ್ನುತ್ತ ಕೂತಿದ್ದರೆ ಭಾವುಕ ರೈತನಿಗೆ ಸ್ವಥಾ ಕರಿಮಾಯಿಯೇ ತಮ್ಮ ಹೊಲಕ್ಕೆ ಬಂದಂತಾಗುತ್ತದೆ. ಹಸಿರು ಭೂಮಿಯ ಚಂದ ನೋಡಲೋ, ತಾಯಿಯ ಬಂಡಾರ ಮುಖದ ಅಂದ ನೊಡಲೋ! ಜನ ಕೃತಜ್ಞತೆಯಿಂದ ತುಂಬಿ ಸೂಸುತ್ತಾರೆ.

ದಿನದಿನಕ್ಕೆ ಹುಣ್ಣಿವೆ ಸಮೀಪ ಬರತೊಡಗಿತ್ತು. ಈ ಹುಣ್ಣಿಮೆಯ ದಿನ ನಡೆಯುವ ಪೂಜೆ ತಾಯಿಯೇ ಆದಿಯಲ್ಲಿ ಹೇಳಿ ವರ್ಷದ ಮೂರು ಮುಖ್ಯ ಪೂಜೆಗಳಲ್ಲಿ ಒಂದು. ಈ ಪೂಜೆಯನ್ನು ತಾಯಿಯನ್ನು ಎಷ್ಟೆಷ್ಟು ತೃಪ್ತಿಪಡಿಸಿದರೆ ಅಷ್ಟಷ್ಟು ರಾಶಿ ಹುಲುಸಾಗುತ್ತದೆ. ಮಹಾನವಮಿಯಂದು ಸೀಮೆ ಕಟ್ಟಲಿಕ್ಕೆ ಹೋದ ತಾಯಿ ಅಂದರೆ ದೇವರೇಸಿ ಹುಣ್ಣಿಮೆಯ ಮನ್ನಾದಿನ ಗೌಡನ ತೋಟಕ್ಕೆ ಬರುತ್ತಾಳೆ. ಆ ದಿನ ತಾಯಿಗೆ ಗೌಡನ ಮನೆಯಿಂದಲೇ ಊಟ. ಅದಕ್ಕೂ ನಿಯಮಗಳಿವೆ. ಗಂಡುಳ್ಳ ಗರತಿ, ಕೋಳಿ ಕೂಗುವಾಗಲೇ ಎದ್ದು ತಣ್ಣೀರಲ್ಲಿ ಜಳಕಮಾಡಿ ಒದ್ದೆಬಟ್ಟೆಯಲ್ಲೇ ಅಡಿಗೆ ಮಾಡಬೇಕು. ಆ ಗರತಿ ಎದ್ದಾಗಿನಿಂದ ಹಿಡಿದು ಖುದ್ದಾಗಿ ಹೋಗಿ ತೋಟದಲ್ಲಿಯ ತಾಯಿಗೆ ಬಡಿಸುವ ತನಕ ಒಬ್ಬರ ಜೊತೆ ಮಾತನಾಡಕೂಡದು, ಕಣ್ಣೆಟ್ಟು ಒಬ್ಬರ ಮುಖ ನೋಡಕೂಡದು. ಇದು ತಲೆತಲಾಂತರದಿಂದ ನಡೆದುಬಂದ ಪದ್ಧತಿಯಾದ್ದರಿಂದ ಊರವರು ಅಂಥ ಗರತಿಯನ್ನು ಮಾತಾಡಿಸುವುದಿಲ್ಲ. ಆಕೆ ಸುಳಿಯುವ ಸ್ಥಳದಲ್ಲಿ, ಆ ಸಮಯದಲ್ಲಿ ಯಾರೂ ಕಾಲಿಕ್ಕುವುದೂ ಇಲ್ಲ.

ಮೂರೂ ಸಂಜೆಯಾಯಿತೆಂದರೆ ತಾಯಿಗೆ ಅಂದರೆ ದೇವರೇಸಿಗೆ ಸೆರೆಯ ಅಪ್ಪಣೆಯಾಗಬೇಕು. ಅದು ಲಗಮವ್ವನ ಜವಾಬ್ದಾರಿ. ಅದಕ್ಕಾಗಿ ಮೂರು ಹೊಸ ಪರವಾಣಗಳೇ ಆಗಬೇಕು. ಮೊದಲು ಒಂದು ಪರಿವಾಣದ ತುಂಬ ಹಾಕಿಕೊಟ್ಟರೆ ತಾಯಿ ಒಂದೇ ಗುಟುಕಿಗೆ ಇಡೀ ಪರಿವಾಣ ಬರಿದು ಮಾಡುತ್ತಾಳೆ. ಆಮೇಲೆ ಇನ್ನೊಂದು, ಮತ್ತೊಂದು. ಮೂರನ್ನೂ ಮುಗಿಸಿ ತಾಯಿ ಚಕಾರ ಶಬ್ದ ಎತ್ತದೆ ಹ್ಯಾಗಿದ್ದರೆ ಹಾಗೇ ಬೆನ್ನು

ಮೇಲಾಗಿ ಬಿದ್ದು ಬಿಡುತ್ತಾಳೆ. ಲಗಮವ್ವನ ಹಾಸಡಿನಲ್ಲಿ ತಾಯಿ ಮೂರು ಗುಟುಕು ಸೆರೆ ಕುಡಿದಳೆಂದು ವರ್ಣನೆ ಬರುತ್ತದಲ್ಲ, ಆ ಮೂರು ಗುಟುಕು ಎಂದರೆ ಇಂಥವು; ಎಷ್ಟೆಂದರೂ ಮಹಾತಾಯಿ; ದೊಡ್ಡವರದೆಲ್ಲ ದೊಡ್ಡದೇ.

ಅದೇ ದಿನ ಮಧ್ಯಾಹ್ನದ ಹೊತ್ತು ರೈತರು ಊದಿ ಬಾರಿಸುತ್ತ ಮರದ ದೊಡ್ಡ ದೊಡ್ಡ ದಿಮ್ಮಿಗಳನ್ನು ತಗೊಂಡು ಗುಡಿಯ ಪೌಳಿಯಲ್ಲಿ ಕೊಂಡ ಮಾಡಿ ಅದರಲ್ಲೆಸೆದು ಬೆಂಕಿ ಹಚ್ಚಿ  ಬರುತ್ತಾರೆ. ಒಮ್ಮೆ ಹಾಗೆ ಹೊರಗೆ ಬಂದರೆ ನಾಳೆ ತಾಯಿಯ ಜೊತೆಗೇ ಕಾಲಿಡಬೇಕು. ಅಲ್ಲಿಯ ತನಕ ಒಂದು ಹುಳು ಕೂಡ ಒಳಗೆ ಸುಳಿಯಬಾರದು.

ಮೊದಲೇ ಕೆಂಡದಂಥ ದೇವಿ; ಮಡಿ ಮೈಲಿಗೆ ಸರಿಯಾಗಿ ಪಾಲಿಸಬೇಕು. ಮಾರನೇ ದಿನ ತಾಯಿಯ ಬಂಗಾರ ಮೂರ್ತಿಯೊಂದಿಗೆ ಮೆರವಣಿಗೆ ಬಂದು ಕಾರಣಿಕವಾದರೆ ಅಂದಿನ ಉತ್ಸವ ಮುಗಿದಂತೆ.

ಆಯ್ತು; ಕರಿಮಾಯಿ ಸೀಮೆಕಟ್ಟಿ ಬಂದು ಗೌಡನ ತೋಟದಲ್ಲಿ ಬೀಡುಬಿಟ್ಟಿದ್ದಳು. ಬೆಳಗಿನ ಊಟೋಪಚಾರ ಮುಗಿದಿತ್ತು. ಸಮಯ ಬಾರಾಬಜೆಯಾಗಿದ್ದಿತು. ಗುಡಿಸಲಲ್ಲಿ ದುರ್ಗಿಯನ್ನು ಕೂರಿಸಿ ಲಗಮವ್ವ ಹೊಲಕ್ಕೆ ಹೂ, ಹುಲ್ಲು, ಜೋಳದ ಗರಿ ತರುವುದಕ್ಕೆ ಹೋದಳು. ದುರ್ಗಿ ಒಬ್ಬಳೇ ಆದಳಲ್ಲ ಮತ್ತೆ ಮತ್ತೆ ಹೊರಗೆ ಬಂದು ಗುಡಸೀಕರ ಬಂದಿದ್ದಾನೆಯೇ ಎಂದು ನೋಡಿದಳು. ತಾನು ಈ ಹಿಂದೆ ಕಳಿಸಿದ ಸಂದೇಶ ತಲುಪಿದೆಯೇ? ಸಂಜೆ ಗುಡಿಕಡೆ ಬರುತ್ತಾನೊ? ಅಥವಾ ಚಿಮಣಿ ಇರುವಾಗಿ ತನ್ನನ್ನು ಬಯಸುತ್ತಾನೊ? ಹಾಗಿದ್ದರೆ ಹೋಳೀಹಬ್ಬದಲ್ಲಿ ದುಡ್ಯಾಕೆ ಕೊಟ್ಟು ಕಳಿಸಿದ್ದು? ಹೀಗೆ ಅಚಿತ್ರೋ ವಿಚಿತ್ರ ತರ್ಕದಲ್ಲಿ ಮುಳುಗಿದ್ದಳು. ಅವಳು ಆಗಾಗ ಹೊರಬಂದು ಒಳಹೋದುದನ್ನು ಬಸವರಾಜು ಗಮನಿಸಿದನೇ ಹೊರತು ಗುಡಸೀಕರನಿಗೆ ಇದರ ತುದಿಬುಡ ತಿಳಿಯಲೇ ಇಲ್ಲ.

ಬಸವರಾಜು ಉಪಾಯವಾಗಿ ಗುಡಿಸಲಕಟ್ಟೆಯ ಮೇಲೆ ಗುಡಸೀಕರನನ್ನು ಕೂಡಿಸಿಕೊಂಡು ಸ್ವಲ್ಪ ಹೊತ್ತು ಅದು ಇದು ಮಾತಾಡಿದ, ಮೆಲ್ಲಗೆ ಒಳಗಿದ್ದ ಚಿಮಣಾಳಿಗೆ ಕೇಳಿಸದಂತೆ ವಿಷಯ ತೆಗೆದ. ಒಬ್ಬ ಹುಡುಗಿ ಇವನಿಗಾಗಿ ಹಸಿದು ನಿಂತುದನ್ನು ರಸವತ್ತಾಗಿ ಬಣ್ಣಿಸಿದ. ಗುಡಸೀಕರನ ಆಸಕ್ತಿ ಕೆರಳಿತು. ಯಾರು ಯಾರೆಂದು ಪೀಡಿಸಿದ. "ಯಾರಿರಬೇಕು ಹೇಳು ನೋಡೋಣ" ಎಂದು ಆಟವಾಡಿದ. ಕೊನೆಗೆ "ಈಗ ಕಣ್ಣು ಮುಚ್ಚಿಕೊ. ತೋರಿಸ್ತೀನಿ" ಎಂದು ಒತ್ತಾಯ ಮಾಡಿ ಕಣ್ಣು ಮುಚ್ಚಿಸಿ, ಅವನ ಕೈಗೊಂದು ಅಡಿಕೆ ಕೊಟ್ಟು ಎದುರಿಗೆ ಎಸೆದರೆ ಅದು ಬಿದ್ದಲ್ಲಿ ಅವಳಿರುತ್ತಾಳೆಂದು ಹೇಳಿದ. ಗುಡಸೀಕರ  ಕಣ್ಣು ಮುಚ್ಚಿ ಅಡಿಕೆ ಎಸೆದ. ಅದು ಆಗಷ್ಟೆ ಹೊರಗೆ ಬಂದ ದುರ್ಗಿಯ ಮುಂದೆ ಬಿತ್ತು. ನಾಚಿ ಅಡಿಕೆ ತಗೊಂಡು ಒಳಗೋಡಿದಳು. ಗುಡಸೀಕರನಿಗೆ ಹೌದಲ್ಲಾ ಎನಿಸಿತು. ಆದರೆ ಉತ್ಸಾಹಿತನಾಗಲಿಲ್ಲ. ಬಸವರಾಜು ಇದನ್ನು ಗ್ರಹಿಸಿದ.

ಆಗುವ ಮೋಜು ಹೇಗೂ ಆದೀತು. ಬರಲಿರುವ ಚುನಾವಣೆಯ ಹೆಸರಿನಲ್ಲಿ ಇದು ನಡೆಯಲೇಬೇಕೆಂಬುದನ್ನು ಖಾತ್ರಿ ಮಾಡಿದ.

"ಮುಂದಿನ ಹಾದಿ ಹೆಂಗ?"

"ಅದು ನನ್ನ ಜವಾಬ್ದಾರಿ."

ಹೌಹಾರಿದಳು ದುರ್ಗಿ. ಸೂರ್ಯ ಮುಳುಗಲೊಲ್ಲ. ಸಂಜೆಯಾಗಲೊಲ್ಲದು. ಕಾಲು ನೆಲಕ್ಕೆ ಊರಲೊಲ್ಲವು. ಮನಸ್ಸು ನಿಂತಲ್ಲಿ ನಿಲ್ಲಲೊಲ್ಲದು. ಹೊರಗೆ ಬಂದು ಸೂರ್ಯನನ್ನು ಶಪಿಸಿದಳು. ಒಳಗೆ ಹೋಗಿ ಕುಳಿತಳು. ಕೂರದೆ ನಿಂತಳು. ನಿಲ್ಲದೆ ನಡೆದಾಡಿದಳು ನಡೆದಾಡದೆ ಕೂತಳು. ನಿಂತಳು. ಹರಿದಾಡಿದಳು. ನಿಟ್ಟುಸಿರು ಬಿಟ್ಟುಬಿಟ್ಟು ಎದೆಯ ಏರಿಳಿವುಗಳನ್ನು ಅಳೆದಳು. ಅಂತೂ ಸಂಜೆಯಾಯ್ತು. ಗುಡಿಸಲಲ್ಲಿ ಲಗಮವ್ವ ಇರಲಿಲ್ಲ. ರೈತರು ಕೊಂಡಕ್ಕೆ ದಿಮ್ಮಿ ಚೆಲ್ಲಿ ಬೆಂಕಿ ಹಚ್ಚಿ ಬಂದುದನ್ನು ವಾಲಗದ ಸಪ್ಪಳದಿಂದಲೇ ತಿಳಿದಿದ್ದಳು. ಹೊತ್ತೂ ಸಂಜೆಯಾಗಿತ್ತು. ಮೈಯಲ್ಲಿ ಬೆದೆಯಿತ್ತು. ಮನಸ್ಸಿನಲ್ಲಿ ಉಮೇದಿಯಿತ್ತು. ಇನ್ನು ಅವಳನ್ನು ತಡೆಯುವವರು ಯಾರು?

ಗುಡಿಯ ಹಿಂಭಾಗದ ಮರಗಳ ಬಳಿ ಹೋಗಿ ಅತ್ತಿತ್ತ ನೋಡಿದಳು. ಯಾರಿರಲಿಲ್ಲ. ಮತ್ತೆ ಮತ್ತೆ ನೋಡಿಬಂದಳು. ಇನ್ನೂ ಬಂದಿರಲಿಕ್ಕಿಲ್ಲವೇ? ಸುಳ್ಳು ಸುಳ್ಳೇ ಅಡಿಕೆ ಎಸೆದನೇ? ಎಂದೆಲ್ಲ ಚಿಂತಿಸಿದಳು. ಬಂದಾನೆಂದು ಅಲ್ಲೇ ಕುಳಿತಳು. ಬೇಸತ್ತು ಮತ್ತೆ ಹುಡುಕಿ ಬಂದಳು. ಕೊನೆಗೆ ಗುಡಿಯ ಮುಂದುಗಡೆ ಹಾದು ಬರುತ್ತಿದ್ದಾಗ ಹಿಂದಿನಿಂದ ಯಾರೋ ಕದ್ದು ಕರೆದಂತಾಯ್ತು ತಿರುಗಿ ನೋಡಿದಳು. ಗುಡಿಯ ಒಳಭಾಗದ ಕತ್ತಲಲ್ಲಿ ನಿಮತು ಕೈಬೀಸಿ ಕರೆಯುತ್ತಿದ್ದ. ಈ ದಿನ ಯಾರೂ ಗುಡಿಯೊಳಕ್ಕೆ ಬರುವುದಿಲ್ಲವೆಂದು ಗೊತ್ತು. ಒಂದು ಕ್ಷಣ ಹೋಗುವುದೇ ಬೇಡವೇ ಎಂದು ಯೋಚಿಸತ್ತ ನಿಂತಳು. ತಲೆಯಲ್ಲಿ ಗಾಳಿ ತುಂಬಿದ ಹಾಗೆ ಮಡಿಮೈಲಿಗೆ ಯಾವುದನ್ನೂ ಗಣನೆಗೆ ತಾರದೆ ಬರದಿಂದ ಒಳಹೊಕ್ಕಳು. ಬಂದು ಸಿಕ್ಕೊಡನೆ ಅಮಾತ ಅವಳನ್ನೆತ್ತಿ ದೇವೀಮೂರ್ತಿಯ ಹಿಂಭಾಗಕ್ಕೊಯ್ದ. ಅವರ ಗುಮುರಿಗೆಗೆ ತಾಯಿಯ ಮರದ ಮೂರ್ತಿ ಗಡಗಡ ನಡುಗಿ ಖಡ್ಗ ಹಿಡಿದ ಬಲಗೈ ಮುರಿದು ಕೆಳಗೆ ಬಿತ್ತು. ಕತ್ತಲಲ್ಲಿ ಅದ್ಯಾವುದೂ ಗೊತ್ತಾಗಲಿಲ್ಲ. ಅಥವಾ ಗೊತ್ತಾಗುವ ಸ್ಥಿತಿಯಲ್ಲಿ ಇಬ್ಬರೂ ಇರಲಿಲ್ಲ. ಕೊಂಡದ ಬೆಂಕಿ ಧಗಧಗ ಉರಿಯುತ್ತಿತ್ತು.

ತಾನು ಹೇಳಿದಂತೆ ಗುಡಸೀಕರ ಬಂದಿರಬಹುದೆಂದುಕೊಂಡು ನಿಂಗೂ ಗುಡಿಯ ಹಿಂದಿನ ಮರದ ಗುಂಪಿನಲ್ಲಿ ಹೋಗಿ ಹುಡುಕಿದ, ಯಾರೂ ಇರಲಿಲ್ಲ. ಎಲ್ಲಾ ಸುಳ್ಳು ಎಂದುಕೊಂಡು ಗುಡಿಯ ಬದಿಯ ಹಾದಿಯಿಂದ ಬರುತ್ತಿರುವಾಗ ಗುಡಿಯಲ್ಲಿ ಯಾರೋ ಹೆಣ್ಣು ನರಳುತ್ತಿದ್ದಂತೆ ಕೇಳಿಸಿತು. ಗರ್ಭಗುಡಿಯಲ್ಲಿ ಏನೋ ಅಕೃತ್ಯ ನಡೆದಿರಬಹುದೆಂಬುದನ್ನು ಊಹಿಸುವುದು ಅವನಿಗೆ ಅಸಾಧ್ಯವಾಯ್ತು. ಹೇಳಿ ಕೇಳಿ ಹುಣ್ಣಿಮೆ, ಇಂದು ಗುಡಿಯಲ್ಲಿ ಭೂತ ಸೇರುತ್ತವೆಯೆಂಬುದು ಗೊತ್ತಿತ್ತಲ್ಲ. ಗಾಬರಿಯಾಯ್ತು. ಅಷ್ಟು ದೂರ ಓಡಿ ಹೋಗಿ ಪೌಳಿಯ ಬಾಗಿಲಿನಿಂದ ಗುಡಿಯ ಕಡೆ ನೋಡಿದ. ಕೊಂಡದಲ್ಲಿ ಆಗಷ್ಟೇ ಹೊತ್ತಿಸಿದ ಬೆಂಕಿ ಉರಿಯುತ್ತಿತ್ತು. ಜ್ವಾಲೆಯೊಳಗಿನಿಂದ ಗರ್ಭಗುಡಿ ಥರಥರ ನಡುಗಿದಂತೆ ಕಾಣುತ್ತಿತ್ತು. ಅಯ್ಯಯ್ಯೋ ಎಂದು ಓಡಿದ. 'ಗುಡ್ಯಾಗ ಹೆಣ್ಣದೆವ್ವ ನರಳಾಕ ಹತ್ತಿತ್ರೋ, ಸ್ವತಾಃ ಕಿವೀಲೆ ಕೇಳಿದೆ' ಎಂದು ಸುದ್ದಿ ಹಬ್ಬಿಸಿದ.

ತಿರುಗಿ ಗುಡಿಸಲಿಗೆ ಬಂದಾಗಲೇ ದುರ್ಗಿಗೆ ಅರಿವು ಮೂಡಿತು. ಈ ತನಕ ಮಹಾಪೂರದ ಸೆಳವಿಗೆ ಸಿಕ್ಕವಳು ಈಗ ಹೊರಗೆ ಬಂದಂತಾಗಿತ್ತು. ಇಂದ್ರಿಯಗಳು ತಂತಮ್ಮ ಸ್ಥಳಕ್ಕೆ ಬಂದು ಸಹಜ ವ್ಯಾಪಾರಕ್ಕೆ ತೊಡಗಿದವು. ಹುಡುಗಿ ನಡುಗುತ್ತಿದ್ದಳು. ತೊಡೆಗಳಲ್ಲಿ ಹಸಿನೆತ್ತರು ಸೋರ್ಯಾಡಿತ್ತು. ಒರಸಿಕೊಂಡಳು. ಕರಿಮಾಯಿಯ ಗುಡಿಯಲ್ಲಿ ಆಗಬಾರದ್ದು ಆಗಿಹೋಗಿತ್ತು. ತಾಯಿಯ ಮರದ ಉಗ್ರಮುಖ, ಆಯುಧ ಹಿಡಿದ ಕೈ ನೆನೆಪಾದವು. ಮೈ ತುಂಬಿದ ದೇವರೇಸಿಯ ಮುಖ ನೆನಪಾಯ್ತು. ನಡುಕ ಇನ್ನೂ ಜಾಸ್ತಿಯಾಯ್ತು. ಬೇರೆ ದಿನಗಳಲ್ಲಾದರೆ ಹೇಗೋ ನಡೆದೀತು. ಇವು ಮಡಿ ಮೈಲಿಗೆಯ ದಿನಗಳು. ನಾಳೆ ತಾಯಿ ಗುಡಿಗೆ ಬರಲಿದ್ದಾಳೆ. ಮೈಲಿಗೆಯಾಯ್ತು. ತನಗಿನ್ನು ಉಳಿಗಾಲವಿಲ್ಲ. ದೇವೀ ನಾಳೆ ತನ್ನನ್ನೆಳೆದು ತಲೆಯ ಮೇಲೆ ಬೆಂಕಿಯಿಡುವುದು ಖಂಡಿತ, ಅಯ್ಯೋ, ಘಾತವಾಯಿತೆಂದು ಬೆದರಿದಳು. ಜೀವ ಕೈಯಲ್ಲಿ ಹಿಡಿದುಕೊಂಡು ಚಾಪೆಯ ಮೇಲೆ ಮುದ್ದೆಯಾಗಿ ಬಿದ್ದಳು. ಕಿವಿಗೆ ಕೇಳಿಸುವಷ್ಟು ಗಟ್ಟಿಯಾಗಿ ಎದೆ ಹೊಡೆದುಕೊಳ್ಳುತ್ತಿತ್ತು.

ಬಸವರಾಜು ಬಂದಾಗ ಗುಡಸೀಕರ ಚಿಮಣಾಳ ಜೊತೆ ಮಾತಾಡುತ್ತ ಕೂತಿದ್ದ. ಬಸವರಾಜು ವಿಜಯದ ಉನ್ಮಾದದಲ್ಲಿದ್ದ! 'ಹಲೋ ಸರಪಂಚ್' ಎಂದು ದಿನಕ್ಕಿಂತ ಎತ್ತರದ ದನಿಯಲ್ಲಿ ಮಾತಾಡುತ್ತ ಒಳಗೆ ಹೋದ. ಚಡ್ಡಿಗೆ ಹಸೀ ರಕ್ತ ಅಂಟಿತ್ತು. ಬದಲಿಸಿ ಬಾಟ್ಲಿ ತಗೊಂಡೇ ಬಂದ. ತೃಪ್ತಿ ಮುಖ ತುಂಬಿ ಹೊರಸೂಸುತ್ತಿತ್ತು. ಜೋರು ಮಾಡಿ ಗುಡಸೀಕರನಿಗೆ ಸುರಿದ. ಚಿಮಣಾಳಿಗೆ ಇನ್ನಷ್ಟು ಸುರಿದ ಮಾತಿಗೊಮ್ಮೆ 'ಓಲ್ಡ್ ಬಾಯ್' ಎನ್ನುತ್ತ ಗುಡಸೀಕರನ ಭುಜ ತಟ್ಟಿದ. ಗೆದ್ದವನಂತೆ ಆಗಾಗ ದೊಡ್ಡ ದನಿ ತೆಗೆದು ನಕ್ಕ. ದಣಿದಿದ್ದನಲ್ಲ, ಕಪ್ಪೆ ನುಂಗಿದ ಸರ್ಪದಮತೆ ಸುಂದಾಗಿ ಕೂತಲ್ಲೇ ಒರಗಿದ.

ಕೋಳಿ ಕೂಗುವ ಮುನ್ನವೇ ಲಗಮವ್ವ ಎದ್ದು ಜಳಕ ಮಾಡಿದ್ದಳು. ಮಡಿ ಉಟ್ಟು ಸಾಮಗ್ರಿ ಸೇರಿಸಿ ಪಕ್ಕದ ಇಬ್ಬರು ಗರತಿಯರನ್ನು ಎಬ್ಬಿಸಿದಾಗ ಕೋಳಿ ಕೂಗಿತು. ಮೂವರು ಗುಡಿಗೆ ಹೋದರು. ಕೊಂಡದಲ್ಲಿಯ ಮರದ ದಿಮ್ಮಿಗಳು ಸುಟ್ಟು ನಿಗಿನಿಗಿ ಕೆಂಡವಾಗಿದ್ದವು. ಕರಿಮಯಿಗೆ ಈ ದಿನ ವಿಶೇಷ ಅಲಂಕಾರ. ಕತ್ತಿನಿಂದ ಸೊಂಟದ ತನಕ ಅವರೆಯ ಹೂ ಅಂಟಿಸುತ್ತಾರೆ. ಅದು ತಾಯಿಯ ಹಳದಿ ಕುಪ್ಪಸದಂತೆ ಕಾಣಿಸುತ್ತದೆ. ಸೊಂಟದಿಂದ ಕೆಳಗೆ ಪಾದದ ತನಕ ಸಾಲಾಗಿ ಜೋಳದ ಗರಿಗಳನ್ನು ಅಂಟಿಸುತ್ತಾರೆ. ಅದು ತಾಯಿಯ ಗರಿಗರಿ ಹಸಿರು ನೆರಿಗೆಯಂತೆ ಕಾಣುತ್ತದೆ. ಉಳಿದಂತೆ ತರತರದ ಹೂವಾಭರಣಗಳನ್ನು ಅಂಟಿಸುತ್ತಾರೆ. ಕತ್ತಿನ ತುಂಬ ಚೆಂಡು ಹೂ ಮಾಲೆ

ಅಂಟಿಸುತ್ತಾರೆ. ಮೆರವಣಿಗೆ ಬಂದಾಗ ಮೇಲೆ ಬಂಗಾರದ ಮುಖ ಕೂರಿಸುತ್ತಾರೆ. ಈ ಶೃಂಗಾರ ನೋಡುವವರ ಕಣ್ಣು ತುಂಬುತ್ತದೆ. ಆ ಹೂವು, ಆ ಗರಿ, ಬಂಗಾರದ ಆ ಮುಖ – ತಾಯಿ ಈ ದಿನ ಸಮೃದ್ಧಿ ದೇವತೆಯ ಅವತಾರ ತಾಳಿದಂತಿರುತ್ತದೆ. ಹೀಗೆ ಮೈ ಶೃಂಗಾರವಾಗುವ ಹೊತ್ತಿಗೆ ಸೂರ್ಯೋದಯವಾಗುತ್ತದೆ.

ಬೆಳಗಿನ ಬೆಳಕಿನಲ್ಲಿ, ತಾಯಿಯ ಮರದ ಮೂರ್ತಿಯ ಕೈ ಮುರಿದಿತ್ತಲ್ಲ. ಲಗಮವ್ವನಿಗೆ ಕಂಡಿತು. ಜೀವ ಜಲ್ಲೆಂದಿತು. ಎರಡೂ ಕೈ ಎದೆಯ ಮೇಲಿಟ್ಟುಕೊಂಡು 'ಅಯ್ಯೋ ತಾಯಿ' ಎಂದಳು. ನೋಡಿ ಎಲ್ಲರೂ ಗಾಬರಿಯಾದರು. ಮುರಿದ ಕೈ ಖಡ್ಗ ಸಮೇತ ದೂರ ಸಿಡಿದು ಬಿದ್ದಿತ್ತು. ಅದರ ಬಳಿಯಲ್ಲೇ ನೆತ್ತರು ಸೋರ್ಯಾಡಿತ್ತು! ಶೃಂಗಾರದ ಸಡಗರದಲ್ಲಿ ತಾವೇ ಕೈಮುರಿದವೋ ಎಂದುಕೊಂಡರು. ಹಾಗೆ ನೆನಪಾಗಲಿಲ್ಲ. ತಾಯಿ ಮುನಿದಳು ಎಂದರು. ಅಪಶಕುನ ಎಂದರು. ಲಗಮವ್ವ ಅಡರಾಸಿ ಗೌಡನ ಬಳಿಗೆ ಓಡಿದಳು.

ಗೌಡನ ಮನೆಯಲ್ಲಾಗಲೇ ಹಿರಿಯರು ಸೇರಿದ್ದರು. ಆರತಿಯ ಮುತ್ತೈದೆಯರು ಬಂದಿದ್ದರು. ಶಿಷ್ಯಮಕ್ಕಳು ಡೊಳ್ಳುಬಾರಿಸತೊಡಗಿದ್ದರು. ಕಾಳೀಸಿಂಗ ದಿಕ್ಕಿಗೊಮ್ಮೆ ಮುಖಮಾಡಿ ಕಾಳೀ ಊದಿದ್ದ. ಇನ್ನೂ ದತ್ತಪ್ಪ ಬಂದಿರಲಿಲ್ಲ. ಅಷ್ಟರಲ್ಲಿ ಲಗಮವ್ವ ಓಡಿಬಂದಳು. ಗೌಡನ ಕಿವಿಯಲ್ಲಿ ತಾಯಿಯ ಕೈಮುರಿದ ಸುದ್ದಿ ಹೇಳಿದಳು. ಕೇಳಿ ಗೌಡನ ಕೈಕಾಲಲ್ಲಿಯ ಶಕ್ತಿಯೇ ಉಡುಗಿತು. ಎಲ್ಲರಿಗೆ ಅಲ್ಲೇ ಇರಹೇಳಿ, ದೂರಬರುತ್ತಿದ್ದ ದತ್ತಪ್ಪನಿಗೆ 'ಬಾ' ಎಂದಷ್ಟೇ ಸನ್ನೆ ಮಾಡಿ ಗುಡಿಯ ಕಡೆ ಧಾವಿಸಿದ. ಲಗಮವ್ವ ಹಾಗೇ ಬೆನ್ನು ಹತ್ತಿದಳು.

ನೋಡಿ ಆಘಾತವಾಯ್ತು. ಗೌಡ ಲಗಮವ್ವನನ್ನು ನೋಡಿದ. ನಮ್ಮಿಂದ ಆದದ್ದಲ್ಲವೆಂದಳು. ಸದ್ಯ ದೇವೀ ಬರೋತನಕ ಹ್ಯಾಗೋ ಅಂಟಿಸಿ ಆಮೇಲೆ ಸರಿಪಡಿಸಿದರಾಯ್ತೆಂದು ದತ್ತಪ್ಪ ಸೂಚಿಸಿದ. ಬರೋಬರಿಯೆಮದು. ಆ ಕೈ ಮೊದಲಿನಂತೆ ಕೂರಿಸಿ ಸಣ್ಣೆಳೆ ಹುರಿಯಿಂದ ಬಿಗಿದರು. ಗೊತ್ತಾಗದಿರಲೆಂದು ಆ ಭಾಗದಲ್ಲೆರಡು ಹೂವಿನ ಮಾಲೆ ಇಳಿಬಿಟ್ಟರು. ಹೇಗೆ ಏನು ಮಾಡಿದರೂ ಎದೆ ಹೊಡೆದುಕೊಳ್ಳುವುದು ನಿಲ್ಲಲಿಲ್ಲ. ಮೈಲಿಗೆಯಾಗಿರಬೇಕೆಂದು ಸಂಶಯ ಬಂತು. ಗೌಡ ಲಗಮವ್ವನನ್ನು ಪ್ರತ್ಯೇಕ ಕರೆದು ಕೇಳಿದ. ಅವಳು ಇಲ್ಲವೆಂದು ಕರಿಮಾಯಿಯ ಆಣೆ ಮಾಡಿದಳು. ಅಲ್ಲದೆ ಲಗಮವ್ವನೇನೂ ಇದನ್ನೆಲ್ಲ ಅರಿಯದವಳಲ್ಲ, ದೇವರ ಜವಾಬ್ದಾರಿಗಳನ್ನು ಅವಳಿಗೆ ಹೇಳಿಕೊಡಬೇಕಾದದ್ದಿದೆಯೆ! ಹಳಹಳಿ ತಡೆಯಲಾರದೆ ಕೇಳಿದ್ದ. ಅಷ್ಟೆ. ಉಳಿದವರನ್ನು ಕೇಳಿದ ಕಣ್ಣಗಲಮಾಡಿ. ಅವರು ಹೆದರಿ ಓಡಿಹೋಗಿ ತಾಯಿಯ ಭಂಡಾರ ಮುಟ್ಟಿದರು. ಇದನ್ನು ನಿರ್ಧರಿಸುತ್ತ ಕೂರಲು ಸಮಯವೂ ಇದಲ್ಲ. ದೇವರು ಬರುವುದರೊಳಗೆ ನೆಲ ಸಾರಿಸಿ ಇನ್ನೊಮ್ಮೆ ಮಡಿಯಾಗಿ ಗದ್ದಿಗಿ ಪೂಜೆ ಮಾಡೆಂದು ಲಗಮವ್ವನಿಗೆ ಹೇಳಿ ದತ್ತಪ್ಪ, ಗೌಡ ಹೋದರು.

ಇವರು ಬಾಯಿ ಬಿಟ್ಟು ಆಡದಿದ್ದರೂ ಏನೋ ಅಚಾತುರ್ಯವಾಗಿದೆಯೆಂದು ಕೂಡಿದ ಮಂದಿ, ಅವರ ಮುಖ ನೋಡಿಯೇ ಮನಗಂಡರು. ಗೌಡನ ಮನೆಯಲ್ಲಿದ್ದ ಬಂಗಾರ ಮುಖವನ್ನು ತಂದು ಪಲ್ಲಕ್ಕಿಯಲ್ಲಿಟ್ಟರು. ಮೆರವಣಿಗೆ ಗೌಡನ ತೋಟಕ್ಕೆ ಹೋಯಿತು. ಅಲ್ಲಿ ಕೂತ ತಾಯಿಯನ್ನು ತಿರುಗಿ ಗುಡಿಗೆ ತರಬೇಕಾದರೆ ನಾಕು ತಾಸು ಹೊತ್ತೇರಿತು.

ಮೆರವಣಿಗೆ ಪೌಳಿಯ ಹತ್ತಿರ ಬರುವಷ್ಟರಲ್ಲಿ ಊರ ಮಂದಿ ಅಲ್ಲಿ ಸೇರಿದ್ದರು. ದುರ್ಗಿ ಬಂದಿರಲಿಲ್ಲ. ಸುಂದರಿ, ಬಸವರಾಜು, ಗುಡಸೀಕರ ಇವರೂ ಬಂದಿದ್ದರು. ಮೋಜು ನೋಡುವುದಕ್ಕೆ ಬಸವರಾಜು ಬಂದಿದ್ದ. ಗುಡಸೀಕರನಿಗೆ ಭಕ್ತಿಯೇನೋ ಇತ್ತು. ಬಸವರಾಜನ ಎದುರಿಗೆ ಅದನ್ನು ತೋರದೆ ಒತ್ತಾಯಕ್ಕೆ ಬಂದ ಹಾಗೆ ಬಂದಿದ್ದ. ಮೆರವಣಿಗೆ ಪೌಳಿಯ ಸಮೀಪಕ್ಕೆ ಬರುತ್ತಿತ್ತು. ಪೂಜಾರಿಯ ಮೈತುಂಬ ಕಂಬಳಿ ಹೊದಿಸಿದ್ದರು. ಪಲ್ಲಕ್ಕಿಯ ಕೋಲಿನ ಮೇಲೆ ಎಡಗೈ ಇಟ್ಟು ತೇಲಾಡುತ್ತಿದ್ದಂತೆ ಮೆರವಣಿಗೆಯಲ್ಲಿ ನಡೆದುಬರುತ್ತಿದ್ದ. ಪೌಳಿಯ ಬಾಗಿಲು ಅಷ್ಟು ದೂರ ಇದೆಯೆಂದು ಹರಕೆ ಹೊತ್ತ ಇಪ್ಪತ್ತು. ಮೂವತ್ತು ಭಕ್ತರು. ಗಂಡು – ಹೆಣ್ಣುಮಕ್ಕಳೆನ್ನದೆ ಬೆನ್ನು ಮೇಲಾಗಿ ಅಡ್ಡಬಿದ್ದಿದ್ದರು. ಎಲ್ಲರೂ "ಚಾಂಗು ಭಲೇ" ಎಂದು ಕಿರುಚಿ ನಾಗಲೋಟದಿಂದ ಗುಡಿಯ ಕಡೆ ಓಡಿದರು. ಡೊಳ್ಳಿನವರು ಡೊಳ್ಳು ಬಾರಿಸುತ್ತ, ಚೌರಿಯವರ ಚೌರಿ ಬೀಸುತ್ತ. ಕಾಡುಕೂಗುಗಳನ್ನು ಕಿರಿಚುತ್ತ ಪೌಳಿಯ ಬಾಗಿಲ ತನಕ ಓಡಿದರು. ದೇವಿಯ ಮಹಿಮೆಯೆಂದರ ಇದು; ಅಡ್ಡಬಿದ್ದ ಭಕ್ತರ ಮೇಲೆ ಇಡೀ ಮೆರವಣಿಗೆ ಓಡಿದರೂ ಒಬ್ಬರಿಗೊಂದು ಕಾಲು ತಾಕಲಿಲ್ಲ. ನಿಜ ಹೇಳಬೇಕೆಂದರೆ ಒಂದು ಹೆಜ್ಜೆ ಇಟ್ಟಿದ್ದರೆ ಅಲ್ಲೇ ಜಜ್ಜಿಯಾಗುವಂಥ

ಮಕ್ಕಳಿದ್ದವು. ಆ ಹುಚ್ಚು ಓಟದಲ್ಲಿ ಹಾಗೆ ತುಳಿಯುವುದು ಅಸಂಭವವೂ ಅಲ್ಲ. ಇಲ್ಲದಿದ್ದರೆ ಜನರ ಭಕ್ತಿ ಸುಳ್ಳೆ? 'ಗುಂಡು ತೇಲಿಸುವಾಕೆ, ಚೆಂಡು ಮುಳುಗಿಸುವಾಕಿ' ಎಂಬ ಲಗಮವ್ವನ ಹಾಡು ಸುಳ್ಳೆ?

ಈ ದಿನ ಅದೇನು ಮಾಯೆಯೋ ಪೌಳಿಯ ಬಾಗಿಲಿಗೆ ಪಲ್ಲಕ್ಕಿ ಬಂದು ಥಟ್ಟನೆ ನಿಂತುಬಿಟ್ಟಿತು. ಪಲ್ಲಕ್ಕಿ ಹೊತ್ತವರು ಒಳಹೋಗಬೇಕೆಂದರೆ ಕಾಲು ಏಳಲೊಲ್ಲವು! ದೇವರೇಸಿಯ ರಟ್ಟೆಗೆ ಕೈಹಾಕಿ ನಡೆಸಿಕೊಂಡು ಹೋದೇವೆಂದರೂ ಜಗ್ಗಲಿಲ್ಲ. ಎಲ್ಲರಿಗೂ ಭಯ, ಆಶ್ಚರ್ಯವಾಯಿತು. ಇಂಥದೇನೋ ಆಗುತ್ತದೆಂದು ಗೌಡ, ದತ್ತಪ್ಪ, ಲಗಮವ್ವನಿಗೆ ತಿಳಿದಿತ್ತು. ಒಂದು ಒಡೆಯುವಲ್ಲಿ ಹತ್ತು ತೆಂಗಿನಕಾಯಿ ಒಡೆದರು, ಹತ್ತೂ ದಿಕ್ಕಿಗೆ ಲಿಂಬಿಯ ಹಣ್ಣೆಸೆದರು. ಸಾಮಾನ್ಯವಾಗಿ ಪಲ್ಲಕ್ಕಿ ಪೌಳಿಗೆ ಬರುತ್ತಲೂ ತಾಯಿ ದೇವರೇಸಿಯ ಮೈತುಂಬುವುದು ವಾಡಿಕೆ. ಆದರೆ ಮೈತುಂಬಿ ಹೀಗೆ ನಿಲ್ಲುವುದಿಲ್ಲ. ಓಡೋಡುತ್ತ ಹೋಗಿ ಕೊಂಡಕ್ಕೆ ಪ್ರದಕ್ಷಿಣೆ ಹಾಕಬೇಕು.

ತೆಂಗಿನಕಾಯಿ ಲಿಂಬಹಣ್ಣಿಗೂ ತಾಯಿ ಜಗ್ಗಲಿಲ್ಲ. ಹೀಗೆಂದೂ ಆಗಿರಲಿಲ್ಲ. ವಾದ್ಯದವರು ಸ್ತಬ್ಧರಾದರು. ಮೈತುಂಬಿದ ತಾಯಿ ವಿಚಿತ್ರವಾಗಿ ನಡುಗುತ್ತಿದ್ದಳು. ಗೌಡ ಗಪ್ಪನೆ ತಾಯಿ ಕಾಲು ಹಿಡಿದು "ಮಕ್ಕಳ ತಪ್ಪ ಹೊಟ್ಯಾಗ ಹಾಕ್ಕೊಳ್ಳs ಎವ್ವಾ" ಎಂದ. ಜನ ವಿಸ್ಮಯದಿಂದ ಮೂಕರಾಗಿದ್ದರು. ಗೌಡ ಕಾಲು ಬಿಡಲೇ ಇಲ್ಲ. ತಾಯಿ ಬಾಯಿ ಬಿಡಲಿಲ್ಲ. ದತ್ತಪ್ಪನೂ ಬಗ್ಗಿ ಕಾಲು ಹಿಡಿದು "ತಾಯೀ, ಏನ ತಪ್ಪಾಗೇತ್ಯೋ ನಮಗ್ಗೊತ್ತಿಲ್ಲ, ಕೇಳಿದ ತಪ್ಪದಂಡ ಕೊಡತೀವು, ಒಳಗೆ ಬಾ" ಎಂದ. ತಾಯಿಗೊಮ್ಮೆಲೆ ಆವೇಶ ಬಂದಂತೆ ಕಾಲುಹಿಡಿದವರನ್ನು ತಳ್ಳಿ ಹಾಹಾ ಎಂದು ಕಿರುಚುತ್ತ ಒಳಕ್ಕೆ ಓಡಿದಳು.

ಸಾಮಾನ್ಯವಾಗಿ ಒಳಗೆ ಹೋದೊಡನೆ ಓಡೋಡುತ್ತಲೇ ಆಗಲಿ, ಕೊಂಡವನ್ನು ಮೂರು ಸಲ ಪ್ರದಕ್ಷಿಣೆ ಹಾಕಬೇಕು. ಆಗಲೇ ಮುಡಿಪು ಕಟ್ಟಿಕೊಂಡ ಭಕ್ತರು ಕೆಂಡದಲ್ಲಿ ಉಪ್ಪು ಸುರಿಯುತ್ತಾರೆ. ಆಮೇಲೆ ತಾಯಿ ಕೊಂಡ ಹಾಯಬೇಕು. ಭಕ್ತಿ ಕಮ್ಮಿಯಾದ ಜನರನ್ನು ಗುರುತಿಸಿ ಓಡಿಹೋಗಿ ಅವರನ್ನು ಎಳೆದು ತಂದು ಕೆಂಡದಲ್ಲಿ ಓಡಾಡಿಸಬೇಕು. ಆಮೇಲೆ ಖಡ್ಗದಿಂದ ನಾಲಿಗೆ ಇರಿದುಕೊಳ್ಳುತ್ತಾಳೆ, ಅಲಗಿನಿಂದ ಹೊಟ್ಟೆ ಕಡಿದುಕೊಳ್ಳುತ್ತಾಳೆ. ಬಹುಶಃ ಇದು ನಂಬಿಕೆ ಕಡಿಮೆಯಾಗದಂತೆ ನೋಡಿಕೊಳ್ಳುವ ವಿಧಾನವಿದ್ದೀತು. ಆದರೆ ಭಕ್ತರು ಇದಕ್ಕೆ ಅವಕಾಶ ಕೊಡುವುದಿಲ್ಲ. ಶಾಸ್ತ್ರರೀತ್ಯಾ ಒಂದೆರಡು ಸಲ ಅಲಗು ಹಾಯುವುದರೊಳಗೇ ಓಡಿಹೋಗಿ ಅಲಗು, ಖಡ್ಗಗಳನ್ನು ಕಸಿದುಕೊಳ್ಳುತ್ತಾರೆ. ಗೊತ್ತಿದ್ದೂ ತಾಯಿಯ ಪರೀಕ್ಷೆ ಮಾಡುವುದೆಂದರೇನು?

ಈ ಸಲ ಹಾಗಾಗಲಿಲ್ಲ. ತಾಯಿ ಓಡೋಡುತ್ತ ಹೋಗಿ ಗುಡಸೀಕರನ ಹೆಲಗಮೇಲೆ ಕೈಹಾಕಿ ನಿಂತ ಬಸವರಾಜನ ಜುಟ್ಟು ಹಿಡಿದು ದರದರ ಎಳೆದು ತಂದಳು. ಜನ ಹೌಹಾರಿ ಹೋ ಎನ್ನುವುದರೊಳಗೆ ಉಪ್ಪು ಸುರಿಯದ ಕೊಂಡದಲ್ಲಿ ಬಸವರಾಜನನ್ನು ವೀರಾವೇಶದಿಂದ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಾಡಿಸತೊಡಗಿದಳು. ಕೊಂಡದಂಚಿಗೆ ಖಡ್ಗಹಿರಿದು ನಿಂತಿದ್ದವನ ಖಡ್ಗ ಕಸಿದುಕೊಂಡು ಹೊಟ್ಟೆಯ ಮೇಲೆ, ನಾಲಗೆಯ ಮೇಲೆ ಹೊಡೆದುಕೊಳ್ಳುತ್ತ ರಭಸದಿಂದ ಹರಿದಾಡತೊಡಗಿದಳು. ಲಗಮವ್ವನ ಭಾವುಕ ಕಣ್ಣುಗಳಂತೂ ತಾಯಿಯ ಪೂರ್ವೀ ಅವತಾರವನ್ನೇ ಕಂಡವು. ಬಿಟ್ಟಿದ್ದರೇನೇನು ಆಗಲಿತ್ತೋ ಕುಸ್ತಿ ಹುಡುಗರು ಕೆಂಡದ ಕೊಂಡದಲ್ಲೇ ಧುಮುಕಿ ತಾಯಿಗೆ ತೆಕ್ಕೆ ಹಾದು ಬಸವರಾಜನನ್ನು ಬಿಡಿಸಿದರು. ಬಿಟ್ಟಿದ್ದೇ ತಡ ಬಸವರಾಜು ಕೊಂಡದಿಂದ ಜಿಗಿದುಹೋಗಿ ಅಲ್ಲೇ ಕುಸಿದು ಬಿದ್ದ. ಮುಡಿಪು ಕಟ್ಟಿದ್ದ ಭಕ್ತರು ಅವಸರವಸರವಾಗಿ ಕೊಂಡದಲ್ಲಿ ಉಪ್ಪು ಸುರಿದರು. ಕೂಡಲೇ ತಾಯಿ ಓಡಿಹೋಗಿ ಮುಳ್ಳಾವಿಗೆಯ ಮೇಲೆ ಹತ್ತಿನಿಂತಳು;

ಗೌಡ ಓಡಿಬಂದು ಕಾಲುಹಿಡಿದ. ದತ್ತಪ್ಪ ಅವನ ಹಿಂದೆ ಕೂತ. ತಾಯಿಯ ಕೈಗೆ ಆಶೀರ್ವಾದದ ಕಾಯಿ ಕೊಟ್ಟರು. ಕೂಡಿದವರ ಕಿವಿ ಬಿರಿಯುವ ಹಾಗೆ ತಾಯಿ ಕಿಟಾರನೆ ಕಿರುಚಿದಳು. ಎಲ್ಲರೂ ಸ್ತಬ್ಧರಾದರು. ತಾಯಿ ಬಿಕ್ಕುತ್ತಿದ್ದಳು. ಗಂಟಲಲ್ಲಿ ಸಿಕ್ಕ ನುಡಿ ಹೊರಗೆ ಬರಲಾರದಾಗಿತ್ತು. ಅಪ್ರಿಯವಾದದ್ದನ್ನು ಹೇಳಲಿರುವಂತೆ, ಹೇಗೆ ಹೇಳಲೆಂಬಂತೆ, ಹೇಗೆ ಹೇಳದೇ ಇರಲೆಂಬಂತೆ ತಾಯಿ ಸಂಕಟಪಡುತ್ತಿದ್ದಳು. ಕೊನೆಗೆ ನಿರ್ಧರಿಸಿದಂತೆ –

"ಗೌಡೌss"

ಎಂದಳು. ಈಗ ಬಿಕ್ಕಲಿಲ್ಲ. ಸ್ವಲ್ಪ ಹೊತ್ತು ತಡೆದು ಕಾರಣಿಕ ಮುಂದುವರಿಸಿದಳು. "ಗೌಡೌ, ಚೆನ್ನದ ಕೂಸನ್ನ ಕಸಕೊಂಡು ಹೋದಾರು ಹುಷಾರಲೆss"

– ಎನ್ನುತ್ತ ತೆಂಗಿನಕಾಯಿ ಬಿಟ್ಟಳು. ಸುದೈವದಿಂದ ಕೆಳಗಡೆ ಬೀಳಲಿಲ್ಲ. ದತ್ತಪ್ಪ ಅದಕ್ಕಾಗೇ ಸಿದ್ಧನಾಗಿದ್ದವನು ಹಿಡಿದುಕೊಂಡ. ತಾಯಿ ಗರ್ಭಗುಡಿ ಹೊಕ್ಕಳು. ಕಾರಣಿಕದಿಂದ ಯಾರಿಗೂ ಸಂತೋಷವಾಗಲಿಲ್ಲ. ಜನ ಈ ದಿನ ಹೊಯ್ಕಿನ ಸರಮಾಲೆಯನ್ನೇ ಕಂಡಿದ್ದರು. ತಾಯಿ ಪೌಳಿ ಬಾಗಿಲಿಗೆ ನಿಂತದ್ದೊಂದು, ಪ್ರದಕ್ಷಿಣೆ ಹಾಕದೆ ಕೊಂಡ ಹಾಯ್ದದ್ದಿನ್ನೊಂದು, ಊರಿಗೇನೂ ಸಂಬಂಧವಿಲ್ಲದ ಬಸವರಾಜೂನನ್ನು ಎಳೆದಾಡಿದ್ದಿನ್ನೊಂದು.... ಬಸವರಾಜು ಏನೋ ತಪ್ಪು ಮಾಡಿರಬೇಕೆಂದು ಕೆಲವರಂದರು. ದೇವೀ ನಿಂದೆ ಮಾಡಿರಬೇಕೆಂದು ಮತ್ತೆ ಕೆಲವರು. ಶಹರದ ಹುಡುಗ, ನಮಬಿಕೆ ಕಡಮೆ, ಅದಕ್ಕೇ ಹೀಗಾಯಿತೆಂದು ಇನ್ನು ಕೆಲವರು ಎಷ್ಟೆಲ್ಲ ಹೇಳಿಕೊಂಡರೂ ಯಾರಿಗೂ ಸಮಾಧಾನವಾಗಲಿಲ್ಲ.

ಬಸವರಾಜನಿಗೆ ಇನ್ನೂ ಜೀವದಲ್ಲಿ ಜೀವ ಇರಲಿಲ್ಲ. ಮೊದಲೇ ಇದು ಗೊತ್ತಾಗಿದ್ದರೆ ಮನಸ್ಸನ್ನು ಆ ರೀತಿ ಅಣಿಗೊಳಿಸಬಹುದಾಗಿತ್ತು. ಅಥವಾ ಬಾರದೇ ಇರಬಹುದಿತ್ತು. ದೇವಿಯ ಬಗ್ಗೆ ಭಕ್ತಿಯಿರಲಿಲ್ಲ, ನಿಜ. ಇಷ್ಟೆಲ್ಲ ರಾದ್ಧಾಂತಕ್ಕೆ ಅದು ಹೊಸದಾಗಿ ಹುಟ್ಟುವುದೂ ಅಸಂಭವವೇ. ಉಳಿದೆಲ್ಲರ ಮನಸ್ಸು ಒಂದನ್ನು ಚಿಂತಿಸಿದರೆ ಈತ ಬೇರೆ ರೀತಿ ಯೋಚಿಸುತ್ತ ಗುಂಪಿನಿಂದ ಒಡೆದು ಎರಡನೆಯವನಾಗಿದ್ದ. ಇದು ನಿಜ, ಇಂಥ ಶಿಕ್ಷೆ, ಈ ಅವಮಾನವನ್ನಾತ ನರೀಕ್ಷಿಸಿರಲಿಲ್ಲ. ತಾ ಮಾಡಿದ ಯಾವುದೋ ಅಕರ್ಮಕ್ಕೆ ಪಶ್ಚಾತ್ತಾಪ ಪಡುವಷ್ಟು ಸಂಸ್ಕಾರವೂ ಅವನಲ್ಲಿರಲಿಲ್ಲ. ಏನೋ ಮೋಜು ನೋಡಲು ಬಂದಿದ್ದ. ಖುಷಿಯಾಗಿ ತಂಪು ಕನ್ನಡಕ ಹಾಕಿ ಗುಂಪಿನಲ್ಲಿ ದುರ್ಗಿಯನ್ನು ಹುಡುಕುತ್ತ, ನಗಾಡುತ್ತ ನಿಂತಿದ್ದ. ನಿರಾಯುಧನ ಮೇಲೆ ಏಕದಂ ಶತ್ರು ಬಿದ್ದಂತೆ ದೇವರೇಸಿ ಎಳೆದೊಯ್ದು. ಮುಂದೆ ಬಿಡಿಸುವ ತನಕ ಏನಾಯಿತೋ, ಏನಿಲ್ಲವೋ ಒಂದೂ ಗೊತ್ತಾಗಲಿಲ್ಲ. ಅರಿವು ಬಂದದ್ದು ದೇವರೇಸಿ ಬಿಟ್ಟಮೇಲೆಯೇ. ಬಿಟ್ಟಾಗ ಕೈಕಾಲು ನಾಲಗೆಯಲ್ಲಿ ಶಕ್ತಿಯಿರಲಿಲ್ಲ. ನಿಂತಲ್ಲೇ ಕುಸಿದಿದ್ದ. ತಾಯಿಯ ಕಾರಣೀಕ ಕೇಳುವುದನ್ನು ಬಿಟ್ಟು ಯಾರೂ, ಗುಡಸೀಕರನೂ ಇವನನ್ನು ಉಪಚರಿಸುವ ಗೋಜಿಗೆ ಹೋಗಲಿಲ್ಲ.

ಮುಂಗಾರಿ ಬೆಳೆ ಕುಯ್ಯುವುದಕ್ಕೆ ನಾಳೆಯಿಂದ ಸುರುವಾದ್ದರಿಂದ ಈ ದಿನ ಭಯಂಕರವೆನಿಸುವ ಘಟನೆ ಜರುಗಿಬಿಟ್ಟಿತ್ತು. ನಿಶ್ಚಿಂತರಾದ ಜನಗಳ ಮನಸ್ಸು ಈಗ ನಿಂತಲ್ಲಿ ನಿಲ್ಲದೆ ಚಂಚಲವಾಗಿತ್ತು. ಅಲ್ಲಲ್ಲಿ ಗುಂಪುಗೂಡಿ ಇದನ್ನು ಮಾತಾಡಿಕೊಂಡರು. ಯಾರು, ಎಂಥ ಮುಗ್ಧ, ಮೂರ್ಖ ವಿವರಣೆ ಕೊಟ್ಟರೂ ಜನ ಆಸಕ್ತಿಯಿಂದ ಕೇಳುತ್ತಿದ್ದರು. ಕಾರಣಿಕದ ಅರ್ಥ ಸರಿಯಾಗಿ ತಿಳಿದಿರಲಿಲ್ಲ ಬೇರೆ. ಚೆನ್ನದ ಕೂಸು ಅಂದರೇನು? ಕಸಿದೊಯ್ಯುವವರು ಯಾರು? ಯಾರಿಗೂ ಬಗೆಹರಿಯಲಿಲ್ಲ. ಗೌಡನೋ, ದತ್ತಪ್ಪನೋ, ಲಗಮವ್ವನೋ ಹೇಳಬೇಕು. ಅವರಿನ್ನೂ ಬಾಯಿ ಬಿಟ್ಟಿರಲಿಲ್ಲ. ಹಿರಿಯರು ಹಿಂದಿನ ಹಬ್ಬಗಳನ್ನು ಸ್ಮರಿಸಿ ಹೀಗೆಂದೂ ಆಗಿರಲಿಲ್ಲವೆಂದು. ಲಗಮವ್ವನ ಹಾಡುಗಳಿಗೂ ಇಂದಿನ ಸಂಗತಿ ಹೊರತಾಗಿತ್ತು.

ತಾಯಿಯ ಕೈಮುರಿದ ಸುದ್ದಿ ಆಗಲೇ ಹಬ್ಬಿತ್ತು. ನಿಂಗೂ ನಿನ್ನೆ ರಾತ್ರಿ ಹೆಣ್ಣು ದೆವ್ವಿನ ನರಳುವ ದನಿ ಕೇಳಿದ್ದನಲ್ಲ. ಅದೂ ಸುದ್ದಿಯಲ್ಲಿತ್ತು. ಹೆಮಗಸರಂತೂ ಗುಂಪುಗೂಡಿ ಈ ವರ್ಷ ಸತ್ತ ಹೆಂಗಸರನ್ನೆಲ್ಲಾ ಸ್ಮರಿಸಿ ಅವಳು ದೆವ್ವವಾಗಿರಬಹುದೇ? ಇವಳಾಗಿರಬಹುದೆ? ಬಸ್ವಿಗೆ ಮಕ್ಕಳ ಮಾಯೆ, ಚೆಲುವಿಗೆ ಗಂಡನ ಪ್ರೀತಿ ಇತ್ಯಾದಿ ಊಹಿಸುತ್ತಿದ್ದರು. ಯಾಕೆಂದರೆ ಈ ಹಳ್ಳಿಯವರ ನಂಬಿಕೆಯ ಪ್ರಕಾರ ಸಾವಿನಲ್ಲಿ ಇರೋದು ಎರಡೇ ರೀತಿ. ಒಂದು ತೃಪ್ತಿಯಿಂದ ಸಾಯೋದು. ಇನ್ನೊಂದು ಅತೃಪ್ತಿಯಿಂದ ಸಾಯೋದು. ಹಾಗೆ ಸತ್ತಮೇಲೆ ಕೂಡ ಸತ್ತವರು ಹೋಗಿ ಸೇರುವುದು ಸ್ವರ್ಗವೋ, ವೈಕುಂಠವೋ, ಕೈಲಾಸದಂಥ ಅದ್ದೂರಿಯ ಸ್ಥಳಗಳಲ್ಲ. ತೃಪ್ತಿಯಿಂದ ಸತ್ತವರು ಜೇನುಹುಳುಗಳಾಗಿ

ತಾಯಿಯ ಕೈಂಕರ್ಯಕ್ಕೆ ನಿಲ್ಲುತ್ತಾರೆ. ಅತೃಪ್ತರು ಭೂತಗಣಗಳಾಗಿ ನರಳುತ್ತಾರೆ. ಬಹುಶಃ ದತ್ತಪ್ಪನೊಬ್ಬನಿಗೆ ಮಾತ್ರ, ಅದೂ ಅವನು ಬ್ರಾಹ್ಮಣನಾದುದರಿಂದ ವೈಕುಂಠದ ಆಸೆ ಇತ್ತೋ ಏನೊ!

ಇನ್ನು ಬಸವರಾಜನ ಬಗ್ಗೆಯೂ ಮಾತು ಬಂತು. ಆತ ತಪ್ಪು ಮಾಡಿರಬಹುದೆಂದು ಯಾರೂ ಕಲ್ಪಿಸಲೇ ಇಲ್ಲ. ಆದರೆ ಅವನಿಗೊಂದು ಮಡಿ ಇಲ್ಲ, ಮೈಲಿಗೆಯಿಲ್ಲ, ದೇವರಂತೂ ಮೊದಲೇ ಇಲ್ಲ. ಹೀಗೆ ಜನ ಯೋಚಿಸುವುದನ್ನು ಬಿಡಲಿಲ್ಲ.

ತಾಯಿಯ ಕರಿಮಾಯೆ ಯಾರ್ಯಾರ ಬುದ್ಧಿಗೆ ಏನೇನು ಮುಸುಕು ಹೊದಿಸಿತ್ತೋ ಅವರಿಗೆ ತಿಳಿದಂತೆ, ತಿಳಿದಷ್ಟು ಕಾರಣೀಕದ ಅರ್ಥ ಹೇಳಿದರು, ಕೇಳಿದರು. ಲಗಮವ್ವ ಸಾಮಾನ್ಯಳಲ್ಲ. ಕರಿಮಾಯಿಯನ್ನು ಪ್ರತ್ಯಕ್ಷ ಕಂಡು ಎದುರು ಕೂತು ಮಾತಾಡಿಸಿದವಳು. ಕರಿಮಾಯಿ ಅವಳ ನಾಲಿಗೆಯಲ್ಲಿ ಕೂತು ತನ್ನ ಚರಿತ್ರೆ ಹೇಳಿಸಿದ್ದಳು! ಅವಳಿಗೂ ಇಂದಿನ ಕಾರಣಿಕದ ಅರ್ಥ ಹೊಳೆಯಲಿಲ್ಲವೆಂದರೆ! ಮಲಗಿದಾಗಲೂ ಅವಳ ಬಲಗೈ ತೋರುಬೆರಳು ಮೂಗಿನ ಮೇಲಿತ್ತು.

ದತ್ತಪ್ಪನ ಪುರಾಣಮತಿಗೆ ಸೋಲಾಯ್ತು. ಅವನ ಚಿಂತಾಮಣಿಯಲ್ಲೂ ಅರ್ಥ ಸಿಗಲಿಲ್ಲ. ಗೌಡನಿಗೆ ಬುದ್ಧಿಯಿತ್ತು. ವಿವೇಕವಿತ್ತು, ಎಲ್ಲಕ್ಕಿಂತ ಹೆಚ್ಚಾಗಿ ಅನುಭವವಿತ್ತು. ಈ ಯಾವುದರಿಂದಲೂ ಕಾರಣಿಕದ ಸಮೀಪ ಸುಳಿಯಲಾಗಲಿಲ್ಲ. ಆದರೆ ಇಷ್ಟಂತೂ ಖಾತ್ರಿಯಾಗಿತ್ತು. ದೇವಿಯ ಕೈ ಮುರಿದಿತ್ತು. ಕಾರಣಿಕ ಹೀಗಾಗಿತ್ತು. ಆದ್ದರಿಂದ ಊರಿಗೇನೋ ಅನಿಷ್ಟವಿದೆ. ಆದರೆ ಊರ ಗೌಡನಾಗಿ ದೇವಿಯ ಕೈ ಮುರಿದ ಕಾರಣ ಕಂಡುಹಿಡಿಯಲೇ ಬೇಕಾಗಿತ್ತು. ಬಹುಶಃ ಆಗ ಕಾರಣಿಕದ ಅರ್ಥ ತಿಳಿಯಬಹುದು.

ಇದ್ದುದರಲ್ಲೇ ಮನಸ್ಸು ಹಗುರಾದವಳು ದುರ್ಗಿ. ತಾಯಿ ಗುಡಿ ಹೋಗುವಾಗ ಅವಳು ಅಲ್ಲಿರಲಿಲ್ಲ. ಮೈಲಿಗೆ ಮಾಡಿದ ಭಯ ಇತ್ತು. ತಾಯಿ ತನ್ನನ್ನು ಕೆಂಡದಲ್ಲಿ ಹಾಯಿಸುವುದು ಖಂಡಿತ ಎಂದುಕೊಂಡಿದ್ದಳು.

ಅದಕ್ಕೆ ಅವಳು ಬೇಕೆಂದೇ ತಪ್ಪಿಸಿದ್ದಳು. ಆದರೆ ಸರಪಂಚನನ್ನು ಕೆಂಡ ಹಾಯಿಸುವುದೂ ಅಷ್ಟೇ ಖಂಡಿತವೆಂದುಕೊಂಡಿದ್ದಳು. ತಮ್ಮ ಗುಮುರಿಗೆಯಲ್ಲೇ ತಾಯಿಯ ಕೈ ಮುರಿದಿದ್ದು. ಖಾತ್ರಿಯಾಗಿತ್ತು. ಆದರೆ ದೇವೀ ಹಿಡಿದೆಳೆದದ್ದು ಬಸವರಾಜನನ್ನು! ಇದಕ್ಕೇನೆನ್ನಬೇಕು? ಹೊಯ್ಕನ್ನಲೇ, ತಾಯಿಯ ದಯೆ ಎನ್ನಲೇ, ತಾಯಿಗೂ ತಿಳಿಯಲಿಲ್ಲ ಎನ್ನಲೇ? ದಿನಾ ಎಷ್ಟೊಂದು ಒಟಗುಡುವ ಹುಡುಗಿ ಬಾಯಿಬಿಟ್ಟರೆ ಎಲ್ಲಿ ತಾ ಮಾಡಿದ ತಪ್ಪು ಹೊರಹೊಮ್ಮುವುದೋ ಎಂದು ಬಾಯಿ ಹೊಲಿದುಕೊಂಡಿದ್ದಳು.

ಸುಂದರಿಯ ಗುಡಿಸಲಲ್ಲಿ ಅಚಾನಕ ಮೀಟಿಂಗ್ ಸೇರಿತ್ತು. ಬಸವರಾಜನಿಗೆ ಅವಮಾನವಾದುದರಿಂದ ಮಾತಾಡಿಸಲಕ್ಕೆ ಬಂದವರಂತೆ ಚತುಷ್ಟಯರು ಸೇರಿದ್ದರು. ಅವನನ್ನು ದೇವಿ ಯಾಕೆ ಎಳೆದೆಂಬುದರರ ಬಗೆಗೆ ಗುಡಸೀಕರನಿಗೇನೋ ಸ್ಪಷ್ಟವಾಗಿತ್ತು ಬೆಳಗಾವಿಯವ, ನಂಬಿಕೆಯಿಲ್ಲದವ, ಈ ಊರಲ್ಲಿನ್ನೂ ಹೊಂದಿಕೊಳ್ಳದವ ಇತ್ಯಾದಿ. ಅದನ್ನೇ ಆತ ಹೇಳುತ್ತಿದ್ದ. ಚತುಷ್ಟಯರಿಗೆ ಕೆಡುಕೆನಿಸಲಿಲ್ಲ. ಖುಶಿಯೂ ಆಗಿರಲಿಲ್ಲ. ಲೋಕಾರೂಢಿ ಆಡಿದರು. ಎಲ್ಲರೂ ಮಾತಾಡುವುದಾದ ಮೇಲೆ ಬಸವರಾಜು ಮೆಲ್ಲನೆ ಮಾತು ಬಿಚ್ಚಿದ: 'ಮುಂದಿನ ಎಲೆಕ್ಷನ್‌ನಲ್ಲಿ ಸರಪಂಚನಿಗೆ ತನ್ನ ಸಹಾಯ ಬೇಕೇ ಬೇಕು. ಅದಾಗಲೇ ಗೌಡನಿಗೆ ಗೊತ್ತಾಗಿದೆ. ಈಗಿನಿಂದಲೇ ಬಮದೋಬಸ್ತ್ ಮಾಡಿದರೆ ಮುಂದೆ ನಾನೇನು ತಂತ್ರ ಮಾಡಿದರೂ ಜನರ ಮನಸ್ಸಿಗೆ ನಾಟಿರಬಾರದು. ಅದಕ್ಕೇ ದೇವಿಯಿಂದ ಈ ರೀತಿ ಎಳೆಸಿದ್ದು, ಇದಂತೂ ಸ್ಪಷ್ಟವಾಗಿ ಹೇಳಿ ಮಾಡಿಸಿದ ಕೆಲಸ'!

ಎಲ್ಲರಿಗೂ ಈ ತರ್ಕ ಕೂಡಲೇ ಖಾತ್ರಿಯಾಯ್ತು. ಗುಡಸೀಕರನಿಗೆ ಇನ್ನೂ ಹೆಚ್ಚು. ತಮಗೆ ಗೊತ್ತಾಗದಂತೆ ಎಂಥಾ 'ಟ್ರಿಕ್ಕು' ಮಾಡಿದ್ದಾರಲ್ಲಾ! ಒಳಗೆ ಸುಂದರಿ ಖಿಖ್ಖ್ಎಂದು ನಕ್ಕಳು.

ಇವರ ಮಾತುಕತೆಯಲ್ಲಿ ಸುಂದರಿಗೆ ಆಸಕ್ತಿಯಿರಲಿಲ್ಲ. ಒಳಗೆ ಹಾಸಿಗೆಯ ಮೇಲೆ ಬಿದ್ದುಕೊಂಡು ಧೇನಿಸುತ್ತಿದ್ದಳು. ದೇವರೇಸಿ ಎಲ್ಲರನ್ನು ಬಿಟ್ಟು ಬಸವರಾಜೂನನ್ನು ಹಿಡಿದೆಳೆದದ್ದು ಅವಳಿಗು ಆಶ್ಚರ್ಯವಾಗಿತ್ತು. ಅವನ ಹಿಂದು ಮುಂದನ್ನು ಬಲ್ಲವಳು, ನಿಂಗೂನೊಂದಿಗೆ ಆತ ದುರ್ಗಿಯ ವಿಷಯ ಪ್ರಸ್ತಾಪಿಸಿದ್ದನ್ನು ಕದ್ದು ಕೇಳಿದ್ದಳು. ನಿನ್ನೆ ರಾತ್ರಿಯಷ್ಟೇ ಅವನ ಚಡ್ಡಿಗೆ ಹಸಿ ರಕ್ತ ಅಂಟಿದ್ದನ್ನು ನೋಡಿದ್ದಳು. ಜನ ಮೈಲಿಗೆಯ ಮಾತಾಡಿದ್ದನ್ನು, ದೇವಿಯ ಕೈ ಮುರಿದದ್ದನ್ನೂ ಕೇಳಿದ್ದಳು. ಆದ್ದರಿಂದ ಅವನಿಗಾದದ್ದು ಸರಿಯಾದ ಶಿಕ್ಷೆಯೇ. ಆದರೆ ಕಳ್ಳನನ್ನು ಊರಹೊರಗಿನ ದೇವಿ ಪತ್ತೆ ಮಾಡಿದ್ದು ಹೇಗೆ? ಹೀಗೆ ಚಿಂತಿಸುತ್ತಿದ್ದಾಗ ಹೊರಗಡೆ ಬಸವರಾಜು ಎಲೆಕ್ಷನ್‌ಗಾಗಿ ಗೌಡನೇ ಹೀಗೆಲ್ಲ ಮಾಡಿಸಿದ್ದನೆಂದು ಹೇಳುತ್ತಿದ್ದ. ಕೇಳಿ ನಗು ತಡೆಯಲಾಗಲಿಲ್ಲ. ನಗುತ್ತಲೇ ಎದ್ದು ಹೊರಗೆ ಬಂದಳು. ಯಾರನ್ನೂ ಮಾತಾಡಿಸದೆ ಮುಂದಿದ್ದ ಸೆರೆಯ ಬಾಟ್ಲಿ ತಗೊಂಡು ಮೊದಲಿನ ನಗೆಯಲ್ಲಿ ಇನ್ನೊಂದು ಲಯ ಬೆರೆಸಿ ಒಳಕ್ಕೆ ಸುಳಿದಳು. ಬಸವರಾಜು ಗೆಲುವಿನಿಂದ ಸಿಗರೇಟು ಹೊತ್ತಿಸಿದ.